ಪಾವಗಡ ಪರಿಸರದ ಚರಿತ್ರೆ ಮತ್ತು ಪುರಾತತ್ವ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕ

ರಾಘವೇಂದ್ರ

ಮಾರ್ಗದರ್ಶಕರು

ಡಾ.ಸಿ.ಮಹದೇವ
ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೦೭-೦೮

565

ಪರಾಮರ್ಶೆಗೆ ಮಾತ್ರ

565

"ಸಿರಿಗನ್ನಡ" ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

Shree Ma
XEROX & BO

565
565
AKSHARA GRANTHALAYA
ACC.NO. 130201

565

565

565

ಪಾವಗಡ ಪರಿಸರದ ಚರಿತ್ರೆ ಮತ್ತು ಪುರಾತತ್ವ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕ

ರಾಘವೇಂದ್ರ

ಕನ್ನಡ ವಿಶ್ವವಿದ್ಯಾಲಯ, ಹಂಪಿ ✝ ವಿದ್ಯಾರಣ್ಯ-೫೮೩ ೨೭೬ ✝
ಅಧ್ಯಯನಾಂಗ

ಮಾರ್ಗದರ್ಶಕರು

ಡಾ.ಸಿ.ಮಹದೇವ

ಪ್ರಾಧ್ಯಾಪಕರು

'[illegible]' ಗ್ರಂಥಾಲಯ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೭-೦೮

954.87
RAG P
130201

ಪ್ರಮಾಣ ಪತ್ರ

"ಪಾವಗಡ ಪರಿಸರದ ಚರಿತ್ರೆ ಮತ್ತು ಪುರಾತತ್ವ ಅಧ್ಯಯನ" ಎಂಬ ಸಂಪ್ರಬಂಧವನ್ನು ಡಾ.ಸಿ.ಮಹದೇವ ಪ್ರಾಧ್ಯಾಪಕರು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್ ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವು ಮೂಲದ್ದಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Raghavendra

ರಾಘವೇಂದ್ರ
ಸಂಶೋಧಕ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ದಿನಾಂಕ : 15-10-2008
ಸ್ಥಳ : ವಿದ್ಯಾರಣ್ಯ

954.87
RAG P
130201

ಪ್ರಮಾಣ ಪತ್ರ

"ಪಾವಗಡ ಪರಿಸರದ ಚರಿತ್ರೆ ಮತ್ತು ಪುರಾತತ್ವ ಅಧ್ಯಯನ" ಎಂಬ ಸಂಪ್ರಬಂಧವನ್ನು ಡಾ.ಸಿ.ಮಹದೇವ ಪ್ರಾಧ್ಯಾಪಕರು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್ ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವು ಮೂಲದ್ದಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Raghavendra

ರಾಘವೇಂದ್ರ
ಸಂಶೋಧಕ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ದಿನಾಂಕ : 15-10-2008
ಸ್ಥಳ : ವಿದ್ಯಾರಣ್ಯ

ಮಾರ್ಗದರ್ಶಕರ ದೃಢೀಕರಣ ಪತ್ರ

"ಪಾವಗಡ ಪರಿಸರದ ಚರಿತ್ರೆ ಮತ್ತು ಪುರಾತತ್ವ ಅಧ್ಯಯನ" ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ **ಶ್ರೀ ರಾಘವೇಂದ್ರ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಮೂಲದ್ದಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

(ಡಾ.ಸಿ.ಮಹದೇವ)
ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ದಿನಾಂಕ : ೧೪-೧೦-೨೦೦೮

ಸ್ಥಳ : ವಿದ್ಯಾರಣ್ಯ

ಪರಿವಿಡಿ

'ಪಾಗನ್ವಿಕ' ಗ್ರಂಥಾಲಯ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಅಧ್ಯಾಯ-ಒಂದು

ಪ್ರಸ್ತಾವನೆ

ಅಧ್ಯಾಯ-ಒಂದು

ಪ್ರಸ್ತಾವನೆ

ಆಧುನಿಕ ಜಗತ್ತಿನಲ್ಲಿ ವೈಜ್ಞಾನಿಕ, ವೈಚಾರಿಕ ಹಾಗೂ ಜಾಗತೀಕರಣದಂತಹ ವಿಷಯಗಳು ಪ್ರಮುಖವಾಗಿ ಚರ್ಚೆಗೆ ಒಳಪಡುತ್ತವೆ. ಇಂಥ ಪ್ರಕ್ರಿಯೆಯಿಂದ ಚರಿತ್ರೆಯನ್ನು ನಿರೂಪಿಸುವ, ಜನ ಜೀವನವನ್ನು ಚಿತ್ರಿಸುವ, ಸಾಂಸ್ಕೃತಿಕ ಮೌಲ್ಯಗಳನ್ನು ಎತ್ತಿಹಿಡಿಯುವ ಐತಿಹಾಸಿಕ ವಿಚಾರಗಳು ಇಂದು ಕ್ರಮೇಣ ಮಹತ್ವವನ್ನು ಕಳೆದುಕೊಳ್ಳುತ್ತಿವೆ. ಚರಿತ್ರೆಯಲ್ಲಿ ಪ್ರಸಿದ್ದ ರಾಜಮನೆತನಗಳ ಚರಿತ್ರೆ ಮಾತ್ರ ಇತಿಹಾಸವೆಂದು ಭಾವಿಸಲಾಗಿದ್ದು, ತಳಮಟ್ಟದ ಚರಿತ್ರೆಯು ಕಣ್ಮರೆಯಾಗಿ ಮೇಲ್ಮಟ್ಟದ ರಾಜವೈಭೋಗವು ಇತಿಹಾಸದಲ್ಲಿ ಬಿಂಬಿತವಾಗಿದೆ. ಆದರೆ ಒಂದು ನಾಡಿನ ಚರಿತ್ರೆ ಎಂದರೆ ಜನ ಸಮಷ್ಠಿಯ ಚರಿತ್ರೆ, ಅಂದರೆ ಜನರ ಜೀವನ, ಸಿದ್ಧಾಂತಗಳು ಆ ನಾಡಿನ ಐತಿಹಾಸಿಕ ಸ್ಮಾರಕಗಳು, ಇತಿಹಾಸ ಅವರ ಬದುಕಿನ ಮೌಲ್ಯಗಳನ್ನು ಪರಿಚಯಿಸುತ್ತದೆ. ಒಂದು ಐತಿಹಾಸಿಕ ಪ್ರದೇಶದ ಅಧ್ಯಯನವು ಆ ನಾಡಿನ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಧಾರ್ಮಿಕ ಚರಿತ್ರೆಯನ್ನು ಆ ಪ್ರದೇಶದಲ್ಲಿ ದೊರೆಯುವಂತಹ ಐತಿಹಾಸಿಕ ಸ್ಮಾರಕಗಳು, ಕಲೆ ಮತ್ತು ವಾಸ್ತುಶಿಲ್ಪವನ್ನು ಹಾಗು ಅಲ್ಲಿನ ಸಾಂಸ್ಕೃತಿಕ ಚರಿತ್ರೆಯನ್ನು ತಿಳಿಯಲು ಸಹಾಯಕವಾಗುತ್ತದೆ. ಪ್ರತಿಯೊಂದು ಪ್ರದೇಶವು ತನ್ನದೇ ಆದ ಇತಿಹಾಸವನ್ನು ಹೊಂದಿರುವುದು ಸರಿಯಷ್ಟೆ, ಅದರಂತೆಯೇ ಇತ್ತೀಚಿನ ದಿನಗಳಲ್ಲಿ ಸೂಕ್ಷ್ಮ ಅಧ್ಯಯನಕ್ಕೆ ಮಹತ್ವ ದೊರೆತು ಹಲವು ದೃಷ್ಠಿಕೋನದಲ್ಲಿ ಅಧ್ಯಯನಗಳು ನಡೆಯುತ್ತಿವೆ.

ಒಂದು ಪ್ರದೇಶದ ಐತಿಹಾಸಿಕ ಮಹತ್ವವನ್ನು ಅಲ್ಲಿ ದೊರೆಯುವ ಪುರಾತತ್ವ ಅವಶೇಷಗಳಿಂದ ತಿಳಿಯಬಹುದಾಗಿದೆ. ಜೊತೆಗೆ ಅಲ್ಲಿನ ಮೌಖಿಕ ಆಕರಗಳು ಸಹ

ಪ್ರಮುಖವಾಗಿವೆ. ಹಾಗಾಗಿ ಇತಿಹಾಸವನ್ನು ಪ್ರಮುಖವಾಗಿ ಎರಡು ವಿಭಾಗಗಳನ್ನಾಗಿ ಮಾಡಲಾಗಿದೆ. ಮೊದಲನೆಯದು ಅಕ್ಷರ ಜ್ಞಾನವಿಲ್ಲದ ಹಂತ ಅಥವಾ ಪ್ರಾಗಿತಿಹಾಸಕಾಲ ಮತ್ತೊಂದು ಇತಿಹಾಸ ಕಾಲವೆಂದು ಹೇಳಬಹುದು. ಪ್ರಾಗಿತಿಹಾಸವನ್ನು ತಿಳಿಯಲು ನಮಗೆ ಅಂದಿನ ಮಾನವನು ತನ್ನ ದಿನ ಬಳಕೆಯ ಅವಶ್ಯಕತೆಗಳಿಗೆ ಬಸಳಿಕೊಂಡಂತಹ ವಸ್ತುಗಳ, ಆಯುಧಗಳ ಸಹಾಯದಿಂದ ತಿಳಿಯಬಹುದು. ನಂತರ ಇತಿಹಾಸ ಕಾಲದಲ್ಲಿ ಲಿಖಿತವಾಗಿ ದೊರೆತಂತಹ ಶಾಸನಗಳು, ನಾಣ್ಯಗಳು, ಸ್ಮಾರಕಗಳು ಹಾಗೂ ಸಾಹಿತ್ಯದ ಸಹಾಯದಿಂದ ಅಂದಿನ ಕಾಲದ ಇತಿಹಾಸ ತಿಳಿಯಬಹುದಾಗಿದೆ.

ಪ್ರಸ್ತುತ ಅಧ್ಯಯನದ ವಿಷಯ "ಪಾವಗಡ ಪರಿಸರದ ಚರಿತ್ರೆ ಮತ್ತು ಪುರಾತತ್ವ ಅಧ್ಯಯನ" ಕುರಿತದ್ದಾಗಿದೆ. ಈ ಪಾವಗಡವು ತುಮಕೂರು ಜಿಲ್ಲೆಯ ಮಧುಗಿರಿ ಉಪವಿಭಾಗಕ್ಕೆ ಸೇರಿದ ತಾಲೂಕು ಕೇಂದ್ರವಾಗಿದೆ. ಇದು ತುಮಕೂರು ಜಿಲ್ಲೆಯ ಈಶಾನ್ಯದಲ್ಲಿದ್ದು ಪಶ್ಚಿಮದಲ್ಲಿ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಗೆ ಹೊಂದಿಕೊಂಡಿದೆ. ಉಳಿದ ಮೂರುಕಡೆ ಆಂಧ್ರಪ್ರದೇಶ ಸುತ್ತುವರೆದಿದ್ದು ಇದು ಕರ್ನಾಟಕದ ಗಡಿ ತಾಲೂಕಾಗಿದೆ. ಪಾವಗಡವು ಜಿಲ್ಲಾ ಕೇಂದ್ರದಿಂದ ಸುಮಾರು ೯೬.ಕಿ.ಮೀ ದೂರದಲ್ಲಿದೆ. ಈ ಪ್ರದೇಶವು ಬೆಟ್ಟಗುಡ್ಡಗಳಿಂದ ಆವೃತವಾಗಿದ್ದು ಉತ್ತರ ದಕ್ಷಿಣವಾಗಿ ಕಣಶಿಲೆ ಬೆಟ್ಟಗಳು ಈ ಪಾವಗಡ ಪರಿಸರದ ಮೂಲಕ ಹಾದು ಹೋಗಿವೆ. ಈ ಪರಿಸರದಲ್ಲಿ ತುಂಗ ಭದ್ರಾ ನದಿಯ ಉಪನದಿಯಾದ ಉತ್ತರ ಪಿನಕಿನ ಅಥವಾ ಉತ್ತರ ಪೆನ್ನಾರ ನದಿಯ ಮುಕ್ಕಾಲು ಭಾಗ ಈ ನದಿ ಪಾತ್ರಕ್ಕೆ ಒಳಗಾಗಿದೆ. ಇಲ್ಲಿ ಪ್ರಮುಖವಾಗಿ ಕಂಡುಬರುವ ಬೆಟ್ಟಗಳೆಂದರೆ ಪಾವಗಡ ಬೆಟ್ಟ ನಿಡುಗಲ್ಲು ಬೆಟ್ಟ ಕಾಮನ ದುರ್ಗ, ವೈ.ಎನ್.ಹೊಸಕೋಟೆ ಹಾಗೂ ಬಂಗಾರನಾಯಕನ ಬೆಟ್ಟಗಳಾಗಿವೆ.

ಈ ಪ್ರದೇಶದಲ್ಲಿ ಪ್ರಮುಖವಾಗಿ ಕಂಡುಬರುವ ಐತಿಹಾಸಿಕ ಸ್ಥಳಗಳೆಂದರೆ ಪಾವಗಡ, ನಿಡುಗಲ್ಲು, ನಾಗಲಮಡಿಕೆ, ವದನಕಲ್ಲು ಪ್ರಮುಖವಾದವುಗಳಾಗಿವೆ. ಈ ಪ್ರದೇಶವು ಗಂಗರಸರ ಕಾಲದಿಂದ ವಿಜಯನಗರದ ನಂತರ ಕಾಲದ ಪಾಳೇಗಾರರ ಕಾಲದವರೆಗೂ ಆಳ್ವಿಕೆ ಒಳಪಟ್ಟಿದ್ದು ಆಯಾ ಕಾಲದ ಗುರುತುಗಳನ್ನು ವಿಭಿನ್ನ ಬಗೆಯ ದೇವಾಲಯಗಳು, ಸ್ಮಾರಕಗಳು, ಶಾಸನಗಳು, ಶಿಲ್ಪಗಳು, ವಾಸ್ತುಶಿಲ್ಪ, ಶೈವ, ವೈಷ್ಣವ, ಜೈನ ಮುಂತಾದ ಪರಂಪರೆಗಳ ಗುರುತುಗಳನ್ನು ಉಳಿಸಿಕೊಂಡು ಬಂದಿದೆ. ಇವುಗಳ ಹಿನ್ನೆಲೆಯಲ್ಲಿ ಪ್ರಸ್ತುತ ಪಾವಗಡ ಪರಿಸರದ ಚರಿತ್ರೆಯನ್ನು ಪುರಾತತ್ವ ಅವಶೇಷಗಳನ್ನು ಬಳಸಿಕೊಂಡು ವಿಶ್ಲೇಷಿಸುವ ಪ್ರಯತ್ನವನ್ನು ಮಾಡಲಾಗಿದೆ.

೧.೧ ಅಧ್ಯಯನದ ಉದ್ದೇಶ

ಪ್ರಸ್ತುತ ಅಧ್ಯಯನವು ಪಾವಗಡ ಪರಿಸರದ ಚರಿತ್ರೆ ಮತ್ತು ಪುರಾತತ್ವ ಅಧ್ಯಯನವಾಗಿದೆ. ಇದಕ್ಕೆ ಈ ಪರಿಸರದಲ್ಲಿರುವ ಭೌತಿಕ ಆಕರಗಳು ಅಥವಾ ಪುರಾತತ್ವ ಆಕರಗಳ ಹಿನ್ನಲೆಯಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ. ಈ ಅಧ್ಯಯನದಲ್ಲಿ ಪ್ರತ್ಯೇಕವಾಗಿ ಕಂಡುಬರುವ ಪುರಾತತ್ವ ಅವಶೇಷಗಳನ್ನು ಹಾಗೂ ಈವರೆಗೂ ಇತಿಹಾಸ ಮತ್ತು ಪುರಾತತ್ವದ ಬಗ್ಗೆ ದಾಖಲಾಗಿರುವ ಸಂಗತಿಗಳನ್ನು ಆಧರಿಸಿಕೊಂಡು ಅಧ್ಯಯನ ಕೈಗೊಳ್ಳಲಾಗಿದೆ, ಈ ಪ್ರದೇಶವು ಪ್ರಾಗೈತಿಹಾಸಿಕ ಕಾಲದಿಂದಲೂ ಜನವಸತಿಯ ನೆಲೆಯಾಗಿದೆ. ಇದಕ್ಕೆ ಪುರಾವೆಯಾಗಿ ಇಲ್ಲಿ ದೊರೆತಿರುವಂತಹ ಪ್ರಾಚ್ಯಾವಶೇಷಗಳನ್ನು ಗಮನಿಸಬಹುದು. ಅವುಗಳು ಹಳೆಯ ಶಿಲಾಯುಗದಿಂದ ಇತಿಹಾಸ ಆರಂಭಕಾಲದ ವಿವಿಧ ಸಂಸ್ಕೃತಿಗಳಿಗೆ ಸೇರಿದ ಅವಶೇಷಗಳು ಈಗಾಗಲೇ ದೊರೆತಿದ್ದು ಇವುಗಳ ಆಧಾರದಿಂದ ಇನ್ನೂ ಹೆಚ್ಚಿನ ಹೊಸ ಹೊಸ ನೆಲೆಗಳನ್ನು ಹುಡುಕುವ ಪ್ರಯತ್ನವನ್ನು ಮಾಡಲಾಗಿದೆ. ಈ ಪ್ರದೇಶದ ಇತಿಹಾಸ ತಿಳಿಯಲು ನಮಗೆ ಆಕರಗಳ ಕೊರತೆ ಎದ್ದು ಕಾಣುತ್ತದೆ ಆದರೂ ಇಲ್ಲಿ ದೊರೆತ ಶಾಸನಗಳು ಸ್ವಲ್ಪ ಮಟ್ಟಿಗೆ ಇತಿಹಾಸ ರಚಿಸಲು ಸಹಾಯಕವಾಗಿವೆ. ಶಾಸನಗಳ ಶಾಸ್ತ್ರೀಯ ಅಧ್ಯಯನದ ಮೂಲಕ ಈ ಪ್ರದೇಶದಲ್ಲಿ ಆಳ್ವಿಕೆ ಮಾಡಿದ ವಿವಿಧ ರಾಜರ ಬಗ್ಗೆ ತಿಳಿಯಲು ಸಹಕಾರಿಯಾಗಿದೆ. ಪಾವಗಡ ಪರಿಸರದಲ್ಲಿ ವಿವಿಧ ರಾಜರ ಕಾಲದಲ್ಲಿ ನಿರ್ಮಿಸಲ್ಪಟ್ಟ ದೇವಾಲಯಗಳು, ಕಲೆ, ವಾಸ್ತುಶಿಲ್ಪ, ಕೋಟೆ, ಸ್ಮಾರಕಗಳ ಕುರಿತಾದ ಅಂಶಗಳನ್ನು ಸಹ ವಿವೇಚಿಸಲಾಗಿದೆ. ಅದೇ ರೀತಿಯಾಗಿ ಈ ಪ್ರದೇಶದಲ್ಲಿ ಪ್ರಾಚೀನ ಕಾಲದಿಂದಲೂ ನೀರಿನ ಆಸರೆಗಳಾದ ಕೆರೆ, ಕಟ್ಟೆ, ಕಾಲುವೆಗಳ ಬಗ್ಗೆ ಸಹ ತಿಳಿಯುವುದಾಗಿದೆ. ಈ ಸಂಶೋಧನೆಯ ಮುಖ್ಯ ಉದ್ದೇಶವು ನಶಿಸುತ್ತಿರುವ ಪುರಾತತ್ವ ಅಂಶಗಳನ್ನು ಬಳಸಿಕೊಂಡು ಪಾವಗಡ ಪರಿಸರದ ಚರಿತ್ರೆ ಮತ್ತು ಪುರಾತತ್ವ ಅಧ್ಯಯನವನ್ನು ವಸ್ತು ನಿಷ್ಠತೆಯನ್ನು ಎತ್ತಿ ಹಿಡಿದು ಅಧ್ಯಯನಕ್ಕೆ ಹೊಸ ರೂಪವನ್ನು ನೀಡುವುದಾಗಿದೆ.

೧.೨ ಅಧ್ಯಯನದ ವ್ಯಾಪ್ತಿ

ಯಾವುದೇ ಒಂದು ಸಂಶೋಧನೆಗೆ ಒಂದು ಚೌಕಟ್ಟು ಅಂದರೆ ವ್ಯಾಪ್ತಿ ಬಹುಮುಖ್ಯ. ಒಂದು ನಿರ್ದಿಷ್ಟ ಹಾಗೂ ಉದ್ದೇಶಪೂರಿತ ಸಂಶೋಧನೆ ಯಶಸ್ವಿಯಾಗಲು ಇದು ತುಂಬಾ ಸಹಕಾರಿಯಾಗಿದೆ. ಪ್ರಸ್ತುತ ಅಧ್ಯಯನ ವಿಷಯವಾದ ಪಾವಗಡ ಪರಿಸರದ ಚರಿತ್ರೆ ಮತ್ತು ಪುರಾತತ್ವ ಅಧ್ಯಯನದ ವ್ಯಾಪ್ತಿಯನ್ನು ಭೌಗೋಳಿಕ ಮತ್ತು ಕಾಲಾವಧಿಯ ದೃಷ್ಠಿಯಿಂದ ನಿರ್ದಿಷ್ಟ ಪಡಿಸಲಾಗಿದೆ. ಪಾವಗಡ ತಾಲೂಕಿನ ಭೌಗೋಳಿಕತೆಯ ಹಿನ್ನೆಲೆಯಲ್ಲಿ ಪಾವಗಡ ತಾಲೂಕು ಪರಿಸರದ ಗ್ರಾಮಗಳಾದ ಪಾವಗಡ, ಗುಂಡಾರ್ಲಹಳ್ಳಿ, ಗುಂಡ್ಲಹಳ್ಳಿ,

ನನಿಗಾನ ಹಳ್ಳಿ, ಕನಿಲಬಂಡೆ, ಪಳವಳ್ಳಿ ಮತ್ತು ಪಾವಗಡ ಬೆಟ್ಟವನ್ನೊಳಗೊಂಡ ವ್ಯಾಪ್ತಿಯಲ್ಲಿನ ಗ್ರಾಮಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಕಾಲಾವಧಿಯ ದೃಷ್ಠಿಯಲ್ಲಿ ಪ್ರಾಗ್ಯೈತಿಹಾಸಿಕ ಕಾಲದಿಂದ ವಿಜಯನಗರದ ನಂತರದ ಪಾವಗಡ ಪಾಳೇಗಾರರ ಅಂತ್ಯದವರೆಗಿನ ಕಾಲಾವಧಿಯವರೆಗೆ ಸೀಮಿತಗೊಳಿಸಲಾಗಿದೆ. ಹಾಗಿದ್ದರೂ ಪಾವಗಡ ಪರಿಸರದ ಇತಿಹಾಸ ರಚನೆಯಲ್ಲಿ ಈ ಪರಿಸರದ ವ್ಯಾಪ್ತಿಯನ್ನು ಮೀರಿ ನಿಂತಿದೆ, ಇಂತಹವುಗಳನ್ನು ಸಾಂದರ್ಭಿಕವಾಗಿ ಆಯಾಯಾ ವಿಷಯಗಳಿಗನುಗುಣವಾಗಿ ಬಳಸಿಕೊಳ್ಳಲಾಗಿದೆ.

೧.೩ ಈ ಹಿಂದೆ ನಡೆದ ಅಧ್ಯಯನಗಳು

ಪಾವಗಡ ಚರಿತ್ರೆ ಹಾಗೂ ಪುರಾತತ್ವಕ್ಕೆ ಸಂಬಂಧಿಸಿದಂತೆ ಕೆಲವೇ ಕೆಲವು ಅಧ್ಯಯನಗಳು ನಡೆದಿದ್ದು ಅವುಗಳು ಪತ್ರಿಕೆಗಳು, ಸ್ಮರಣ ಸಂಚಿಕೆಗಳಲ್ಲಿ ಸಂಪಾದಿತ ಕೃತಿಗಳಲ್ಲಿ ಸಂಶೋಧನಾ ಲೇಖನಗಳು ಪ್ರಕಟಗೊಂಡಿರುವ ಅಂಶ ತಿಳಿದು ಬರುತ್ತದೆ. ಅವುಗಳಲ್ಲಿ ಡಾ.ವಸು ಅವರು ಸಂಪಾದಿತ 'ದಕ್ಷಿಣ ಕರ್ನಾಟಕದ ಅರಸು ಮನೆತನಗಳು' ಎಂಬ ಕೃತಿಯಲ್ಲಿ ನೊಳಂಬರು ನಿಡುಗಲ್ಲಿನ ಚೋಳರು ಮತ್ತು ಪಾವಗಡದ ಪಾಳೆಯಗಾರರ ಬಗ್ಗೆ ವಿವರಿಸಿದ್ದಾರೆ. ಕೆ.ಬಿ.ಶಿವತಾರಕ್‌ರವರು 'ತುಮಕೂರು ಜಿಲ್ಲೆಯ ಪ್ರಾಗಿತಿಹಾಸ ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ಮಹಾಪ್ರಬಂಧದಲ್ಲಿ ಪಾವಗಡದಲ್ಲಿ ಕಂಡುಬರುವ ಪ್ರಾಗಿತಿಹಾಸಿಕ ನೆಲೆಗಳ ಕುರಿತು ವಿವರಿಸಿದ್ದಾರೆ. ವಿ.ಆರ್.ಚೆಲುವರಾಜನ್‌ರವರ ಪಾವಗಡ ತಾಲೂಕು ದರ್ಶನ ಎಂಬ ಕಿರುಪುಸ್ತಕವನ್ನು ಪಾವಗಡ ತಾಲೂಕಿನ ಸ್ಥೂಲ ಪರಿಚಯ ಮಾಡಿದ್ದಾರೆ. ಸಿ.ಹಯವದನರಾವ್‌ರವರ ಹಿಸ್ಟರಿ ಆಫ್ ಮೈಸೂರು ಸಂಪುಟ ೫ರಲ್ಲಿ ಸಂಕ್ಷಿಪ್ತ ಮಾಹಿತಿ ನೀಡಲಾಗಿದೆ. ಕೆ.ವಿ.ಮುದ್ದವೀರಪ್ಪನವರ 'ತುಮಕೂರು ಜಿಲ್ಲೆಯ ಕೋಟೆಕೊತ್ತಲಗಳ ಜಾನಪದೀಯ ಅಧ್ಯಯನ' ಎಂಬ ಮಹಾಪ್ರಬಂಧದಲ್ಲಿ ಪಾವಗಡದ ಕೋಟೆಯ ಬಗ್ಗೆ ಜಾನಪದೀಯ ಅಂಶಗಳನ್ನು ವಿವರಿಸಿದ್ದಾರೆ. ಆದರೆ ಪಾವಗಡ ಪರಿಸರದ ಚರಿತ್ರೆ ಮತ್ತು ಪುರಾತತ್ವ ಅಧ್ಯಯನಕ್ಕೆ ಸಂಬಂಧಿಸಿದಂತೆ ಯಾವುದೇ ರಿತಿಯ ವ್ಯವಸ್ಥಿತ ಅಧ್ಯಯನವು ಇದುವರೆಗೂ ನಡೆದಿಲ್ಲವೆಂದೇ ಹೇಳಬಹುದು. ಅಂತಹ ಒಂದು ಚಿಕ್ಕ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ.

೧.೪ ಅಧ್ಯಯನದ ವಿಧಾನ

ಪ್ರಸ್ತುತ ಪಾವಗಡ ಪರಿಸರದ ಚರಿತ್ರೆ ಮತ್ತು ಪುರಾತತ್ವ ಅಧ್ಯಯನವು ಪ್ರಮುಖವಾಗಿ ಕ್ಷೇತ್ರಕಾರ್ಯಾಧಾರಿತವಾಗಿದೆ. ಇದಕ್ಕೂ ಮೊದಲು ಈ ವಿಷಯದ ಅಧ್ಯಯನದ ವ್ಯಾಪ್ತಿಗೆ ಬರುವ ಪ್ರದೇಶಕ್ಕೆ ನೇರವಾಗಿ ಭೇಟಿನೀಡಿ ಅಲ್ಲಿ ದೊರೆಯುವ ಸಂಪನ್ಮೂಲ ವಸ್ತುಗಳನ್ನು ಖುದ್ದಾಗಿ ವೀಕ್ಷಿಸಿ ಮತ್ತು ಅಲ್ಲಿನ ಸಂಪನ್ಮೂಲ ವ್ಯಕ್ತಿಗಳೊಂದಿಗೆ

ಚರ್ಚಿಸಿ ವಿಷಯವನ್ನು ಸಂಗ್ರಹಿಸಿಕೊಂಡು. ಅಧ್ಯಯನಕ್ಕೆ ಪೂರಕವಾಗಿ ದೊರೆಯುವ ಪ್ರಾಥಮಿಕ, ಅನುಷಂಗಿಕ ಆಧಾರಗಳು ಎಲ್ಲಾ ಬಗೆಯ ಕಾಗದ ಪತ್ರಗಳು, ಸರ್ಕಾರಿ ಖಾಸಗಿ ದಾಖಲೆಗಳು, ಛಾಯಾಚಿತ್ರಗಳು, ಸಂದರ್ಶನ, ರಾಜ್ಯಪತ್ರಾಗಾರ ಇಲಾಖೆ, ಗ್ರಂಥಾಲಯ ವಿವಿಧ ಸಂಘ–ಸಂಸ್ಥೆಗಳು ಪ್ರಕಟಿತ ಕೃತಿಗಳು, ಲೇಖನಗಳು, ಸರ್ಕಾರಿ ಸಂಚಿಕೆಯಲ್ಲಿ ದೊರೆಯುವ ಆಧಾರಗಳನ್ನು ಮತ್ತು ಸಂಶೋಧನಾ ಲೇಖನಗಳನ್ನು, ಪಿಎಚ್.ಡಿ., ಮಹಾಪ್ರಬಂಧಗಳನ್ನು ಇತ್ಯಾದಿಗಳನ್ನು ಆಧರಿಸಿ ಅವಶ್ಯ ವಿಷಯವನ್ನು ಪರಿಶೀಲಿಸಿ ಸಂಶೋಧನೆಗೆ ತೆಗೆದುಕೊಳ್ಳಲಾಗುವುದು ಮತ್ತು ವೈಜ್ಞಾನಿಕವಾಗಿ ಸತ್ಯಾಸತ್ಯತೆಯನ್ನು ಕಂಡುಕೊಂಡು ಯಾವುದೇ ಒತ್ತಡಕ್ಕೆ ಒಳಗಾಗದೆ ವಸ್ತುನಿಷ್ಠವಾಗಿ ಇತಿಹಾಸವನ್ನು ರಚಿಸಲು ನನ್ನ ಈ ಕಿರು ಪ್ರಬಂಧದಲ್ಲಿ ಪ್ರಯತ್ನಿಸಲಾಗಿದೆ.

ಅಧ್ಯಾಯ–ಎರಡು

ಭೌಗೋಳಿಕತೆ ಮತ್ತು ಇತಿಹಾಸ

ಅಧ್ಯಾಯ–ಎರಡು

ಭೌಗೋಳಿಕತೆ ಮತ್ತು ಇತಿಹಾಸ

೨.೧ ಭೌಗೋಳಿಕ ಪರಿಸರ

ಒಂದು ಪ್ರದೇಶದ ಅಧ್ಯಯನ ಕೈಗೊಳ್ಳುವ ಪೂರ್ವದಲ್ಲಿ ಆ ಪ್ರದೇಶದ ಭೌಗೋಳಿಕ ವಿವರಗಳನ್ನು ತಿಳಿದುಕೊಳ್ಳುವುದು ಅಗತ್ಯವಾಗಿದೆ. ಕಾರಣ ಆ ಪ್ರದೇಶದ ಜನರ ಜೀವನವನ್ನು ರೂಪಿಸುವಲ್ಲಿ ಭೌಗೋಳಿಕ ಪರಿಸರದ ಪಾತ್ರ ಪ್ರಮುಖವಾಗಿದೆ. ಪ್ರಾಚೀನ ನಾಗರೀಕತೆಗಳ ಉಗಮ ನದಿ ದಂಡೆಗಳ ಮೇಲೆ ಆಗಿರುವುದನ್ನು ಗಮನಿಸಿದಾಗ ಭೌಗೋಳಿಕ ಅಂಶಗಳ ಪ್ರಾಮುಖ್ಯತೆಯನ್ನು ತಿಳಿಯಬಹುದು. ಈ ಹಿನ್ನೆಲೆಯಲ್ಲಿ ಆಯಾ ಪ್ರದೇಶದ ಇತಿಹಾಸ ಮತ್ತು ಸಂಸ್ಕೃತಿಯನ್ನು ತಿಳಿಯಲು ಭೌಗೋಳಿಕ ಅಂಶಗಳು ಸಹಕಾರಿಯಾಗಿವೆ.

ಒಂದು ಪ್ರದೇಶದಲ್ಲಿ ಮಾನವನು ನೆಲೆನಿಲ್ಲಲು ಆ ಪ್ರದೇಶದಲ್ಲಿ ಹುಟ್ಟಿ ಹರಿಯುವ ನದಿಗಳು, ನದಿಬಯಲು, ತೀರ ಪ್ರದೇಶ, ಪರ್ವತಶ್ರೇಣಿ, ಭೂಗರ್ಭಸಂಪತ್ತು; ಅರಣ್ಯ ಸಂಪತ್ತು, ಹವಾಗುಣ, ಉಷ್ಣಾಂಶ, ರೇಖಾಂಶ, ಮಣ್ಣಿನ ರಚನೆ ಮುಂತಾದ ಭೌಗೋಳಿಕ ಅಂಶಗಳು ಕಾರಣವಾಗಿವೆ. ಪಾವಗಡ ಪರಿಸರದ ಚರಿತ್ರೆಯ ಅಧ್ಯಯನಕ್ಕೆ ತೊಡಗುವ ಮೊದಲು ಆ ಪ್ರದೇಶದ ಭೌಗೋಳಿಕ ಲಕ್ಷಣಗಳು ಯಾವ ರೀತಿ ಪ್ರಭಾವ ಭೀರಿವೆ ಎಂದು ತಿಳಿದುಕೊಳ್ಳುವುದು ಅಗತ್ಯವಾಗಿದೆ. ಪಾವಗಡವು ತುಮಕೂರು ಜಿಲ್ಲೆಯ ಈಶಾನ್ಯದಲ್ಲಿರುವ ಒಂದು ತಾಲ್ಲೂಕು ಕೇಂದ್ರವಾಗಿದೆ. ಜಿಲ್ಲೆಯ ಹತ್ತು ತಾಲ್ಲೂಕುಗಳಲ್ಲಿ ವಿಸ್ತೀರ್ಣದಲ್ಲಿ ಎರಡನೇ ಅತೀ ದೊಡ್ಡ ತಾಲ್ಲೂಕಾಗಿದೆ. ಇದು ೧೩೫೮ ಚದರ ಕಿ.ಮಿ ಅಥವಾ ೫೪೭೬ ಚದರ ಮೈಲಿಗಳಷ್ಟು ವಿಸ್ತೀರ್ಣ ಹೊಂದಿದೆ. ಇದು ೧೪೪ ಗ್ರಾಮಗಳನ್ನು ಹೊಂದಿದೆ.[೧] ತಾಲ್ಲೂಕಿನ ಪಶ್ಚಿಮದ ಕಡೆ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯಿದ್ದು ಉಳಿದೆಲ್ಲಾ ಕಡೆ ಆಂಧ್ರಪ್ರದೇಶವು

ಸುತ್ತುವರೆದಿದೆ. ಇದು ಗಡೀ ತಾಲ್ಲೂಕಾಗಿದ್ದು ಇದಕ್ಕೂ ಮತ್ತು ತುಮಕೂರು ಜಿಲ್ಲೆಗೂ ಭೌಗೋಳಿಕವಾಗಿ ಯಾವುದೇ ರೀತಿಯ ಸಂಬಂಧವನ್ನು ಹೊಂದಿಲ್ಲ. ಪಶ್ಚಿಮ ಭಾಗದಲ್ಲಿ ಒಂದೇ ಒಂದು ಅಂಚು ಮಾತ್ರ ಚಿತ್ರದುರ್ಗ ಜಿಲ್ಲೆಯ ಭೂಭಾಗಕ್ಕೆ ಸೇರಿದೆ. ಇದಕ್ಕೆ ಕಾರಣವೂ ಉಂಟು ಈ ಹಿಂದೆ ಪಾವಗಡ ತಾಲ್ಲೂಕು ಚಿತ್ರದುರ್ಗ ಜಿಲ್ಲೆಗೆ ಸೇರಿದ ಒಂದು ಭಾಗವಾಗಿದ್ದು ೧೮೮೬ರಲ್ಲಿ ಪ್ರತ್ಯೇಕಿಸಲ್ಪಟ್ಟಿತು.[೨] ಪಾವಗಡ ತಾಲ್ಲೂಕನ್ನು ಆಡಳಿತಾನುಕೂಲಕ್ಕೆ ತಕ್ಕಂತೆ ನಾಲ್ಕು ಹೋಬಳಿಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ಪಾವಗಡ, ನಿಡುಗಲ್ಲು, ನಾಗಲಮಡಿಕೆ, ವೈ.ಎನ್.ಹೊಸಕೋಟೆಗಳಾಗಿವೆ. ಪಾವಗಡವು ಅಕ್ಷಾಂಶ ೧೪°-೭೭° ಮತ್ತು ರೇಖಾಂಶ ೧೪° ೧-೭೭.೨೭ರ ಮಧ್ಯದಲ್ಲಿದೆ.[೩]

ಪಾವಗಡ ತಾಲ್ಲೂಕು ಪ್ರದೇಶದ ಜನಸಂಖ್ಯೆಯು ೨೦೦೧ರ ಜನಗಣತಿಯ ಪ್ರಕಾರ ೨,೨೩.೦೦೦ ಇದ್ದು ಇದರಲ್ಲಿ ಪುರುಷರು ಶೇ ೫೧% ಮತ್ತು ೪೯% ಮಹಿಳೆಯರು ಇರುವರು. ಇಲ್ಲಿಯ ಸಾಕ್ಷರತೆಯ ಪ್ರಮಾಣ ಶೇ ೬೭% ಹೊಂದಿದೆ. ಇದರಲ್ಲಿ ಪುರುಷರ ಸಾಕ್ಷರತೆಯೂ ಶೇ ೭೪% ರಲ್ಲಿದ್ದರೆ, ಸ್ತ್ರೀಯರ ಸಾಕ್ಷರತೆಯ ಪ್ರಮಾಣವು ಶೇ ೫೯ ರಷ್ಟಿದೆ. ಶೇ ೧೨ ರಷ್ಟು ಭಾಗ ಜನಸಂಖ್ಯೆಗೆ ೬ ವರ್ಷಕ್ಕಿಂತ ಕೆಳಮಟ್ಟದ ಮಕ್ಕಳಿದ್ದಾರೆ.[೪]

ಈ ಪರಿಸರವು ಸ್ವಲ್ಪ ಭಾಗ ಸಮತಟ್ಟಾಗಿದ್ದು ಅಲ್ಲಲ್ಲಿ ಉಬ್ಬು-ತಗ್ಗುಗಳಿಂದ ಕೂಡಿದೆ. ಇಲ್ಲಿಯ ಭೂಮಿಯೂ ಬಹುಮಟ್ಟಿಗೆ ಕೆಂಪು ಮಣ್ಣಿನಿಂದ ಕೂಡಿದ್ದು ಅಲ್ಲಲ್ಲಿ ಕಪ್ಪು ಮತ್ತು ಮರಳು ಮಿಶ್ರಿತ ಕೆಂಪು ಮಣ್ಣನ್ನು ಮತ್ತು ಚಿಕ್ಕ ಪುಟ್ಟ ಗುಡ್ಡಗಳನ್ನು ಬೃಹತ್ತಾದ ಕಣಶಿಲೆ, ಬೆಟ್ಟಗಳ ಸಾಲುಗಳಿಂದಾವೃತವಾಗಿದೆ.

ಜಿಲ್ಲೆಯ ಪೂರ್ವಾರ್ಧದಲ್ಲಿ ಉತ್ತರ-ದಕ್ಷಿಣವಾಗಿ ಹರಡಿರುವ ಕಣಶಿಲೆ ಬೆಟ್ಟಗಳ ಸಾಲು ಪಾವಗಡದ ಮೂಲಕ ಹಾದುಹೋಗಿವೆ. ತಾಲ್ಲೂಕಿನಾದ್ಯಂತ ಈ ಬೆಟ್ಟಗಳು ಸಾಲುಸಾಲಾಗಿ ಕಂಡುಬರುತ್ತವೆ. ಇವುಗಳು ಅಗ್ನಿಶಿಲೆಯ ಮಾದರಿಯ ಗ್ರಾನೈಟ್ ಮತ್ತು ಕ್ಲೋಸ್‌ಪೇಟ್ ಗ್ರಾನೈಟ್ ಶಿಲೆಗಳ ಗುಂಪಿಗೆ ಸೇರಿದ ಕುರುಂದ ರೀತಿಯ ಶಿಲಾಪದರಗಳು ಕೆಲವು ಕಡೆ ಕಂಡುಬರುತ್ತವೆ. ಇಲ್ಲಿ ಕಂಡುಬರುವ ಪ್ರಮುಖ ಬೆಟ್ಟಗಳೆಂದರೆ ಪಾವಗಡ ಬೆಟ್ಟ, ಇದು ಸಮುದ್ರ ಮಟ್ಟದಿಂದ ಸುಮಾರು ೯೧೮ ಮೀಟರ್ ಎತ್ತರವಾಗಿದೆ. (೩೦೨೯ ಅಡಿಗಳು) ಅದೇ ರೀತಿ ನಿಡುಗಲ್ಲು ಬೆಟ್ಟವೂ ಸಹ ಐತಿಹಾಸಿಕವಾಗಿ ಮಹತ್ವವನ್ನು ಪಡೆದಿದೆ. ಇದು ೩೭೭೭ಅಡಿ ಎತ್ತರವಾಗಿದ್ದರು ತಾಲ್ಲೂಕಿನ ಅತಿ ಎತ್ತರದ ಬೆಟ್ಟವಾಗಿದೆ.[೫] ಇಲ್ಲಿ ಹಲವು ಐತಿಹಾಸಿಕ ದೇವಾಲಯಗಳಿದ್ದು ಪಾಳೇಗಾರರ ಆಳ್ವಿಕೆಗೆ ಒಳಪಟ್ಟಿತ್ತು. ಮತ್ತೊಂದು ಪ್ರಮುಖ ಬೆಟ್ಟವೆಂದರೆ ಕಾಮನದುರ್ಗಬೆಟ್ಟ ಇದು ೩೭೩೦ ಅಡಿ ಎತ್ತರವನ್ನು ಹೊಂದಿದೆ. ಇದು ಪೌರಾಣಿಕವಾಗಿ ಪ್ರಸಿದ್ಧಿ ಪಡೆದ ಬೆಟ್ಟವಾಗಿದೆ. ಇದನ್ನು ಕಾಕಾದ್ರಿಬೆಟ್ಟ ಎಂದು ಸ್ಥಳೀಯರು

ಕರೆಯುತ್ತಾರೆ. ಪಾವಗಡ ಬೆಟ್ಟವು ಇತರೆ ಬೆಟ್ಟಗಳಿಗಿಂತ ವಿಶಿಷ್ಟವಾಗಿದೆ. ಏಕೆಂದರೆ ಈ ಬೆಟ್ಟವು ಅಗಾಧವಾದ ಎತ್ತರದ ಗುಂಡು ಕಲ್ಲುಗಳಿಂದ ಪ್ರಾಕೃತಿಕವಾಗಿ ಭದ್ರಪಡಿಸಿರುವ ಕೊಡುಗಲ್ಲಿಗಳಿಂದ ಕೂಡಿದೆ. ಇವುಗಳ ಎತ್ತರ ಸುಮಾರು ೮೦-೧೦೦ ಅಡಿ ಎತ್ತರದ ಹೆಬ್ಬಂಡೆಗಳಿಂದ ಕೂಡಿರುವುದೇ ಈ ಬೆಟ್ಟದ ವೈಶಿಷ್ಟ್ಯ, ಈ ಪ್ರದೇಶದಲ್ಲಿ ಕಂಡುಬರುವ ಇತರೆ ಬೆಟ್ಟಗಳೆಂದರೆ ಯಲ್ಲಪ್ಪನಾಯಕನ ಬೆಟ್ಟ, ದವಡಬೆಟ್ಟ, ದೇವರ ಬೆಟ್ಟ, ಹನುಮನ ಬೆಟ್ಟ ಇವುಗಳಲ್ಲದೇ ಹಲವು ಕುರುಚುಲು ಗಿಡಗಳಿಂದ ಆವೃತವಾದ ಗುಡ್ಡಗಳನ್ನು ನೋಡಬಹುದಾಗಿದೆ.

ಇಲ್ಲಿ ಮಳೆಯ ಪ್ರಮಾಣ ಬಹಳ ಕಡಿಮೆ ಇರುವುದರಿಂದ ದಟ್ಟ ಅರಣ್ಯಗಳಿರದೇ ಪೊದೆಗಳು ಮತ್ತು ಎತ್ತರವಲ್ಲದ ಮರಗಳನ್ನು ಕಾಣಬಹುದಾಗಿದೆ. ಈ ಪರಿಸರದಲ್ಲಿರುವ ಬಹಳಷ್ಟು ಕಾಡುಗಳು ಬೆಟ್ಟಗಳ ಸಾಲಿನಲ್ಲಿಯೇ ಕೇಂದ್ರೀಕೃತವಾಗಿವೆ. ಇಲ್ಲಿನ ಅರಣ್ಯಗಳು ಮಾನವ ರಕ್ಷಿತ ಅರಣ್ಯಗಳಾಗಿದ್ದು. ಎಲೆ ಉದುರುವ ವೃಕ್ಷಗಳು, ಮುಳ್ಳು ಗಿಡಗಳು, ಕುರುಚಲು ಕಾಡು ಸಾಮಾನ್ಯವಾಗಿ ಕಂಡುಬರುತ್ತವೆ. ಇವು ಬಯಲು ಸೀಮೆಯ ಉಷ್ಣವಲಯಕ್ಕೆ ಸೇರಿವೆ. ಕಾಮನದುರ್ಗ ನಿಡುಗಲ್ಲುದುರ್ಗಗಳಲ್ಲಿ ಕಂಡುಬರುವ ಕಾಡುಗಳೇ ಪ್ರಮುಖವಾಗಿವೆ. ಈಗ ತಾಲ್ಲೂಕಿನಲ್ಲಿ ಒಟ್ಟು ೫೮೭೬೫ ಹೆಕ್ಟೇರ್‌ಗಳಷ್ಟು ಅರಣ್ಯ ಪ್ರದೇಶವಿದೆ.[೬] ಇಲ್ಲಿ ಹೆಚ್ಚಾಗಿ ಇಂದು ನೆಡುತೋಪು ಅರಣ್ಯಗಳಾಗಿವೆ. ಈ ಪರಿಸರದಲ್ಲಿ ಕಂಡುಬರುವ ಪ್ರಮುಖ ಸಸ್ಯಗಳನ್ನು ಪ್ರಧಾನವಾಗಿ ನಾಲ್ಕು ಭಾಗಗಳಾಗಿ ವಿಂಗಡಿಸಬಹುದು, ನೆಲಮಟ್ಟದಿಂದ ಸುಮಾರು ಮೂರು ಅಡಿಗಳವರೆಗೆ ಬೆಳೆಯುವ ಪೊದರುಗಳು, ಎತ್ತರವಾಗಿ ಬೆಳೆದು ಡಿಸೆಂಬರ್ ತಿಂಗಳಿಂದ ಎಲೆ ಉದುರಿ, ಯುಗಾದಿಯ ವೇಳೆಗೆ ಚಿಗುರುವ ಗಿಡಗಳು ಮತ್ತು ಹಾಲು ತುಂಬಿರುವ ಎಲೆಗಳಿಲ್ಲದ ಗಿಡಗಳು ತಿನ್ನಲು ಉಪಯೋಗಿಸುವ ಫಲಗಳನ್ನು ಬಿಡುವ ಸಸ್ಯಗಳು ಮತ್ತು ಕಾಡು ಹೂ ಗಿಡಗಳು. ಮೊದಲನೆ ವರ್ಗಕ್ಕೆ ಕಕ್ಕೆ, ತಂಗಡಿ, ನೆಲಬಂದರಿ, ಕಾರೆ ಮೊದಲಾದ ಗಿಡಗಳು ಬರುತ್ತವೆ. ಎರಡನೇ ವರ್ಗದ ಜಾತಿಗೆ ಸೇರಿದ ಬೇವು, ಅಡವಿ, ಹಲಸು, ಜಾಲಿ, ಚಿಗರೆ,, ಜಂಬೆ, ಹಿಪ್ಪೆ, ಹೊನ್ನೆ, ಅಂಕೊಲೆ, ಹುಣಿಸೆ, ಮರವಲೆ, ದೇವದಾರು ಮೊದಲಾದವುಗಳು ಕಂಡುಬಂದರೆ. ಮೂರನೇ ವರ್ಗಕ್ಕೆ ಸೇರಿದ ಹಾಗೂ ಈ ಪರಿಸರದಲ್ಲಿ ಸಾಮಾನ್ಯವಾಗಿ ಕಂಡುಬರುವ ಹಾಲು ತುಂಬಿದ, ಮುಳ್ಳುಗಳಿಂದ ಕೂಡಿದ ಸಸ್ಯಗಳಾಗಿವೆ. ಇವುಗಳಲ್ಲಿ ಬಂದಕಳ್ಳ, ಪಾಪಾಸುಕಳ್ಳಿ ಮತ್ತು ತೋಟದ ಕಳ್ಳಿಗಿಡಗಳನ್ನು ಕಾಣಬಹುದು. ಇವುಗಳು ವರ್ಷದ ಎಲ್ಲಾ ಕಾಲದಲ್ಲೂ ಹಸಿರಾಗಿರುತ್ತವೆ. ನಾಲ್ಕನೇ ವರ್ಗಕ್ಕೆ ಸೇರಿದ ಸೀತಾಫಲ, ದೇವದಾರುಹಣ್ಣು, ಅಂಟುವಾಳದ ಕಾಯಿ, ಅರಳೆ ಕಾಯಿ, ಕಾರೆಕಾಯಿ ಮೊದಲಾದ ಗಿಡಗಳು ಕಂಡುಬರುತ್ತವೆ, ಈ ಅರಣ್ಯ ಪ್ರದೇಶಗಳಲ್ಲಿ ಬಹಳ ಲಾಭ ತರುವ

ಮರಗಳೆಂದರೆ ಹುಣಸೆ, ಅರಳೆ, ಅಂಟವಾಳು, ಸೀತಾಫಲ, ಹೊಂಗೆ ಮುಂತಾದವುಗಳಾಗಿವೆ. ಬೆಟ್ಟದ ಸಾಲುಗಳಲ್ಲಿ ಅನೇಕ ಗಿಡಮೂಲಿಕೆ ಧಾತುಗಳಿದ್ದೂ, ಅವುಗಳಲ್ಲಿ ಪ್ರಧಾನವಾದವುಗಳೆಂದರೆ ನಿರ್ಗುಂಡಿ, ಚಕ್ರಾಣಿ, ಈಶ್ವರಿ, ಆಕಾಶಗರುಡ, ಆಡುಸೋಗೆ, ಚಕ್ರಮೂಲ, ಅಂಟವಾಳು, ಮರವಲೆ, ಸೋನಾಮುಖಿ ಮೊದಲಾದವುಗಳಾಗಿವೆ. ಕಾಡುಹೂಗಳಾದ ದೇವಕಣಿಗಲೆ, ಪಾದರಿ, ಪ್ರೀತಿಮಲ್ಲಿಗೆ, ಗಂಟಾಪುಷ್ಪಗಳು ಬೆಟ್ಟದ ಸಾಲುಗಳಲ್ಲಿ ಚದುರಿದಂತೆ ಕಂಡುಬರುತ್ತವೆ.[೭] ಈ ಪರಿಸರದಲ್ಲಿ ಗೊಂಡಾರಣ್ಯಗಳಿಲ್ಲದಿರುವ ಪ್ರಯುಕ್ತ ಇಲ್ಲಿ ಶುಷ್ಕ ವಾತಾವರಣದ ಕಾಡುಗಳಲ್ಲಿರುವಂತಹ ದ್ವಿತೀಯ ದರ್ಜೆಯ ವಿಶೇಷವಾಗಿ ಮಾಂಸಾಹಾರಿ ಪ್ರಾಣಿಗಳಾದ ನರಿ, ತೋಳ, ಜೊಂಪುತೋಳ, ಕತ್ತೆಕಿರುಬ, ಮುಂತಾದವು ಕಾಣುತ್ತವೆ. ಅಪರೂಪಕ್ಕೊಮ್ಮೆ ಚಿರತೆಯು ಕಾಣಿಸಿಕೊಳ್ಳುತ್ತದೆ. ಅದೇ ರೀತಿ ಸಸ್ಯಹಾರಿಗಳಾದ ಕರಡಿ, ಕಾಡುಹಂದಿ, ಮುಳ್ಳುಹಂದಿ, ದೊಡ್ಡ ಜಿಂಕೆ, ಮುಂಗುಸಿ, ಉಡ, ಮೊಲ, ವಿಷಜಂತುಗಳಾದ ನಾಗರ, ಮಿಳನಾರ, ಗೋಧಿನಾಗರ, ರಕ್ತಪಂಜರ, ಕೊಂಡಶಿಲ್ಲಾ ಮುಂತಾದವು ಕಂಡುಬರುತ್ತವೆ.

ಜಿಲ್ಲೆಯ ಆರ್ಥಿಕ ರಂಗದ ಮೇಲೆ ಮಹತ್ತರವಾದ ಪ್ರಭಾವ ಬೀರುವ ಮತ್ತು ಲಾಭ ತರಬಹುದಾದ ಮುಖ್ಯ ಖನಿಜಗಳು ಈ ಪರಿಸರದಲ್ಲಿ ಹೇರಳವಾಗಿಲ್ಲ. ಇಲ್ಲಿ ಒಮ್ಮೆ ಕೆಂಪು ಹರಳುಯುಕ್ತ, ಕಚ್ಚಾ ವಸ್ತು ದೊರೆತು ಅಂತರ ರಾಷ್ಟ್ರೀಯ ಪ್ರಸಿದ್ಧಿಯನ್ನು ಪಡೆದಿತ್ತು. ಇಲ್ಲಿ ದೊರೆತ ಬರ್ಮಾರೂಬಿಯನ್ನು ಹೋಲುವ ರೂಭಿಸ್ಟೋನ್‌ಗಳು ಗುಲಗಂಜಿ ಗಾತ್ರದಿಂದ ಹಿಡಿದು ನಿಂಬೆಹಣ್ಣಿನ ಗಾತ್ರದವರೆಗೂ ದೊರೆತಿವೆ. ತಾಲೂಕಿನ ಹುಲಿ ಬೆಟ್ಟ, ಕೃಷ್ಣಾಪುರ, ಜಾಜುರಾಯನಹಳ್ಳ, ಅಕ್ಕಮ್ಮನ ಹಳ್ಳಿ, ಚಿಕ್ಕಹಳ್ಳಿ ಇನ್ನಿತರೆ ಕಡೆಗಳಲ್ಲಿ ಈ ಜಾತಿಯ ಹರಳುಗಳು ಹೆಚ್ಚು ಪ್ರಮಾಣದಲ್ಲಿ ದೊರೆತಿವೆ.[೯] ಈ ಪರಿಸರದಲ್ಲಿ ಬೆಟ್ಟಗುಡ್ಡಗಳು ಬಹಳವಾಗಿರುವುದರಿಂದ ಕಟ್ಟಡ ನಿರ್ಮಾಣಕ್ಕೆ ಅವಶ್ಯಕವಾಗಿರುವ ಕಲ್ಲುಗಳು ದೊರೆಯುತ್ತವೆ. ಅಗ್ನಿಶಿಲೆಯ ಗ್ರಾನೈಟ್, ಕ್ಲೋಸಪೇಟೆ, ಗ್ರಾನೈಟ್ ಶಿಲೆಗಳ ಗುಂಪಿಗೆ ಸೇರಿದ ಕುರುಂದು ರೀತಿಯ ಶಿಲಾ ಪದರಗಳಷ್ಟೇ, ಇವುಗಳನ್ನು ಮನೆಕಟ್ಟಡಗಳನ್ನು ಕಟ್ಟಲು ಬಳಸುತ್ತಾರೆ. ಸುಣ್ಣಕಲ್ಲು ಈ ಪರಿಸರದ ಎಲ್ಲಾ ಭಾಗದಲ್ಲೂ ದೊರೆಯುತ್ತದೆ. ಇಲ್ಲಿ ದೊರೆಯುವ ಸುಣ್ಣಕಲ್ಲಿನಲ್ಲಿ ಕ್ಷಾರ ಹೆಚ್ಚು ಆದ್ದರಿಂದ ಈ ಪಾವಗಡ ಸುಣ್ಣ ಪ್ರಸಿದ್ದವಾಗಿದೆ, ಈ ಸುಣ್ಣವನ್ನು ಸಾಮಾನ್ಯವಾಗಿ ಲಂಬಾಣಿಗಳು ಸುಡುತ್ತಾರೆ. ಇದನ್ನು ಗಾರೆ, ಚುರ್ಕಿ ಮತ್ತು ಗೋಡೆಯನ್ನು ಬಳಿಯಲು ಬಳಸುತ್ತಾರೆ. ಅಭ್ರಕ ತಾಲ್ಲೂಕಿನಲ್ಲಿ ಅಲ್ಪ ಪ್ರಮಾಣದಲ್ಲಿ ದೊರೆಯುತ್ತದೆ.[೯]

ಈ ಪ್ರದೇಶವು ಬಯಲು ಸೀಮೆಯಾದ್ದರಿಂದ ಇಲ್ಲಿನ ಪ್ರಮುಖ ಜಲಸಂಪನ್ಮೂಲವೆಂದರೆ ಕೆರೆಗಳು, ಬಾವಿಗಳು, ಕೊಳವೆಬಾವಿ, ತಲಫಿರಿಗೆಗಳನ್ನು ಅವಲಂಭಿಸಿದೆ. ಪ್ರಾಚೀನ ಕಾಲದಿಂದಲೂ ನೀರಿನ ಆಸರೆಯಾಗಿ ಇಲ್ಲಿನ ಕೆರೆಗಳು ಪ್ರಮುಖ ಪಾತ್ರವಹಿಸುತ್ತವೆ. ಈ

ಪ್ರದೇಶದಲ್ಲಿ ಗುಡ್ಲಹಳ್ಳಿ ಕೆರೆಯು ಕ್ರಿ.ಶ.೭೫೪ರಲ್ಲಿ ಕಟ್ಟಿದಂತಹದ್ದಾಗಿದ್ದು ತಾಲೂಕಿನ ಪ್ರಾಚೀನ ಕೆರೆಯಾಗಿದೆ.[೧೦] ಅದೇ ರೀತಿ ಪಳವಳ್ಳಿ ಕೆರೆಯು ಬಹಳ ದೊಡ್ಡ ಕೆರೆಯಾಗಿದೆ. ಇತರೆ ಅನೇಕ ಸಣ್ಣಪುಟ್ಟ ಕೆರೆಗಳು ಕಾಣಬಹುದು. ಈ ತಾಲ್ಲೂಕಿನಲ್ಲಿ ಸುಮಾರು ೧೧೦ಕ್ಕೂ ಹೆಚ್ಚಿನ ಕೆರೆಗಳಿವೆ. ಈ ತಾಲ್ಲೂಕಿನ ಪೂರ್ವಭಾಗದಲ್ಲಿ ಉತ್ತರ ಪಿನಾಕಿನಿ ನದಿಯು ಹರಿಯುತ್ತದೆ. ಇದನ್ನು ಉತ್ತರ ಪೆನ್ನಾರ್ ಎಂತಲೂ ಕರೆಯುತ್ತಾರೆ. ಇದು ಮಳೆಗಾಲದಲ್ಲಿ ಮಾತ್ರ ತುಂಬಿ ಹರಿದು ಬೇಸಿಗೆಯಲ್ಲಿ ಬತ್ತಿ ಹೋಗುತ್ತದೆ. ಇಲ್ಲಿಯ ರೈತರು ವ್ಯವಸಾಯಕ್ಕೆ ಬಾವಿಗಳನ್ನೇ ನಂಬಿಕೊಂಡಿದ್ದರೂ, ಇತ್ತೀಚಿನ ವರ್ಷಗಳಲ್ಲಿ ಕೊಳವೆಬಾವಿಗಳಿಂದಾಗಿ ಅಂತರ್ಜಲ ಮಟ್ಟ ಇಳಿಮುಖವಾಗಿ ಕೆಲವೇ ಕೆಲವು ರೈತರು ಮಾತ್ರ ಬಾವಿಗಳ ನೀರಿನಿಂದ ವ್ಯವಸಾಯ ಮಾಡುತ್ತಿದ್ದಾರೆ. ಮಿಕ್ಕವರೆಲ್ಲ ಕೊಳವೆಬಾವಿಗಳಿಂದಲೇ ವ್ಯವಸಾಯ ಮಾಡುತ್ತಿದ್ದಾರೆ. ಇತ್ತೀಚಿಗೆ ಲೋಕೋಪಯೋಗಿ ಇಲಾಖೆಯವರು ಕೆರೆಗಳ ದುರಸ್ತಿ ಕಾರ್ಯ ಮಾಡುತ್ತಿದ್ದಾರೆ. ಆದರೂ ಇಲ್ಲಿ ಮಳೆಯ ಪ್ರಮಾಣ ಕಡಿಮೆ ಇದ್ದು ಈ ಕೆರೆಗಳು ಸುಮಾರು ವರ್ಷಗಳಾದರೂ ಖಾಲಿಯಾಗಿಯೇ ಇರುತ್ತವೆ. ಆದರೂ ಕೆರೆಗಳೇ ಇಲ್ಲಿಯ ಜನರ ಪ್ರಮುಖ ಜಲಸಂಪನ್ಮೂಲ ತಾಣಗಳಾಗಿವೆ. ಅಲ್ಲಲ್ಲಿ ನೈಸರ್ಗಿಕವಾಗಿ ನೀರು ಮೇಲೆ ಬರುವ ತಲಫಿರಿಗೆ, ಬಾವಿಗಳು ಸಹ ಇಲ್ಲಿಯ ಜನರಿಗೆ ನೀರು ಒದಗಿಸುವ ತಾಣಗಳಾಗಿದ್ದು ಅಂತರ್ಜಲ ಕುಸಿತದಿಂದ ಇವು ಬೇಸಿಗೆಯಲ್ಲಿ ಒಣಗಿ ಮಳೆಗಾಲದಲ್ಲಿ ನೀರು ತುಂಬಿರುತ್ತವೆ.

ಪಾವಗಡ ಪರಿಸರದ ಹವಾಮಾನವು ಹೆಚ್ಚು ಉಷ್ಣತೆಯನ್ನು ಹೊಂದಿದ್ದು ಮಾರ್ಚ್‌ನಿಂದ ಮೇ ತಿಂಗಳವರೆಗೆ ವಾತಾವರಣದ ಉಷ್ಣಾಂಶ ಗಣನೀಯ ಪ್ರಮಾಣದಲ್ಲಿ ಹೆಚ್ಚಿರುತ್ತದೆ. ಏಪ್ರಿಲ್ ಅತೀ ಹೆಚ್ಚಿನ ಉಷ್ಣಾಂಶದಿಂದ ಕೂಡಿದ ತಿಂಗಳಾಗಿದ್ದು ಪರಮಾವಧಿ ೪೦-೪೧°c ಹೊಂದಿರುತ್ತದೆ. ನೈರುತ್ಯ ಮುಂಗಾರು ಮಾರುತಗಳಿಂದಾಗಿ ಜೂನ್ ತಿಂಗಳಲ್ಲಿ ಬಿಸಿ ಉಷ್ಣಾಂಶ ಕಡಿಮೆಯಾಗಿ ಮುಂಗಾರು ಮಳೆ ಪ್ರಾರಂಭವಾಗುವುದರಿಂದ ವಾತಾವರಣವು ಜನವರಿ ತಿಂಗಳವರೆಗೆ ಹಿತಕರವಾಗಿರುತ್ತದೆ. ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಹಿಂಗಾರು ಮಳೆ ಪ್ರಾರಂಭವಾಗಿ ನವಂಬರ್ ತಿಂಗಳ ಕೊನೆಯ ವೇಳೆಗೆ ಸಂಪೂರ್ಣವಾಗಿ ಮಳೆ ಕಡಿಮೆಯಾಗುತ್ತದೆ. ಡಿಸೆಂಬರ್ ಹೆಚ್ಚು ತಂಪಾದ ವಾತಾವರಣದಿಂದ ಕೂಡಿದ್ದು ತುಂಬಾ ಚಳಿಯಿಂದ ಕೂಡಿರುತ್ತದೆ. ಅಂದಿನ ದಿನನಿತ್ಯದ ವಾತಾವರಣದ ಉಷ್ಣಾಂಶವು ೧೦ ಡಿಗ್ರಿ ಸೆಂಟಿಗ್ರೇಡ್‌ವರೆಗೂ ಇಳಿಯುತ್ತದೆ. ತುಮಕೂರು ಜಿಲ್ಲೆಯಲ್ಲಿಯೇ ಅತ್ಯಂತ ಕಡಿಮೆ ಮಳೆ ಬೀಳುವ ಪ್ರದೇಶ ಇಲ್ಲಿ ಪಾವಗಡವಾಗಿದೆ. ವಾರ್ಷಿಕ ಸರಾಸರಿ ಮಳೆಯ ಪ್ರಮಾಣ ೫೬೧.೩ ಮಿ.ಮೀಗಳಷ್ಟಿರುತ್ತದೆ.[೧೧]

ಇಲ್ಲಿಯ ಜನರ ಪ್ರಮುಖ ಉದ್ಯೋಗ ವ್ಯವಸಾಯವಾಗಿದ್ದು ಹೆಚ್ಚಾಗಿ ಮಳೆಯನ್ನಾಧರಿಸಿ ಬೇಸಾಯ ಮಾಡುತ್ತಾರೆ. ಕಡಿಮೆ ಪ್ರಮಾಣದಲ್ಲಿ ನಿರಾವರಿ ಸೌಲಭ್ಯ ಹೊಂದಿದ್ದು ಕೆರೆಗಳು ತುಂಬಿದಾಗ, ಬಾವಿಗಳಿಂದ ಹಾಗೂ ಕೊಳವೆಬಾವಿಗಳ ಸಹಾಯದಿಂದ ನೀರಾವರಿ ಬೇಸಾಯ ಮಾಡಿದರೂ. ಹೆಚ್ಚಾಗಿ ಮಳೆಯನ್ನಾದರಿಸಿ ಒಣ ಬೇಸಾಯವನ್ನು ಮಾಡುತ್ತಾರೆ. ಕೃಷಿ ಗಣತಿಯ ಪ್ರಕಾರ ಈ ಕ್ಷೇತ್ರದಲ್ಲಿ ೭೫೬೩೭ ಹೆಕ್ಟೇರ್‌ಗಳಲ್ಲಿ (ಖುಷ್ಕಿ) ದಿನ್ನೇ ಬೆಳೆಗಳನ್ನು ಬೆಳೆಯುತ್ತಾರೆ.[೧೨] ಇಲ್ಲಿ ಬೆಳೆಯುವ ಪ್ರಮುಖ ಬೆಳೆಗಳೆಂದರೆ ರಾಗಿ, ಭತ್ತ, ದ್ವಿದಳ ದಾನ್ಯವಾದ ನೆಲಗಡಲೆ (ಶೇಂಗಾ) ತರಕಾರಿ ರೂಪದ ಬೆಳೆಗಳೂ, ಅಲಲ್ಲಿ ಹಿಪ್ಪುನೇರಳೆ, ಅಡಿಕೆ ತೋಟಗಳು ವಾಣಿಜ್ಯ ಬೆಳೆಗಳಾದ ದಾಳಿಂಬೆ, ಪಪ್ಪಾಯಿ, ಮುಸಂಬಿ ಬೆಳೆಗಳನ್ನು ಸಹ ಹನಿ ನೀರಾವರಿಯ ಸಹಾಯದಿಂದ ಬೆಳೆಯುತ್ತಾರೆ.

೨.೨ ಪ್ರಾಗಿತಿಹಾಸ

ಒಂದು ಪ್ರದೇಶದ ಐತಿಹಾಸಿಕ ಮಹತ್ವವನ್ನು ಆ ಪ್ರದೇಶದಲ್ಲಿ ದೊರೆಯುವ ಹಲವಾರು ಅವಶೇಷಗಳಿಂದ ತಿಳಿಯಬಹುದಾಗಿದೆ. ಇಂತಹ ಅವಶೇಷಗಳು ಇತಿಹಾಸವನ್ನು ರಚಿಸಲು ಸಹಾಯಕವಾಗಿವೆ. ಇತಿಹಾಸವನ್ನು ಪ್ರಾಗಿತಿಹಾಸ ಮತ್ತು ಇತಿಹಾಸಕಾಲ ಎಂಬುದಾಗಿ ವಿಭಾಗಿಸಲಾಗಿದೆ. ಪ್ರಾಗಿತಿಹಾಸ ಕಾಲದ ಮಾನವನ ಜೀವನದ ಆರಂಭವು ಕುತೂಹಲಕರವಾಗಿದೆ. ಈ ಕಾಲಮಾನದಲ್ಲಿ ಮಾನವನಿಗೆ ಓದು ಬರಹದ ಅಥವಾ ಅಕ್ಷರದ ಜ್ಞಾನವಿರಲಿಲ್ಲ. ಸ್ವೇಚ್ಛಾ ಜೀವಿಯಾಗಿ ತನ್ನ ಮನಬಂದಂತೆ ಜೀವನ ಸಾಗಿಸುತ್ತಿದ್ದ ಮಾನವ. ತನ್ನ ಆಹಾರವನ್ನು ಬೇಟೆಯಾಡಿ ಪಡೆದುಕೊಳ್ಳುತ್ತಿದ್ದ. ಬೇಟೆಯಾಡಲು ಕಲ್ಲಿನ ಆಯುಧಗಳನ್ನು ಬಳಸುತ್ತಿದ್ದನು. ಇಂತಹ ಉಪಕರಣಗಳನ್ನು ತಯಾರಿಸಿಕೊಳ್ಳಲು ಕಲ್ಲಿನ ಮಾದರಿಗಳ ಆಯ್ಕೆ, ಅವುಗಳ ರೂಪಣಾವಿಧಾನ, ಬಳಸಿದ ತಾಂತ್ರಿಕತೆ ಬಹುಮುಖ್ಯ ಪಾತ್ರವಹಿಸಿ, ಮಾನವನ ಜೀವನ ವಿಕಾಸದ ಬದಲಾವಣೆಗಳನ್ನು ತಿಳಿಯಲು ಸಹಾಯಕವಾಗಿದೆ.[೧೩] ಇಂತಹ ವಿಕಾಸದ ಜೀವನ ಕ್ರಮವನ್ನು ಸಂಸ್ಕೃತಿ ಎಂದು ಕರೆಯಲಾಗಿದೆ. ಕಲ್ಲಿನ ಬಳಕೆಯಿಂದಾಗಿ ಈ ಹಂತವನ್ನು "ಶಿಲಾಯುಗ ಸಂಸ್ಕೃತಿ" ಎಂದು ಕರೆದಿರುವರು. ಬೆಳವಣಿಗೆ ಸಾಧಿಸಿಕೊಂಡ ಮಾನವ ಶಿಲೆಯಿಂದ ಲೋಹಕ್ಕೆ ಬದಲಾವಣೆ ಹೊಂದಿ ಸುಸಂಸ್ಕೃತ ಶೈಲಿಯನ್ನು ರೂಪಿಸಿಕೊಂಡು ನಾಗರೀಕನಾದನು.

ಕರ್ನಾಟಕದ ಪ್ರಾಗೈತಿಹಾಸದ ಅಧ್ಯಯನವು ಪ್ರಿಮ್‌ರೋಸ್ ಕ್ರಿ.ಶ. ೧೮೪೨ರಲ್ಲಿ ಲಿಂಗಸೂರು (ರಾಯಚೂರು ಜಿಲ್ಲೆ) ಪ್ರದೇಶದಲ್ಲಿ ಆಕಸ್ಮಿಕವಾಗಿ ಸಂಶೋಧಿಸಿದ ಶಿಲೋಪಕರಣಗಳಿಂದ ಆರಂಭವಾಗಿ ಮುಂದೆ ರಾಬರ್ಟ್‌ಬ್ರೂಸ್ ಪೂಟ್, ಕರ್ನಲ್ ಮೆಕೆಂಜಿಯವರು ಪ್ರಾಗೈತಿಹಾಸಿಕ ನೆಲೆಗಳ ಸಂಶೋಧನೆಯಲ್ಲಿ ಗಣನೀಯ ಸಾಧನೆ

ಮಾಡಿದರು.[೧೪] ಇವರು ಆರಂಭಿಸಿದ ನೆಲೆಗಳ ಶೋಧಾಕಾರ್ಯವನ್ನು ಪುರಾತತ್ವಜ್ಞರು ಮುಂದುವರೆಸಿ ಹಲವಾರು ಶಿಲಾಯುಗದ ನೆಲೆಗಳನ್ನು ಶೋಧಿಸಿದರು. ಈವರೆಗೆ ಕರ್ನಾಟಕದಲ್ಲಿ ಸುಮಾರು ೨೫೧೭ ನೆಲೆಗಳನ್ನು ಗುರುತಿಸಿದ್ದು,[೧೫] ಇಂದಿಗೂ ಸಹ ಹೊಸ ಹೊಸ ಶಿಲಾಯುಗದ ನೆಲೆಗಳು ಕಂಡುಬರುತ್ತಿವೆ. ಕರ್ನಾಟಕದ ಶಿಲಾಯುಗ ಸಂಸ್ಕೃತಿಯ ಅತಿ ಹೆಚ್ಚು ನೆಲೆಗಳು ತುಮಕೂರು ಜಿಲ್ಲೆಯಲ್ಲಿ ಸುಮಾರು ೨೬೬ ನೆಲೆಗಳು ಕಂಡುಬಂದಿವೆ.[೧೬] ಇದರಿಂದಾಗಿ ಈ ಪ್ರದೇಶವು ಪ್ರಾಗೈತಿಹಾಸಿಕವಾಗಿ ಸಮೃದ್ಧ ಕೇಂದ್ರವಾಗಿತ್ತೆಂದು ಹೇಳಿದರೆ ತಪ್ಪಾಗಲಾರದು. ಜಿಲ್ಲೆಯ ಎಲ್ಲಾ ಹತ್ತು ತಾಲ್ಲೂಕುಗಳಲ್ಲಿಯೂ ಪ್ರಾಗೈತಿಹಾಸಿಕ ನೆಲೆಗಳು ಕಂಡುಬಂದಿವೆ. ಇಲ್ಲಿ ಹಳೆ ಶಿಲಾಯುಗ ಸಂಸ್ಕೃತಿಯಿಂದ ಹಿಡಿದು ಇತಿಹಾಸ ಆರಂಭ ಕಾಲದವರೆವಿಗೂ ವಿವಿಧ ಸಾಂಸ್ಕೃತಿಕ ಹಂತಗಳು ದೊರೆತಿವೆ.

ಆದಿ ಹಳೆ ಶಿಲಾಯುಗ ಸಂಸ್ಕೃತಿಯ ಸುಮಾರು ೧೮ ನೆಲೆಗಳು ಕಂಡುಬಂದಿದ್ದು ಇವುಗಳು ಪ್ರಮುಖವಾಗಿ ಕಿಬ್ಬನಹಳ್ಳಿ, ಬ್ಯಾಸಂದ್ರಬೆಟ್ಟ, ಬಿಳಿಗೆರೆ, ಅಪ್ಪಾನಹಳ್ಳಿ, ಮೂಗನಾಯಕನ ಕೋಟೆ, ಇನ್ನೂ ಮುಂತಾದವುಗಳಲ್ಲಿ ಕಂಡುಬಂದಿವೆ. ಈ ಸಂಸ್ಕೃತಿಯ ಕಾಲವು ಸುಮಾರು ನಾಲ್ಕು ಲಕ್ಷದಿಂದ ಒಂದು ಲಕ್ಷವರ್ಷಗಳ ಹಿಂದೆ ಇದ್ದಿತ್ತೆಂದು ಸಂಶೋಧಕರು ತಿಳಿಸಿರುವರು. ಅದೇ ರೀತಿ ಮಧ್ಯ ಹಳೇ ಶಿಲಾಯುಗದ ೨೨, ಅಂತ್ಯ ಹಳೆಶಿಲಾಯುಗ ಸಂಸ್ಕೃತಿಯ ೫೦, ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ೬೬, ನೂತನ ಶಿಲಾಯುಗದ ಸಂಸ್ಕೃತಿಯ೩೧, ಶಿಲಾ–ತಾಮ್ರಯುಗದ೨, ಬೃಹತ್ ಶಿಲಾಯುಗ ಸಂಸ್ಕೃತಿಯ ೩೮, ಇತಿಹಾಸ ಆರಂಭ ಕಾಲದ ೧೯ ನೆಲೆಗಳು ಕಂಡು ಬಂದಿವೆ.[೧೭] ಇವುಗಳಲ್ಲಿ ವಿವಿಧ ಹಂತದಲ್ಲಿ ವಿವಿಧ ಮಾದರಿಯ ಆಯುದೋಪಕರಣಗಳು ದೊರೆತಿವೆ. ಇವರ ಆಯುಧವನ್ನು ರೂಪಿಸಲು ಕ್ವಾರ್ಟ್ಸ್ ಶಿಲೆಯನ್ನು ಬಳಸಿ ತಯಾರಿಸಿರುವುದು ಈ ನೆಲೆಗಳಲ್ಲಿ ದೊರೆತ ಶಿಲಾಯುಧಗಳಿಂದ ತಿಳಿದುಬರುತ್ತದೆ.

ಪಾವಗಡ ತಾಲೂಕಿನಲ್ಲಿ ದೊರೆತಿರುವ ಹಳೆ ಶಿಲಾಯುಗದ ಮೂರು ಹಂತಗಳು, ಸೂಕ್ಷ್ಮಶಿಲಾಯುಗ, ನೂತನ ಶಿಲಾಯುಗ ಮತ್ತು ಬೃಹತ್ ಶಿಲಾಯುಗ ಸಂಸ್ಕೃತಿಗಳಿಗೂ ಹಾಗೂ ಇತಿಹಾಸ ಆರಂಭ ಕಾಲಕ್ಕೂ ಸೇರಿವೆ. ಈ ಪ್ರದೇಶದಲ್ಲಿ ದೊರೆತಿರುವ ವಿವಿಧ ನೆಲೆಗಳು ಹಾಗೂ ಇಲ್ಲಿ ದೊರೆತ ಕುರುಹುಗಳಿಂದ ತಿಳಿಯಬಹುದಾಗಿದೆ. ಪಾವಗಡ ಪರಿಸರದ ಆದಿ ಹಳೆ ಶಿಲಾಯುಗ ಮಧ್ಯ ಹಳೆ ಶಿಲಾಯುಗ ಮತ್ತು ಅಂತ್ಯ ಹಳೆ ಶಿಲಾಯುಗಕ್ಕೆ ಸೇರಿದ ಶಿಲಾಯುಧಗಳು ವೈ.ಎನ್.ಹೊಸಕೋಟೆ, ನಿಡುಗಲ್ಲು ಮತ್ತು ನಾಗಲಾಪುರದಲ್ಲಿ ದೊರೆತಿವೆ. ಆದಿ ಹಳೆ ಶಿಲಾಯುಗದ ಆಯುಧಗಳು ವೈ.ಎನ್.ಹೊಸಕೋಟೆಯಲ್ಲಿ ದೊರೆತಿವೆ.

ಮಧ್ಯೆ ಹಳೆ ಶಿಲಾಯುಗದ ಒರೆಯುವ ಚಕ್ಕೆಗಳು, ರಂದ್ರ ಕೊರೆಯುವ ಸೂಜಿಗಲ್ಲುಗಳು ಬಾಣದ ಮೊನೆಗಳು ಇತ್ಯಾದಿ ಆಯುಧಗಳನ್ನು ನಿಡುಗಲ್ಲಿನಲ್ಲಿ ಶೋಧಿಸಲಾಗಿದೆ.[೧೮] ಅಂತ್ಯ ಆಯುಧಗಳು ಶಿಲಾಯುಗದ ನಿಡುಗಲ್ಲು ಮತ್ತು ನಾಗಲಾಪುರದಲ್ಲಿ ದೊರೆತಿವೆ. ಇಲ್ಲಿ ನೀಳ ಚಕ್ಕೆ, ಹೆರಚಕ್ಕೆ ಮಾದರಿ, ಮೊನೆಮಾದರಿ, ಬಾಣದ ಮೊನೆ ಮಾದರಿ ಆಯುಧಗಳು ದೊರೆತಿವೆ. ಈ ಸಂಸ್ಕೃತಿಗೆ ಸಂಬಂಧಿಸಿದಂತೆ ಬಹಳ ಕಡಿಮೆ ಪ್ರಮಾಣದಲ್ಲಿ ನೆಲೆಗಳು ಮತ್ತು ಕುರುಹುಗಳು ಕಂಡುಬರುತ್ತವೆ. ಕಾರಣ ಈ ಕಾಲದಲ್ಲಿ ಇಲ್ಲಿ ಜನವಸತಿ ಕಡಿಮೆ ಇರಬಹುದು. ಈ ಪ್ರದೇಶದ ಹಳೆ ಶಿಲಾಯುಗದ ಮಾನವನು ಸುಮಾರು ನಾಲ್ಕುಲಕ್ಷ ವರ್ಷಗಳಿಂದ ೧೦ ಸಾವಿರ ವರ್ಷಗಳವರೆಗೆ ಜೀವಿಸಿದ್ದನೆಂದು ಅಂದಾಜಿಸಲಾಗಿದೆ.[೧೯] ಸೂಕ್ಷ್ಮ ಶಿಲಾಯುಗ ಸಂಸ್ಕೃತಿಗೆ ಸೇರಿದ ೪ ನೆಲೆಗಳು ಈ ತಾಲೂಕಿನಲ್ಲಿ ದೊರೆತಿವೆ. ಇವುಗಳಲ್ಲಿ ಅತೀ ಪ್ರಮುಖ ನೆಲೆ ನಾಗಲಾಪುರವಾಗಿದೆ. ಈ ಪ್ರದೇಶದಲ್ಲಿ ಸ್ಥಳೀಯವಾಗಿ ದೊರೆಯುವ ಬೆಣಚುಕಲ್ಲು ಮತ್ತು ಸ್ಪಟಿಕ ಶಿಲೆಯನ್ನು ಬಳಸಿ ಶಿಲಾಯುಧಗಳನ್ನು ತಯಾರಿಸಿರುವುದನ್ನು ಕಾಣಬಹುದು. ಇಲ್ಲಿ ದೊರೆತಿರುವ ಪ್ರಮುಖ ಶಿಲಾಯುಧಗಳೆಂದರೆ ಬಾಣದ ಮೊನೆ, ರಂಧ್ರ ಕೊರೆಯುವ ಸೂಜಿಕಲ್ಲು, ಕೊರೆಯುವ ಆಯುಧ, ಅಗಲವಾದ ತೆಳು ಚಕ್ಕೆ, ಆಲಗುಕತ್ತಿ, ಅರ್ಧ ಚಂದ್ರಾಕೃತಿಯ ಆಯುಧ ಇಂತಹ ವಿವಿಧ ಉಪಕರಣಗಳು ದೊರೆತಿವೆ.[೨೦] ಈ ಹಂತದಲ್ಲಿ ಮಾನವನು ತನ್ನ ಜೀವನ ಕ್ರಮದಲ್ಲಿ ಮಾರ್ಪಾಡು ಮಾಡಿಕೊಂಡು ಸೂಕ್ಷ್ಮಾಯುಧಗಳ ಸಹಾಯದಿಂದ ಕಿರುಗಾತ್ರದ ಪ್ರಾಣಿಗಳನ್ನು ಬೇಟೆಯಾಡಲು ಆರಂಭಿಸಿದನೆಂದು ಹೇಳಬಹುದು. ಅದೇ ರೀತಿ ಅಲ್ಪ ಪ್ರಮಾಣದ ಕೃಷಿಯನ್ನು ಮಾಡುವುದನ್ನು ಕಲಿತು ಒಂದು ಕಡೆ ನೆಲೆ ನಿಂತಿರುವುದನ್ನು ಕಾಣಬಹುದಾಗಿದೆ. ಈ ಸಂಸ್ಕೃತಿಯ ಕಾಲಮಾನವನ್ನು ಈ ಪ್ರದೇಶಕ್ಕೆ ಕ್ರಿ.ಪೂ. ೬೦೦೦-೫೦೦೦ದಿಂದ ೨೦೦೦ಕ್ಕೆ ಸೀಮಿತಗೊಳಿಸಬಹುದು.[೨೧]

ಭಾರತದಲ್ಲಿ ಪ್ರಪ್ರಥಮವಾಗಿ ಉತ್ತರ ಪ್ರದೇಶದ ಪೂರ್ವ ತೋನ್ಸೆ ನದಿಯ ದಡದಲ್ಲಿ ಕ್ರಿ.ಶ. ೧೮೬೦ರಲ್ಲಿ ಲಿಮೆಸೂರಿಯರ್ ಅವರು ನವಶಿಲಾಯುದ ಅವಶೇಷಗಳನ್ನು ಗುರುತಿಸಿದರು. ಅದೇ ರೀತಿಯಾಗಿ ಕರ್ನಾಟಕದಲ್ಲಿ ಪ್ರಪ್ರಥಮವಾಗಿ ಕ್ರಿ.ಶ.೧೮೭೨ರಲ್ಲಿ ಫ್ರೇಸರ್‌ರವರು ಬಳ್ಳಾರಿ ಜಿಲ್ಲೆಯ ಕುಪ್ಪಗಲ್ಲು ಬೆಟ್ಟಗಳಲ್ಲಿ ನೂತನ ಶಿಲಾಯುಗದ ಉಪಕರಣಗಳ ಉತ್ಪಾದನಾ ಕೇಂದ್ರವೊಂದನ್ನು ಗುರುತಿಸಿದರು.[೨೨] ನೂತನ ಶಿಲಾಯುಗ ಸಂಸ್ಕೃತಿಯು ಒಂದು ಪ್ರಮುಖ ಹಂತವಾಗಿದ್ದು ಇಲ್ಲಿಯ ಮಾನವನು ಹೊಸ ರೀತಿಯ ಜೀವನ ವಿಧಾನವನ್ನು ರೂಢಿಸಿಕೊಂಡನು. ಒಂದು ಕಡೆ ನೆಲೆನಿಂತು. ಕೃಷಿ ಮಾಡುವುದನ್ನು ಕಂಡುಕೊಂಡನು ಇದರ ಜೊತೆಗೆ ಪ್ರಾಣಿಗಳನ್ನು ಪಳಗಿಸಿ ಸಾಕಲು ಆರಂಭಿಸಿದ ಹಾಗೂ ಕೃಷಿ ಕಾರ್ಯಗಳಿಗೆ ಅವುಗಳನ್ನು ಬಳಸಿಕೊಂಡನು. ಈ ಕಾಲದ ಮಾನವನು ಮಣ್ಣಿನ

ಮಡಿಕೆಗಳನ್ನು ತಯಾರಿಸಲು ಆರಂಭಿಸಿ ಹಾಗೆಯೇ ಅತ್ಯುತ್ತಮ ಮಾದರಿಯ ಶಿಲೋಪಕರಣಗಳನ್ನು ಈ ಹಂತದಲ್ಲಿ ಸಿದ್ದಗೊಳಿಸಿ ಜೀವನ ನಡೆಸಿದನು.

ಪಾವಗಡ ತಾಲ್ಲೂಕಿನಲ್ಲಿ ದೊರೆತಿರುವ ಪ್ರಮುಖ ನೂತನ ಶಿಲಾಯುಗದ ನೆಲೆಗಳೆಂದರೆ ವೈ.ಎನ್.ಹಳ್ಳಿ, ಬೂದಿಬೆಟ್ಟ, ಮರಿದಾಸನಹಳ್ಳಿ, ನಿಡುಗಲ್ಲು, ನಾಗಲಾಪುರ, ಪಾವಗಡ, ರಾಚಮಾರನಹಳ್ಳಿ ಪ್ರಮುಖವಾಗಿವೆ.[೨೩] ನನ್ನ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಕನಿಕಲ ಬಂಡೆಯಲ್ಲಿ ನೂತನ ಶಿಲಾಯುಗದ ಸಂಸ್ಕೃತಿಯ ಆಯುಧಗಳು ದೊರೆತಿವೆ. ಇವು ಕ್ರಿ.ಪೂ.೩೦೦೦ ವರ್ಷಗಳ ಹಿಂದಿನ ಮಾನವ ಬಳಸಿರಬಹುದೆಂದು ತಿಳಿಯಲಾಗಿದೆ. ಪ್ರಪ್ರಥಮವಾಗಿ ನಾಗಲಾಪುರ ಮತ್ತು ಕೊಲಮಿ ಪಾಳ್ಯಂ ದೊರೆತ ಬೂದಿಗುಡ್ಡಗಳನ್ನು ನೂತನ ಶಿಲಾಯುಗದ ಶಿಲಾಯುಧಗಳನ್ನು ಗುರ್ತಿಸಲಾಗಿದೆ.[೨೪]

ಅದೇ ರೀತಿ ವೈ.ಎನ್.ಹೊಸಕೋಟೆಯಲ್ಲಿ ದೊರೆತ ಶಿಲಾ ಕೊಡಲಿಗಳನ್ನು ಶ್ರೀವತ್ಸ ಎಸ್.ವಟಿ ೧೯೭೯ರಲ್ಲಿ ವರದಿ ಮಾಡಿದ್ದಾರೆ.[೨೫] ನಂತರ ಸಮಗ್ರ ಅಧ್ಯಾಯನ ಕೈಗೊಂಡ ಡಾ.ಕೆ.ಬಿ.ಶಿವತಾರಕ್‌ರವರು ತಾಲೂಕಿನಲ್ಲಿ ಹಲವು ನೂತನ ಶಿಲಾಯುಗದ ನೆಲೆಗಳನ್ನು ಕಂಡುಹಿಡಿದರು. ನನ್ನ ಕ್ಷೇತ್ರಕಾರ್ಯದಲ್ಲಿ ಕನಿಕಲ-ಬಂಡೆಯಲ್ಲಿ ಹಾಗೂ ಪಾವಗಡದಲ್ಲಿ ನೂತನ ಶಿಲಾಯುಗದ ಶಿಲಾಯುಧಗಳು ಹಾಗೂ ಮಡಿಕೆ ಚೂರುಗಳನ್ನು ಸಂಗ್ರಹಿಸಲಾಗಿದ್ದು, ಈ ನೆಲೆಯಲ್ಲಿ ನೂತನ ಶಿಲಾಯುಗದ ಮಾನವನು ವಾಸಿಸಿರುವ ಕುರುಹು ಕಂಡುಬಂದಿದೆ.

ನೆಲೆಗಳಲ್ಲಿ ದೊರೆತಿರುವ ನೂತನ ಶಿಲಾಯುಗದ ಅವಶೇಷಗಳೆಂದರೆ ಉಜ್ಜಿ ನಯಗೊಳಿಸಿದ ಶಿಲಾಯುಧಗಳು, ಮಡಿಕೆಯ ಭಾಗಗಳು ಮತ್ತು ಬೂದಿಗುಡ್ಡೆಗಳಾಗಿವೆ. ವೈ.ಎನ್.ಹೊಸಕೋಟೆ ಮತ್ತು ವೈ.ಎನ್.ಹಳ್ಳಿಗಳಲ್ಲಿ ಬೂದಿಗುಡ್ಡೆಗಳು ಕಂಡುಬಂದಿವೆ. ನನ್ನ ಕ್ಷೇತ್ರಕಾರ್ಯದಲ್ಲಿ ಉಜ್ಜಿ ನಯಗೊಳಿಸಿದ ಕಲ್ಲಿನ ಕೊಡಲಿ ಕನಿಕಲ-ಬಂಡೆಯ ಪ್ರದೇಶ ದೊರೆತಿದ್ದು ಇದು ೧೭ ಸೆಂ.ಮೀ ಉದ್ದ ೬ ಸೆಂ.ಮೀ ಅಗಲವಿರುವ ಹಾಗೂ ಮೇಲ್ಭಾಗದಲ್ಲಿ ಚೂಪಾಗಿದೆ. ಇದನ್ನು ಪ್ರಾಣಿಗಳ ಚರ್ಮ ಸೀಳಲು ಹಾಗೂ ಮರ ಕಡಿಯಲು ಬಳಸಿರಬಹುದು. ಆಯುಧದ ಮೇಲ್ಭಾಗ ಚೂಪಾಗಿದ್ದು ಪ್ರಾಣಿಗಳನ್ನು ಕೊಲ್ಲಲು ಬಳಸಿರಬಹುದು. ಅದೇ ರೀತಿ ಕುಟ್ಟಿದ ಮತ್ತು ಉಜ್ಜಿದ ಅಂಚಿನ ಆಯುಧಗಳು. ತೆಲುಚಕ್ಕೆ ಅಯುಧಗಳು ದೊರೆತಿವೆ.

ಪಾವಗಡ ಪರಿಸರದ ಹಲವು ನೆಲೆಗಳಲ್ಲಿ ನೂತನ ಶಿಲಾಯುಗದ ಮಡಿಕೆಯ ಭಾಗಗಳು ದೊರೆತಿದ್ದು, ಇವು ಈ ಸಂಸ್ಕೃತಿಯ ಬಗ್ಗೆ ಹೆಚ್ಚು ತಿಳಿಸುವ ಆಕಾರಗಳಾಗಿವೆ. ಈ ಸ್ಥಳಗಳಲ್ಲಿ ದೊರೆತಿರುವ ಒರಟಾದ ಅಥವಾ ನಯಗೊಳಿಸಿದ ಬೂದು ಬಣ್ಣದ

ಮೃಣ್ಪಾತ್ರೆಗಳು ಪ್ರಮುಖವಾದವುಗಳಾಗಿವೆ. ಇವುಗಳಲ್ಲಿ ಮತ್ತೆ ಕೆಂಪು ಬಣ್ಣದ ಮಡಿಕೆಗಳು ಕಂಡುಬಂದಿವೆ. ಈ ಮಡಿಕೆಗಳನ್ನು ಆರಂಭದಲ್ಲಿ ಕೈಯಲ್ಲಿ ಮಾಡಲಾಗುತ್ತಿದ್ದು ನಂತರ ಕಾಲದಲ್ಲಿ ಚಕ್ರವನ್ನು ಬಳಸಿ ತಯಾರಿಸಿದ್ದಾರೆ. ಇವುಗಳನ್ನು ತೆರೆದ ಕುಂಬಾರ ಕುಲುಮೆಯಲ್ಲಿ ಸುಡುತ್ತಿದ್ದರಿಂದ ಹೆಚ್ಚು ಸಿಗದೇ ಅರ್ಧ ಸುಟ್ಟಂತಾಗುತ್ತಿತ್ತು. ಹಾಗಾಗಿ ಈ ಮಡಿಕೆಗಳು ಬೂದು ಬಣ್ಣ ಅಥವಾ ಬೂದು ಕಪ್ಪು ಬಣ್ಣದಲ್ಲಿರುತ್ತಿದ್ದವು. ಈ ಮಡಿಕೆಗಳ ಆಕಾರದಲ್ಲಿ ಸಾಕಷ್ಟು ವೈವಿಧ್ಯತೆಯನ್ನು ಕಾಣಬಹುದು, ಆಳವಿರುವ ಬಟ್ಟಲು, ನೀರಿನ ಗಿಂಡಿಗಳು, ಮುಂತಾದ ಮೃಣ್ಪಾತ್ರೆಗಳು ಕಂಡುಬಂದಿವೆ. ತಾಮ್ರಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದಂತೆ ಈ ತಾಲ್ಲೂಕಿನಲ್ಲಿ ವೈ.ಎನ್.ಹೊಸಕೋಟೆ ಮತ್ತು ವೈ.ಎನ್.ಹಳ್ಳಿ, ನಿಡುಗಲ್ಲಿನಲ್ಲಿ ದೊರೆತ ಮಡಿಕೆ ಚೂರುಗಳು ಮಹಾರಾಷ್ಟ್ರದ ಜೋರ್ವೆಯಲ್ಲಿ ದೊರೆತಿರುವ ತಾವ್ರ ಶಿಲಾಯುಗದ ಮಡಿಕೆಯ ಮಾದರಿಯಲ್ಲಿಯೇ ಇವೆ.[೨೬]

ಬೃಹತ್ ಶಿಲಾಯುಗ ಸಂಸ್ಕೃತಿಯ ಕಾಲವು ಮಾನವನ ಜೀವನದಲ್ಲಿ ಒಂದು ಪ್ರಮುಖ ಘಟ್ಟವಾಗಿದೆ. ಈ ಜನರ ಸಂಸ್ಕೃತಿಯ ಕುರುಹುಗಳನ್ನು ದಕ್ಷಿಣ ಭಾರತದ ತುಂಬೆಲ್ಲಾ ಕಾಣಬಹುದು. ತುಮಕೂರು ಜಿಲ್ಲೆಯ ಹಲವು ಪ್ರದೇಶಗಳಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ಕಂಡುಬಂದಿವೆ. ಪಾವಗಡ ಪ್ರದೇಶದಲ್ಲಿಯೂ ಈ ಸಂಸ್ಕೃತಿಗೆ ಸೇರಿದ ಶಿಲಾಗೋರಿಗಳು ಮತ್ತು ನೆಲೆಗಳನ್ನು ಗುರ್ತಿಸಬಹುದಾಗಿದೆ. ಇಲ್ಲಿ ಕಂಡುಬರುವ ಬೃಹತ್ ಶಿಲಾಯುಗದ ನೆಲೆಗಳಲ್ಲಿ ನೂತನ ಶಿಲಾಯುಗದ ನೆಲೆಗಳು ಇರುವುದರಿಂದ ಇದು ನೂತನ ಶಿಲಾಯುಗದ ಮುಂದುವರೆದ ಸಂಸ್ಕೃತಿಯಾಗಿದೆ. ಈ ಪ್ರದೇಶದ ಪ್ರಮುಖ ನೆಲೆಗಳೆಂದರೆ ವೈ.ಎನ್.ಹೊಸಕೋಟೆ, ವೈ.ಎನ್.ಹಳ್ಳಿ, ರಾಚಮಾರನ ಹಳ್ಳಿ, ಬೂದಿಬೆಟ್ಟ, ನಿಡುಗಲ್ಲು, ಬಸವನ ಬೆಟ್ಟ, ಕನಿಕಲಬಂಡೆ, ಈರಮ್ಮನ, ಹಳ್ಳಿ, ತಪ್ಪಗಾನದೊಡ್ಡಿ, ಪಳವಳ್ಳಿ ಪ್ರದೇಶಗಳಲ್ಲಿ ಕಬ್ಬಿಣ ಯುಗದ ಜನರು ವಾಸಿಸುತ್ತಿದ್ದರು.[೨೭] ಇದಕ್ಕೆ ಆಧಾರವಾಗಿ ವರ್ತುಲಾಕಾರದ ಬೃಹತ್ ಶಿಲಾ ಸಮಾದಿಗಳು, ಸ್ವಸ್ತಿಕ್ ಶೈಲಿಯ ಶಿಲಾಗೋರಿಗಳು, ನಿಲಿಸು ಗಲ್ಲುಗಳು ಈಗಲು ಕಾಣಬಹುದು ಆದರೆ ಕೆಲವೊಂದು ಭಾಗದಲ್ಲಿ ರೈತರು ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡ ನೆಲೆಗಳಲ್ಲಿ ಹಾಳಾಗಿವೆ. ಈರಮ್ಮನಹಳ್ಳಿಯಲ್ಲಿ ಇಂದಿಗೂ ನಿಲಿಸುಗಲ್ಲುಗಳನ್ನು ಕಾಣಬಹುದು. ಇದು ಸುಮಾರು ೧೩ ಅಡಿ ಎತ್ತರವಿದ್ದು ಕೃಷಿ ಜಮೀನಿನ ಮಧ್ಯಾಭಾಗದಲ್ಲಿದೆ. ಇದು ಈ ಊರಿನ ಪೂರ್ವಕ್ಕೆ ಪಾವಗಡಕ್ಕೆ ಹೋಗುವ ರಸ್ತೆಯು ಪಕ್ಕದಲ್ಲಿ ಕಂಡುಬರುತ್ತದೆ. ಈ ಸಂಸ್ಕೃತಿಯ ಜನರು ಕೆಂಪು ಮತ್ತು ಕಪ್ಪು ಬಣ್ಣದ ಮಡಿಕೆಗಳ ಜೊತೆಗೆ ಕಬ್ಬಿಣದ ಆಯುಧಗಳನ್ನು ಬಳಸುತ್ತಿದುದು ಕಂಡುಬರುತ್ತದೆ. ಅದೇ ರೀತಿ ಕಪ್ಪು, ಕೆಂಪು, ಕೆಂಪು ಮತ್ತು ಕಪ್ಪು ಬಣ್ಣದ ಮಡಿಕೆಯ ಭಾಗಗಳು ಈ ನೆಲೆಗಳಲ್ಲಿ ದೊರೆತಿವೆ.

ಇತಿಹಾಸ ಆರಂಭಕಾಲ

ಪಾವಗಡ ಪ್ರದೇಶದಲ್ಲಿ ಇತಿಹಾಸ ಆರಂಭ ಕಾಲದ ಮಡಿಕೆ ಭಾಗಗಳು ವೈ.ಎನ್.ಹೊಸಕೋಟೆ, ವೈಎನ್.ಹಳ್ಳಿ, ನಿಡಗಲ್ಲು, ರಾಚಮಾರನಹಳ್ಳಿ, ಮರಿದಾಸನಹಳ್ಳಿ, ಪಾವಗಡ ಪ್ರದೇಶಗಳಲ್ಲಿ ದೊರೆತಿವೆ. ಈ ಪ್ರದೇಶದಲ್ಲಿ ದೊರೆತಿರುವ ಕೆಂಪು, ಕಪ್ಪು ಮತ್ತು ಕಪ್ಪು-ಕೆಂಪು ಬಣ್ಣದ ಮಡಿಕೆ ಭಾಗಗಳು ಮತ್ತು ಇವುಗಳ ಮೇಲೆ ಬಿಳಿಬಣ್ಣದಲ್ಲಿ ಮತ್ತು ಕಂದು, ಕೆಂಪು ಬಣ್ಣದಲ್ಲಿದ್ದು ಹಲವಾರು ಮಾದರಿಯ ರೇಖಾ ಮತ್ತು ಚುಕ್ಕಿ ಚಿತ್ರಗಳನ್ನು ಚಿತ್ರಿಸಿರುವರು. ಇಂತಹ ಮಡಿಕೆ ಭಾಗಗಳನ್ನು ನೆರೆಯ ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿ ಮತ್ತು ಬ್ರಹ್ಮಗಿರಿಗಳಲ್ಲಿ ಈಗಾಗಲೇ ಗುರುತಿಸಲಾಗಿದೆ.[೨೮] ಪಾವಗಡ ಪ್ರದೇಶದಲ್ಲಿ ಈ ಕಾಲದ ಶಿಲಾಶಾಸನಗಳಾವವೂ ದೊರಕದಿದ್ದರೂ ಈ ಪ್ರದೇಶವೆಲ್ಲಾ ಇತಿಹಾಸ ಆರಂಭ ಕಾಲದಲ್ಲಿ ಶಾತವಾಹನರ ಅಳ್ವಿಕೆಗೆ ಸೇರಿತ್ತೆಂಬ ಅಂಶ ಸ್ಪಷ್ಟವಾಗುತ್ತದೆ.

ಪಾವಗಡ ಪ್ರದೇಶದ ಪ್ರಾಗೈತಿಹಾಸದ ಪರಿಶೀಲನೆಯಿಂದ ನಮಗೆ ತಿಳಿದುಬರುವುದೇನೆಂದರೆ ಮಾನವನು ಆರಂಭದಿಂದ ಹಿಡಿದು ನಾಗರೀಕನಾದ ಹಂತದವರೆಗಿನ ಜನಜೀವನದ ಬದಲಾವಣೆಗಳ ಬಗ್ಗೆ ತಿಳಿಯಲು ಸಾಧ್ಯವಾಗಿದೆ. ಅಲ್ಲದೆ ಇಲ್ಲಿ ದೊರೆತ ಎಲ್ಲಾ ಸಂಸ್ಕೃತಿಗಳ ಅವಶೇಷಗಳೂ ಈ ಪ್ರದೇಶದ ಮಾನವನ ಇತಿಹಾಸದ ಮೇಲೆ ಬೆಳಕು ಚೆಲ್ಲಲು ಪ್ರಮುಖ ಪಾತ್ರವಹಿಸಿವೆ.

೨.೩ ಇತಿಹಾಸ

ಪಾವಗಡ ಪ್ರದೇಶದ ಇತಿಹಾಸವು ಗಂಗರಸರಿಂದ ಆರಂಭಗೊಂಡಿತ್ತೆಂದು ಹೇಳಬಹುದು. ಗಂಗರಿಗೆ ಸಂಬಂಧಿಸಿದ ಯಾವುದೇ ಶಾಸನಗಳು ಈ ಪ್ರದೇಶದಲ್ಲಿ ದೊರೆತಿಲ್ಲವಾದರೂ ಇಲ್ಲಿಗೆ ಸಮೀಪದಲ್ಲಿರುವ ಪೆನುಗೊಂಡೆ ಶಾಸನವು ಈ ಪ್ರದೇಶದಲ್ಲಿ ಗಂಗರ ಆಳ್ವಿಕೆಯನ್ನು ದೃಢಪಡಿಸುತ್ತದೆ. ಈ ಶಾಸನದ ಪ್ರಕಾರ ಗಂಗ ಮಾಧವ ಮಹಾರಾಜ ಸಿಂಹವರ್ಮನು ಕುಮಾರ ಶರ್ಮನಿಗೆ ಪರುವಿನ ದೊಡ್ಡ ಕೆರೆಯ ಕೆಳಗೆ ಇಪ್ಪತ್ತೇಳು ಖಂಡುಗ ದಾನ್ಯ ದಾನ ನೀಡಿದ ಬಗ್ಗೆ ತಿಳಿಸುತ್ತದೆ. ಇದು ಪಾವಗಡ ಪ್ರದೇಶದ ಸಮೀಪದಲ್ಲಿರುವುದರಿಂದ ಈ ಪ್ರದೇಶವು ಗಂಗರ ಆಳ್ವಿಕೆಗೆ ಒಳಪಟ್ಟಿತ್ತೆಂದು ಹೇಳಬಹುದಾಗಿದೆ. ಈ ಪೆನುಗೊಂಡೆ ಶಾಸನದ ಕಾಲವನ್ನು ಫ್ಲೀಟ್‌ರವರು ಕ್ರಿ.ಶ.೪೭೫ ಎಂದು ಹೇಳಿರುವರು.[೨೯]

ನೊಳಂಬರು

ಕರ್ನಾಟಕ ಚರಿತ್ರೆ ಮತ್ತು ಸಂಸ್ಕೃತಿಗೆ ಪ್ರಬಲ ಅರಸರು ಕೊಡುಗೆಗಳನ್ನು ಸಲ್ಲಿಸಿದಂತೆ ಅವರ ಸಾಮಂತ ಮನೆತನಗಳು ಅಭೂತಪೂರ್ವ ಸಾಧನೆ ಮಾಡಿವೆ. ಇಂತಹ ಸಾಮಂತ ಮನೆತನಗಳಲ್ಲಿ ನೊಳಂಬರು ಪ್ರಮುಖರಾಗಿದ್ದಾರೆ. ಕ್ರಿ.ಶ ೮ನೇ ಶತಮಾನದಿಂದ ೧೧ನೇ ಶತಮಾನದವರೆಗೆ ಆಳ್ವಿಕೆ ಮಾಡಿದ ಇವರು ಬಹುಪಾಲು ಸಾಮಂತರಾಗಿಯೇ ಮುಂದುವರೆದರು.

ಮೊದಲು ಗಂಗರ ಸಾಮಂತರಾಗಿದ್ದು. ಇವರನ್ನು ರಾಷ್ಟ್ರಕೂಟರು ಸೋಲಿಸಿದ ನಂತರ ಇವರ ಅಧೀನರಾದರು. ನಂತರ ಕಾಲದಲ್ಲಿ ಕಲ್ಯಾಣಿ ಚಾಲುಕ್ಯರ ಸಾಮಂತರಾಗಿಯೇ ಕೊನೆಯವರೆಗೆ ಆಳ್ವಿಕೆ ಮಾಡಿದ್ದಾರೆ. ಇವರ ಆರಂಭದ ರಾಜಧಾನಿ ಹೆಂಜೇರು ಅಥವಾ ಹೇಮಾವತಿ. ಇದು ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ಮಡಕಶಿರ ತಾಲ್ಲೂಕಿನಲ್ಲಿದೆ. ನಂತರ ಇವರು ಉಚ್ಛಂಗಿ ಹಾಗೂ ಕಂಪಲಿಯನ್ನು ರಾಜಧಾನಿಗಳನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿದರು.[೩೦] ನೊಳಂಬರು ಪಲ್ಲವ ವಂಶದವರೆಂದು ಪಲ್ಲವ ಕುಲಾನ್ವಯ ಪಲ್ಲವಾ ಭಾರಗಳಾರೆಂದು ಶಾಸನಗಳಲ್ಲಿ ತಮ್ಮನ್ನು ಹೊಗಳಿಸಿಕೊಂಡಿದ್ದಾರೆ. ಹಾಗಾಗಿ ಇವರನ್ನು ನೊಳಂಬಪಲ್ಲವರೆಂದು ಕರೆಯಲಾಗುತ್ತದೆ.[೩೧] ಇವರ ವಂಶಾವಳಿ ಹೇಮಾವತಿ ಮತ್ತು ನೆಲದಲ್ಲಿ ಶಾಸನಗಳಲ್ಲಿ ದೊರೆಯುತ್ತದೆ. ಹೇಮಾವತಿ ಸ್ತಂಭ ಶಾಸನದ ಪ್ರಕಾರ ನೊಳಂಬರ ಮೊದಲನೆ ರಾಜನಾದ ಮಂಗಳನು ಈಶ್ವರ ವಂಶಜನಾದ ಹಾಗೂ ಕಾಂಚಿಪತಿಯಾದ ತ್ರಿನಯನ ಪಲ್ಲವನ ಕುಲದಲ್ಲಿ ಹುಟ್ಟಿದವನೆಂದು ಹೇಳುತ್ತದೆ.[೩೨] ನೊಳಂಬರು ತಮ್ಮ ಆಳ್ವಿಕೆಯ ಆರಂಭದ ದಿಸೆಯಲ್ಲಿ ಚಿಕ್ಕ ಪ್ರಾಂತ್ಯವಾದ ಹೆಂಜೇರುವಿನಿಂದ ಪ್ರಾರಂಭಿಸಿ ನಂತರ ಇಂದಿನ ತುಮಕೂರು, ಕೋಲಾರ, ಬೆಂಗಳೂರು, ಚಿತ್ರದುರ್ಗ, ಬಳ್ಳಾರಿ, ಆಂದ್ರಪ್ರದೇಶದ ಅನಂತಪುರ ಮೊದಲಾದ ಜಿಲ್ಲೆಗಳಲ್ಲಿ ಆಡಳಿತ ವಿಸ್ತರಿಸಿ ನೊಳಂಬವಾಡಿ ೩೨೦೦೦ಕ್ಕೆ ಅದಿಪತಿಗಳಾದರು. ಮಂಗಳ ಎಂಬುವನು ನೊಳಂಬರ ಆರಂಭದ ದೊರೆ. ಇವನಿಗೆ ನೊಳಂಬಾದಿರಾಜನೆಂಬ ಬಿರುದು ಇತ್ತು, ಪಾವಗಡ ಪ್ರದೇಶವು ಹೇಮಾವತಿ ಹತ್ತಿರದಲ್ಲಿದ್ದರಿಂದ ಇವರ ಈ ಪ್ರದೇಶದ ಮೇಲೆ ನೇರ ಹತೋಟಿ ಸಾಧಿಸಿದ್ದು ಸುಭದ್ರವಾದ ನಿಡುಗಲ್ ದುರ್ಗದಲ್ಲಿ ವಾಸ್ತವ್ಯ ಹೂಡುತ್ತಿದ್ದರು. ಇದಕ್ಕೆ ನಿದರ್ಶನವಾಗಿ ಇವರ ಕಾಲದಲ್ಲಿ ನಿಡುಗಲ್ ದುರ್ಗದಲ್ಲಿ ನಿರ್ಮಾಣವಾದ ಹಲವು ಶಿಥಿಲ ಗುಡಿಗಳನ್ನು ನೋಡಬಹುದಾಗಿದೆ. ಪಾವಗಡ ಪ್ರದೇಶದಲ್ಲಿ ನೊಳಂಬರಿಗೆ ಸಂಬಂಧಿಸಿದಂತೆ ಒಂದು ಶಾಸನ ಹಾಗೂ ವೀರಗಲ್ಲುಗಳು ದೊರೆತ್ತಿದ್ದು. ಅವುಗಳಲ್ಲಿ ಕ್ರಿ.ಶ.೮೮೦ರ ಕಾಲಾವಧಿಯ ಮಹೇಂದ್ರಾದಿ ರಾಜನಿಗೆ ಸಂಬಂಧಿಸಿದ್ದು ಇದು ನಿಡುಗಲ್ ಬೆಟ್ಟದಲ್ಲಿ ದೊರೆತಿದೆ ದೇವಸ್ಥಾನದ ನಿರ್ಮಾಣದ ಕುರಿತು ತಿಳಿಸುತ್ತದೆ.[೩೩] ಇವನನ್ನು ನೊಳಂಬಾದಿರಾಜ, ರಾಜಮಹೇಂದ್ರ ಎಂದೂ ಸಹ ಕರೆದಿದ್ದಾರೆ. ಇವನು ನೊಳಂಬರ ಪ್ರಬಲ ದೊರೆಯಾಗಿದ್ದು ಇವನ ಕಾಲದಲ್ಲಿ ಸಾಮ್ರಾಜ್ಯವು ದಕ್ಷಿಣದಲ್ಲಿ ಧರ್ಮಪುರಿಯಿಂದ ಉತ್ತರದಲ್ಲಿ ಬಳ್ಳಾರಿಯವರೆಗೆ ಮತ್ತು ಪೂರ್ವದಲ್ಲಿ ಚಿತ್ತೂರಿನಿಂದ ಪಶ್ಚಿಮದ ಚಿತ್ರದುರ್ಗಜಿಲ್ಲೆಯವರೆಗೆ ಹಾಗೂ ನೈರುತ್ಯದಲ್ಲಿ ಮಂಡ್ಯ ಜಿಲ್ಲೆಯ ತಾಯಲೂರುನ್ನು ಒಳಗೊಂಡಂತೆ ನೊಳಂಬವಾಡಿ ೩೨೦೦೦ ಎಂಬ ವಿಸ್ತಾರವಾದ ಪ್ರಾಂತ್ಯವಾಗಿತ್ತು. ಅದೇ ರೀತಿ ಕ್ರಿ.ಶ ೯೨೫ರ ಕಾಲದ ಬೀರನೊಳಂಬನಿಗೆ ಸಂಬಂಧಿಸಿದ ವೀರಗಲ್ಲು ಒಳಸಮುದ್ರದಲ್ಲಿ ದೊರೆತಿದೆ.[೩೪] ಇದು ನೊಳಂಬರು ಈ ಪ್ರದೇಶದ ಮೇಲೆ ಅದಿಪತ್ಯ ಸ್ಥಾಪಿಸಿದ್ದರೆಂದು ತಿಳಿಯಬಹುದಾಗಿದೆ.

ಕಲ್ಯಾಣಿ ಚಾಲುಕ್ಯರು

ರಾಷ್ಟ್ರಕೂಟರ ಸಾಮಂತರಾಗಿ ಆಳ್ವಿಕೆ ಆರಂಭಿಸಿದ ಕಲ್ಯಾಣಿ ಚಾಲುಕ್ಯರು ಕ್ರಿ.ಶ.೯೭೩ರಲ್ಲಿ ಎರಡನೇ ತೈಲಪನು ರಾಷ್ಟ್ರಕೂಟರ ಕೊನೆಯ ದೊರೆ ಇಮ್ಮಡಿ ಕರ್ಕನನ್ನು ಸೋಲಿಸಿ ಸ್ವತಂತ್ರ ಆಳ್ವಿಕೆಯನ್ನು ಆರಂಭಿಸಿದನು. ಇವರು ಕ್ರಿ.ಶ.೧೧೫೩ರವರೆಗೂ ತಮ್ಮ ಸ್ವತಂತ್ರ ಆಡಳಿತ ನಡೆಸಿದರು. ಬೀದರ್ ಜಿಲ್ಲೆಯ ಕಲ್ಯಾಣವನ್ನು ರಾಜಧಾನಿಯಾಗಿ ಮಾಡಿಕೊಂಡಿದ್ದರಿಂದ ಇವರನ್ನು ಕಲ್ಯಾಣಿ ಚಾಲುಕ್ಯರೆಂದು ಹೆಸರಾದರು. ಕಲ್ಯಾಣಿ ಚಾಲುಕ್ಯರು ನೊಳಂಬವಾಡಿ ೩೨೦೦೦ ಪ್ರಾಂತ್ಯದ ಮೆಲೆ ಅದಿಪತ್ಯ ಸ್ಥಾಪಿಸವ ಹಂತದಲ್ಲಿ ಚೋಳರ ವೈರಿಗಳಾದರು. ತೈಲಪನ ನಂತರ ಅಧಿಕಾರಕ್ಕೆ ಬಂದ ಸತ್ಯಾಶ್ರಯ ಮತ್ತು ೫ನೇ ವಿಕ್ರಮಾದಿತ್ಯರಿಗೆ ಸಂಬಂಧಿಸಿದ ಶಾಸನಗಳು ಪಾವಗಡ ಪ್ರದೇಶದಲ್ಲಿ ದೊರೆಯುವುದಿಲ್ಲ. ಬಹುತೇಕ ಈ ವೇಳೆಗಾಗಲೇ ಚೋಳರು ದಕ್ಷಿಣದಲ್ಲಿ ತುಂಬಾ ಪ್ರಾಮುಖ್ಯತೆಗಳಿಸಿ ಗಂಗವಾಡಿ ಮತ್ತು ನೊಳಂಬವಾಡಿಗಳನ್ನು ಜಯಿಸಿದಂತೆ ತೋರುತ್ತದೆ. ಚೋಳರಿಗೆ ಸಂಬಂಧಿಸಿದ ಶಾಸನಗಳು ನಿಡುಗಲ್ಲು, ಹಿರಿಯೂರು, ಗುಂಡ್ಲಹಳ್ಳಿ ಮುಂತಾದ ಪ್ರದೇಶಗಳಲ್ಲಿ ಕಂಡುಬರುತ್ತವೆ.[೩೫] ಕ್ರಿ.ಶ.೧೦೧೫ರಿಂದ ೧೦೪೨ರವರೆಗೆ ಆಳ್ವಿಕೆ ನಡೆಸಿದ ಇಮ್ಮಡಿ ಜಯಸಿಂಹನ ಶಾಸನಗಳು ಪಾವಗಡ ಪ್ರದೇಶದಲ್ಲಿ ದೊರೆತಿವೆ. ಈತನು ಜಗದೇಕಮಲ್ಲನೆಂಬ ಬಿರುದುಪಡೆದು ಚೋಳರನ್ನು ಹಿಂದಕ್ಕೆ ಅಟ್ಟಿ ರಾಜ್ಯ ವಿಸ್ತರಿಸಿದ. ಈತನು ರೊದ್ದನಾಡು, ಸೀರೆನಾಡು, ಹರುವೆನಾಡು, ಕಣಿಯಕಲ್ಲುನಾಡು ಮುಂತಾದವುಗಳನ್ನು ಆಳುತ್ತಿದ್ದನೆಂದು ಚಳ್ಳಕೆರೆ ತಾಲ್ಲೂಕಿನ ಓಬಳಾಪುರದ ಶಾಸನದಲ್ಲಿ ತಿಳಿದುಬರುತ್ತದೆ.[೩೬] ಇವುಗಳಲ್ಲಿ ಪಾವಗಡ ಪ್ರದೇಶವು ಒಳಗೊಂಡಿತ್ತು. ಇದೇ ಸಂದರ್ಭದಲ್ಲಿ ನಿಡುಗಲ್ಲಿನಲ್ಲಿ ಆಳ್ವಿಕೆ ನಡೆಸುತ್ತಿದ್ದ ಚೋಳರ ಮಲ್ಲಿದೇವನು ಕಲ್ಯಾಣಿ ಚಾಲುಕ್ಯರ ಸಾರ್ವಭೌಮತ್ವ ಒಪ್ಪಿ ಅವರ ಸಾಮಂತರಾಗಿದ್ದನು. ಈ ಮಲ್ಲಿದೇವನ ಕಾಲದ ಶಾಸನದಲ್ಲಿ ಜಗದೇಕ ಮಲ್ಲನನ್ನು ಸ್ತುತಿಸಿದ್ದು ಇವನ್ನು ಕಲ್ಯಾಣದಲ್ಲಿ ಸುಖದಿಂದ ಆಡಳಿತ ಮಾಡುತ್ತಿದ್ದನೆಂದು ತಿಳಿಸಿದೆ. ಈ ಶಾಸನದಲ್ಲಿ ಚೋಳರ ಮಲ್ಲಿದೇವನು ಕಲ್ಯಾಣಿ ಚಾಲುಕ್ಯರ ಪಾದುಪದ ಮೋಪಜೀವಗಳೆಂದು ಕರೆದುಕೊಂಡಿದ್ದಾರೆ.[೩೭] ಆದುದರಿಂದ ಕಲ್ಯಾಣಿ ಚಾಲುಕ್ಯರು ಈ ಪ್ರದೇಶದ ಮೇಲೆ ತಮ್ಮ ಅದಿಪತ್ಯ ಸ್ಥಾಪಿಸಿದ್ದರೆಂದು ತಿಳಿದು ಬರುತ್ತದೆ.

ನಿಡುಗಲ್ಲಿನ ಚೋಳರು

ಕರ್ನಾಟಕ ಇತಿಹಾಸದಲ್ಲಿ ಹೆಚ್ಚು ಸಂಖ್ಯೆಯ ಸಾಮಂತ ಮನೆತನಗಳನ್ನು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಕಾಣಬಹುದು. ಅಂತಹ ಮನೆತನಗಳಲ್ಲಿ ನಿಡುಗಲ್ಲಿನ ಚೋಳರು ಪ್ರಮುಖರಾಗಿದ್ದಾರೆ. ಇವರು ಕ್ರಿ.ಶ.೧೧ನೇ ಶತಮಾನದ ಪ್ರಾರಂಭದಿಂದ ೧೩ನೇ ಶತಮಾನದ ಕೊನೆಯವರೆಗೂ ಕರ್ನಾಟಕದ ಮಧ್ಯಪೂರ್ವಭಾಗ ಹಾಗೂ ಆಂಧ್ರ ಪ್ರದೇಶದ ಪಶ್ಚಿಮಭಾಗದಲ್ಲಿ

ಆಳ್ವಿಕೆ ನಡೆಸಿದರು. ಪಾವಗಡ ಸಮೀಪದ ರೊದ್ದಮುನ್ನೂರು ಇವರ ಮೂಲ ಸ್ಥಳವೆಂದು ತಿಳಿದುಬಂದಿದೆ.[೩೮] ಇವರು ಮೊದಲು ತಮಿಳುನಾಡಿನ ಚೋಳರ ಮುಖ್ಯವಾಹಿನಿಯಲ್ಲಿ ಇಲ್ಲಿಗೆ ಬಂದು, ಮೊದಲು ತಮ್ಮ ಸ್ಥಾನವನ್ನು ಆಂದ್ರದ ಅನಂತಪುರ ಜಿಲ್ಲೆಯ ಗೋವಿಂದವಾಡಿ, ರೋದ್ದಂಗಳನ್ನು ಸ್ಥಾಪಿಸಿ ಕೊನೆಯದಾಗಿ ಸುಭದ್ರವೆನಿಸಿದ ನಿಡುಗಲ್ ದುರ್ಗವನ್ನು ನಿರ್ಮಿಸಿಕೊಂಡು ಇಲ್ಲಿ ಆಳ್ವಿಕೆ ನಡೆಸಿದರು.[೩೯] ನಿಡುಗಲ್ಲಿನ ಚೋಳರು ಕಲ್ಯಾಣಿ ಚಾಲುಕ್ಯರ ಮಹಾಮಂಡಲೇಶ್ವರರಾಗಿ ಹಾಗೂ ದ್ವಾರಸಮುದ್ರದ ಹೊಯ್ಸಳರ ಶತೃಗಳಾಗಿದ್ದಿದು ಇಲ್ಲಿಯ ಶಾಸನಗಳಿಂದ ತಿಳಿದುಬರುತ್ತದೆ. ಮೂಲತಃ ರೊದ್ದಮುನ್ನೂರು ವಿಭಾಗಕ್ಕೆ ಸೇರಿದ್ದ ಚೋಳರ ಮೊದಲ ರಾಜಧಾನಿ ಗೋವಿಂದವಾಡಿ. ನಂತರ ಹೇಮಾವತಿ ಅಥವಾ ಹೆಂಜೋರು ಹಾಗೂ ನಿಡುಗಲ್ಲುಗಳಿಂದ, ಕೊನೆಯ ಕಾಲದಲ್ಲಿ ಗುಂಡ್ಲಹಳ್ಳಿ ಮತ್ತು ಗುಡಿಯಕುಂಟೆಯಿಂದ ಆಳಿರುವರು. ಜಟಾ ಎಂಬುವವರು ಚೋಳಮನೆತನದ ಮೂಲ ದೊರೆ. ಈತನ ಯಾವುದೇ ಶಾಸನ ದೊರೆತಿಲ್ಲ, ಮೂರನೇ ಇರುಂಗೋಳನ ನಿಡುಗಲ್ಲು ಶಾಸನ ಜಟಾನು ಮೂಲ ದೊರೆಯೆಂದು ತಿಳಿಸಿದೆ.[೪೦] ಈ ಮನೆತನದ ಪ್ರಮುಖ ಅರಸರೆಂದರೆ ಇರಂಗೊಳ, ಮಲ್ಲಿದೇವ ಮತ್ತು ಬಮ್ಮದೇವ, ಈ ಮನೆತನದ ಕೊನೆಯರಸ ಬೈರರಸ. ನಿಡುಗಲ್ಲಿನ ಚೋಳರಿಗೆ ಸಂಬಂಧಿಸಿದಂತೆ ಸುಮಾರು ೧೪ ಶಾಸನಗಳು ಪಾವಗಡ ತಾಲ್ಲೂಕಿನಲ್ಲಿ ದೊರೆತಿವೆ. ರೊದ್ದಂ ೩೦೦, ಹರುವೆ ೩೦೦, ಸೀರೆನಾಡು ೩೦೦, ಕನಿಯಕಲ್ಲು ೩೦೦, ಸಿಂಧವಾಡಿ ೧೦೦೦, ಬಂಗಿಚೇರು ೩೦, ಮೊದಲಾದ ಪ್ರದೇಶಗಳ ಒಡೆತನಗಳಿಸಿದ್ದರು.[೪೧] ಇವರನ್ನು ಹೊಯ್ಸಳರು ಕೊನೆಯಲ್ಲಿ ಸೋಲಿಸಿ ಹೋಯ್ಸಳರು ಇದರ ಆದಿಪತ್ಯವನ್ನು ಸಾಧಿಸಿದರು.

ಇವರ ಶಾಸನಗಳಿಂದ ಕಲ್ಯಾಣಿ ಚಾಲುಕ್ಯರ ಸಾಮಂತರಾಗಿದ್ದರೆಂದು ತಿಳಿದುಬರುತ್ತದೆ. ಚೋಳ ಮಲ್ಲಿದೇವನ ಶಾಸನದಲ್ಲಿ ಇಮ್ಮಡಿ ಜಗದೇಕ ಮಲ್ಲನನ್ನು ಸ್ತುತಿಸಿದ್ದು ಕಲ್ಯಾಣಿ ಚಾಲುಕ್ಯರ ಸಾರ್ವಭೌಮತ್ವ ಒಪ್ಪಿಕೊಂಡಿದ್ದರು. ಈ ಶಾಸನದಲ್ಲಿ ಚೋಳರು ಕಲ್ಯಾಣಿ ಚಾಲುಕ್ಯರ ಪಾದುಪದ ಮೋಪಜೀವಿಗಳೆಂದು ಕರೆದುಕೊಂಡಿದ್ದಾರೆ. ಆದರೆ ಚೋಳರು ಹೊಯ್ಸಳರನ್ನು ಪ್ರತಿಭಟಿಸಿದರು. ವಿಷ್ಣುವರ್ಧನನು ಇರಂಗೊಳನ ಸೈನ್ಯವನ್ನು ಮೆಟ್ಟಿದ್ದುದ್ದಾಗಿ ಮಲ್ಲಿದೇವನ ಕಾಲದ ಶಾಸನ ತಿಳಿಸುತ್ತದೆ.[೪೨] ಆದರೆ ಚೋಳ ಮಲ್ಲದೇವನ ಕಾಲದಲ್ಲಿ ಹೊಯ್ಸಳರೊಂದಿಗೆ ಉತ್ತಮ ಸಂಬಂಧ ಹೊಂದಿ ತನ್ನ ಮಗನಿಗೆ ಹೊಯ್ಸಳ ನರಸಿಂಹನ ಮಗಳನ್ನು ವಿವಾಹ ಮಾಡಿಕೊಂಡರು. ಆದರೆ ಈ ಮೈತ್ರಿ ಬಹುಕಾಲವಿರಲಿಲ್ಲ. ಇಮ್ಮಡಿ ಬಲ್ಲಾಳನ ಕಾಲದಲ್ಲಿ ಇವನು ನಿಡುಗಲ್ಲು ಪ್ರದೇಶದ ಮೇಲೆ ಧಾಳಿ ಮಾಡಿ ವಶಪಡಿಸಿಕೊಂಡನೆಂದು ಇಮ್ಮಡಿ ಬಲ್ಲಾಳನ ಶಾಸನ ತಿಳಿಸುತ್ತವೆ.[೪೩] ನಂತರ ಗುಂಡ್ಲಹಳ್ಳಿ ಶಾಸನವು ಇರಂಗೋಳನು ಕ್ರಿ.ಶ.೧೩೨೦ರ ಸಮಯದಲ್ಲಿ ಇಲ್ಲಿ ಆಳ್ವಿಕೆ ಮಾಡುತ್ತಿದ್ದು ಹರಿವನಹಳ್ಳಿಯನ್ನು ಬೋರಸಮುದ್ರವನ್ನು ಸರ್ವಗೊಡಿಗೆಯಾಗಿ ಅಲ್ಲಪ್ಪನಾಯಕ ಸೋದಯ್ಯನಾಯಕ

ಮತ್ತು ಬಿರೆಯನಾಯಕ ಎಂಬುವರು ನೀಡಿದರೆಂದು ಇವರು ನಾಚನಾಯಕನ ಮಕ್ಕಳೆಂದೂ, ನಾಚನಾಯಕನು ಇರಂಗೋಳನ ಮಗನೆಂದು ತಿಳಿಸಿದೆ. ಪಾವಗಡ ಪ್ರದೇಶವನ್ನು ಸುಮಾರು ೩.೨ ಶತಮಾನಗಳ ಕಾಲ ಆಳ್ವಿಕೆ ಮಾಡಿದರು.

ಹೊಯ್ಸಳರು

ಕ್ರಿ.ಶ.೧೧ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಪ್ರಾಬಲ್ಯಕ್ಕೆ ಬಂದ ಹೊಯ್ಸಳರು ಸುಮಾರು ಮೂರು ಶತಮಾನಗಳಿಗೂ ಹೆಚ್ಚು ಕಾಲ ಆಳ್ವಿಕೆ ಮಾಡಿದರು. ಮೊದಲು ಕಲ್ಯಾಣಿ ಚಾಲುಕ್ಯರ ಸಾಮಂತರಾಗಿ ಆಳ್ವಿಕೆ ಆರಂಭಿಸಿ ಅವರ ಪತನದ ನಂತರ ಕಾಲದಲ್ಲಿ ತಮ್ಮ ಸ್ವಾತಂತ್ರ್ಯ ಘೋಷಿಸಿಕೊಂಡರು. ಹಾಸನ ಜಿಲ್ಲೆಯ ದ್ವಾರಸಮುದ್ರ ಇವರ ರಾಜಧಾನಿಯಾಗಿತ್ತು. ಹೊಯ್ಸಳರ ವಿಷ್ಣುವರ್ಧನ ಪಟ್ಟಕ್ಕೆ ಬಂದ ಮೇಲೆ ರಾಜ್ಯ ವಿಸ್ತರಣಾ ಕಾರ್ಯವನ್ನು ಕೈಗೊಂಡನು. ಆ ಸಮಯದಲ್ಲಿ ಇರುಂಗೊಳಚೋಳನು ನಿಡುಗಲ್ ದುರ್ಗದ ದೊರೆಯಾಗಿದ್ದನು. ಇವನು ಕಲ್ಯಾಣಿ ಚಾಲುಕ್ಯರ ಅಧೀನ ಮಹಾ ಮಂಡಲಾಧಿಪತಿಯಾಗಿದ್ದನು.[೫೦] ಪಾವಗಡ ಪ್ರದೇಶವು ಚಾಲುಕ್ಯ ರಾಜ್ಯಕ್ಕೂ ಮತ್ತು ಹೊಯ್ಸಳರ ರಾಜ್ಯಕ್ಕೂ ಮಧ್ಯಭಾಗದಲ್ಲಿತ್ತು. ಹೊಯ್ಸಳರಿಗೆ ಈ ಪ್ರದೇಶವನ್ನು ಸಾಧಿಸದೆ ಮುಂದಿನ ರಾಜ್ಯ ವಿಸ್ತರಣೆ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ನಿಡುಗಲ್ಲಿನ ಇರುಂಗೋಳನ ಸೈನ್ಯವನ್ನು ಹೊಯ್ಸಳ ವಿಷ್ಣುವರ್ಧನನ ಸೈನ್ಯ ಮೆಟ್ಟಿದ್ದುದ್ದಾಗಿ ಮಲ್ಲದೇವನ ಕಾಲದ ಶಾಸನ ತಿಳಿಸುತ್ತದೆ.[೫೧] ಹೊಯ್ಸಳ ನರಸಿಂಹನು ತನ್ನ ಮಗಳನ್ನು ಚೋಳ ಮಲ್ಲದೇವನ ಮಗನಿಗೆ ನೀಡಿ ವಿವಾಹ ಮಾಡಿದ್ದು ಇವರ ನಡುವೆ ಉತ್ತಮ ಬಾಂದವ್ಯ ಹೊಂದಿದ್ದರು. ಆದರೆ ಇಮ್ಮಡಿ ಬಲ್ಲಾಳನ ಕಾಲದಲ್ಲಿ ಮತ್ತೆ ಪಾವಗಡ ಪ್ರದೇಶವನ್ನು, ಉಚ್ಚಂಗಿ ಪಾಂಡ್ಯರನ್ನು ಪಲಾಯನಗೊಳಿಸಿದನೆಂದು ಇಮ್ಮಡಿ ಬಲ್ಲಾಳನ ಶಾಸನ ತಿಳಿಸುತ್ತದೆ.[೫೨] ಆದರೂ ಹೊಯ್ಸಳರು ಪದೇ ಪದೇ ಈ ಪ್ರದೇಶದ ಮೇಲೆ ದಾಳಿಗಳನ್ನು ಮಾಡುತ್ತಿದ್ದರು. ಚೋಳ ಪೆರಮಾಳ ದೇವನಿಗೂ ಹೊಯ್ಸಳ ಮುಮ್ಮಡಿ ನರಸಿಂಹನಿಗೂ ಕಾಳಗಗಳು ನಡೆದು ಹೊಯ್ಸಳರ ಪ್ರಾಬಲ್ಯ ಹೆಚ್ಚಾಗಿ ಕ್ರಿ.ಶ.೧೨೮೬ರ ಕೊನೆಯ ವೇಳೆಗೆ ಪಾವಗಡ ಪ್ರದೇಶವನ್ನು ವಶಪಡಿಸಿಕೊಂಡಿರಬೇಕೆಂದು ಸೂಚಿಸುತ್ತವೆ. ಇವೆಲ್ಲವುಗಳ ಆಧಾರದ ಮೇಲೆ ಹೊಯ್ಸಳರು ಅನೇಕ ಬಾರ ಈ ಪ್ರದೇಶದ ಮೇಲೆ ಧಾಳಿಗಳನ್ನು ಮಾಡಿ ವಶಪಡಿಸಿಕೊಂಡರು.

ವಿಜಯನಗರ ಕಾಲ

ಹೊಯ್ಸಳರ ನಂತರ ಅಧಿಕಾರಕ್ಕೆ ಬಂದ ವಿಜಯನಗರ ಸಾಮ್ರಾಜ್ಯವು ಕ್ರಿ.ಶ.೧೩೩೬ರಿಂದ ೧೫೬೫ರವರೆಗೆ ಸುಮಾರು ೨೨೯ ವರ್ಷಗಳ ಕಾಲ ಆಳ್ವಿಕೆ ನಡೆಸಿತು. ವಿಜಯನಗರದ ಸ್ಥಾಪನೆಯು ಭಾರತದ ಇತಿಹಾಸದಲ್ಲಿ ಚಿರಸ್ಮರಣೀಯವಾದುದಾಗಿದೆ.

ಮಹಮದೀಯರ ಧಾಳಿಯಿಂದ ಜರ್ಝರಿತವಾಗಿದ್ದ ಹಿಂದೂ ಧರ್ಮ ಮತ್ತು ಸಂಸ್ಕೃತಿಯ ರಕ್ಷಣೆಗಾಗಿ ಉದಯಿಸಿದ ಕಟ್ಟಕಡೆಯ ಹಿಂದೂ ಸಾಮ್ರಾಜ್ಯವಾಗಿದೆ. ಇದು ದಕ್ಷಿಣ ಭಾರತದಲ್ಲಿ ರಾಜಕೀಯ ಅಸ್ಥಿರತೆಯನ್ನು ತೊಡೆದುಹಾಕಿತಲ್ಲದೆ ಮೂರು ಶತಮಾನಗಳಿಗೂ ಹೆಚ್ಚು ಕಾಲ ನಡೆದ ಮುಸ್ಲಿಂರ ದಾಳಿಯನ್ನು ತಡೆಯಿತು. ಹಂಪಿ ಇವರ ರಾಜಧಾನಿಯಾಗಿದ್ದು ಪಾವಗಡ ಪ್ರದೇಶವು ಪ್ರಾರಂಭದಿಂದಲೂ ವಿಜಯನಗರದರಸರ ಆಳ್ವಿಕೆಗೆ ಒಳಪಟ್ಟಿತು. ಈ ಪ್ರದೇಶವು ಬೆಟ್ಟಗುಡ್ಡಗಳಿಂದ ಕೂಡಿದ್ದು ಸಹಜವಾಗಿಯೇ ಕೋಟೆ–ಕೊತ್ತಲಗಳನ್ನು ಕಟ್ಟಿಕೊಳ್ಳಲು ಸಹಾಯಕವಾಯಿತು. ಈ ಪ್ರದೇಶದಲ್ಲಿ ಸಾಮ್ರಾಜ್ಯವನ್ನು ರಾಜ್ಯ, ವೇಂಟ, ನಾಡು, ಸೀಮೆ, ಚಾವಡಿ, ಹೋಬಳಿ, ಕಸುಬೆ ಮುಂತಾದ ಪ್ರಾದೇಶಿಕ ವಿಭಾಗಗಳು ಸ್ಥಾಪಿಸಿಕೊಂಡು ಆಳ್ವಿಕೆ ಮಾಡಿರುವುದು ಈ ಪ್ರದೇಶದಲ್ಲಿ ದೊರೆತ ಶಾಸನಗಳಿದ ತಿಳಿದುಬರುತ್ತದೆ.

ಪಾವಗಡ ಪ್ರದೇಶದ ಬಹುಪಾಲು ಶಾಸನಗಳು ವಿಜಯನಗರದರಸರಿಗೆ ಸಂಬಂಧಿಸಿದವುಗಳಾಗಿವೆ. ಕ್ರಿ.ಶ.೧೩೫೪ರಿಂದ ಕ್ರಿ.ಶ.೧೬೮೧ರ ಕಾಲಾವಧಿಯವರೆಗೆ ಇವರ ಶಾಸನಗಳು ಈ ಪ್ರದೇಶದಲ್ಲಿ ದೊರೆತಿವೆ.[೪೬] ಒಂದನೇ ಬುಕ್ಕರಾಯನಿಗೆ ಸೇರಿದ ಶಾಸನವು ಜಿಲ್ಲೆಯಲ್ಲಿಯೇ ವಿಜಯನಗರ ಅರಸರ ಪ್ರಥಮ ಶಾಸನವಾಗಿದೆ. ಇದರಲ್ಲಿ ದಾನ ನೀಡಿರುವ ಬಗ್ಗೆ ಉಲ್ಲೇಖವಿದೆ.[೪೭] ಎರಡನೇ ದೇವರಾಯನ ನಂತರ ವಿಜಯನಗರದಲ್ಲಿ ಗೊಂದಲ ಪರಿಸ್ಥಿತಿ ಇದ್ದು, ಅಧಿಕಾರಕ್ಕಾಗಿ ಕಚ್ಚಾಟಗಳು ನಡೆದವು. ನಂತರ ಒಂದನೇ ದೇವರಾಯನು ಕ್ರಿ.ಶ.೧೪೦೬ರಿಂದ ೧೪೨೨ರವರೆಗೆ ಅಧಿಕಾರದಲ್ಲಿದ್ದನು. ಪ್ರಾಯಶಃ ಕ್ರಿ.ಶ.೧೪೦೫, ೧೪೦೬ರಲ್ಲಿ ಗೋಪಣ್ಣನೆಂಬುವವನು ಪಾವಗಡ ಕೋಟೆಯನ್ನು ನಿರ್ಮಿಸಿದನೆಂದು ತಿಳಿಯಬಹುದು.[೪೮] ಈ ಪಾವಗಡ ಗಿರಿದುರ್ಗವಾಗಿದ್ದು, ವಿಜಯನಗರ ಸಾಮ್ರಾಜ್ಯದ ಪ್ರಾರಂಭ ದಿನಗಳ ಪ್ರಾಚೀನ ಮತ್ತು ಸುಭದ್ರ ಕೋಟೆಯಾಗಿ ಈಗಲೂ ಉಳಿದಿರುವುದನ್ನು ಕಾಣಬಹುದಾಗಿದೆ. ವಿಜಯನಗರ ಕಾಲದ ಉಳಿದ ಶಾಸನಗಳಲ್ಲಿ ಬಹುತೇಕ ಶಾಸನಗಳು ಕೃಷ್ಣದೇವರಾಯ, ಅಚ್ಯುತರಾಯ ಹಾಗೂ ಸದಾಶಿವರಾಯರಿಗೆ ಸೇರಿದವು. ಇವುಗಳು ಕೆಲವು ಚಾರಿತ್ರಿಕ ಪ್ರಾಮುಖ್ಯತೆ ಪಡೆದಿದ್ದರೂ ಸಹ ಉಳಿದೆಲ್ಲವೂ ಭೂಮಿ, ಗ್ರಾಮಗಳನ್ನು ದಾನವಾಗಿ ನೀಡಿದ್ದನ್ನೋ ಕೆಲವು ಸಮುದಾಯದವರಿಗೆ ಮಾನ್ಯ, ಉಂಬಳಿ ಕೊಟ್ಟಿದ್ದನ್ನೋ ಅಥವಾ ಕೆಲವು ಜಾತಿಯವರಿಗೆ ತೆರಿಗೆ ಕಂದಾಯ ಮಾಫಿಮಾಡಿದನ್ನೋ ತಿಳಿಸುತ್ತವೆ. ಅದೇ ರೀತಿ ಈ ಪ್ರದೇಶದಲ್ಲಿ ಮಹಾಮಂಡಲೇಶ್ವರರು ಆಡಳಿತ ನಡೆಸುತ್ತಿದ್ದ ಹಲವು ಶಾಸನಗಳಲ್ಲಿ ಇವರು ಸಾಮಂತರಸರೆಂದು ಉಲ್ಲೇಖಿಸಿವೆ. ಇವರು ವಿಜಯನಗರ ಸಾಮ್ರಾಜ್ಯದ ಅರಸರಿಗೆ ಯುದ್ಧ ಸಂದರ್ಭದಲ್ಲಿ ಸೈನ್ಯದ ಸಹಾಯ ಮಾಡುತ್ತಿದ್ದರು. ಇವರು ಸ್ವತಂತ್ರವಾಗಿ ಕೋಟೆ ಕಟ್ಟಿಕೊಳ್ಳುತ್ತಿದ್ದರು. ಈ ಪ್ರದೇಶದಲ್ಲಿ ತೆರಿಗೆ ವಸೂಲಿ, ದಾನ ಧರ್ಮಗಳನ್ನು ಸಹ ನೀಡುತ್ತಿದ್ದರು.

೧೫ ಮತ್ತು ೧೬ನೇ ಶತಮಾನಗಳಲ್ಲಿ ವಿಜಯನಗರರಸರು ತಮ್ಮ ಆಶ್ರಯದಲ್ಲಿದ್ದ ಅಧಿಕಾರಿಗಳಿಗೆ ಮತ್ತು ಸಾಮಂತ ಪಾಳೆಯಗಾರರಿಗೂ, ಭೂಪ್ರದೇಶಗಳನ್ನು, ಗ್ರಾಮಗಳನ್ನು ಉಂಬಳಿ ನೀಡಿದ್ದಲ್ಲದೆ. ವಿವಿಧ ಬಿರುದು ಬಾವಲಿಗಳನ್ನು ನೀಡಿದರು. ಆಯಾಅಧಿಕಾರಿಗಳು, ಪಾಳೆಯಗಾರರು ಸಲ್ಲಿಸಿದ ಸೇವೆಯನ್ನು ಗುರುತಿಸಿ ಅವರಿಗೆ ಆಯಾ ಪ್ರದೇಶಗಳ ಆಳ್ವಿಕೆಯನ್ನು ನೀಡಿದರು. ಹಾಗಾಗಿ ಅಂತಹ ಸಾಮಂತ ಸಂಸ್ಥಾನಗಳ ಅಧೀನ ಪಾಳೆಯಪಟ್ಟುಗಳು ತುಮಕೂರು ಜಿಲ್ಲೆಯಲ್ಲಿಯೂ ತಲೆ ಎತ್ತಿದವು. ಅವುಗಳಲ್ಲಿ ನಿಡುಗಲ್ಲು, ಪಾವಗಡ, ಮಧುಗಿರಿ, ಹಾಗಲವಾಡಿ, ಹೊಳವನಹಳ್ಳಿ, ಹೆಬ್ಬರು ಮುಂತಾದವುಗಳಾಗಿವೆ.[೪೯]

ಕನ್ನಡದ ಪಾಳೆಯಗಾರರೆಂಬ ಹೆಸರಿನ ಇವರಿಗೆ ತೆಲುಗಿನಲ್ಲಿ ಪಾಳೆಯಗಾಡು, ತಮಿಳಿನಲ್ಲಿ ಪಾಲ್ಯೆಕ್ಕಾರನ್, ಮರಾಠಿಯಲ್ಲಿ ಪಾಳೇಗಾರ ಎಂದು ಕರೆಯಲಾಗಿದೆ.[೫೦] ಇವರಿಗೆ ಅದೀನರಾಗಿದ್ದ ಭೂ ಪ್ರದೇಶಕ್ಕೆ ಪುಲ್ಲಂ ಎಂದು ಹೆಸರಾಗಿದ್ದ ಕಾರಣ ಇವರಿಗೆ ಪಾಳೆಯಗಾರ ಎಂಬ ಹೆಸರು ಪ್ರಾಪ್ತವಾಯಿತು.[೫೧] ಇವರು ಅರಸರಿಗೆ ಸಹಾಯಕರಾಗಿದ್ದರು. ಪಾಳೆಯ ಎಂಬ ಪದ ದಂಡು, ಸೈನ್ಯ, ಸೇನಾವಿಭಾಗ ಶಿಬಿರ ಎಂಬ ವಿವಿಧ ಅರ್ಥವನ್ನು ಸೂಚಿಸುತ್ತವೆ. ಇವುಗಳ ಮುಖ್ಯಸ್ಥರೇ ಪಾಳೆಯಗಾರರು ಇವರು ಚಿಕ್ಕ ಚಿಕ್ಕ ಪ್ರಾಂತ್ಯಗಳಲ್ಲಿ ಪ್ರಬಲ ಅರಸರಂತೆ ಆಳ್ವಿಕೆ ಮಾಡಿಕೊಂಡು ಜನರಿಂದ ಕಂದಾಯ ಕಾಣಿಕೆ ಮೊದಲಾದವುಗಳನ್ನು ತೆಗೆದುಕೊಳ್ಳುತ್ತಿದ್ದರು. ಹಾಗೂ ದುಷ್ಟರನ್ನು ನಿಗ್ರಹಿಸುತ್ತಾ, ಸಮುದಾಯವನ್ನು ಕಾಪಾಡುತ್ತಿದ್ದ ಮುಖಂಡರನ್ನು ಪಾಳೆಯಗಾರರು ಎಂಬ ಹೆಸರಿನಿಂದ ಕರೆಯುತ್ತಿದ್ದರು.

ಪಾವಗಡ ಪಾಳಯಗಾರರು

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಅಸ್ತಿತ್ವಕ್ಕೆ ಬಂದ ಹಲವಾರು ಪಾಳೇಗಾರರಲ್ಲಿ ಪಾವಗಡ ಪಾಳೇಗಾರರು ಪ್ರಮುಖರಾಗಿದ್ದಾರೆ. ಇವರು ಕ್ರಿ.ಶ.೧೬ನೇ ಶತಮಾನ ಉತ್ತರಾರ್ಧ ಕಾಲದಿಂದ ಕ್ರಿ.ಶ.೧೮ನೇ ಶತಮಾನದ ಉತ್ತರಾರ್ಧವರೆಗೆ ಸುಮಾರು ಎರಡು ಶತಮಾನಗಳಿಗೂ ಹೆಚ್ಚು ಈ ಪ್ರದೇಶದಲ್ಲಿ ಆಳ್ವಿಕೆ ಮಾಡಿದರು. ಇವರ ಬಗ್ಗೆ ಅಧ್ಯಯನ ಮಾಡಲು ಇರುವ ಆಧಾರಗಳು ಕಡಿಮೆ. ಆದರೂ ಲಭ್ಯವಿರುವ ಅಲ್ಪ ಸ್ವಲ್ಪ ಆಕಾರ ಸಾಮಾಗ್ರಿಗಳೆಂದರೆ ಅವರ ಅವಶೇಷಗಳಾದ ಕೋಟೆಕೊತ್ತಲ, ಗುಡಿಗೋಪುರಗಳು, ಕಟ್ಟಡಗಳು, ಕೆರೆಗಳು, ವೀರಗಲ್ಲುಗಳು, ರಕ್ತಮಾನ್ಯದ ಕಲ್ಲುಗಳು ಹಾಗೂ ಸ್ಥಳೀಯ ಮಾಹಿತಿಗಳಾಗಿವೆ. ಪಾವಗಡವು ಬಲ್ಲಪ್ಪ ನಾಯಕ[೫೨] ಮತ್ತು ವೆಂಕಟಪತಿ ತಿಮ್ಮಪ್ಪನಾಯಕ ಎಂಬ ಪ್ರಮುಖರಿಂದ ಆಳಲ್ಪಟ್ಟಿತು. ಈ ಮನೆತನದ ಮೂಲಪುರುಷ ಬಲ್ಲಪ್ಪನಾಯಕ[೫೨] ಇವರು ಯರ್ರಗೊಲ್ಲ ಜನಾಂಗಕ್ಕೆ ಸೇರಿದವರು. ಇವರ ಪೂರ್ವಿಕರು ವಿಜಯನಗರ ಅರಸರ ಕಾಲದಲ್ಲಿ ಭಂಡಾರದ ರಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ರಕ್ಕಸತಂಗಡಿ ಯುದ್ಧದ ನಂತರ ಇವರು ಗುತ್ತಿಗೆ ಬಂದು

ನೆಲೆಸಿದರು. ಕ್ರಿ.ಶ.೧೫೮೫ರಲ್ಲಿ ಗುತ್ತಿಯಿಂದ ಬಲ್ಲಪ್ಪನಾಯಕ ಮತ್ತು ಅವರ ಸಹೋದರರು ಜೀವನೋಪಾಯಕ್ಕಾಗಿ ಚಿಕ್ಕಬಳ್ಳಾಪುರದ ಹಾವಳಿ ಭೈರೆಗೌಡನ ಆಶ್ರಯ ಪಡೆದರು. ಹಾವಳಿ ಭೈರೇಗೌಡನಿಗೆ ಮಕ್ಕಳಿಲ್ಲದ್ದರಿಂದ ಆತ ಬಲ್ಲಪ್ಪನಾಯಕನನ್ನೇ ದತ್ತು ತೆಗೆದುಕೊಂಡಿದ್ದ.[೫೨] ಗೋಡರಾಜನಿಂದ ಅರ್ಧಕ್ಕೆ ನಿಂತಿದ್ದ ಪಾವಗಡ ಕೋಟೆಯಲ್ಲಿ ಪಂಜುಕಳ್ಳರ ಹಾವಳಿ ಹೆಚ್ಚಾದಾಗ ಜನರ ಮನವಿಯ ಮೇರೆಗೆ ಅರವೀಡು ವಂಶದ ವೆಂಕಟಪತಿ ಮಹಾರಾಜರು ಇಲ್ಲಿಗೆ ಬಂದು ಪಂಜುಕಳ್ಳರ ಹಾವಳಿ ನಿವಾರಿಸಿ ಅರ್ಧಕ್ಕೆ ನಿಂತ ಕೋಟೆಯನ್ನು ಪೂರ್ಣಗೊಳಿಸಲು ಕಾರ್ಯಾರಂಭ ಮಾಡಿದರು. ಇತ್ತ ಹಾವಳೀ ಭೈರೇಗೌಡನು ಬಲ್ಲಪ್ಪನೊಡಗೂಡಿ ಪೆನುಗೊಂಡೆಯ ಮೇಲೆ ಧಾಳಿ ಮಾಡಿ ಅಪಾರ ಸಂಪತ್ತನ್ನು ಕೊಳ್ಳೆಹೊಡೆದನು. ಈ ವಿಷಯವನ್ನು ತಿಳಿದ ವೆಂಟಪತಿ ಮಹಾರಾಜರು ಚಿಕ್ಕಬಳ್ಳಾಪುರದ ಹಾವಳಿ ಭೈರೇಗೌಡನ ಮೇಲೆ ಆಕ್ರಮಣಮಾಡಿ ಆತನನ್ನು ಹಾಗೂ ಬಲ್ಲಪ್ಪನನ್ನು ಸೆರೆಹಿಡಿದು ಬಂಧನದಲ್ಲಿರಿಸಿದನು. ಹಾವಳಿ ಭೈರೇಗೌಡನು ತನ್ನ ತಪ್ಪನ್ನು ಅರಿತು ಕ್ಷಮೆಯಾಚಿಸಿ ಬಲ್ಲಪ್ಪನನ್ನು ಒತ್ತೆಯಾಗಿ ಮಹಾರಾಜರ ದಂಡಿನಲ್ಲಿ ಬಿಟ್ಟುಹೋದನು. ಅಂದಿನಿಂದ ಬಲ್ಲಪ್ಪ ಮಹಾರಾಜರಿಗೆ ಸಹಾಯಕನಾಗಿ ನಿಂತನು. ಬಲ್ಲಪ್ಪನು ಸ್ವಾಮಿನಿಷ್ಠೆಯಿಂದ ಮಹಾರಾಜರ ದಂಡಿನಲ್ಲಿರುವಾಗ ಒಮ್ಮೆ ಪೆನುಗೊಂಡೆಯ ಮದ್ದಿನ ಕೋಠಿಗೆ ಸಿಡುಲು ಬಡಿದು ಅನಾಹುತವಾಯಿತು. ಆಗ ಪೆನುಗೊಂಡೆಯ ರಾಜ ವೆಂಕಟಪತಿ ಅರಸರು ಊರಲ್ಲಿ ಇರಲಿಲ್ಲ. ಇಂತಹ ಸಂದರ್ಭದಲ್ಲಿ ಬಲ್ಲಪ್ಪನು ಬಹಳ ಸಾಹಸದಿಂದ ಪರಿಸ್ಥಿತಿಯನ್ನು ತಹಬಂದಿಗೆ ತಂದನು.[೫೩] ಇದರಿಂದ ಸಂತೃಷ್ಟರಾದ ಮಹಾರಾಜರು ಒಂದು ತುಕಡಿಯ ಸೈನ್ಯಕ್ಕೆ ನಾಯಕನನ್ನಾಗಿ ಮಾಡಿದರು. ಇದೇ ಸಮಯದಲ್ಲಿ ಗುತ್ತಿಯ ಪಾಳೇಗಾರರು ಸ್ವತಂತ್ರರಾಗಿ ಪೆನುಗೊಂಡೆಗೆ ಸೇರಿದ ಹಳ್ಳಿಗಳ ಮೇಲೆ ಆಕ್ರಮಣ ಮಾಡುತ್ತಿದ್ದರು. ಇವರ ವಿರುದ್ಧ ವೆಂಕಟಪತಿ ಮಹಾರಾಜರು ಬಲ್ಲಪ್ಪನ ನೇತೃತ್ವದಲ್ಲಿ ಒಂದು ಸೈನ್ಯದ ತುಕಡಿಯನ್ನು ಕಳುಹಿಸಿದನು. ಅದೇ ಸ್ಥಳದವನಾಗಿದ್ದ ಬಲ್ಲಪ್ಪನು ಅಲ್ಲಿನ ಕೋಟೆಕೊತ್ತಲಗಳ ವಿಷಯಗಳನ್ನು ಚೆನ್ನಾಗಿ ತಿಳಿದಿದ್ದರಿಂದ ಸುಲಭವಾಗಿ ಜಯಗಳಿಸಿ ಬಂದನು. ಇದರಿಂದ ಸಂತೋಷಗೊಂಡ ಮಹಾರಾಜರು ಬಲ್ಲಪ್ಪನಿಗೆ ನಾಯಕ ಎಂಬ ಬಿರುದು ನೀಡಿ ಗೌರವಿಸಿ, ಪಾವಗಡ ಮತ್ತು ಪಳವಳ್ಳಿಗಳ ಅಧಿಕಾರವನ್ನು ವಹಿಸಿಕೊಟ್ಟು ಈ ಹಿಂದೆ ಎರಡು ಬಾರಿ ನಿಂತು ಹೋಗಿದ್ದ ಕೋಟೆಯ ನಿರ್ಮಾಣಕಾರ್ಯವನ್ನು ಮುಂದುವರೆಸುಂತೆ ಆದೇಶ ನೀಡಿದನು.[೫೪] ಕ್ರಿ.ಶ.೧೫೮೫ರಲ್ಲಿ ಬಲ್ಲಪ್ಪನು ಬಲ್ಲಪ್ಪನಾಯಕನಾಗಿ ಕೋಟೆಕೊತ್ತಲಗಳನ್ನು ನಿರ್ಮಿಸಿ ಪಾವಗಡದಲ್ಲಿ ಆಳ್ವಿಕೆಯನ್ನು ಪ್ರಾರಂಭಿಸಿದನು. ಬಾಲಪ್ಪನಾಯಕನು ಸುಬ್ಬರಾಯಪ್ಪನೆಂಬ ಮಂತ್ರಿಯ ಸಹಾಯದಿಂದ ಕೋಟೆಕಾರ್ಯ ಆರಂಭಿಸಿ ಕೆಲವು ವರ್ಷಗಳ ನಿರ್ಮಾಣಕಾರ್ಯದಲ್ಲಿ ತೊಡಗಿದನು.[೫೫]

ರತ್ನಗಿರಿ, ನಿಡುಗಲ್ ಮತ್ತು ರಾಯದುರ್ಗದ ಪಾಳೆಯಗಾರರು ಆಗಾಗ್ಗೆ ಪಾವಗಡದ ಮೇಲೆ ಧಾಳಿಗಳನ್ನು ನಡೆಸುತ್ತಿದ್ದರು.[೫೫] ಆದರೂ ಇವರ ಧಾಳಿಗಳನ್ನು ಹಿಮ್ಮೆಟಿಸಿದ ಬಲ್ಲಪ್ಪನಾಯಕನು ಇವನ ಆಡಳಿತಾವಧಿಯಲ್ಲಿ ಪೂರ್ವಕ್ಕೆ ಕಲ್ಯಾಣದುರ್ಗದವರೆಗೂ, ಪಶ್ಚಿಮಕ್ಕೆ ಶಿರಾ, ನಿಡುಗಲ್ಲಿನವರೆವಿಗೂ, ದಕ್ಷಿಣಕ್ಕೆ ಚೆನ್ನೇನಹಳ್ಳಿಯವರೆಗೂ ಉತ್ತರದಲ್ಲಿ ಕುಂದುರ್ಪಿಯವರೆಗೂ ವಿಸ್ತರಿಸಿದ್ದನು.[೫೬] ಇವನ ನಂತರ ಬಂದ ಅರಸರು ಅಷ್ಟು ಪ್ರಬಲರಾಗಿರಲ್ಲಿ ಕಾರಣ ಮೊಘಲರ, ಮುಸ್ಲಿಮರ, ಅದಿಪತ್ಯಕ್ಕೊಳಪಡಬೇಕಾಯಿತು. ಕ್ರಿ.ಶ.೧೭೭೭ರಲ್ಲಿ ಹೈದರಾಲಿಯು ಚಿತ್ರದುರ್ಗವನ್ನು ವಶಪಡಿಸಿಕೊಳ್ಳುವ ಸಂದರ್ಭದಲ್ಲಿ ಪಾವಗಡವನ್ನು ವಶಪಡಿಸಿಕೊಂಡ. ಅಂದಿನಿಂದ ಪಾವಗಡದ ನಾಯಕರು ಹೈದರಾಲಿಗೆ ಕಪ್ಪವನ್ನು ಕೊಡುತ್ತಿದ್ದರು. ಆಗ ಪಾವಗಡವನ್ನು ವೆಂಕಟಪತಿ ತಿಮ್ಮಪ್ಪನಾಯಕನು ಆಳುತ್ತಿದ್ದನು. ಇವನು ಹೈದರಾಲಿಗೆ ಪೊಗದಿಯನ್ನು ಕೊಡಬೇಕಾಗಿತ್ತು. ಇದೇ ಸಮಯದಲ್ಲಿ ರಾಯಚೆರ್ಲುವಿನ ಯರ್ರಜನ್ನ ನಾಯಕನು ತಿಮ್ಮಪ್ಪನಾಯಕನಿಗೆ ಕೊಡಬೇಕಾಗಿದ್ದ ಪೊಗದಿಯನ್ನು ಕೊಡದಿದ್ದ ಕಾರಣ ವೀರದಾಸು ಮತ್ತು ವೀರನಾಗಪ್ಪ ಎಂಬುವವರು ರಾಯಚರ್ಲು ಕೋಟೆಯನ್ನು ಆಕ್ರಮಿಸಲು ಕಳುಹಿಸಿದನು. ಇವರು ರಾಯಚರ್ಲು ಕೋಟೆಯನ್ನು ಆಕ್ರಮಿಸಿ ಯರ್ರಜನ್ನನಾಯಕನನ್ನು ಬಂದಿಸಿ ತಂದು ಪೆನುಗೊಂಡೆ ಊರುಬಾಗಿಲ ಮುಂದೆ ನಿಲ್ಲಿಸಿದರು. ಆಗ ಪಕ್ಕದಲ್ಲಿದ್ದ ಸೈನಿಕನ ಭರ್ಜಿಯಿಂದ ವೀರನಾಗಪ್ಪನನ್ನು ಗಾಯಗೊಳಿಸಿ ಅಲ್ಲಿಂದ ತಪ್ಪಿಸಿಕೊಂಡು ಓಡಿದನು. ಗಾಯಗೊಂಡ ವೀರನಾಗಪ್ಪ ಯರ್ರಜನ್ನನಾಯಕನನ್ನು ಪಳವಳ್ಳಿಯವರೆಗೆ ಬೆನ್ನಟ್ಟಿ ಹೋಗಿ ಅಲ್ಲಿ ಪ್ರಾಣತ್ಯಾಗ ಮಾಡಿದನು. ಇವನ ಸ್ವಾಮಿನಿಷ್ಠೆಗೆ ಕುರುಹಾಗಿ ಆ ಪ್ರದೇಶದವರೆಗೆ ರಕ್ತಮಾನ್ಯವನ್ನಾಗಿ ನೀಡಲಾಯಿತು. ಇಂದಿಗೂ ಸಹ ಇಲ್ಲಿ ರಕ್ತಮಾನ್ಯರದ ಕಲ್ಲುಗಳನ್ನು ಮತ್ತು ವೀರನಾಗಪ್ಪನ ವಿಗ್ರಹವನ್ನು ನೋಡಬಹುದು.[೫೭]

ಕಾರಣಾಂತರದಿಂದ ಇಲ್ಲಿಯ ಅರಸು ಹೈದರಾಲಿಗೆ ಕಪ್ಪವನ್ನು ನೀಡದಿದ್ದಾಗ ಇಲ್ಲಿಯ ಅರಸು ವೆಂಕಟತಿಮ್ಮಪ್ಪನಾಯಕನನ್ನು ಮಧುಗಿರಿಯಲ್ಲಿ ಬಂಧಿಯಾಗಿಟ್ಟನು. ಮುಂದೆ ಮರಾಠರು ಮಧುಗಿರಿಯನ್ನು ವಶಪಡಿಸಿಕೊಂಡಾಗ ತಿಮ್ಮಪ್ಪನಾಯಕನು ಬಿಡುಗಡೆಯಾಗಿ ಪಾವಗಡದ ಕೋಟೆಗೆ ಬಂದನು.[೫೮] "ಅದುವರೆಗೆ ಪಾವಗಡದ ಕೋಟೆ ಮುಸ್ಲಿಂರ ಆಳ್ವಿಕೆಗೊಳಪಟ್ಟಿತ್ತು. ಅನಂತರ ತಿಮ್ಮಪ್ಪನಾಯಕನು ಹೊಸದಾಗಿ ಪಟ್ಟಣದಲ್ಲಿ ದೇವಾಲಯವನ್ನು ನಿರ್ಮಿಸಿದನು. ತಿಮ್ಮಪ್ಪ ನಾಯಕನೇ ಪಾವಗಡ ಪಾಳೇಗಾರರ ಕೊನೆಯ ದೊರೆ. ಕ್ರಿ.ಶ. ೧೭೯೯ರಲ್ಲಿ ಮೈಸೂರು ಯುದ್ಧಾನಂತರ ಈ ಪ್ರದೇಶವು ಮೈಸೂರು ಅರಸರ ಆಳ್ವಿಕೆಯ ನಂತರ ಬ್ರಿಟೀಷರ ಮತ್ತು ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಲೀನವಾಯಿತು."

ಅಡಿ ಟಿಪ್ಪಣಿಗಳು

೧. ಕನ್ನಡ ವಿಷಯ ವಿಶ್ವಕೋಶ, ಪು-೯೦೨

೨. ಹಯವದನ್ ರಾವ್ ಸಿ: ಮೈಸೂರ್ ಗೆಜೆಟಿಯರ್ ಪು-೫೩೨

೩. ಅದೇ, ಪು-೫೩೨

೪. ತುಮಕೂರು ಜಿಲ್ಲಾ ಅಂಕಿ ಅಂಶಗಳ ನೋಟ: ೨೦೦೨, ಪು-೧೧

೫. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ: ಪು-೯೦೨

೬. ಅರಣ್ಯ ಇಲಾಖೆಯ ವರಧಿ, ಪಾವಗಡ: ೨೦೦೧

೭. ಚೆಲುವರಾಜನ್ ವಿ.ಆರ್: ೧೯೮೭, ಪಾವಗಡ ತಾಲ್ಲೂಕು ದರ್ಶನ, ಪು-೯-೧೦

೮. ಬಾಸ್ಕರಪ್ಪ ಸಿ.ಎನ್: ೧೯೮೧, ತುಮಕೂರು ಜಿಲ್ಲಾದರ್ಶನ, ಟೈಮ್ಸ್ ಪಬ್ಲಿಕೇಷನ್, ಪು-೬

೯. ಚೆಲುವರಾಜನ್ ವಿ.ಆರ್: ಪೂರ್ವೋಕ್ತ, ಪು-೧೫

೧೦. EC VOL-XII, 11,12,13, 754, ಗುಂಡ್ಲಹಳ್ಳಿ, ಪಾವಗಡ (ತಾ) ತುಮಕೂರು (ಜಿಲ್ಲೆ)

೧೧. ಕೃಷಿ ಇಲಾಖೆಯ ವರಧಿ: ೨೦೦೫, ಪಾವಗಡ

೧೨. ಕೃಷಿ ಇಲಾಖೆಯ ವರಧಿ: ೨೦೦೫, ಪಾವಗಡ

೧೩. ಶಿವತಾರಕ್ ಕೆ.ಬಿ: ತುಮಕೂರು ಜಿಲ್ಲೆಯ ಪ್ರಾಗೈತಿಹಾಸಿಕ ಕುರುಹುಗಳ ಸಾಂಸ್ಕೃತಿಕ ಅಧ್ಯಯನ, ಪು-೨

೧೪. ಅದೇ, ಪು-೨

೧೫. ಶಿವತಾರಕ್ ಕೆ.ಬಿ: ಜಯಮಂಗಲಿ ಸ್ಮರಣ ಸಂಚಿಕೆ, ತುಮಕೂರು ಜಿಲ್ಲೆಯ ಪ್ರಾಗಿತಿಹಾಸ, ಪು-೬

೧೬. ಅದೇ, ಪು-೮

೧೭. ನಾಗಯ್ಯ ಜಿ.ಎಂ (ಅಭಿನಂದನಾ ಗ್ರಂಥ): ನಾಗಾಭಿನಂದನ, ಪಾವಗಡ ತಾಲ್ಲೂಕು ಪ್ರಾಗಿತಿಹಾಸ, ಪು-೮೮

೧೮. ಸೂರ್ಯನಾಥ್ ಕಾಮತ್: ಕೃಷ್ಣಮೂರ್ತಿ ಪಿ.ವಿ (ಸಂ): ೧೯೯೯, ಇತಿಹಾಸ ದರ್ಶನ, ಸಂಪುಟ ೧೧, ಪು-೧

೧೯. ಶೀತಲ ಸ್ಮರಣ ಸಂಚಿಕೆ: ೨೦೦೧, ಲೇ. ಶಿವತಾರಕ್, ಪಾವಗಡ ಪ್ರದೇಶದ ಪ್ರಾಗಿತಿಹಾಸ, ಪು-೧೮

೨೦. ಸೂರ್ಯನಾಥ್ ಕಾಮತ್: ಕೃಷ್ಣಮೂರ್ತಿ ಪಿ.ವಿ (ಸಂ): ೧೯೯೨, ಇತಿಹಾಸ ದರ್ಶನ, ಸಂ-೦೭, ಪು-೧

೨೧. ಶೀತಲ ಸ್ಮರಣ ಸಂಚಿಕೆ: ಪೂರ್ವೋಕ್ತ, ಪು-೧೯

೨೨. ನಾಗರಾಜ್‌ರಾವ್ ಎಂ.ಎಸ್ ಮತ್ತು ಅನ್ಸಾರಿ ಜಡ್: ೧೯೭೦, ಎ.ಎಕ್ಸಕವೇಷನ್ ಅ್ಯಟ್ ಸಂಗನಕಲ್ಲು ಡೆಕ್ಕನ್ ಕಾಲೇಜು ಪುಣೆ, ಪು–೦೩

೨೩. ಶಿವತಾರಕ್ ಕೆ.ಬಿ: ಪೂರ್ವೋಕ್ತ, ಪ–೪೦೧–೪೧೫

೨೪. ಷೇಕ್ ಅಲಿ ಬಿ (ಪ್ರ.ಸಂ): ಸುಂದರ್ ಅ. (ಸಂಪುಟ ಸಂಪಾದಕರು): ೧೯೯೭, ಕರ್ನಾಟಕ ಚರಿತ್ರೆ ಸಂಪುಟ–೧, ಪು–೧೮೭

೨೫. ಶಿವತಾರಕ್ ಕೆ.ಬಿ: ಪೂರ್ವೋಕ್ತ, ಪು–೪೧೩

೨೬. ಶೀತಲ ಸ್ಮರಣ ಸಂಚಿಕೆ: ಪೂರ್ವೋಕ್ತ, ಪು–೯

೨೭. ಚೆಲುವರಾಜನ್ ವಿ.ಆರ್: ಪೂರ್ವೋಕ್ತ, ಪು–೧೬

೨೮. ಶಿವತಾರಕ್ ಕೆ.ಬಿ: ಪೂರ್ವೋಕ್ತ, ಪು–೪೫೭–೪೬೫

೨೯. ರೈಸ್ ಬಿ.ಎಲ್: ೧೯೧೫, ಎಪಿಗ್ರಫಿ ಇಂಡಿಕಾ ಸಂಪುಟ–XIV ಪು–೩೩೪, ಫ್ಲೀಟ್ ಜೆ.ಆರ್.ಎಸ್, ಪು–೪೭೫

೩೦. ಲಕ್ಷ್ಮಣ್ ತೆಲಗಾವಿ (ಸಂ): ಚಂದ್ರವಳ್ಳಿ, ಲೇ ಶ್ರೀನಿವಾಸ್ ಎಂ.ವಿ, ಪು–೩೪

೩೧. ವಸು ಎಂ.ವಿ: ೨೦೦೧, ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ನೊಳಂಬ ಅರಸರು, ಪು–೧

೩೨. ವಸು. ಎಂ.ವಿ: ಪೂರ್ವೋಕ್ತ, ಪು–೧

೩೩ EC VOL-XII, 45,880, ನಿಡುಗಲ್ಲು, ಪಾವಗಡ(ತಾ), ತುಮಕೂರು(ಜಿಲ್ಲೆ)

೩೪. EC VOL-XII, 80, 925, ಬಳಸಮುದ್ರ, ಪಾವಗಡ(ತಾ), ತುಮಕೂರು(ಜಿಲ್ಲೆ)

೩೫. EC VOL-XII, 14, 43, ಗುಂಡ್ಲಹಳ್ಳಿ, ನಿಡುಗಲ್ಲು, ಪಾವಗಡ(ತಾ), ತುಮಕೂರು(ಜಿಲ್ಲೆ)

೩೬ EC VOL-XII, 01, ಓಬಳಾಪುರ, ಚಳ್ಳಕೆರೆ(ತಾ), ತುಮಕೂರು(ಜಿಲ್ಲೆ)

೩೭ EC VOL-XII, 43, 1150, ನಿಡುಗಲ್ಲು, ಪಾವಗಡ (ತಾ) ತುಮಕೂರು (ಜಿಲ್ಲೆ)

೩೮. ವಸು ಎಂ.ವಿ: ದ.ಕ.ಅ.ಮ, ನಿಡುಗಲ್ಲು, ಚೋಳರು, ಪು–೧೫

೩೯. ವಸು ಎಂ.ವಿ: ಪೂರ್ವೋಕ್ತ, ಪು–೩೩

೪೦. EC VOL-XII, 50, 1225, ನಿಡುಗಲ್ಲು, ಪಾವಗಡ(ತಾ) ತುಮಕೂರು(ಜಿಲ್ಲೆ)

೪೧. ವಸು ಎಂ.ವಿ: ಪೂರ್ವೋಕ್ತ, ಪು–೩೩

೪೨ EC VOL-XII, ಬೇಲೂರು, 124, 16, ಅರಸೀಕೆರೆ ೩೪

೪೩ EC VOL-XII, 157, ತಿಪಟೂರು, ತುಮಕೂರು(ಜಿಲ್ಲೆ)

೪೪. EC VOL-XII, ಬೇಲೂರು, 124, 16, ಅರಸೀಕೆರೆ ೩೪

೪೫ EC VOL-XII, 157, ತಿಪಟೂರು, ತುಮಕೂರು(ಜಿಲ್ಲೆ)

೪೬. ರೈಸ್ ಬಿ.ಎಲ್: ಎಪಿಗ್ರಫಿ ಕರ್ನಾಟಕ ಸಂಪುಟ XII, ಪಾವಗಡದ ಶಾಸನಗಳು

೪೭ EC VOL-XII, 1354, ತಿಪ್ಪಯ್ಯನ ದುರ್ಗ, ಪಾವಗಡ(ತಾ) ತುಮಕೂರು(ಜಿಲ್ಲೆ)

೪೮ EC VOL-XII, 97, 1405, ಪಾವಗಡ, ತುಮಕೂರು(ಜಿಲ್ಲೆ)

೪೯. ಕೃಷ್ಣರಾವ್ ಎಂ.ವಿ: ಕೇಶವಭಟ್ಟ ಎಂ: ೧೯೭೦, ಕರ್ನಾಟಕ ಇತಿಹಾಸ ದರ್ಶನ, ಪು-೪೫೭

೫೦. ಕನ್ನಡ ವಿಷಯ ವಿಶ್ವಕೋಶ, ಪು-೯೦೯

೫೧. ಪುಟ್ಟಣ್ಣ ಎಂ.ಎಸ್: ೧೯೨೩, ಪಾಳೆಯಗಾರರ ಐದು ಉಪನ್ಯಾಸಗಳು, ಪು-೦೩

೫೨. ವಸು ಎಂ.ವಿ(ಸಂ): ಪೂರ್ವೋಕ್ತ, ಪು-೬೭

೫೩. ರೈಸ್ ಬಿ.ಎಲ್: ೧೮೯೭, ಮೈಸೂರು ಗೆಜಿಟಿಯರ್ ಸಂಪುಟ II ಪು-೧೯೫

೫೪. ಕಾಮತ್ ಎಸ್.ಯು(ಸಂ): ೧೯೮೬, ಕರ್ನಾಟಕ ರಾಜ್ಯ ಗೆಜಿಟಿಯರ್ ಭಾಗ-೩, ಪು-೫೩೬

೫೫. ವಾಙ್ಮಯ ಇತಿಹಾಸ: ಕನ್ನಡ ಪ್ರಭ ಜೂನ್ ೧೫, ೧೯೮೯

೫೬. ಬಾಸ್ಕರಪ್ಪ ಸಿ.ಎನ್: ಪೂರ್ವೋಕ್ತ, ಪು-೧೭೧

೫೭. ವಾಙ್ಮಯ ಇತಿಹಾಸ: ಪೂರ್ವೋಕ್ತ,

೫೮. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ, ಪು-೯೦೩

ಅಧ್ಯಾಯ–ಮೂರು

ಶಾಸನಗಳು

ಅಧ್ಯಾಯ-ಮೂರು

ಶಾಸನಗಳು

ಒಂದು ಪ್ರದೇಶದ ಸಾಂಸ್ಕೃತಿಕ ಚರಿತ್ರೆಯನ್ನು ತಿಳಿಯುವಲ್ಲಿ ಹಾಗೂ ನಿರ್ಮಿಸುವಲ್ಲಿ ಶಾಸನಗಳ ಪಾತ್ರ ಮಹತ್ವದ್ದು. ಇತಿಹಾಸದ ಪ್ರಮಾಣೀಭೂತವಾದ ಪುನರ್ ನಿರ್ಮಾಣಕ್ಕೆ ಇರುವ ಅತಿ ಪ್ರಮುಖವಾದ ಆಧಾರಗಳೆಂದರೆ ಶಾಸನಗಳು, ಕನ್ನಡ ಸಾಹಿತ್ಯ ಕಲಾಕೃತಿಗಳು ನಾಣ್ಯಗಳು, ವಿದೇಶಿ ಯಾತ್ರಿಕರ ವರದಿಗಳು, ಭೂ ಉತ್ಖನನದಿಂದ ಹೊರಬಿದ್ದ ಅಂಶಗಳು ಇವೆಲ್ಲವೂ ಸಹಾಯಕವಾದರೂ, ಕರ್ನಾಟಕದ ರಾಜಕೀಯ ಮತ್ತು ಸಾಮಾಜಿಕ ಪರಂಪರೆಯನ್ನು ತಿಳಿಯುವಂತಹದ್ದು ಮುಖ್ಯವಾಗಿ ಶಾಸನಗಳಿಂದಲೇ. ಇತರ ಆಧಾರಗಳು ತುಂಬಿಕೊಡಲಾರದ ಕೆಲವು ಅಂಶಗಳನ್ನು ಇಲ್ಲಿನ ಶಾಸನ ಸಂಪತ್ತು ಒದಗಿಸಿಕೊಟ್ಟಿತ್ತು.[೧] ಇಂತಹ ಶಾಸನಗಳನ್ನು ಶಿಲೆ, ಲೋಹ, ಮಡಿಕೆ ಮೊದಲಾದ ಗಟ್ಟಿಯಾದ ವಸ್ತುಗಳ ಮೇಲೆ ರಚಿಸಲಾಗಿದೆ. ಪ್ರಚಲಿತ ಕಾಲದಲ್ಲಿ ಶಾಸನ ಎಂಬ ಪದವು ಕಾನೂನು ಎಂಬ ಅರ್ಥ ನೀಡುವಂತಿದ್ದರೆ, ಪ್ರಾಚೀನ ಕಾಲದಲ್ಲಿ ಆ ಪದವು ರಾಜಾಜ್ಞೆಯಾಗಿತ್ತು.[೨] ಶಾಸನವು ಸಂಸ್ಕೃತದ 'ಶಾಸ್' ಎಂಬ ಧಾತುವುನಿಂದ ಬಂದಿದೆ. ಅಂದರೆ ಅಪ್ಪಣೆ ಮಾಡು ಘೋಷಣೆ ಹೊರಡಿಸು ಎಂಬ ಅರ್ಥವನ್ನು ಕೊಡುತ್ತದೆ.[೩] ಇಂತಹ ಶಾಸನಗಳಲ್ಲಿ ಶಿಲಾಶಾಸನಗಳು, ತಾಮ್ರಶಾಸನಗಳು, ಪ್ರಮುಖವಾದವಾಗಿವೆ. ಇವುಗಳ ಜೊತೆಗೆ ವೀರಗಲ್ಲು ಶಾಸನಗಳು ಮಾಸ್ತಿಕಲ್ಲುಗಳು, ನಿಷಧಿಕಲ್ಲುಗಳು ಇವೆಲ್ಲವೂ ಮೂಲಾರ್ಥದಲ್ಲಿ ಶಾಸನ ಎಂದು ಕರೆಯಲಾಗುತ್ತದೆ. ಇವುಗಳಲ್ಲಿ ಹೆಚ್ಚಿನವು ದಾನದತ್ತಿಗೆ ಸಂಬಂಧಿಸಿದ ಶಾಸನಗಳೇ ಹೆಚ್ಚಾಗಿ ಕಂಡುಬಂದರೂ ರಾಜ್ಯವಾಳುತ್ತಿದ್ದ ಅರಸ, ಮಾಂಡಳಿಕ, ಪ್ರಧಾನ, ಗೌಡ ಹೀಗೆ ಕೇಂದ್ರದಿಂದ ಮೊದಲ್ಗೊಂಡು ಚಿಕ್ಕ ಘಟಕ-ಹಳ್ಳಿಯವರೆಗೂ ಮಾಹಿತಿ ದೊರೆಯುತ್ತದೆ. ದೇವಾಲಯಗಳಿಗೆ, ಮಠಮಾನ್ಯಗಳಿಗೆ, ಅಗ್ರಹಾರಗಳಿಗೆ ಬ್ರಾಹ್ಮಣರು, ಪುರೋಹಿತರಿಗೆ ದಾನಗಳನ್ನು ನೀಡುತ್ತಿದ್ದು ಅವುಗಳ ಸಾಕ್ಷಿಯಾಗಿ ಮುಖಂಡರಿಂದ

ಬರಹವಿರುವ ಶಾಸನಗಳನ್ನು ಹಾಕಿಸುತ್ತಿದ್ದರು. ದಾನಧರ್ಮಗಳು ಶಾಸನಗಳ ಪ್ರೇರಕ ಶಕ್ತಿಯಾದ್ದರಿಂದಲೇ ದಾನ ಶಾಸನಗಳ ಸಂಖ್ಯೆಯು ಹೆಚ್ಚಾಯಿತು.[೩] ಒಟ್ಟಾರೆ ದೇವಾಲಯಗಳಿಗೆ, ಮಠಗಳಿಗೆ, ವಿದ್ವಾಂಸರಿಗೆ, ಗುರುಗಳಿಗೆ ಹೊಲವನ್ನು, ಹಣವನ್ನು, ಆದಾಯದ ಭಾಗವನ್ನು ಬಿಟ್ಟುಕೊಟ್ಟ ವಿಷಯ ನಿರೂಪಿಸುವುದನ್ನು ದಾನ ಶಾಸನಗಳ ಉದ್ದೇಶ.[೪] ಶಾಸನಗಳಲ್ಲಿ ಬರುವ ವಿಷಯವನ್ನು ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಕಲೆ ಮತ್ತು ವಾಸ್ತುಶಿಲ್ಪ, ಸಾಹಿತ್ಯ ಮೊದಲಾದ ಭಾಗಗಳಾಗಿ ವಿಂಗಡಿಸಬಹುದು. ಚರಿತ್ರೆಯ ರಚನೆಗೆ ಶಾಸನಗಳು ಮುಖ್ಯ ಆಕಾರಗಳೆಂದು, ವಿಸ್ತೃತವಾದ ಅಧ್ಯಯನಗಳು ನಡೆದಿವೆ. ಆರಂಭದಲ್ಲಿ ರಾಜ್ಯಕ್ಕೆ ಇಲ್ಲವೇ ಭೌಗೋಳಿಕ ಪ್ರದೇಶಕ್ಕೆ ಸಂಬಂಧಿಸಿದ್ದಾಗಿದ್ದು ಕ್ರಮೇಣ ಇದು ಒಂದು ಪ್ರದೇಶ, ಘಟಕ ಹಳ್ಳಿಗಳಿಗೂ ಸೀಮಿತವಾಗಿ ಇವುಗಳೊಂದಿಗೆ ಅಲ್ಲಿ ಕಂಡುಬರುವ ವಿವಿಧ ಆಕರಗಳನ್ನು ಬಳಸಿ ಇತಿಹಾಸ ನಿರ್ಮಿಸಲು ಸಾಧ್ಯವಾಯಿತು.

ಪಾವಗಡ ಪರಿಸರದ ಚರಿತ್ರೆಯನ್ನು ಬಿಂಬಿಸುವ ಹಲವು ಶಾಸನಗಳು ಸ್ಥಳೀಯವಾಗಿ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಲಭ್ಯವಾಗಿವೆ. ಈ ಪ್ರದೇಶದಲ್ಲಿ ದೊರೆತ ಶಾಸನಗಳಲ್ಲಿ ಕನ್ನಡ, ಸಂಸ್ಕೃತ, ತೆಲುಗು ಭಾಷೆಯ ಶಾಸನಗಳು ಕಂಡುಬಂದಿವೆ. ಇದು ಗಡಿ ತಾಲೂಕಾಗಿದ್ದು ಇಂದು ಸಹ ತೆಲುಗು ಭಾಷೆಯ ಪ್ರಭಾವವನ್ನು ಕಾಣಬಹುದಾಗಿದೆ. ಇಲ್ಲಿಯ ಶಾಸನಗಳ ಲಿಪಿಯು ಕನ್ನಡವಾಗಿದೆ. ಇವುಗಳ ಜೊತೆಗೆ ವೀರಗಲ್ಲು ಶಾಸನಗಳೂ ಮಾಸ್ತಿಗಲ್ಲು, ನಿಷಿಧಿಕಲ್ಲು ಸ್ಮಾರಕಗಳು ಪ್ರಮುಖ ಪಾತ್ರವನ್ನು ವಹಿಸಿವೆ.

ಸ್ಥಳದ ವರ್ಣನೆ

ಮಾನವನು ತನ್ನ ಅಲೆಮಾರಿ ಜೀವನವನ್ನು ಬಿಟ್ಟು ಒಂದು ಕಡೆ ನೆಲೆಸಿ ಜೀವನ ಸಾಗಿಸಲೆಂದು ಆರಂಭಿಸಿದನೋ ಅಂದಿನಿಂದ ಊರು, ಹಳ್ಳಿಗಳು ಉಗಮವಾಯಿತೆನ್ನಬಹುದು. ಈ ರೀತಿ ತಾನು ನೆಲೆಗೊಂಡ ಸ್ಥಳದ ಜೊತೆಗೆ ತನ್ನನ್ನು ತಾನು ತೊಡಗಿಸಿಕೊಂಡ ಸಂಕೇತವಾಗಿ ಆ ಸ್ಥಳಕ್ಕೆ ಆತ ಒಂದು ಹೆಸರಿಟ್ಟು ಆ ಸ್ಥಳ ಅವನ ಜೀವನದಲ್ಲಿ ಹಾದುಹೋದ ಕುರುಹಾಗಿ ಒಂದು ಹೆಸರು ತಳೆಯಿತು. ಕ್ರಮೇಣ ಅಲ್ಲಿ ಜವನಸತಿ ಇರಲಿ ಇರದಿರಲಿ ಒಂದು ಜನಾಂಗದ ಸ್ಮೃತಿಯನ್ನು ಹೊತ್ತ ಗುರುತು ಪಟ್ಟಿಕೆ ಹಾಗೆಯೇ ಬಳಕೆಯಾಗತ್ತಿತು. ಹಲವು ಜನಾಂಗಗಳ ಸ್ಮೃತಿ ಮತ್ತು ಅಭಿಮಾನಗಳನ್ನು ಶಾಶ್ವತವಾಗಿ ಸೆಳೆಯುವ ಸಂಸ್ಕೃತಿಯ ಕೊಂಡಿ ಎನಿಸಿತು. ಈ ಕೊಂಡಿಯೇ ಸ್ಥಳನಾಮ.[೫] ಶಾಸನಗಳಲ್ಲಿ ಊರು ಮತ್ತು ಸುತ್ತಮುತ್ತಲಿನ ಪ್ರದೇಶದ ವರ್ಣನೆ ಸಾಮಾನ್ಯವಾಗಿರುತ್ತದೆ. ಒಂದು ಗ್ರಾಮದ ಹೆಸರನ್ನು ಪರಿಶೀಲಿಸಿದರೆ ಸುತ್ತಮುತ್ತಲಿನ ನಿಸರ್ಗ, ಪೌರಾಣಿಕ ಹಿನ್ನಲೆ, ಐತಿಹಾಸಿಕತೆ, ಪ್ರಮುಖ ದೇವತೆ ಮೊದಲಾದವು ಗ್ರಾಮ ನಾಮವಾಗಲು ಕಾರಣಗಳಾಗಿರುತ್ತವೆ. ಪಾವಗಡವು ಇಂದು

ತಾಲ್ಲೂಕು ಕೇಂದ್ರವಾಗಿದೆ. ಹಿಂದೆ ಇದನ್ನು ಅನೇಕ ಹೆಸರುಗಳಿಂದ ಕರೆಯುತ್ತಿದ್ದರು. ಪಾವಗಡ ಬೆಟ್ಟವು ಹಾವಿನ ಹೆಡೆಯಂತೆ ಕಾಣುವುದರಿಂದ ಇದನ್ನು ಪಾಮುಕೊಂಡ (ಹಾವಿನಂತಹ) ಎಂದು ಸ್ಥಳೀಯರು ಕರೆಯುತ್ತಾರೆ. ಮತ್ತೊಂದು ಸ್ಥಳೀಯ ಮಾಹಿತಿ ಪ್ರಕಾರ ಇಲ್ಲಿ ನಾಗರ ಶಿಲೆಯ ಶಿಲ್ಪವು ದೊರೆತದ್ದರಿಂದ ಪಾಮುಕೊಂಡ (ಸರ್ಪಗಳಬೆಟ್ಟ) ಎಂಬ ಹೆಸರು ರೂಢಿಯಲ್ಲಿದೆ. ಶಾಸನ ತಜ್ಞ ಬಿ.ಎಲ್.ರೈಸ್‌ರವರು ಇಲ್ಲಿಗೆ ಬೇಟಿ ನೀಡಿದಾಗ ಹಾವಿನ ಚಿತ್ರವಿದ್ದ ಕಲ್ಲೊಂದು ಕಂಡು ಬಂದದ್ದರಿಂದ ಇದಕ್ಕೆ ಪಾಮುಕೊಂಡ ಎಂಬ ಹೆಸರು ಬಂದಿತೆಂದು ಹೇಳುತ್ತಾರೆ.[೬]

ಶಾಸನಗಳು ಇದನ್ನು ವಿವಿಧ ಹೆಸರುಗಳಿಂದ ಕರೆದಿವೆ. ಬೆಟ್ಟದ ಬುಡದಲ್ಲಿರುವ ಈಶ್ವರ ದೇವಾಲಯದ ಶಾಸನದಲ್ಲಿ ಪಾಗೊಂಡ ಎಂಬ ಹೆಸರು ಕಂಡುಬಂದಿದೆ.[೭] ಕಮ್ಮಾರ ಗುಂಡಿನ ಶಾಸನವು ಪಾವಗೊಂಡೆ ಎಂದು ಕರೆದಿದೆ. ಪಾವಗಡ ಬೆಟ್ಟಕ್ಕೆ ಎದುರಿನಲ್ಲಿರುವ ಹುಲಿಬೆಟ್ಟದ ಶಾಸನ ಪಾವುಗೊಂಡ ಎಂದು ಕರೆದಿದೆ.[೮] ವೆಂಕಟಪತಿ ದೊರೆಗಳ ಶಾಸನದಲ್ಲಿ ಪಾಮುಗೊಂಡ ಎಂಬ ಹೆಸರು ಕಂಡುಬಂದಿದೆ. ಕ್ರಿ.ಶ. ೧೭೬೭ರಲ್ಲಿ ಮರಾಠರ ಮಾಧವರಾಯರು ಮಧುಗಿರಿಯನ್ನು ವಶಪಡಿಸಕೊಂಡಾಗ ಸುಮಾರು ೭ವರ್ಷಗಳ ಕಾಲ ಈ ಪಾವಗಡ ಪ್ರದೇಶವನ್ನು ತನ್ನ ಅಂಕೆಯಲ್ಲಿಟ್ಟುಕೊಂಡಿದ್ದನು. ಕೋಟೆಯಿರುವ ಈ ದುರ್ಗವನ್ನು ಇವನು ಪಾವಗಡ್ ಎಂದು ಕರೆದನು. ಮರಾಠಿಯಲ್ಲಿ ಗಡ ಎಂದರೆ ಸಣ್ಣಕೋಟೆ ಎಂಬ ಅರ್ಥ ನೀಡುತ್ತದೆ. ಮುಂದೆ ಇದು ಪಾವಗಡವಾಗಿ ಮಾರ್ಪಟ್ಟಿತು.

ಹೀಗೆ ಪಾಮುಗೊಂಡ ಎಂಬ ಹೆಸರು ಹಾವಿನಂತಹ ಬೆಟ್ಟ ಎಂಬ ಅರ್ಥವನ್ನು ನೀಡುತ್ತದೆ. ಇದು ಪಾಮು ಕೊಂಡ ಎಂಬ ಪದವು ಪಾಮುಕೊಂಡ ಎಂಬ ಎರಡು ತೆಲುಗಿನ ಪದಗಳಿಂದ. ಈ ಪ್ರದೇಶದಲ್ಲಿ ಮೊದಲಿನಿಂದಲೂ ತೆಲುಗಿನ ಪ್ರಭಾವ ಹೆಚ್ಚಿದ್ದರಿಂದ ಈ ಹೆಸರು ಬಂದಿದೆ ಎಂದು ಹೇಳಬಹುದು. ಗುಡ್ಡಗಳಲ್ಲಿ ಸಹಜವಾಗಿ ಹಾವುಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಹಾವನ್ನು ಹೊಂದಿದ ಬೆಟ್ಟ ಎಂದು ಊಹಿಸಬಹುದಾಗಿದೆ. ಕಾಲಕ್ರಮೇಣ ಪಾಮುಗೊಂಡ ಎಂಬುದು ಜನರ ಆಡುಭಾಷೆಯಲ್ಲಿ ಪಾಗೊಂಡ ಪಾವಗಡ ಎಂಬುದಾಗಿ ಮಾರ್ಪಟ್ಟಿತು.

೩.೧ ಶಾಸನಗಳಲ್ಲಿ ಕಂಡುಬರುವ ಪ್ರಮುಖ ಅಂಶಗಳು

೩.೧.೧ ರಾಜಕೀಯ

ಪಾವಗಡ ಪ್ರದೇಶವು ಗಂಗರು, ನೊಳಂಬರು, ಕಲ್ಯಾಣಿಚಾಲುಕ್ಯರು, ಹೊಯ್ಸಳರು, ನಿಡುಗಲ್ಲಿನ ಜೋಳರು, ವಿಜಯನಗರದ ಅರಸರು ಮತ್ತು ಪಾಳೆಯಗಾರರ ಆಳ್ವಿಕೆ ಒಳಪಟ್ಟಿತ್ತೆಂದು ಇಲ್ಲಿ ದೊರೆತ ಶಾಸನಗಳಿಂದ ತಿಳಿಯಬಹುದಾಗಿದೆ. ನೊಳಂಬರು ಪಾವಗಡ

ಪ್ರದೇಶಕ್ಕೆ ಹತ್ತಿರವಿರುವ ಹೆಂಜೇರುವಿನಿಂದ ಆಳ್ವಿಕೆ ಆರಂಭಿಸಿದರು. ಮುಂದೆ ಪಾವಗಡ ಪ್ರಾಂತ್ಯವು ಅವರ ಆಳ್ವಿಕೆಗೆ ಒಳಪಟ್ಟು ಮುಂದೆ ಇವರು ನೊಳಂಬವಾಡಿ ೩೨೦೦೦ ಎಂಬ ಬೃಹತ್ ಪ್ರಾಂತ್ಯವನ್ನು ಆಳಿದರು. ನಿಡುಗಲ್ಲಿನ ಚೋಳರ ಅರಸ ಮಲ್ಲಿದೇವನು ಕಲ್ಯಾಣ ಚಾಲುಕ್ಯರ ಮಹಾಮಂಡಲೇಶ್ವರನಾಗಿದ್ದ.[೯] ಇಲ್ಲಿಯ ಹೆಚ್ಚಿನ ಶಾಸನಗಳು ವಿಜಯನಗರ ಅರಸರಿಗೆ ಸಂಬಂಧಿಸಿದವುಗಳಾಗಿವೆ. ಇವುಗಳು ಹೆಚ್ಚಿನವು ದಾನ ಶಾಸನಗಳಾಗಿದ್ದು, ದೇವಾಲಯಗಳಿಗೆ, ಅಗ್ರಹಾರಗಳಿಗೆ, ದಾನ-ದತ್ತಿ ಬಿಟ್ಟಿರುವುದು ಈ ಶಾಸನಗಳಿಂದ ತಿಳಯಬಹುದಾಗಿದೆ. ವಿಜಯನಗರ ಅರಸರ ಸಾಮಂತನಾದ ಗೋಪಣ್ಣನು ಇಲ್ಲಿ ಕೋಟೆಯನ್ನು ಕಟ್ಟಿಸಿದ ಉಲ್ಲೇಖವನ್ನು ಪಾವಗಡ ಕೋಟೆಯೊಳಗಿನ ಶಾಸನದಿಂದ ತಿಳಿಯಬಹುದಾಗಿದೆ.[೧೦]

೩.೧.೨ ಸಾಮಾಜಿಕವಾಗಿ

ಪಾವಗಡ ಪರಿಸರದ ಶಾಸನಗಳು ಅಂದಿನ ಕಾಲದ ಸಮಾಜದ ಚಿತ್ರಣ ನೀಡುತ್ತವೆ. ಸಮಾಜದ ಸ್ವರೂಪವನ್ನು ಗಮನಿಸುವಲ್ಲಿ ಸಾಂಸ್ಕೃತಿಕ ಪ್ರತಿಬಿಂಬವನ್ನು ಕಾಣಬಹುದಾಗಿದೆ. ಗ್ರಾಮಗಳಲ್ಲಿ ಮಹಾಜನರು, ಸ್ಥಾನಚಾರ್ಯರು, ರಾಜತಾಂತ್ರಿಕರು, ಸಾಮಂತರಸರು, ಕುಶಲಕರ್ಮಿಗಳು, ಕೃಷಿಕರನ್ನು ಇಲ್ಲಿಯ ಶಾಸನಗಳು ಹೆಸರಿಸಿವೆ. ಪ್ರಮುಖವಾಗಿ ಅಂದಿನ ವೃತ್ತಿಗಳನ್ನು ತಿಳಿಸುತ್ತವೆ. ಪಾವಗಡ ಬೆಟ್ಟದ ಬುಡದಲ್ಲಿರುವ ಶಾಸನವು ಅಂದಿನ ವೃತ್ತಿಗಳಾದ ಕಮ್ಮಾರ, ಕುಂಬಾರ, ಶಾನುಭೋಗ, ಗೌಡ ತಳವಾರ ಹೆಸರುಗಳನ್ನು ತಿಳಿಸುತ್ತದೆ.[೧೧] ಅದೇ ರೀತಿ ಬ್ಯಾಡನೂರಿನ ಶಾಸನದಲ್ಲಿ ಬಡಗಿ, ಕಮ್ಮಾರ, ಮಾದಿಗ, ಹರಿಜನರ ವೃತ್ತಿ ಮತ್ತು ಜಾತಿಗಳನ್ನು ತಿಳಿಸಿವೆ.[೧೨] ಇದರಿಂದ ಅಂದು ಈ ಜಾತಿಗಳು ಅಸ್ತಿತ್ವದಲ್ಲಿದ್ದವೆಂದು ಹೇಳಬಹುದು. ಎಲ್ಲ ಜಾತಿ ಪಂಥದವರು ಹಬ್ಬ ಹರಿದಿನಗಳನ್ನು ಒಟ್ಟಾಗಿಯೇ ಆಚರಿಸುತ್ತಿದ್ದರು. ಆ ವೇಳೆಯಲ್ಲಿ ಅನೇಕ ದಾನದತ್ತಿಗಳನ್ನು ಬಿಡುವ ಪದ್ದತಿ ರೂಢಿಯಲ್ಲಿತ್ತು. ಶಾಸನಗಳು ಉಲ್ಲೇಖಿಸುವಂತೆ ಈ ಪ್ರದೇಶದಲ್ಲಿ ಉತ್ತರಾಯಣ ಸಂಕ್ರಾಂತಿ, ಮಕರ ಸಂಕ್ರಾಂತಿ, ಸೂರ್ಯ ಗ್ರಹಣ, ಅಮಾವಾಸ್ಯೆ, ಕಾರ್ತಿಕ ಪೌರ್ಣಮಿ ಮುಂತಾದ ಹಬ್ಬಗಳನ್ನು ಆಚರಿಸಲಾಗುತ್ತಿತ್ತು. ಹಾಗೆಯೇ ಅಂದಿನ ಜನರು ವಿವಿಧ ಸಾರ್ವಜನಿಕ ಚಟುವಟಿಕೆಗಳ ತೊಡಗಿಸಿಕೊಂಡಿದ್ದರು. ಇದಕ್ಕೆ ಧರ್ಮವೂ ಕೂಡ ಪ್ರೇರಣೆ ನೀಡಿದೆ. ದೇವಾಲಯ, ಅಗ್ರಹಾರ, ಕೆರೆ-ಬಾವಿ ಉದ್ಯಾನವನಗಳನ್ನು ನಿರ್ಮಿಸಿ ಅವುಗಳಿಗೆ ದಾನದತ್ತಿಗಳನ್ನು ಬಿಡುವ ಮೂಲಕ ತಮ್ಮ ಔದಾರ್ಯವನ್ನು ಮೆರೆದಿದ್ದಾರೆ. ದೇವಾಲಯ, ಮಠ ಕೆರೆ-ಬಾವಿಗಳಿಂದ ನಾಡಿನ ಸಾಮಾಜಿಕ, ಆರ್ಥಿಕ ಪ್ರಗತಿಯುಂಟಾಗಿದೆ. ಗುಂಡ್ಲಹಳ್ಳಿಯಲ್ಲಿ ಕ್ರಿ.ಶ.೮೫೪ರಲ್ಲಿ ಅಕಳೆತಿ ಎಂಬುವವನು ಕೆರೆ ಕಟ್ಟಿಸಿದ್ದು ದೇವದತ್ತನೆಂಬ ಬ್ರಾಹ್ಮಣನಿಗೆ ಖಂಡುಗ ದಾನ್ಯದ ಗದ್ದೆ

ದಾನ ನೀಡಿದ ಉಲ್ಲೇಖವಿದೆ.[೧೩] ಒಂದೇ ಕೆರೆಗೆ ಮೂರು ಶಾಸನಗಳಿರುವುದು ಆಶ್ಚರ್ಯ ಉಂಟುಮಾಡುದೆ. ಕ್ರಿ.ಶ.೧೬೪೨ಕ್ಕೆ ಸೇರಿಸಿ ಗುಂಡಾರ್ಲಹಳ್ಳಿಯ ಶಾಸನದಲ್ಲಿ ಬೃಂದಾವನವನ್ನು ನಿರ್ಮಿಸಿರುವ ಉಲ್ಲೇಖವಿದೆ.[೧೪] ಅದೇ ರೀತಿ ಕ್ರಿ.ಶ. ೧೩೦೦ರ ಶಾಸನವು ರಂಗಾಪುರವೆಂಬ ಅಗ್ರಹಾರಕ್ಕೆ ದಾನ ನೀಡಿರುವ ಬಗ್ಗೆ ತಿಳಿಸುತ್ತದೆ.[೧೫] ಈ ರೀತಿಯಾಗಿ ಸಾರ್ವಜನಿಕರಿಗೆ ಉಪಯುಕ್ತವಾಗಿ ಕೈಗೊಂಡ ಅನೇಕ ಕಾರ್ಯಗಳನ್ನು ಶಾಸನಗಳು ಹೊಗಳುತ್ತವೆ.

ಆರ್ಥಿಕವಾಗಿ

ಸಮಾಜದಲ್ಲಿ ಆರ್ಥಿಕ ವ್ಯವಸ್ಥೆಯು ಪ್ರಮುಖ ಪಾತ್ರವಹಿಸುತ್ತದೆ. ಉಳಿದ ಕ್ಷೇತ್ರಗಳ ಸ್ಥಿತಿಗತಿಗಳು ಆರ್ಥಿಕತೆಯನ್ನು ಅವಲಂಭಿಸಿ ವ್ಯವಸ್ಥಿತಗೊಂಡಿದೆ. ಇಲ್ಲಿ ಕೃಷಿ ಪ್ರಧಾನ ಕಸುಬಾಗಿದೆ. ಪಾವಗಡ ಪ್ರದೇಶವು ಬಯಲು ಸೀಮೆಯಾಗಿದ್ದು ಇಲ್ಲಿ ಯಾವುದೇ ಜೀವಂತ ನದಿ ಪಾತ್ರಕ್ಕೆ ಒಳಗಾಗಿಲ್ಲವಾದ್ದರಿಂದ ಕೆರೆಗಳು ಕೃಷಿ ಚಟುವಟಿಕೆಗಳಿಗೆ ನೀರೋಧಗಿಸುವ ಪ್ರಮುಖ ತಾಣಗಳಾಗಿವೆ. ಇಲ್ಲಿನ ಅನೇಕ ಶಾಸನಗಳಲ್ಲಿ ಕೆರೆಯನ್ನು ಕಟ್ಟಿಸಿದ್ದು ಅದನ್ನು ರಿಪೇರಿ ಮಾಡಿಸಿದ್ದು, ದಾನನೀಡಿದ್ದರ ಬಗ್ಗೆ ಉಲ್ಲೇಖಗಳಿವೆ. ಗುಂಡ್ಲಹಳ್ಳಿ ಕೆರೆ ತಾಲ್ಲೂಕಿನ ಪ್ರಾಚೀನ ಕೆರೆಯಾಗಿದ್ದು ಇದಕ್ಕೆ ಸಂಬಂಧಿಸಿದಂತೆ ಕ್ರಿ.ಶ. ೭೫೪ ಕಾಲಾವಧಿಯ ಮೂರು ಶಾಸನಗಳನ್ನು ಹೊರಡಿಸಲಾಗಿದೆ. ಈಶಾಸನಗಳು ಕೆರೆಯನ್ನು ಸಮುದ್ರ, ತಟಾಕು ಎಂದು ಸಹ ಉಲ್ಲೇಖಿಸಿವೆ.[೧೬] ಇದರಿಂದ ಆ ಕಾಲದಲ್ಲಿ ಅನೇಕ ಕೆರೆಗಳ ರಚನೆಯನ್ನು ಕಾಣಬಹುದಾಗಿದೆ. ಕೆರೆಗಳನ್ನು ೨ ಬಗೆಗಳಾಗಿ ವರ್ಗೀಕರಿಸಲಾಗಿದೆ. ನದಿ ಆಶ್ರಿತ ಕೆರೆಗಳು, ಮಳೆ ಆಶ್ರಿತ ಕೆರೆಗಳು. ಪಾವಗಡ ಪರಿಸರದಲ್ಲಿ ಮಳೆ ಆಶ್ರಿತ ಕೆರೆಗಳನ್ನು ಕಾಣಬಹುದಾಗಿದ್ದು. ಇವು ಮಳೆಗಾಲದಲ್ಲಿ ಮಾತ್ರ ತುಂಬಿ ನೀರಾವರಿಗೆ ಅನುಕೂಲವಾಗುತ್ತಿದ್ದವು. ಸಾಮಾನ್ಯವಾಗಿ ಇಲ್ಲಿನ ಶಾಸನಗಳು ಭೂಮಿಯನ್ನು ಕೆಯಿ ಎಂದು ಕರೆದಿವೆ.[೧೭] ಕುಶಲ ಕರ್ಮಿಗಳಾದ ಬಡಗಿ, ಕಮ್ಮಾರ, ಅಕ್ಕಸಾಲಿಗ, ನೇಕಾರ, ವಿವಿಧ ವರ್ಗಗಳು ಉತ್ಪಾದನೆಯಲ್ಲಿ ತೊಡಗಿಸಿಕೊಂಡಿದ್ದವು. ಇಲ್ಲಿನ ಜನರ ಪ್ರಮುಖ ಉದ್ಯೋಗ ಕೃಷಿ ಎಂದೇಳಬಹುದು. ಕಾರಣ ಇಲ್ಲಿ ದೊರೆತ ಬಹುಪಾಲು ಶಾಸನಗಳಲ್ಲಿ ಕೆರೆಗಳ ಉಲ್ಲೇಖವಿದ್ದುದರಿಂದ ಅವರ ಆರ್ಥಿಕ ಸ್ಥಿತಿಯೂ ಕೃಷಿಯಾಧಾರಿತವಾಗಿತ್ತೆಂದು ಹೇಳಬಹುದಾಗಿದೆ.

೩.೧.೩ ಧಾರ್ಮಿಕವಾಗಿ

ಪ್ರಸ್ತುತ ಪಾವಗಡ ಪರಿಸರದಲ್ಲಿ ಕಂಡುಬಂದಿರುವ ಶಾಸನಗಳಿಂದ ವೈಷ್ಣವ ಧರ್ಮ ಮುಂಚೂಣಿಯಲ್ಲಿತ್ತೆಂದು ತಿಳಿಯಬಹುದಾಗಿದೆ. ಇಲ್ಲಿ ದೊರೆತ ಹೆಚ್ಚಿನ ಶಾಸನಗಳು ಕೃಷ್ಣದೇವರಾಯನ, ಅಚ್ಯುತರಾಯನಿಗೆ ಸಂಬಂಧಿಸಿದವಾಗಿದ್ದು ಇವರು ವೈಷ್ಣವ ಧರ್ಮಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿರುವುದು ಕಂಡುಬರುತ್ತದೆ. ಹಾಗೆಯೇ ಆಂದ್ರದ ತಿರುಪತಿಯ ದೇವರ

ಉಲ್ಲೇಖವನ್ನು ನಾವು ಕಾಣಬಹುದಾಗಿದೆ. ಇಲ್ಲಿ ಶೈವ, ವೈಷ್ಣವ ದೇವಾಲಯಗ ಕಂಡು ಬಂದರೂ ಹೆಚ್ಚಿನದಾಗಿ ವೈಷ್ಣವ ಪಂಥದ ದೇವಾಲಯಗಳನ್ನು ಕಾಣಬಹುದಾಗಿದೆ. ಇಂತಹ ದೇವಾಲಯಗಳ ವ್ಯವಸ್ಥೆಯನ್ನು ನೋಡಿಕೊಳ್ಳಲು ದಾನ ದತ್ತಿ ನೀಡಿರುವುದನ್ನು ನೋಡಬಹುದಾಗಿದೆ. ಕ್ರಿ.ಶ.೧೫೧೨ರ ಕೃಷ್ಣದೇವರಾಯನ ಕಾಲದ ಶಾಸನವು "ಪೆನುಗೊಂಡ ರಾಮಚಂದ್ರ ದೇವರತ್ರಿಕಾಲ ಸಮಾರಾಧನೆಚೇ... ಪೆನುಗೊಂಡರಾಜ್ಯಂ ರೊದ್ದ ಆತನಿರಾಯ ಕರುಟಕು ಪ್ರತಿನಾಮ.

ಅಂದಿನ ಅಯೋಧ್ಯಾ ಪುರಮನೆಡಿ ಗ್ರಾಮವನ್ನು ಶ್ರೀಪತಿ ತಿಮ್ಮಪ್ಪನಿಗೆ ಪುಣ್ಯವಾಗಿ ನೀಡಲಾಗಿದೆ ಎಂದು ತಿಳಿಸಿದಾಗಿದೆ.[೧೮] ಈ ಶಾಸನದಿಂದ ಈ ಭಾಗದಲ್ಲಿ ವೈಷ್ಣವ ಧರ್ಮ ಪ್ರಚಲಿತವಿತ್ತೆಂದು ತಿಳಿದುಬರುತ್ತದೆ. ವಿಜಯನಗರ ಅರಸರಿಗೂ ಪೂರ್ವದಲ್ಲಿ ಚೋಳರ ಕಾಲದಲ್ಲಿ ಶೈವ ದೇವಾಲಯಗಳು ಹೆಚ್ಚಿನ ಪ್ರಮಾಣದಲ್ಲಿ ಕಂಡು ಬರುತ್ತವೆ. ಅದೇ ರೀತಿ ಜೈನ ಧರ್ಮದ ಪ್ರಭಾವವು ಸಹ ಕಾಣಬಹುದು. ಇದಕ್ಕೆ ಪೂರಕವಾಗಿ ನಿಡುಗಲ್ಲಿನ ಬೆಟ್ಟದಲ್ಲಿ ಜಿನಾಲಯಗಳು ಕಂಡು ಬರುತ್ತವೆ. ಒಟ್ಟಿನಲ್ಲಿ ಪಾವಗಡ ಪರಿಸರದಲ್ಲಿ ಶೈವ, ವೈಷ್ಣವ, ಜೈನ ಧರ್ಮಗಳು ಅಸ್ಥಿತ್ವದಲ್ಲಿದ್ದವೆಂದು ಹೇಳಬಹುದಾಗಿದೆ.

೩.೨ ವೀರಗಲ್ಲುಗಳು

ಗತಿಸಿಹೋದ ಮಾನವನನ್ನು ಸಮಾಧಿ ಮಾಡಿದ ನಿರ್ದಿಷ್ಟ ಸ್ಥಳದ ಗುರುತಿಗಾಗಿಯೋ ಮಡಿದವನ ಸ್ಮರಣೆ ಬರುವಂತೆ, ಕೆಲವಾರು ಸಂಕೇತಗಳನ್ನೋ, ಗುರುತಗಳನ್ನೋ ಒಂದು ನಿಗದಿಯಾದ ಸ್ಥಳದಲ್ಲಿ ಅಥವಾ ಸಮಾಧಿ ಮಾಡಿದ ಸ್ಥಳದಲ್ಲಿ ನೆಡುತ್ತಿದ್ದರು. ಇವು ಸಾಮಾನ್ಯವಾಗಿ ಆಯಾ ದೇಶಗಳಲ್ಲಿನ ಧರ್ಮ, ನಂಬಿಕೆ, ಸಾಮಾಜಿಕ ಪ್ರತಿಷ್ಠೆಗಳನುಸರಿಸಿಯೇ ಬೆಳದಿದೆ.[೧೯] ಬೃಹದಾಕಾರದ ಪಿರಮಿಡ್ಡುಗಳಿಂದ ಹಿಡಿದು ಸಣ್ಣ ಪುಟ್ಟ ಕಲ್ಲುಗಳವರೆಗೂ ಇವುಗಳ ವ್ಯಾಪ್ತಿಯನ್ನು ಗುರುತಿಸಬಹುದು. ಹಾಗೆಯೆ ಪ್ರಾಗ್ಯೈತಿಹಾಸಿಕ ಕಾಲದ ಕಲ್ಲಿನ ಮನೆಗಳಿಂದ ಹಿಡಿದು, ಅಮೃತ ಶಿಲೆಗಳಿಂದ ನಿರ್ಮಿಸಿದ ಉನ್ನತ ನಾಗರೀಕತೆಯ ಶ್ರೇಷ್ಠ ವಾಸ್ತುವಿನವರೆಗೂ ಇದರ ವೈಭವವನ್ನು ಗುರುತಿಸಬಹುದು.[೨೦] ಇಂತಹ ಸ್ಮಾರಕಗಳು ಮಾನವನ ಜೀವನದ ಬಗ್ಗೆ ಅವನಿಗಿದ್ದ ದೋರಣೆಯನ್ನು ಅಂದಿನ ನಾಗರೀಕತೆ ಮತ್ತು ಸಂಸ್ಕೃತಿಯನ್ನು ತಿಳಿಸಿಕೊಡುವ ಪುರಾವೆಗಳಾಗಿವೆ. ಇಂತಹ ಸ್ಮಾರಕಗಳಲ್ಲಿ ವೀರಗಲ್ಲು ಶಾಸನಗಳು ಪ್ರಮುಖವಾಗಿವೆ. ಗತಿಸಿದ ಮಾನವನ ಸಮಾಧಿ ಮಾಡಿ ಮಡಿದವರ ಸ್ಮರಣೆ ಬರುವಂತೆ ಸಂಕೇತಕ್ಕಾಗಿ ನಿಲ್ಲಿಸಿದ ಶಿಲೆಯೇ ವೀರಗಲ್ಲು ಶಾಸನ.[೨೧] ವೇದಗಳು ಮತ್ತು ಶತಪಥ ಬ್ರಾಹ್ಮಣದಲ್ಲಿ ಇಂತಹ ಸ್ಮಾರಕದ ಉಲ್ಲೇಖವಿದೆ.[೨೨] ಇಂತಹ ವೀರಗಲ್ಲು ಶಾಸನಗಳು ಕರ್ನಾಟಕದ ಎಲ್ಲಾ ಭಾಗಗಳಲ್ಲೂ ಯತೇಚ್ಛವಾಗಿ ಕಂಡುಬಂದಿವೆ. ಸಾಮಾನ್ಯವಾಗಿ ವೀರರು ರಾಜರುಗಳಿಗೆ ತಮ್ಮ ಸ್ವಾಮಿನಿಷ್ಠೆಯನ್ನು ವ್ಯಕ್ತಗೊಳಿಸುವಲ್ಲಿ, ಊರಿಗೆ ತೊಂದರೆ ಬಂದಾಗ

ಅದನ್ನು ನಿವಾರಿಸಲು ಹೋರಾಡಿದ ವೀರರ, ಗೋವುಗಳನ್ನು ರಕ್ಷಿಸುವಲ್ಲಿ, ಹೆಣ್ಣು ಮಕ್ಕಳ ಮಾನವನ್ನು ರಕ್ಷಿಸುವಲ್ಲಿ ಹೋರಾಡಿದಂತಹ ಸಂದರ್ಭದಲ್ಲಿ ತಮ್ಮ ಪ್ರಾಣವನ್ನರ್ಪಿಸಿದಂತಹ ವೀರರಿಗೆ ಅಂತಹವರ ಕಥೆಯನ್ನು ಸಾರುತ್ತ ಅವರ ಸ್ಮರಣೆಯನ್ನು ಪ್ರಸ್ತುತ ಕಾಲದವರೆಗೆ ನೆನಪಿಸುವುದಕ್ಕೆ ವೀರಗಲ್ಲುಗಳನ್ನು ನಡೆಸುತ್ತಿದ್ದರು.

ವೀರ ಎಂಬುದು ಮೂಲತಃ ಸಂಸ್ಕೃತ ಭಾಷೆಯ ಪದವಾಗಿದೆ. ಇದು ವ್ಯಕ್ತಿಯ ಪರಾಕ್ರಮ, ಶಕ್ತಿ ಮುಂತಾದ ಅವನ ದೈಹಿಕ ಗುಣಗಳನ್ನು ಸೂಚಿಸುವಂತಹದ್ದಾಗಿದೆ. ವೀರ ಎಂಬ ಪದಕ್ಕೆ ಸಮಾನಾರ್ಥಕವಾಗಿ ಆಂಗ್ಲಭಾಷೆಯ Hero ಎಂಬ ಪದವನ್ನು ಬಳಸುವುದು ರೂಢಿಯಲ್ಲಿದೆ. ವೀರ, ವೀರತ್ವ ಇದು ವ್ಯಕ್ತಿಯ ಸ್ವಾಭಿಮಾನ, ಮಹತ್ವಕಾಂಕ್ಷೆಯನ್ನು ಶೌರ್ಯ, ಪರಾಕ್ರಮವನ್ನು ಪ್ರತಿಬಿಂಬಿಸುವ ಪದವಾಗಿದೆ. ಇಂತಹ ಶೌರ್ಯವಂತ ವ್ಯಕ್ತಿ ಹೋರಾಟದಲ್ಲಿ ಮಡಿದಾಗ ವೀರಗಲ್ಲನ್ನು ಹಾಕುತ್ತಿದ್ದರು, ವೀರರ ಪರಾಕ್ರಮವು ವೀರಗಲ್ಲಿನ ಶಿಲ್ಪ ಮತ್ತು ಶಾಸನದ ಪಾಠದಲ್ಲಿ ವ್ಯಕ್ತವಾಗುತ್ತಿದ್ದುದರಿಂದ ಅದು ಸಹಜವಾಗಿ ಅವನ ಪರಾಕ್ರಮವನ್ನು ಲೋಕಕ್ಕೆ ಸಾರುವ ಸಾಧನವೂ ಆಗಿತ್ತು. ವೀರಗಲ್ಲನ್ನು ನಿಲ್ಲಿಸುವ ಉದ್ದೇಶ ೨ ರೀತಿಯದ್ದಿರಬಹುದು. ೧. ಲೌಕಿಕ ಉದ್ದೇಶ ವೀರರ ಪರಾಕ್ರವನ್ನು ಮೆಚ್ಚಿ ಲೋಕಕ್ಕೆ ತಿಳಿಯಲೆಂದು ನೆಡುವುದು. ೨. ಪಾರಮಾರ್ಥಿಕ ಉದ್ದೇಶ ವೀರಗಲ್ಲನ್ನು ನಡೆಸವುದರ ಮೂಲಕ ಆತನಿಗೆ ವೀರಸ್ವರ್ಗ ಪ್ರಾಪ್ತವಾಗಲೆಂದು ನಿಲ್ಲಿಸುವುದು.[೨೩] ಒಟ್ಟಾರೆಯಾಗಿ ಹೋರಾಟದಲ್ಲಿ ಮಡಿದ ವೀರರ ದ್ಯೋತಕವಾಗಿ ನಿಲ್ಲಿಸಿದ ಶಿಲೆಯೇ ವೀರಗಲ್ಲು. ಇಂತಹ ವೀರಗಲ್ಲಿನಲ್ಲಿ ಶಿಲ್ಪಗಳ ಜೊತೆಗೆ ಶಾಸನ ಪಾಠದಿಂದ ಅದರ ಕಾಲ ಹಾಗೂ ಯಾವ ಉದ್ದೇಶಕ್ಕೆ ಅದನ್ನು ನಡೆಸಲಾಯಿತು ಎಂಬುದನ್ನು ತಿಳಿಯಬಹುದು ಸಾಮಾನ್ಯವಾಗಿ ವೀರಗಲ್ಲಿನಿಲ್ಲಿ ಮೂರು ಹಂತಗಳಿಂದ ೪,೫,೬ ಹಂತಗಳವರೆಗೂ ದೊರಕುತ್ತವೆ. ಹೆಚ್ಚಾಗಿ ಮೂರು ಹಂತದ ಶಾಸನಶಿಲ್ಪಗಳು ಕಂಡುಬತ್ತವೆ. ಇದರಲ್ಲಿ ಕೆಳಗಿನ ಹಂತದಲ್ಲಿ ವೀರ ತನ್ನ ಶತೃಗಳೊಡನೆ ಹೋರಾಡುತ್ತಿರುವಂತೆಯೂ, ಮಧ್ಯದ ಹಂತದಲ್ಲಿ ಯುದ್ಧದಲ್ಲಿ ಮಡಿದ ಅವನನ್ನು ಅಪ್ಸರೆಯರು ಒಯ್ಯುತ್ತಿರುವಂತೆಯೂ ಮೇಲಿನ ಹಂತದಲ್ಲಿ ಆತನು ಭಗವಂತನ ಸಾನಿಧ್ಯವನ್ನು ಪಡೆದು ಭಗವಂತನ ಪೂಜೆ ಮಾಡುವಂತೆ ತೋರಿಸಲಾಗುತ್ತದೆ. ಯಾವುದೇ ಹಂತವಿರಲಿ ಕುದುರೆ ಸವಾರಿ ಮಾಡುತ್ತಿರುವ ಅಥವಾ ಯುದ್ಧ ಮಾಡುತ್ತಿರುವ ಅಥವಾ ಬಿಲ್ಲನ್ನು, ಖಡ್ಗವನ್ನು ಹಿಡಿದು ನಿಂತಿರುವ ಯುದ್ದವನ್ನೋ, ರಣಾಂಗಣವನ್ನೋ ಸೂಚಿಸುವ ಚಿತ್ರವನ್ನು ವೀರಗಲ್ಲು ಎಂದು ಕರೆಯಬಹುದು.[೨೪]

ವೀರಗಲ್ಲುಗಳ ಜೊತೆಯಲ್ಲಿ ಇಂತಹ ವೀರರನ್ನು ಆರಾಧಿಸುವ ಪದ್ಧತಿಯು ಹಲವು ಕಡೆಗಳಲ್ಲಿ ನಾವು ನೋಡಬಹುದಾಗಿದೆ. ಕರ್ನಾಟಕದ ಹಲವಾರು ಪ್ರಾಂತ್ಯಗಳಲ್ಲಿ ವೀರರಿಗೆ ಗುಡಿಗಳನ್ನು ಕಟ್ಟಿ ಆರಾಧಿಸುವುದು ಕಂಡುಬರುತ್ತದೆ. ಬೆಂಗಳೂರು, ತುಮಕೂರು, ಮೈಸೂರು,

ಕೋಲಾರ, ಮಂಡ್ಯ ಮುಂತಾದ ಜಿಲ್ಲೆಗಳ ಹಳ್ಳಿಗಳಲ್ಲಿ ಇವನ್ನು ಗುರುತಿಸಬಹುದು. ಇಂತಹ ವೀರಗಾರರ ಗುಡಿಗಳನ್ನು ವಿಶೇಷವಾಗಿ ಕುರುಬ, ನಾಯಕ ಅಥವಾ ಬೇಡ ಜನಾಂಗದವರು ಇಂದಿಗೂ ಪೂಜಿಸುತ್ತಾರೆ.[೨೫] ಸಾಮಾನ್ಯವಾಗಿ ಇವು ಊರಿನ ಹೊರಭಾಗದಲ್ಲಿ ಕೆರೆಯ ಬಳಿಯೋ, ಹೊಲಗಳಲ್ಲಿಯೋ ಇರುತ್ತವೆ. ಆದರೆ ಇಂತಹ ಕಡೆಯೇ ಇರುತ್ತವೆಂದು ಖಚಿತವಾಗಿ ಹೇಳಲಾಗುವುದಿಲ್ಲ. ಹಾಗೂ ವೀರಗಲ್ಲಿನ ಮೇಲೆ ಶಾಸನವಿರಬೇಕೆಂಬ ನಿಯಮವೂ ಇಲ್ಲ. ಆದರೆ ಎಲ್ಲದರಲ್ಲೂ ಸಾಮಾನ್ಯವಾಗಿ ಕಂಡುಬರುವ ಒಂದು ಅಂಶವೆಂದರೆ ವೀರನ ಚಿತ್ರವನ್ನು ಒಂದೇ ಕಲ್ಲಿನ ಮೇಲೆ ಬಿಡಿಸಲಾಗುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಪಾವಗಡ ಪರಿಸರದಲ್ಲಿ ಇಂತಹ ವೀರಗಲ್ಲುಗಳು ಹಾಗೂ ವೀರಗಾರರ ಗುಡಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಪಾವಗಡ ಪರಿಸರದಲ್ಲೂ ಅನೇಕ ವೀರಗಲ್ಲುಗಳನ್ನು ನೋಡಬಹುದು. ಗುಂಡ್ಲಹಳ್ಳಿಯಲ್ಲಿ ಅತಿ ಹೆಚ್ಚು ವೀರಗಲ್ಲುಗಳು ಕಂಡುಬಂದಿವೆ. ಇಲ್ಲಿಯ ರಾಮದೇವಗುಡಿಯ ಮುಂದಿನ ಅಂಗಳದಲ್ಲಿ ಸುಮಾರು ೬ ವೀರಗಲ್ಲುಗಳನ್ನು ಕಾಣಬಹುದು. ಸಾಮಾನ್ಯವಾಗಿ ಯುದ್ಧದಲ್ಲಿ ಹೋರಾಡಿ ಮಡಿದ ವೀರರ ವೀರಗಲ್ಲುಗಳಾಗಿವೆ. ಇಲ್ಲಿಯ ವೀರಗಲ್ಲುಗಳು ೩ ರಿಂದ ೪ ಹಂತದವರೆಗೆ ಖಂಡರಿಸಲಾಗಿದೆ. ಸುಮಾರು ೮ ಅಡಿಯ ಬಿಳಿಕಪ್ಪು ಮಿಶ್ರಿತ ಗ್ರಾನೇಟ್ ಕಲ್ಲಿನಲ್ಲಿ ಒಂದು ವೀರಗಲ್ಲಿದೆ. ಇದರಲ್ಲಿ ನಾಲ್ಕು ಪಟ್ಟಿಕೆಗಳನ್ನು ರಚಿಸಿದ್ದು ಕೆಳಭಾಗದ ಪಟ್ಟಿಯಲ್ಲಿ ವೀರರು ಆಯುಧಗನ್ನಿಡಿದು ಹೋರಾಡುತ್ತಿರುವರು ಇದರ ಮೇಲಿನ ಪಟ್ಟಿಯಲ್ಲಿ ಮಡಿದ ವೀರನನ್ನು ಸ್ತ್ರೀಯರು ಪಲ್ಲಕ್ಕಿಯಲ್ಲಿ ಮೇಲೊಯ್ಯುತ್ತಿರುವಂತೆಯೂ ಅದರ ಮೇಲಿನ ಪಟ್ಟಿಯಲ್ಲಿ ಮಡಿದ ವ್ಯಕ್ತಿ ಲಿಂಗಕ್ಕೆ ಪೂಜೆ ಸಲ್ಲಿಸುತ್ತಿರುವಂತೆ ಹಾಗೂ ಲಿಂಗದ ಎಡ ಮತ್ತು ಬಲಭಾಗದಲ್ಲಿ ಇಬ್ಬರು ವ್ಯಕ್ತಿಗಳು ಭಕ್ತಿಯಿಂದ ನಿಂತಿರುವಂತೆ ಇದೆ. ಮೇಲ್ಭಾಗದಲ್ಲಿ ಸೂರ್ಯ–ಚಂದ್ರನನ್ನು ಖಂಡರಿಸಿದ್ದಾರೆ. ಮತ್ತೊಂದು ವೀರಗಲ್ಲು ಅರ್ಧ ತೃಟಿತಗೊಂಡಿದ್ದು ಎರಡು ಪಟ್ಟಿಕೆಗಳು ಕಂಡುಬರುತ್ತವೆ. ಸಾಮಾನ್ಯವಾಗಿ ಇಲ್ಲಿರುವ ವೀರಗಲ್ಲುಗಳು ಬೇರೆ ಬೇರೆ ಕಡೆಗಳಿಂದ ತಂದು ಇಲ್ಲಿರಿಸಿರಬಹುದೆಂದು ಹೇಳಬಹುದಾಗಿದೆ.

ಪಳವಳ್ಳಿ ಕೆರೆಯ ಆಂಜನೇಯ ದೇವಸ್ಥಾನದ ಬಳಿ 'ತುರುಗೊಳ' ವೀರಗಲ್ಲಿದೆ. ಇದನ್ನು ಗೋವುಗಳ ರಕ್ಷಣೆಗಾಗಿ ಹೋರಾಡಿ ಮರಣಹೊಂದಿರುವ ವೀರನಿಗೆ ನಿರ್ಮಿಸಿರುವ ವೀರಗಲ್ಲಾಗಿದೆ. ಇದು ಸುಮಾರು ೬ ಅಡಿ ಎತ್ತರವಿದ್ದು. ಬಿಳಿ ಗ್ರಾನೇಟ್ ಕಲ್ಲಿನಿಂದ ನಿರ್ಮಿಸಲಾಗಿದ್ದರೂ ಈ ವೀರಗಲ್ಲು ಅರ್ಧಕ್ಕೆ ಮುರಿದುಬಿದ್ದಿದೆ. ಇದು ಮೂರು ಹಂತಗಳನ್ನು ಹೊಂದಿದ್ದು. ಕೆಳಗಿನ ಪಟ್ಟಿಕೆಯಲ್ಲಿ ಇಬ್ಬರು ವೀರರು ಬಿಲ್ಲುಗಳನ್ನು ಹಿಡಿದು ಹೋರಾಡುವ ದೃಶ್ಯವು ಕಂಡುಬರುತ್ತದೆ. ಈ ವೀರರ ಪಕ್ಕದಲ್ಲಿ ಗೋವೊಂದು ನಿಂತಿದೆ. ಮಧ್ಯದ ಪಟ್ಟಿಕೆಯಲ್ಲಿ ವೀರನನ್ನು ಸ್ತ್ರೀಯರು ಕರೆದೊಯ್ಯುತ್ತಿರುವುದು, ಮೇಲಿನ ಪಟ್ಟಿಕೆಯಲ್ಲಿ ವೀರ ಶಿವಲಿಂಗವನ್ನು ಪೂಜಿಸುತ್ತಿರುವುದು ಕಂಡು ಬರುತ್ತದೆ. ಅದೇ ರೀತಿ ಪಾವಗಡ ಪರಿಸರದಲ್ಲಿ ಹೆಚ್ಚಾಗಿ

ವೀರರಿಗೆ ಗುಡಿಗಳನ್ನು ಕಟ್ಟಿಸಿರುವುದು ಕಾಣಬಹುದು ಇವುಗಳನ್ನು ವೀರರಗುಡಿ, ಪಾಂಡವರಮನೆ ಎಂದೂ ಸಹ ಕರೆಯುತ್ತಾರೆ. ವೀರರಿಗೆ ಚಿಕ್ಕದಾದ ನಾಲ್ಕು ಚಪ್ಪಡಿ ಕಲ್ಲುಗಳಿರುವ ಗುಡಿಯನ್ನು ರಚಿಸಿರುವರು. ಅದರ ಒಳಭಾಗದಲ್ಲಿ ವೀರನ ಶಿಲ್ಪವಿರುವ ಕಲ್ಲು ಕಾಣಬಹುದು. ಕೆಲವೊಂದು ವೀರರ ಗುಡಿಗಳಲ್ಲಿ ಶಿಲ್ಪವಿರದೇ ಬರೀ ಕಲ್ಲುಗಳು ಕಂಡುಬರುತ್ತವೆ. ಇಂತಹ ವೀರಗಾರರ ಗುಡಿಗಳನ್ನು ಹಲವು ಜನಾಂಗದ ನಾಯಕರು ಪೂಜೆ ಮಾಡುತ್ತಾರೆ. ಪಾವಗಡದ ಪೆನುಗೊಂಡೆ ಊರುಬಾಗಿಲಿನ ಬಳಿ ಕಂದಕದ ದಿಬ್ಬವನ್ನು ಅಗೆಯುತ್ತಿದ್ದಾಗ ಒಂದು ವೀರನಗುಡಿ ಹೊರಬಿತ್ತು. ಇದರ ಒಳಭಗದಲ್ಲಿ ವೀರನೊಬ್ಬ ಲೀವಿಯಿಂದ ಖಡ್ಗವನ್ನು ಹೊರತೆಗೆದು ನೆಲದ ಮೇಲೂರಿಕೊಂಡಿದ್ದಾನೆ. ಈ ವೀರನ ಬಗ್ಗೆ ಒಂದು ಕಥೆಯನ್ನು ಹೇಳುತ್ತಾರೆ. ಅಂದರೆ ಪಾವಗಡ ಪಾಳೇಗಾರರ ಕೊನೆಯ ದೊರೆ ತಿಮ್ಮಪ್ಪ ನಾಯಕನು ಆಳುತ್ತಿದ್ದ ಕಾಲದಲ್ಲಿ ರಾಯಚರ್ಲು ಕೋಟೆಯನ್ನು ಯರ್ರಜನ್ನಪ್ಪನಾಯಕನು ಆಳುತ್ತಿದ್ದ. ಈ ಸಂದರ್ಭದಲ್ಲಿ ಹೈದರಾಲಿಯು ತಿಮ್ಮಪ್ಪನಾಯಕನಿಗೆ ಪತ್ರವನ್ನು ಬರೆದು ಯರ್ರಜನ್ನಪ್ಪನಿಂದ ಕಪ್ಪವನ್ನು ವಸೂಲಿ ಮಾಡಲು ತಿಳಿಸುವನು. ಇದಕ್ಕೆ ತಿಮ್ಮಪ್ಪನಾಯಕನು ಒಂದು ದಂಡು ಸಿದ್ದ ಮಾಡಲು ವೀರನಾಗಪ್ಪನೆಂಬುವವನು ನಾನೊಬ್ಬನೆ ಯರ್ರಜನ್ನಪ್ಪ ನಾಯಕನನ್ನು ಸೆರೆಯಿಡಿಯುತ್ತೇನೆಂದು ಹೊರಟು ಅವನನ್ನು ಸೆರೆಹಿಡಿದು ತಂದು ಪೆನುಗೊಂಡೆ ಬಾಗಿಲಿಗೆ ಕಟ್ಟಬೇಕೆಂದಿರಲು ಯರ್ರಜನ್ನಪ್ಪನು ಮೋಸದಿಂದ ಸೈನಿಕನ ಕತ್ತಿಯೊಂದನ್ನು ಸೆಳೆದುಕೊಂಡು ನಾಗಣ್ಣನ ಬೆನ್ನಿಗೆ ಹಿರಿದು ತಪ್ಪಿಸಿಕೊಂಡು ಓಡಿಹೋದ. ಆದರೆ ನಾಗಣ್ಣ ಅವನನ್ನು ಬೆನ್ನಟ್ಟಿ ಹೋಗಿ ಪಳವಳ್ಳಿ ಕೆರೆಯ ಬಳಿ ಕುದುರೆಯಿಂದ ಕೆಳಗೆ ಬಿದ್ದು ಮರಣಹೊಂದಿದ. ಈ ವೀರನ ವಂಶೀಕರಿಗೆ ಪೆನುಗೊಂಡೆ ಬಾಗಿಲಿನಿಂದ ಪಳವಳ್ಳಿ ಕೆರೆಯವರೆಗೆ ಮಾನ್ಯ ನೀಡಿ ಇಲ್ಲಿ ರಕ್ತ ಮಾನ್ಯದ ಕಲ್ಲನ್ನು ನಡೆಸಿದ್ದು ತಿಳಿದು ಬರುತ್ತದೆಂದು ಪಾವಗಡದ ವಿ.ಚೆಲುವರಾಜನ್‌ರವರು ಹೇಳುತ್ತಾರೆ.

ಅದೇ ರೀತಿಯಾಗಿ ಗುಂಡ್ಲಹಳ್ಳಿಯ ಊರಿನ ಪೂರ್ವದಿಕ್ಕಿನ ರಸ್ತೆಯ ಪಕ್ಕದಲ್ಲಿ ೩ ವೀರರ ಗುಡಿಗಳು ಪೂರ್ವಾಭಿಮುಖವಾಗಿ ಕಟ್ಟಲಾಗಿದೆ. ೪ ಚಪ್ಪಡಿಕಲ್ಲುಗಳನ್ನು ಬಳಸಿ ಗುಡಿಗಳನ್ನು ನಿರ್ಮಿಸಿರುವರು. ಇವುಗಳಲ್ಲಿ ಎರಡರಲ್ಲಿ ವೀರರ ಶಿಲ್ಪಗಳಿದ್ದರೆ ಒಂದರಲ್ಲಿ ಖಾಲಿ ಇದೆ. ಒಂದು ಗುಡಿಯಲ್ಲಿ ಎರಡು ವೀರರ ಶಿಲ್ಪಗಳಿವೆ ಇಬ್ಬರು ಸೈನಿಕರು ಬಿಲ್ಲು ಬಾಣಗಳಿಡಿದು ಯುದ್ಧ ಮಾಡುತ್ತಿರುವಂತೆ ಖಂಡರಿಸಿದ್ದಾರೆ. ಮತ್ತೊಂದು ಶಿಲ್ಪಕಲ್ಲಿನಲ್ಲಿ ಎರಡು ಕೈಗಳಲ್ಲಿ ಸ್ತ್ರೀ ಪುರುಷ ಆಯುಧಗಳನ್ನಿಡಿದು ಒಂದು ಕೈ ಮೇಲೆತ್ತಿದಂತೆ ಇದೆ. ಮತ್ತೊಂದು ಗುಡಿಯಲ್ಲಿ ಪುರುಷ ಮತ್ತು ಸ್ತ್ರೀಯು ನಿಂತಿರುವಂತೆಯೂ ಪುರುಷ ಕಿರೀಟಧಾರಿಯಾಗಿದ್ದು ಕೈಯಲ್ಲಿ ಆಯುಧವನ್ನಿಡಿದಿರುವನು. ಸ್ತ್ರೀಯು ಕೈ ಮುಗಿದು ನಿಂತಿರುವಂತಿದೆ.

ಇಂತಹ ವೀರಗಾರರ ಗುಡಿಗಳು ಪಳವಳ್ಳಿ, ಗುಂಡಾರ್ಲಹಳ್ಳಿಯಲ್ಲೂ ಸಹ ಕಂಡುಬರುತ್ತಿವೆ. ಕೆಲವೊಂದರಲ್ಲಿ ವೀರರ ಶಿಲ್ಪಗಳಿವೆ ಕೆಲವು ಗುಡಿಗಳಲ್ಲಿ ಕೇವಲ ಕಲ್ಲುಗಳನ್ನು

ಕಾಣಬಹುದು. ಇಂತಹ ಗುಡಿಗಳನ್ನು ಪಾವಗಡ ಮತ್ತು ಪಳವಳ್ಳಿಯಲ್ಲಿ ಇಂತಹ ವೀರಗಾರರ ಗುಡಿಗಳಲ್ಲಿ ಇಂದಿಗೂ ನಾಯಕ ಜನಾಂಗದವರು ಹಬ್ಬದ ದಿನಗಳಲ್ಲಿ ಪೂಜೆ ಮಾಡುವರು.

೩.೩ ಮಾಸ್ತಿಕಲ್ಲು

ಮಾಸ್ತಿ ಎಂಬುದು ಸಂಸ್ಕೃತದ ಮಹಾಸತಿ ಎಂಬುದರ ಸಂಕ್ಷೇಪ್ತ ರೂಪ.[೬] ಮಹಾಸತಿಯಾಗುವುದು ಮಹಾಪುಣ್ಯದ ಕಾರ್ಯವೆಂದು ಒಂದು ಕಾಲದ ಸಮಾಜ ಬಲವಾಗಿ ನಂಬಿತ್ತು. ಗಂಡ ಸತ್ತು ಹೋದವಳಿಗೆ ಸಮಾಜದಲ್ಲಿ ಹೆಚ್ಚಿನ ಗೌರವವಿರಲಿಲ್ಲ. ಅದ್ದರಿಂದ ಅನಿವಾರ್ಯವಾಗಿ ಗಂಡ ಸತ್ತ ಮೇಲೆ ಆತನ ಜೊತೆ ಪ್ರಾಣತ್ಯಾಗ ಮಾಡುವ ಪದ್ದತಿ ಇತ್ತು.[೨೭] ಎಷ್ಟೋ ಸಲ ಸತಿಯರಿಗೆ ಪತಿಯ ಶವದೊಂದಿಗೆ ಸಾಯುವ ಮನಸ್ಸು ಇಲ್ಲದೆ ಇದ್ದರೂ ಸಮಾಜದ ಹೆದರಿಕೆಗೆ ಅನಿವಾರ್ಯವಾಗಿ ಒಪ್ಪಿಕೊಳ್ಳುತ್ತಿದ್ದರು. ಈ ರೀತಿಯ ಪ್ರಾಣತ್ಯಾಗ ಮಾಡುವ ಪದ್ದತಿ ಎರಡು ಬಗೆಯಲ್ಲಿ ಕಾಣಬಹುದು. ಅವುಗಳೆಂದರೆ ಸಹಗಮನ ಮತ್ತು ಅನುಗಮನ ಪದ್ದತಿಯಾಗಿವೆ. ಪತಿಯು ಮಡಿದಾಗ ಆತನ ಶವದ ಜೊತೆಯಲ್ಲಿಯೇ ಚಿತೆಗೆ ಬಿದ್ದು ಪ್ರಾಣತ್ಯಾಗ ಮಾಡುವುದು. ಸಹಗಮನ ಪದ್ಧತಿಯಾದೆ, ತನ್ನ ಪತಿಯು ಮರಣ ಸುದ್ದಿಯನ್ನು ಕೇಳಿ ಸ್ವತಃ ಚಿತೆಯನ್ನು ನಿರ್ಮಿಸಿ ಪ್ರಾಣ ಬಿಡುವುದು ಅನುಗಮನ ಪದ್ಧತಿಯಾಗಿದೆ. ಇಂತಹ ಪ್ರಾಣ ತ್ಯಾಗ ಮಾಡಿದ ಸತಿಯರ ಸ್ಮರಣೆಗಾಗಿ ನಿಲ್ಲಿಸಿದ ಸ್ಮಾರಕಗಳೇ ಮಹಾಸತಿ ಕಲ್ಲುಗಳು. ವೀರಗಲ್ಲುಗಳಂತೆ ಮಹಾಸತಿ ಕಲ್ಲುಗಳಲ್ಲಿ ಮೂರು-ನಾಲ್ಕು ಪಟ್ಟಿಕೆಗಳ ಚಿತ್ರಣಗಳಿರುತ್ತವೆ. ಬರಿಯ ಸ್ತ್ರೀ ವಿಗ್ರಹವು ಇರಬಹುದು. ಇಂತಹ ಮಹಸತಿಯು ಕೈ ಮೇಲೆತ್ತಿ ತೋರಿಸುವಂತೆ ಖಂಡರಿಸಿರುತ್ತಾರೆ. ಈ ಒಂದು ಹಿನ್ನೆಲೆಯಲ್ಲಿ ಪಾವಗಡ ಪರಿಸರದಲ್ಲಿ ಕೋಟೆ ಆಂಜನೇಯಸ್ವಾಮಿ ದೇವಾಲಯದ ಆವರಣದಲ್ಲಿ ದೀಪಸ್ತಂಭದ ಕೆಳಗಡೆ ಒಂದು ಮಾಸ್ತಿಕಲ್ಲನ್ನು ಕಾಣಬಹುದು. ಇದು ವಿಜಯನಗರ ಕಾಲಕ್ಕೆ ಸಂಬಂಧಿಸಿದಂತಹದ್ದಾಗಿದೆ. ಈ ಮಹಾಸತಿಕಲ್ಲು ಕಪ್ಪು ಗ್ರಾನೈಟ್ ಶಿಲೆಯಿಂದ ಖಂಡರಿಸಲ್ಪಟ್ಟಿದೆ. ಇಲ್ಲಿ ದೊರೆತ ಮಹಾಸತಿಕಲ್ಲಿ ಪತಿಯು ಕೈ ಮೆಲೆತ್ತಿ ನಿಂತಿರುವಂತೆ ಖಂಡರಿಸಲಾಗಿದೆ. ಈ ಮಹಾಸತಿಕಲ್ಲು ಸ್ಥಳಾಂತರಿಸಲಾಗಿದ್ದು ಮೂಲ ಸ್ಥಳ ಎಲ್ಲಿದ್ದಿದ್ದು ಎಂದು ಹೇಳಲು ಕಷ್ಟವಾಗುತ್ತದೆ. ಈ ಮಹಾಸತಿಕಲ್ಲನ್ನು ಮಕ್ಕಳಾಗದವರು ಮೇಲೆತ್ತಿದ್ದರೆ ಮಕ್ಕಳಾಗುತ್ತವೆ ಎಂಬ ನಂಬಿಕೆ ಇದೆ. ಒಟ್ಟಾರೆ ಮಹಾಸತಿ ಪದ್ದತಿಯು ನಮಗೆ ನಿಕೃಷ್ಟವೆನಿಸಿದರೂ ಅಂದಿನ ಸಂಸ್ಕೃತಿಯನ್ನು ಪ್ರತಿಬಿಂಬಿಸುವುದೇ ಇದರ ಉದ್ದೇಶವೆಂದು ಹೇಳಬಹುದಾಗಿದೆ.

ಒಟ್ಟಾರೆಯಾಗಿ ಹೇಳುವುದೆಂದರೆ ಶಾಸನಗಳು ಒಂದು ಪ್ರದೇಶದ ಇತಿಹಾಸ ರಚನೆಗೆ ಸಹಾಯಕವಾಗಿವೆ. ಹಾಗೆಯೇ ಆಪ್ರದೇಶದ ಜನರ ಸಂಸ್ಕೃತಿಯನ್ನು ತಿಳಿಯಲು ಸಹಾಯಕವಾಗಿವೆ. ಶಾಸನಗಳಿಂದ ಅಂದಿನ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಪರಿಸ್ಥಿತಿಯ ಬಗ್ಗೆ ತಿಳಿಯಲು ಸಹಾಯಕವಾಗುತ್ತದೆ.

ಅಡಿ ಟಿಪ್ಪಣಿಗಳು

೧. ತಿಪ್ಪೇರುದ್ರಸ್ವಾಮಿ ಹೆಚ್: ೧೯೬೮, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ-೨೩೩
೨. ಅದೇ, ಪು-೨೩೫
೩. ಕೃಷ್ಣಕುಮಾರ್ ಸಿ.ಪಿ: ೧೯೯೩, ಶಾಸನಶಾಸ್ತ್ರ ಪ್ರವೇಶ, ಪು-೫೬
೪. ಚಿದಾನಂದ ಮೂರ್ತಿ ಎಂ: ೧೯೭೯, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು-೭೫
೫. ರಘುಪತಿ ಕೆಮ್ತೂರು: ೧೯೮೭, ಸ್ಥಳನಾಮಾಧ್ಯಯನದ ಇತ್ತೀಚಿನ ಒಲವುಗಳು : ಒಂದು ಸ್ಥೂಲ ಚಿತ್ರ, ಪು-೪೦೮
೬. ರೈಸ್ ಬಿ.ಎಲ್: ೧೯೮೭, ಮೈಸೂರು ಗೆಜೆಟಿಯರ್ ಸಂಪುಟ II, ಪು-೧೯೫
೭ EC VOL-XII, 02, ಪಾವಗಡ, ತುಮಕೂರು (ಜಿಲ್ಲೆ)
೮ EC VOL-XII, 16, ಹುಲಿಬೆಟ್ಟ, ಪಾವಗಡ (ತಾ) ತುಮಕೂರು (ಜಿಲ್ಲೆ)
೯. EC VOL-XII, 43,1150, ನಿಡುಗಲ್ಲು ಬೆಟ್ಟ, ಪಾವಗಡ (ತಾ) ತುಮಕೂರು (ಜಿಲ್ಲೆ)
೧೦ EC VOL-XII, 97, ೧೪೦೫, ಪಾವಗಡ, ತುಮಕೂರು (ಜಿಲ್ಲೆ)
೧೧ EC VOL-XII, 02, ಪಾವಗಡ, ತುಮಕೂರು (ಜಿಲ್ಲೆ)
೧೨. EC VOL-XII, 06, 1756, ಬ್ಯಾಡನೂರು, ಪಾವಗಡ (ತಾ) ತುಮಕೂರು (ಜಿಲ್ಲೆ)
೧೩ EC VOL-XII, 11, 754, ಗುಂಡ್ಲಹಳ್ಳಿ, ಪಾವಗಡ (ತಾ) ತುಮಕೂರು (ಜಿಲ್ಲೆ)
೧೪. EC VOL-XII, 8, 1642, ಗುಂಡ್ಲಹಳ್ಳಿ, ಪಾವಗಡ (ತಾ) ತುಮಕೂರು (ಜಿಲ್ಲೆ)
೧೫. ೧೩. EC VOL-XII, 100, 1300, ರಂಗಾಪುರ, ಪಾವಗಡ (ತಾ) ತುಮಕೂರು (ಜಿಲ್ಲೆ)
೧೬ EC VOL-XII, 12, 754, ಗುಂಡ್ಲಹಳ್ಳಿ, ಪಾವಗಡ (ತಾ) ತುಮಕೂರು (ಜಿಲ್ಲೆ)
೧೭ EC VOL-XII, 14, 1260, ಗುಂಡ್ಲಹಳ್ಳಿ, ಪಾವಗಡ (ತಾ) ತುಮಕೂರು (ಜಿಲ್ಲೆ)
೧೮ EC VOL-XII, 05, ಅರಳಿಕುಂಟೆ, ಪಾವಗಡ (ತಾ) ತುಮಕೂರು (ಜಿಲ್ಲೆ)
೧೯. ಶೇಷಶಾಸ್ತ್ರಿ ಆರ್: ಕರ್ನಾಟಕದ ವೀರಗಲ್ಲುಗಳು, ಪು-೧೩
೨೦. ಅದೇ, ಪು-೭೧

೨೧. ಶೇಷಶಾಸ್ತ್ರಿ ಆರ್: ಪೂರ್ವೋಕ್ತ, ಪು-೧೪

೨೨. ಅದೇ, ಪು-೧೮

೨೩. ಚಿದಾನಂದಮೂರ್ತಿ ಎಂ: ೧೯೮೪, ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು-೪-೭

೨೪. ಶೇಷಶಾಸ್ತ್ರಿ ಆರ್: ಪೂರ್ವೋಕ್ತ, ಪು-೩೮

೨೫. ಚಿದಾನದ ಮೂರ್ತಿ ಎಂ: ೧೯೮೪, ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು-೧೫

೨೬. ಪರಶಿವಮೂರ್ತಿ ಡಿ.ವಿ: ೧೯೯೯, ಕನ್ನಡ ಶಾಸನಶಿಲ್ಪಗಳು, ಪು-೧೩೮

ಅಧ್ಯಾಯ–ನಾಲ್ಕು

ವಾಸ್ತುಶಿಲ್ಪ

ಅಧ್ಯಾಯ-ನಾಲ್ಕು

ವಾಸ್ತುಶಿಲ್ಪ

ಮಾನವನಿಗೆ ಅಲೆದಾಡುವ ಪ್ರವೃತ್ತಿಯಿಂದ ಒಂದೆಡೆ ನೆಲೆ ನಿಲ್ಲಲು ಆರಂಭಿಸಿದಾಗಿನಿಂದ ಅವನು ವಾಸಿಸಿಲು ತನಗನುಕೂಲವಾಗುವ ರೀತಿಯಲ್ಲಿ ಗೃಹ ನಿರ್ಮಿಸಲು ಆರಂಭಿಸಿದನು. ಇಲ್ಲಿಂದಲೇ ವಾಸ್ತುಶಿಲ್ಪವು ಆರಂಭವಾಯಿತೆನ್ನಬಹುದು/ ಸಾಮಾನ್ಯವಾಗಿ ವಾಸ್ತು ಎಂದರೆ ಕಟ್ಟಡ. ಮನುಷ್ಯ ಹಾಗೂ ದೇವತೆಗಳು ವಾಸ ಮಾಡುವ ಸ್ಥಳ ಅಥವಾ ವಾಸಕ್ಕೆ ಮನೆಯನ್ನು ಕಟ್ಟಲು ಯೋಗ್ಯವಾದ ಭೂಮಿ. ಇಂತಹ ಕಟ್ಟಡಗಳು ದೇವಾಲಯಗಳಾಗಿರಬಹುದು, ಕೋಟೆಕೊತ್ತಲಗಳಾಗಿರಬಹುದು. ವಾಸ್ತುಶಿಲ್ಪ ಎಂಬ ಪರಿಭಾಷೆಗೆ ವಿಶಾಲವಾದ ಅರ್ಥವ್ಯಾಪ್ತಿ ಇದ್ದರೂ, ಸಾಮಾನ್ಯವಾಗಿ ದೇವಾಲಯಗಳು ಮಾತ್ರ ವಾಸ್ತುಶಿಲ್ಪಗಳಾಗಿ ಕಣ್ಮುಂದೆ ನಿಲ್ಲುತ್ತವೆ. ಸ್ತೂಪ, ಚೈತ್ಯ ವಿಹಾರ, ಬಸದಿ, ಮಸೀದಿ, ಚರ್ಚು, ಕೆರೆ-ಕಟ್ಟೆ, ಬರುಜು, ಕೋಟೆ ಹಾಗೂ ಮನೆಗಳಂತಹ ಎಲ್ಲಾ ರಚನೆಗಳು ವಾಸ್ತುಶಿಲ್ಪಗಳೇ ಹಾಗಿವೆ.[೧] ಶುಕ್ರನ ನೀತಿಗ್ರಂಥವು ದೇವಾಲಯ, ಅರಮನೆ ಅಥವಾ ರಾಜಗೃಹ, ದೇವತಾಮೂರ್ತಿಗಳ ರಚನೆ, ಸರ್ವಜನೋಪಯೋಗಿ ಗೃಹಗಳು, ಬಾವಿ, ಪುಷ್ಕರಣಿ ಮುಂತಾದವುಗಳು ಶಿಲ್ಪಶಾಸ್ತ್ರದಡಿಯಲ್ಲಿ ಗುರುತಿಸುತ್ತದೆ.[೨] ವಾಸ್ತುವಿನ ಜೊತೆಜೊತೆಗೆ ಶಿಲ್ಪವು ಶಿಲ್ಪಿಯ ಅಭಿರುಚಿಗೆ ಅನುಗುಣವಾಗಿ ವಾಸ್ತುವಿಗೆ ವಿವಿಧ ಭಾಗಗಳಲ್ಲಿ ವ್ಯಕ್ತವಾಗಿರುವುದನ್ನು ನಾವು ಕಾಣುತ್ತೇವೆ. ವಾಸ್ತು ಮತ್ತು ಶಿಲ್ಪಗಳೆರೆಡೂ ಕಲಾಸೌಂದರ್ಯದ ಪ್ರತೀಕವಾಗಿವೆ. ಇವು ಆರಂಭದಿಂದಲೂ ಜೊತೆಜೊತೆಯಾಗಿಯೇ ಬೆಳೆದು ಬಂದಿರುವುದನ್ನು ಕಾಣಬಹುದಾಗಿದೆ.

ವಾಸ್ತುಶಿಲ್ಪವು ಪ್ರಾಚೀನ ನಾಗರೀಕತೆಗಳಾದ ಈಜಿಪ್ಟ್ ಮತ್ತು ಮೆಸಪಟೋಮಿಯನ್ನರ ಕಾಲದಿಂದಲೇ ಕಂಡುಬರುತ್ತವೆ. ಅವರು ದೇವಾಲಯಗಳನ್ನು ರಚಿಸಲು ಹಾಗೂ ಬೃಹತ್ತಾದಂತಹ ಪರಿಮಿಡ್ಡುಗಳ ರಚನೆಯನ್ನು ಕಾಣಬಹುದಾಗಿದೆ. ಭಾರತದಲ್ಲಿ ಸಿಂಧೂ

ನದಿ ನಾಗರೀಕತೆಯಲ್ಲಿ ಹಲವು ಕಟ್ಟಡಗಳು ಕಂಡುಬಂದಿವೆ. ಇವುಗಳು ದೇವಾಲಯಗಳೆನ್ನಬಹುದಾದ ರಚನೆ ಕಾಣುವುದಿಲ್ಲ. ಭಾರತೀಯ ಚರಿತ್ರೆಯಲ್ಲಿ ವಾಸ್ತುರೂಪದಲ್ಲಿ ಮೊದಲು ದೊರೆಯುವುದು ಬೌದ್ಧ ಮತ್ತು ಜೈನ ಧರ್ಮಗಳು ಅಸ್ಥಿತ್ವಕ್ಕೆ ಬಂದ ನಂತರ ಈ ಧರ್ಮಗಳಿಗೆ ಸಂಬಂಧಿಸಿದ ಸೂಪ್ತ ಮತ್ತು ಚೈತ್ಯಗಳು ಆರಂಭದ ವಾಸ್ತು ಶಿಲ್ಪಕ್ಕೆ ಸಾಕ್ಷಿಗಳಾಗಿವೆ. ಸ್ತೂಪವೆಂದರೆ ಸತ್ತವರ ಸ್ಮಾರಕವಾಗಿ ಭೂಗತ ಮಾಡಿದ ಕಳೇಬರಹದ ಮೇಲೆ ಕಟ್ಟಿದ ಗೋಲಾಕಾರರ ದಿಬ್ಬ ಇವುಗಳು ಬೃಹತ್ ಶಿಲಾ ಸಂಸ್ಕೃತಿಯ ಸಮಾದಿ ಕಲ್ಪನೆಯ ಮುಂದುವರೆದ ಹಂತದಿಂದ ಈ ಸೂಪ್ತಗಳ ರಚನೆಯಾಗಿರಬಹುದೆಂದು ಹೇಳಬಹುದಾಗಿದೆ. ನಂತರ ಶಾತವಾಹನರು, ಮೌರ್ಯರ ಕಾಲದ ಕಟ್ಟಡಗಳ ರಚನೆಯು ಕಂಡು ಬರುತ್ತದೆ. ಗುಪ್ತರ ಕಾಲದಲ್ಲಿ ನಿರ್ಧಿಷ್ಟವಾಗಿ ದೇವಾಲಯ ವಾಸ್ತುವಿನ ರಚನೆ ಕಾಣಬಹುದಾಗಿದೆ. 'ವಾಸ್ತು'ಶಿಲ್ಪವನ್ನು ದೇವಾಲಯಕ್ಕೂ ಹಾಗೂ 'ಶಿಲ್ಪ' ಎಂಬುದನ್ನು ಮೂರ್ತಿಗಳಿಗೆ ಅನ್ವಯವಾಗುವಂತೆ ಅನುಕ್ರಮದಲ್ಲಿ ಬಳಸುತ್ತಾರೆ. ಈ ವಾಸ್ತುಶಿಲ್ಪವನ್ನು ಅಧ್ಯಯನದ ದೃಷ್ಠಿಯಿಂದ ೧. ದೇವಾಲಯ ವಾಸ್ತುಶಿಲ್ಪ, ೨. ರಕ್ಷಣಾ ವಾಸ್ತುಶಿಲ್ಪ ಎಂಬುದಾಗಿ ವಿಭಾಗಿಸಲಾಗಿದೆ.

೪೧ ದೇವಾಲಯ ವಾಸ್ತುಶಿಲ್ಪ

ದೇವಾಲಯಗಳು ಚರಿತ್ರೆಯ ರಚನೆಯಲ್ಲಿ ಪರಿಣಾಮಕಾರಿ ಮಾಧ್ಯಮಗಳಾಗಿ ಕಾರ್ಯನಿರ್ವಹಿಸುತ್ತವೆ. ಇವುಗಳು ಮಾನವನ ಚರಿತ್ರೆ ಮತ್ತು ಅವನ ಕಾಲದ ವಿಭಿನ್ನ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಸಾಮಾನ್ಯವಾಗಿ ದೇವಾಲಯ ಎಂದರೆ ದೇವರು ಇರುವ ಸ್ಥಳ ಅಥವಾ ಆಲಯ, ಆಲಯ ಅಂದರೆ ಕಟ್ಟಡವೆಂದರ್ಥ ದೇವರು ಇರತಕ್ಕ ಸ್ಥಾನ, ಎಡೆ, ಜಾಗ, ಎಂದರ್ಥ.[೩] ದೇವಾಲಯವು ಧಾರ್ಮಿಕ ಶ್ರದ್ಧೆಯ ಪ್ರಮುಖ ಅಂಶವಾಗಿದೆ. ಇದಕ್ಕೆ ತನ್ನದೇ ಆದ ಸಂಸ್ಕೃತಿ ಭವ್ಯ ಪರಂಪರೆ ಇದೆ. ದೇವಾಲಯವು ಜನರ ಭಕ್ತಿ ಮತ್ತು ನಿಷ್ಠೆಗಳ ಪ್ರತೀಕವಾಗಿದೆ. ಇಂತಹ ದೇವಾಲಯಗಳು ಚರಿತ್ರೆಯ ರಚನೆಯಲ್ಲಿ ಪ್ರಮಾಣಯೋಗ್ಯವಾದ ಆಕರಗಳಾಗಿ ಬಳಕೆಯಾಗಲ್ಪಡುತ್ತವೆ.

ದೇವಾಲಯಗಳ ಉಗಮವು ಕ್ರಿಶಕೆಗೂ ಮುನ್ನವೆ ರಚನೆಗೊಂಡಂತಹವೆಂಬುದಾದರು ಅವುಗಳ ಸ್ವರೂಪ ವ್ಯಕ್ತವಾಗುವುದಿಲ್ಲ. ಕ್ರಿ.ಪೂ.೩೦೦೦ವರ್ಷಗಳಷ್ಟು ಹಿಂದಿನ ಹರಪ್ಪ ಮತ್ತು ಮಹೆಂಜೋದಾರೋ ಉತ್ಖನನಗಳಲ್ಲಿ ಸಾರ್ವತ್ರಿಕ ಕಟ್ಟಡಗಳು ದೊರೆತರೂ, ದೇವಾಲಯಗಳೆನ್ನಬಹುದಾದ ರಚನೆ ಕಾಣುವುದಿಲ್ಲ. ಇಲ್ಲಿ ಹಲವು ಮೂರ್ತಿಗಳು ದೊರೆತವು. ಇವುಗಳಲ್ಲಿ ಮಾತೃದೇವತಾರಧನೆ, ಪಶುಪತಿ ಮೊದಲಾದವನ್ನು ಪೂಜಿಸುತ್ತಿದ್ದರು. ಇವುಗಳಿಂದ ನಮಗೆ ಒಂದಂಶ ಸ್ಪಷ್ಟವಾಗುತ್ತದೆ ದೇವಾಲಯಗಳ ರಚನೆಗೂ ಪೂರ್ವದಲ್ಲಿ ಮೂರ್ತಿಶಿಲ್ಪದ ಬೆಳವಣಿಗೆ ಹಾಗೂ ಆರಾಧನೆ ಇತ್ತೆಂದು ಹೇಳಬಹುದು. ಇದಕ್ಕೆ ಪುಷ್ಠಿ ನೀಡುವಂತೆ ವೇದ

ರಾಮಾಯಣ, ಮಹಾಭಾರತದ ಕಾವ್ಯಗಳಲ್ಲಿ ಉಲ್ಲೇಖಗಳಿವೆ. ಮೂರ್ತಿ ಆರಾಧನೆಯು ಆರಂಭವಾದ ಬಳಿಕ ಅದರ ರಕ್ಷಣೆಗಾಗಿ ವಾಸ್ತುರೂಪ ನೀಡಲಾಯಿತು.

ಭಾರತದ ಚರಿತ್ರೆಯಲ್ಲಿ ದೇವಾಲಯದ ರೂಪಗಳು ಜೈನ ಮತ್ತು ಬೌದ್ಧ ಧರ್ಮಗಳ ಅಸ್ಥಿತ್ವಕ್ಕೆ ಬಂದನಂತರ. ಈ ಧರ್ಮಗಳಿಗೆ ಸಂಬಂಧಿಸಿದ ಸ್ತೂಪ ಚೈತ್ಯಾಲಯಗಳು ಆರಂಭದ ಧಾರ್ಮಿಕ ಕಟ್ಟಡ ವಾಸ್ತುವಿಗೆ ಸಾಕ್ಷಿಗಳಾಗಿವೆ.[೪] ಇದನ್ನು ಬೃಹತ್ ಶಿಲಾಸಂಸ್ಕೃತಿಯ ಸಮಾದಿಯ ಮುಂದುವರೆದ ಹಂತವಾಗಿರುವುದನ್ನ ಗಮನಿಸಬಹುದು. ದಕ್ಷಿಣ ಭಾರತದಲ್ಲಿ ವೃತ್ತಾಕಾರದ ಈ ರೀತಿಯ ಸಮಾಧಿ ದಿಬ್ಬಗಳನ್ನು ಅವುಗಳ ಸುತ್ತಲೂ ಕಲ್ಲುಗಳಿಂದ ನಿರ್ಮಿತವಾದ ವೃತ್ತವನ್ನು ಕಾಣಬಹುದು.[೫] ಕರ್ನಾಟಕದಲ್ಲೂ ಈ ರೀತಿಯ ಕಟ್ಟಡಗಳು ಶಾತವಾಹನರ ಕಾಲದಲ್ಲಿ ಅನೇಕ ನೆಲೆಗಳಲ್ಲಿ ಕಂಡುಬಂದಿವೆ. ಬ್ರಹ್ಮಗಿರಿ, ಚಂದ್ರವಳ್ಳಿ ಬನವಾಸಿ, ಪಟ್ಟದಕಲ್ಲು, ಐಹೊಳೆ, ಸನ್ನತಿ, ಉತ್ಖನನಗಳಲ್ಲಿ ಕಟ್ಟಡಗಳು ದೊರೆತಿವೆ.

ಕಟ್ಟಡ ರೂಪದ ದೇವಾಲಯಗಳನ್ನ ಗುಪ್ತರ ಕಾಲದಲ್ಲಿ ಕಾಣಬಹುದು. ಇಂತಹ ಪ್ರಾರಂಭದ ದೇಗುಲಗಳನ್ನು ಮರ, ಬೊಂಬು, ಮಣ್ಣು, ಇಟ್ಟಿಗೆಗಳಿಂದ ನಿರ್ಮಿಸುತ್ತಿದ್ದರು. ನಂತರ ಕಾಲದಲ್ಲಿ ಶಿಲೆಯನ್ನು ಬಳಸಿ ದೇವಾಲಯವನ್ನು ನಿರ್ಮಿಸಲು ಆರಂಭಿಸಿದರು.

ಕರ್ನಾಟಕದಲ್ಲಿ ಕದಂಬರ ಕಾಲದಲ್ಲಿ ಶಿಲಾವಸ್ತುವಿನಿಂದ ನಿರ್ಮಿಸಿದ ದೇವಾಲಯಗಳನ್ನು ಕಾಣಬಹುದು. ಕ್ರಿ.ಶ ೩ನೇ ಶತಮಾದಿಂದ ಹಿಡಿದು ಮೈಸೂರು ಒಡೆಯರವರೆಗಿನ ಅವಧಿಯ ವಾಸ್ತುಶಿಲ್ಪಕಲೆಯ ಉಗಮ ಮತ್ತು ವಿಕಾಸದ ಹೆಜ್ಜೆಗಳನ್ನು ಗುರ್ತಿಸಬಹುದು. ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿಚಾಲುಕ್ಯರು, ಹೊಯ್ಸಳರು ಹಾಗೂ ವಿಜಯನಗರ ಸಾಮ್ರಾಜ್ಯದ ಪ್ರಸಿದ್ಧ ಅರಸು ಮನೆತನಗಳು ಪ್ರತ್ಯೇಕ ವಾಸ್ತು ಶೈಲಿಗಳನ್ನು ಅಳವಡಿಸಿಕೊಂಡು ವಿಪುಲ ಸಂಖ್ಯೆಯಲ್ಲಿ ದೇವಾಲಯಗಳನ್ನು ನಿರ್ಮಿಸಿರುವುದು ಕಾಣಬಹುದಾಗಿದೆ. ಇವರು ದೇವಾಲಯಗಳ ನಿರ್ಮಾಣಕ್ಕೆ ವಿವಿಧ ಪ್ರದೇಶಗಳಲ್ಲಿ ಲಭ್ಯವಿರುವ ಮರಳು ಶಿಲೆ, ಕಣಶಿಲೆ, ಅಗ್ನಿಶಿಲೆ, ಸುಣ್ಣಶಿಲೆ, ಮೊದಲಾದವುಗಳನ್ನು ಬಳಸಿದರು[೬] ಇವರು ಉತ್ತರದ ನಾಗರ, ದಕ್ಷಿಣದ ದ್ರಾವಿಡ ಶೈಲಿಗಳನ್ನು ಮೈಗೂಡಿಸಿಕೊಂಡು ವೇಸರವೆಂಬ ನೂತನ ಶೈಲಿಯನ್ನು ಹುಟ್ಟು ಹಾಕಿ, ಹೆಚ್ಚು ಹೆಚ್ಚು ಸಾಕ್ಷಮತೆಯನ್ನು ಅಳವಡಿಸಿದ ಶಿಲ್ಪಗಳ ಪ್ರಪಂಚದ ವಾಸ್ತುಕಲೆಯ ಸಾಲಿನಲ್ಲಿ ನಿಲ್ಲಬಲ್ಲ ಸಾಮರ್ಥ್ಯ ಕರ್ನಾಟಕಕ್ಕೆ ತಂದುಕೊಟ್ಟರು.

ವಿಜಯನಗರ ಸಾಮ್ರಾಜ್ಯದ ಏಳಿಗೆ ಮತ್ತು ಖ್ಯಾತಿಗೆ ಅವರ ಕಾಲದ ರಾಜಕೀಯ ಸಾಂಸ್ಕೃತಿಕ ಚರಿತ್ರೆಯಲ್ಲಿ ಅಮರ ನಾಯಕರು ಅಥವಾ ಪಾಳೆಯಗಾರರ ಪ್ರಮುಖ ಪಾತ್ರ ವಹಿಸಿದ್ದು, ಇವರು ಸಹ ಹಲವಾರು ದೇವಾಲಯಗಳನ್ನು ನಿರ್ಮಿಸಿರುವರು. ಪಾವಗಡ ಪರಿಸರದ ದೇವಾಲಯಗಳು ಹೆಚ್ಚಾಗಿ ನೊಳಂಬರು, ನಿಡುಗಲ್ಲಿನ ಚೋಳರು ಹಾಗೂ

ಪಾವಗಡ ಪಾಳೆಗಾರರ ಕಾಲದಲ್ಲಿ ನಿರ್ಮಾಣವಾಗಿವೆ. ಈ ಪರಿಸರದಲ್ಲಿ ಹೆಚ್ಚಾಗಿ ಶೈವ ಮತ್ತು ವೈಷ್ಣವ ಪಂಥದ ದೇವಾಲಯಗಳು ಹೆಚ್ಚಾಗಿ ಕಂಡುಬರುತ್ತವೆ. ಪಾವಗಡ ಪರಿಸರದಲ್ಲಿ ಕಂಡು ಬರುವ ಪ್ರಮುಖ. ದೇವಾಲಯಗಳನ್ನ ಈ ಕೆಳಕಂಡಂತೆ ನೋಡಬಹುದು.

ಈಶ್ವರ ದೇವಾಲಯ

ಈ ದೇವಾಲಯವು ಪಾವಗಡ ನಗರದಿಂದ ಬೆಟ್ಟಕ್ಕೆ ಹೋಗುವ ದಾರಿಯಲ್ಲಿ ಬೆಟ್ಟದ ಕೆಳಗೆ ಕಂಡುಬರುತ್ತದೆ. ಇದು ಪೂರ್ವಾಭಿಮುಖವಾಗಿದ್ದು, ಪಾಳೆಯಗಾರರ ಕಾಲದಲ್ಲಿ ರಚನೆಯಾದಂತಹದ್ದಾಗಿದೆ. ಇದು ಯಾವುದೇ ಅಲಂಕಾರವಿಲ್ಲದೇ ಸಾಧಾರಣವಾಗಿದೆ. ಈ ದೇವಾಲಯವು ಗರ್ಭಗುಡಿ ಹಾಗೂ ತೆರೆದ ಮಂಟಪವನ್ನು ಒಳಗೊಂಡಿದೆ ಇದಕ್ಕೆ ಹೊಂದಿಕೊಂಡಂತೆ ಪ್ರದಕ್ಷಿಣ ಪಥ ನಂತರ ಪ್ರಾಕಾರಗೊಡೆ ರಚಿಸಲಾಗಿದೆ. ಈ ದೇವಾಲಯದ ಗರ್ಭಗುಡಿಯು ಚೌಕಾಕಾರವಾಗಿದ್ದು ಸುಮಾರು ೩ ಅಡಿ ಎತ್ತರದ ಶಿವಲಿಂಗವಿದೆ ಇದಕ್ಕೆ ಜಲಹರಿ ಕಂಡುಬರುವುದಿಲ್ಲ. ಇದನ್ನು ಕಪ್ಪು ಗ್ರಾನೇಡ್ ಶಿಲೆಯಿಂದ ರಚಿಸಿದ್ದಾರೆ. ಗರ್ಭಗೃಹ ಯಾವುದೇ ಅಲಂಕಾರವಿಲ್ಲದೆ ಸಾಧಾರಣವಾಗಿದೆ. ಗರ್ಭಗೃಹದ ದ್ವಾರದ ಲಲಾಟಬಿಂಬದಲ್ಲಿ ಭೈರವನ ಅಸ್ಪಷ್ಟ ಮೂರ್ತಿ ಕೆತ್ತಲಾಗಿದೆ. ದ್ವಾರ ಪಾದದ ಇಕ್ಕೆಲಗಳಲ್ಲಿ ಶೈವ ದ್ವಾರಪಾಲಕರಿದ್ದು ಇವರ ಕೈಗಳಲ್ಲಿ ಆಯುಧಗಳನ್ನಿಡಿದು ನಿಂತಿದ್ದಾರೆ. ತೆರೆದ ಮಂಟಪವು ಚೌಕಾಕಾರವಾಗಿದೆ. ಇಲ್ಲಿ ಶಿವಲಿಂಗವನ್ನೇ ನೋಡುತ್ತಿರುವಂತೆ ಗ್ರಾನೇಟ್ ಕಲ್ಲಿನಿಂದ ಕೆತ್ತಲಾದ ೩ ಅಡಿ ಎತ್ತರದ ನಂದಿಯನ್ನು ನೋಡಬಹುದು ಕೊರಳಲ್ಲಿ ಗಂಟೆಯಿದ್ದು ತಲೆಯ ಮೇಲೆ ತಲೆಪಟ್ಟಿ ಕಂಡುಬರುತ್ತದೆ. ತೆರೆದ ಮಂಟಪದಲ್ಲಿ ಎರಡು ಕಂಬಗಳಿದ್ದು ಇವು ಸಾಧಾರಣವಾಗಿವೆ. ಮೇಲ್ಭಾಗವನ್ನು ಗಾರೆಯಿಂದ ನಿರ್ಮಿಸಿದ್ದು ಅಲ್ಲಿ ಕೋಷ್ಠಕವನ್ನು ರಚಿಸಿದ್ದಾರೆ. ಇದರಲ್ಲಿ ಭೈರವನ ನಗ್ನ ಮೂರ್ತಿಯನ್ನು ನಿರ್ಮಿಸಿದ್ದಾರೆ. ಜಟಾಧಾರಿಯಾದ ಭೈರವನು ಬಲಗೈಗಳಲ್ಲಿ ತ್ರಿಶೂಲ, ಕತ್ತಿ ಹಿಡಿದಿದ್ದು ಎಡಗೈಗಳಲ್ಲಿ ಒಂದು ಕೈಯಲ್ಲಿ ರುಂಡ, ಡಮರನ್ನು ಹಿಡಿದಿದ್ದಾನೆ. ಕಂಠಹಾರ, ಜನಿವಾರ ಸೊಂಟಪಟ್ಟಿಯನ್ನು ಹೊಂದಿರುವನು. ಕಾಲಲ್ಲಿ ಕಾಲ್ಕಡಗವಿದೆ. ತೆರೆದ ಮಂಟಪಕ್ಕೆ ಹೊಂದಿಕೊಂಡಂತೆ ಪ್ರದಕ್ಷಿಣ ಪಥವಿದೆ. ಮುಖ್ಯದ್ವಾರದಲ್ಲಿ ದ್ವಾರ ಮಂಟಪವಿದೆ. ಕುಳಿತುಕೊಳ್ಳಲು ಎತ್ತರವಾದ ಜಗಲಿಯನ್ನು ರಚಿಸಿದ್ದಾರೆ.

ಗುಂಡ್ಲಹಳ್ಳಿ ಈಶ್ವರ ದೇವಾಲಯ

ದೇವಾಲಯವು ಗುಂಡ್ಲಹಳ್ಳಿಯ ದಕ್ಷಿಣಕ್ಕಿರುವ ಚಿಕ್ಕ ಕೆರೆಯ ಬಳಿ ಇದ್ದು ಪೂರ್ವಾಭಿಮುಖವಾಗಿದೆ. ಇದು ನಿಡುಗಲ್ಲಿನ ಚೋಳರ ಕಾಲದಲ್ಲಿ ರಚನೆಯಾದಂತಹ ದೇವಾಲಯವಾಗಿದ್ದು. ಇದನ್ನು ಬಿಳಿಮಿಶ್ರಿತ ಕೆಂಪು ಗ್ರಾನೈಟ್‌ಶಿಲೆಯಿಂದ ನಿರ್ಮಿಸಿದ್ದಾಗಿದೆ. ಈ ಈಶ್ವರ ದೇವಾಲಯವು ಚೌಕಾಕಾರದ ತಳವಿನ್ಯಾಸ ಹೊಂದಿದ್ದು ಇದೊಂದು ಏಕಕೂಟ

ದೇವಾಲಯವಾಗಿದೆ. ಗರ್ಭಗೃಹ ಅಂತರಾಳ, ನವರಂಗ ಭಾಗವನ್ನು ಈ ದೇವಾಲಯವು ಒಳಗೊಂಡಿದೆ. ಗರ್ಭಗೃಹ ಚೌಕಾಕಾರದಲ್ಲಿದ್ದು ಗರ್ಭಗೃಹದಲ್ಲಿ ಇಂದು ಪೀಠವಿದೆ ಆದರೆ ಯಾವುದೇ ಮೂರ್ತಿ ಕಂಡು ಬರುವುದಿಲ್ಲ. ಇದು ಶಿಥಿಲಾವಸ್ಥೆಯಲ್ಲಿದೆ ಯಾವುದೇ ಪೂಜೆ ಪುನಸ್ಕಾರಗಳು ನಡೆಯುವುದಿಲ್ಲ. ಇದರ ಬಾಗಿಲು ವಾಡದಲ್ಲಿ ಸಾಮಾನ್ಯ ರಚನೆಗಳಾದ ಅರ್ಧಕಂಬ, ಪಟ್ಟಿಕೆ, ಹೂವಿನ ಎಸಳು ಹಾಗೂ ಪುಷ್ಪ ಅಲಂಕರಣೆಗಳು ಇವೆ. ಲಲಾಟದಲ್ಲಿ ನಂದಿಯ ಉಬ್ಬುಶಿಲ್ಪವಿದೆ. ಅಂತರಾಳವು ಚೌಕಾಕಾರವಾಗಿದ್ದು ಗರ್ಭಗೃಹದ ದ್ವಾರದಂತೆ ಅರ್ಧಗಂಬ ಪಟ್ಟಿಕೆ, ಹೂವಿನ ಅಲಂಕಾರವನ್ನು ನೋಡಬಹುದು. ಲಲಾಟದಲ್ಲಿ ಗಣಪತಿಯ ಉಬ್ಬು ಶಿಲ್ಪ ಕಂಡುಬರುತ್ತದೆ. ಅಂತರಾಳದ ಇಕ್ಕೆಲುಗಳಲ್ಲಿ ಶೈವ ದ್ವಾರಪಾಲಕರಿರುವರು ಇವರು ಚತುರ್ಭುಜ ದಾರಿಯಾಗಿದ್ದು; ಕಿರೀಟ ಮುಕುಟದಾರಿಯಾಗಿ ಕೈಗಳಲ್ಲಿ ತ್ರಿಶೂಲ ಮತ್ತೊಂದು ಕೈಯಲ್ಲಿ ಡಮರುಗ ಕೆಳಭಾಗದ ಕೈಗಳಲ್ಲಿ ಅಭಯ ಅಸ್ತ ತೋರುತ್ತಿರುವಂತೆ ಖಂಡರಿಸಲಾಗಿದೆ. ಕಿವಿಯಲ್ಲಿ ಕುಂಡಲಿಗಳು ಭುಜಪಟ್ಟಿಕೆ, ಎದೆಯಲ್ಲಿ ಎದೆಹಾರ, ಕೈ ಕಡಗಗಳನ್ನು ಹೊಂದಿದ್ದು ಯಜ್ಞೋಪವೀತ ಹಾಗೂ ಮೊಣಕಾಲಿನವರೆಗೆ ವಸ್ತ್ರವನ್ನು ಉಡಿಸಲಾಗಿದೆ. ಕಾಲಲ್ಲಿ ಕಾಲ್ಕಡಗವನ್ನು ಕೆತ್ತಲಾಗಿದೆ.

ನವರಂಗವು ಸರಳವಾದ ನಾಲ್ಕು ಕಂಬಗಳಿಂದ ಕೂಡಿದೆ. ಈ ನಾಲ್ಕು ಕಂಬಗಳು ಕೆಳಭಾಗದಲ್ಲಿ ಚೌಕಾಕಾರದ ರಚನೆ, ಅಷ್ಟಾಕೃತಿ, ಚೌಕಾಕಾರ ಇದರ ಮೇಲೆ ಮೇಲ್ಭಾವಣಿ ಮತ್ತು ಕಂಬದ ಮಧ್ಯಭಾಗದಲ್ಲಿ ಬೋಧಿಗೆಗಳನ್ನು ರಚನೆ ಮಾಡಲಾಗಿದೆ. ಇದರ ಎಡಭಾಗ ಶಿಥಿಲವಾಗಿದೆ. ನವರಂಗದ ಒಂದು ಕಂಬದ ಮೇಲೆ ಕ್ರಿ.ಶ.೧೨೬೦ರ ಒಂದು ಶಾಸನವಿದೆ. ಇದು ನಿಡುಗಲ್ಲಿನ ಚೋಳರ ಇರಂಗೋಳ ದೇವನಿಗೆ ಸಂಬಂಧಿಸಿದುದಾಗಿದ್ದು ಇವನ ಮಗ, ಮೊಮ್ಮೊಕ್ಕಳು ಬೇರ ಸಮುದ್ರಕ್ಕೆ ಭೂಮಿ ಧಾನ ನೀಡಿರುವ ಉಲ್ಲೇಖವಿದೆ. ಹೊರಭಾಗದ ದ್ವಾರವು ಸರಳವಾಗಿದ್ದು ಒಳಗಿನ ಬಾಗಿಲುಗಳಿಗೆ ಹೋಲಿಸಿದ್ದಲ್ಲಿ ಇದು ಚಿಕ್ಕದಾಗಿದೆ. ಈ ದೇವಾಲಯದ ಅದಿಷ್ಟಾನವು ಜಗತಿ, ತ್ರಿಪಟ್ಟಿ ಕುಮುದ ಭಾಗಗಳನ್ನು ಒಳಗೊಂಡಿದೆ. ಗರ್ಭಗುಡಿಯಿಂದ ಜಲ ಹರಿದುಹೋಗಲು ದೇವಾಲಯದ ಎಡಭಾಗದಲ್ಲಿದೆ.[೬] ಇದರ ಮೇಲಿನ ಭಿತ್ತಿ ಸರಳವಾಗಿದ್ದು ಯಾವುದೇ ಅಲಂಕಾರವಿಲ್ಲ. ಪ್ರಸ್ತರವು ಸರಳವಾಗಿದ್ದು ಯಾವುದೇ ರೀತಿಯ ಶಿಖರ ಕಂಡು ಬರುವುದಿಲ್ಲ.

ಗುಂಡ್ಲಾರಹಳ್ಳಿಯ ಈಶ್ವರ ದೇವಾಲಯ

ಇದು ಗುಂಡಾರ್ಲಹಳ್ಳಿಯ ಆಂಜನೇಯ ಸ್ವಾಮಿಯ ದೇವಾಲಯದ ಪ್ರಾಕಾರದ ಒಳಗೆ ಈಶಾನ್ಯ ದಿಕ್ಕಿನಲ್ಲಿರುವ ಮೆಟ್ಟಿಲುಗಳನ್ನಿಳಿದು ಹೋದರೆ ಅಲ್ಲಿ ಕಂಡುಬರುತ್ತದೆ. ಇದು ಪೂರ್ವಾಭಿಮುಖವಾಗಿದೆ. ಈ ದೇವಾಲಯವು ಪಾಳೇಗಾರರ ನಂತರ ಕಾಲದಲ್ಲಿ ರಚನೆಗೊಂಡಂತಹ ದೇವಾಲಯವಾಗಿದೆ. ಈ ದೇವಾಲಯವು ಇತ್ತೀಚೆಗೆ ಜೀರ್ಣೋದ್ಧಾರಗೊಂಡಿದೆ.

ಈ ದೇವಾಲಯದ ತಳವಿನ್ಯಾಸದಲ್ಲಿ ಗರ್ಭಗುಡಿ ಹಾಗೂ ಮುಖಮಂಟಪವನ್ನು ಹೊಂದಿದೆ. ಗರ್ಭಗುಡಿಯು ಚೌಕಾಕಾರವಾಗಿದ್ದು, ನಯಗೊಳಿಸಿದ ಕಲ್ಲುಗಳಿಂದ ನಿರ್ಮಿಸಲಾಗಿದೆ. ಗರ್ಭಗುಡಿಯು ಚೌಕಕಾರವಾಗಿದ್ದು ಸುಮಾರು ೪ ಅಡಿ ಎತ್ತರದ ಶಿವಲಿಂಗ ಕಂಡುಬರುತ್ತದೆ. ಲಿಂಗದ ಎಡಭಾಗಕ್ಕೆ ಜಲಹರಿಯಿದೆ. ಇದನ್ನು ಕೆಂಪು ಬಳಪದ ಕಲ್ಲಿನಿಂದ ರಚಿಸಲಾಗಿದೆ. ಗರ್ಭಗುಡಿಯ ಭುವನೇಶ್ವರದಲ್ಲಿ ಚಕ್ರದ ಅಲಂಕಾರವನ್ನು ಹಾಗೂ ಚೌಕಾಕಾರವಾಗಿ ಕಲ್ಲುಗಳನ್ನಿಟ್ಟು ರಚಿಸಲಾಗಿದೆ. ಇದರ ದ್ವಾರದಲ್ಲಿ ಯಾವುದೇ ರೀತಿಯ ಕೆತ್ತನೆ ಕಾಣುವುದಿಲ್ಲ. ನಂತರ ಮುಖ ಮಂಟಪವನ್ನು ನೋಡಬಹುದು ಇದು ಚೌಕಾಕಾರವಾಗಿದ್ದು ಯಾವುದೇ ಅಲಂಕಾರವಿಲ್ಲದೆ ಸಾಧಾರಣವಾಗಿದೆ. ಈ ಮುಖ ಮಂಟಪದಲ್ಲಿ ಸುಮಾರು ೨೧/೨ ಅಡಿ ಎತ್ತರದ ನಂದಿ ಇದೆ. ಇದಕ್ಕೆ ಕೊರಳಲ್ಲಿ ಗಂಟೆ ಹಾಗೂ ಮೈಮೇಲೆ ಗಂಟೆಯನ್ನು, ತಲೆಗೆ ತಲೆಪಟ್ಟಿ, ಕೊರಳಲ್ಲಿ ಹಾಗೂ ತಲೆಯ ಮೇಲೆ ಹಾರಗಳನ್ನು ನೋಡಬಹುದಾಗಿದೆ. ಇತ್ತೀಚೆಗೆ ಈ ದೇವಾಲಯವು ಜೀರ್ಣೋದ್ಧಾರಗೊಂಡಿದೆ.

ವೇಣುಗೋಪಾಲಸ್ವಾಮಿ ದೇವಾಲಯ

ವೇಣುಗೋಪಾಲ ಸ್ವಾಮಿ ದೇವಾಲಯವು ಪಾವಗಡ ನಗರದ ಪ್ರಮುಖ ಮತ್ತು ಹಳೆಯ ದೇವಾಲಯಗಳಲ್ಲೊಂದಾಗಿದೆ. ಇದನ್ನು ನಗರದ ಎರಡನೇ ಸುತ್ತಿನ ಕೋಟೆಯೊಳಗೆ ನಿರ್ಮಿಸಲಾಗಿದೆ. ಈ ದೇವಾಲಯದಿಂದ ನೇರವಾಗಿ ಬೆಟ್ಟದ ಮೇಲೆ ಹೋಗಲು ದಾರಿಯಿದೆ. ಇದು ಪೂರ್ವಾಭಿಮುಖವಾಗಿದ್ದು, ವಿಜಯನಗರ ನಂತರ ಪಾಳೇಗಾರರ ಕಾಲದಲ್ಲಿ ನಿರ್ಮಾಣವಾದಂತಹ ದೇವಾಲಯವಾಗಿದೆ. ಇದು ದ್ರಾವಿಡಶೈಲಿಯ ಶಿಖರವನ್ನು ಹೊಂದಿದ್ದು ಇತ್ತೀಚೆಗೆ ಜೀರ್ಣೋದ್ಧಾರಗೊಂಡಿದೆ.

ಗರ್ಭಗೃಹ ಈ ದೇವಾಲಯವು ಅಂತರಾಳ, ನವರಂಗ, ತೆರೆದಮಂಟಪಗಳನ್ನು, ಒಳಗೊಂಡಿದೆ. ದೇವಾಲಯದ ಅವರಣದಲ್ಲಿ ಕೆಲವೊಂದು ಹೊಸ ಕಟ್ಟಡಗಳನ್ನು ನಿರ್ಮಿಸಿದ್ದಾರೆ. ಗರ್ಭಗೃಹ ಚಚ್ಚೌಕವಾಗಿದ್ದು ಗರ್ಭಗೃಹದಲ್ಲಿ ಸುಮಾರು ೩ ಅಡಿ ಎತ್ತರದ ವೇಣುಗೋಪಾಲ ಸ್ವಾಮಿಯ ಸುಂದರ ಮೂರ್ತಿಯನ್ನು ಕಾಣಬಹುದು. ಪಕ್ಕದಲ್ಲಿ ಲಕ್ಷ್ಮಿ ಹಾಗೂ ಸತ್ಯಭಾಮೆಯರ ಮೂರ್ತಿಗಳು ಕಂಡುಬರುತ್ತವೆ. ಈ ಮೂರ್ತಿಯ ಕೈಯಲ್ಲಿ ಚಕ್ರ, ಹೂವು, ಮತ್ತೊಂದರಲ್ಲಿ ವೇಣುವನ್ನು ನುಡಿಸುತ್ತಿರುವಂತೆ ಇದೆ. ಇದರ ಕೆಳಭಾಗದ ಪೀಠದಲ್ಲಿ ಎರಡು ಕಡೆ ಹಸುಗಳು ತಮ್ಮ ಕರುಗಳಿಗೆ ಹಾಲುಣಿಸುತ್ತಿರುವಂತೆ ಖಂಡರಿಸಲಾಗಿದೆ. ಇದನ್ನು ಕಪ್ಪು ಗ್ರಾನ್ಯೆಟ್ ಶಿಲೆಯಿಂದ ನಿರ್ಮಿಸಿದ್ದಾರೆ. ಭುವನೇಶ್ವರಿಯಲ್ಲಿ ಕಮಲದ ಕೆತ್ತನೆ ಮಾಡಿದ್ದಾರೆ. ಗರ್ಭಗುಡಿಯ ಮೇಲೆ ದ್ವಿತಳ ಶಿಖರವಿದೆ. ಈ ಶಿಖರದ ನಾಲ್ಕು ದಿಕ್ಕುಗಳಲ್ಲಿ ಕೋಷ್ಠಕಗಳನ್ನು ರಚಿಸಿದ್ದು ಅದರಲ್ಲಿ ಕೃಷ್ಣ, ನವಿಲು, ವೇಣುಗೋಪಾಲನ ಗಾರೆಯ ಶಿಲ್ಪಗಳನ್ನು

ನೋಡಬಹುದು. ಇದು ಇತ್ತೀಚೆಗೆ ರಚನೆಗೊಂಡಂತಹ ಶಿಖರವಾಗಿದೆ. ಗರ್ಭಗೃಹದ ಗೋಡೆಯು ನಯವಾಗಿ ಕೆತ್ತಿದ ಕಲ್ಲುಗಳಿಂದ ಕಟ್ಟಿದ್ದಾರೆ ಇದಕ್ಕೆ ಪ್ರದಕ್ಷಿಣಪಥವಿಲ್ಲ. ಈ ದೇವಾಲಯವು ಎರಡು ಅಂತರಾಳಗಳನ್ನು ಹೊಂದಿದೆ. ಇವು ಚೌಕಾಕಾರವಾಗಿದ್ದು ಇಲ್ಲಿ ಯಾವುದೇ ರೀತಿಯ ಅಲಂಕಾರವಿರುವುದಿಲ್ಲ. ಎರಡನೇ ಅಂತರಾಳದ ಬಾಗಿಲುವಾಡದಲ್ಲಿ ಹೂಬಳ್ಳಿಯ ರಚನೆ ಕಾಣಬಹುದು ನಂತರದಲ್ಲಿ ನವರಂಗವು ಚೌಕಾಕಾರವಾಗಿದ್ದು ಉತ್ತರ, ಪೂರ್ವ ಹಾಗೂ ದಕ್ಷಿಣದ ದಿಕ್ಕುಗಳಲ್ಲಿ ಇದಕ್ಕೆ ದ್ವಾರಗಳಿವೆ. ಉತ್ತರ–ದಕ್ಷಿಣದ ದ್ವಾರಗಳಲ್ಲಿ ಕುಂಬಪಂಜರದ ಅಲಂಕಾರ ಕಾಣಬಹುದಾಗಿದೆ. ನವರಂಗದ ಲಲಾಟಬಿಂಬದಲ್ಲಿ ಕಮಲದ ಕೆತ್ತನೆ ಮಾಡಿದ್ದಾರೆ. ದ್ವಾರಪಾದದಲ್ಲಿ ವಿಷ್ಣುವಿನ ದ್ವಾರಪಾಲಕರಿದ್ದು ಇವರ ಕೈಗಳಲ್ಲಿ ಶಂಕು, ಚಕ್ರ, ಗದೆಯನ್ನು ಹಿಡಿದಿದ್ದು ಮತ್ತೊಂದು ಕೈ ಅಭಯವನ್ನು ನೀಡುತ್ತಿರುವಂತೆ ಇದೆ. ಈ ದೇವಾಲಯದ ನವರಂಗವು ನಾಲ್ಕು ಕಂಬಗಳಿಂದ ಕೂಡಿದ್ದು ಇವು ವಿಜಯನಗರ ನಂತರ ಕಾಲದ ಪಾಳೇಗಾರರ ಕಾಲದಲ್ಲಿ ರಚನೆಗೊಂಡ ಕಂಬಗಳಾಗಿವೆ. ಈ ನಾಲ್ಕು ಕಂಬಗಳ ಕೆಳಭಾಗದಲ್ಲಿ ಚೌಕಾಕಾರದ ರಚನೆ ನಂತರ ಅಷ್ಠ ಮುಖ, ಚೌಕ, ಅಷ್ಠಮುಖ ಫಲಕ ಹಾಗೂ ಪದ್ಮದ ಮೊಗ್ಗಿನಾಕಾರದ ಬೋದಿಗೆಯನ್ನು ಹೊಂದಿವೆ. ಈ ಕಂಬಗಳ ಮೇಲೆ ಎಡ ಮತ್ತು ಬಲಭಾಗದ ಕಂಬಗಳ ಮೇಲೆ ಕೆಲವು ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ. ಬಲಭಾಗದ ಕಂಬಗಳಲ್ಲಿ ಆಂಜನೇಯ, ನವಿಲು, ಜಿಂಕೆಯ, ಶಿಲ್ಪಗಳಿದ್ದರೆ ಎಡಭಾಗದ ಕಂಬದಲ್ಲಿ ಕಮಲದ ಹೂವು, ನವಿಲು, ಜಿಂಕೆಯ ಉಬ್ಬು ಶಿಲ್ಪಗಳನ್ನು ನೋಡಬಹುದಾಗಿದೆ. ನವರಂಗದ ಭುವನೇಶ್ವರಿಯಲ್ಲಿ ಮುಗುಚಿದ ಪದ್ಮದ ಕೆತ್ತನೆಯನ್ನು ಕಾಣಬಹುದಾಗಿದೆ.

ನವರಂಗಕ್ಕೆ ಹೊಂದಿಕೊಂಡಂತೆ ಮುಖಮಂಟಪ ಅಥವಾ ತೆರೆದ ಮಂಟಪವಿದೆ. ಇದು ಎತ್ತರದ ಅದಿಷ್ಠಾನವನ್ನು ಹೊಂದಿದ್ದು ಇದು ಸಾಧಾರಣವಾಗಿ ರಚಿತವಾಗಿದೆ. ಈ ತೆರೆದ ಮಂಟಪಕ್ಕೆ ಸುಮಾರು ಐದು ಮೆಟ್ಟಿಲುಗಳನ್ನು ಹತ್ತಿ ಹೋಗಬೇಕು. ಈ ತೆರೆದ ಮಂಟಪವು ಸುಮಾರು ೧೨ಕಂಬಗಳಿಂದ ಕೂಡಿದೆ. ಇವುಗಳು ಸಾಧಾರಣವಾಗಿದ್ದು ಕೆಳಭಾಗದಲ್ಲಿ ಚೌಕ ಅಷ್ಟ ಮುಖ, ಚೌಕ, ಅಷ್ಟ ಮುಖ ಚೌಕ ಬೋದಿಗೆ ಇದರ ಮೇಲೆ ಅಡ್ಡ ತೊಲೆಯ ಕಂಬಗಳ ಮೇಲೆ ಮೇಲ್ಛಾವಣಿ ರಚಿಸಿದ್ದಾರೆ. ಇದರ ಲಲಾಟಬಿಂದಲ್ಲಿ ಕಮಲದ ಕೆತ್ತನೆ ಕಾಣಬಹುದು. ದ್ವಾರದ ಇಕ್ಕೆಲಗಳಲ್ಲಿ ವಿಷ್ಣುವಿನ ದ್ವಾರಪಾಲಕರನ್ನು ರಚಿಸಿದ್ದು ಇವರು ಕೈಗಳಲ್ಲಿ ಶಂಕು, ಚಕ್ರ, ಗಧೆಯನ್ನು ಹೊಂದಿರುವರು, ಗರ್ಭಗೃಹ, ಅಂತರಾಳ, ನವರಂಗ, ತೆರೆದ ಮಂಟಪಕ್ಕೆ ಹೊಂದಿಕೊಂಡಂತೆ ಪ್ರದಕ್ಷಿಣಪಥವನ್ನು ಕಾಣಬಹುದಾಗಿದೆ. ಈ ದೇವಾಲಯದ ಅದಿಷ್ಟಾವು ಸುಮಾರು ೪ ಅಡಿ ಎತ್ತರವಾಗಿದ್ದು ಸಾಧಾರಣವಾಗಿದೆ. ಭಿತ್ತಿಯ ಭಾಗದಲ್ಲಿ ಹಲವಾರು ಉಬ್ಬು ಶಿಲ್ಪಗಳು ಕಂಡು ಬರುತ್ತವೆ. ಅವುಗಳಲ್ಲಿ ವ್ಯಾಳಿ,

ಗ್ರಂಥಾಲಯ.
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಉರಗ, ನವಿಲು, ಮೀನು ಹಾಗೂ ಮಿಥುನ ಶಿಲ್ಪಗಳ ಉಬ್ಬುಶಿಲ್ಪಗಳನ್ನು ಗಾರೆಯಲ್ಲಿ ರಚನೆ ಮಾಡಲಾಗಿದೆ. ಗರ್ಭಗುಡಿಯ ಮೇಲ್ಭಾಗದಲ್ಲಿ ಶಿಖರವಿದ್ದು ಇದು ಇತ್ತೀಚಿಗೆ ರಚನೆಗೊಂಡಿದೆ. ತೆರೆದ ಮಂಟಪದ ಮುಂಬಾಗದಲ್ಲಿ ಬಲಿಪೀಠ, ಮತ್ತೊಂದು ಚಿಕ್ಕ ಕೋಷ್ಠಕವಿದ್ದು ಇದರಲ್ಲಿ ಯಾವುದೇ ವಿಗ್ರಹಗಳಿಲ್ಲ. ಇದರ ಮುಂಭಾಗದಲ್ಲಿ ಸುಮಾರು ೧೩ ಅಡಿಯ ದೀಪಸ್ತಂಭವಿದೆ. ಇದರ ಮುಂದೆ ಎರಡು ಗರುಡ ಸ್ತಂಭಗಳನ್ನು ರಚಿಸಿದ್ದಾರೆ.

ಈ ದೇವಾಲಯಕ್ಕೆ ಸುತ್ತಲೂ ಪ್ರಾಕಾರಗೋಡೆಯನ್ನು ರಚಿಸಿದ್ದು ದಕ್ಷಿಣ ಮತ್ತು ಪೂರ್ವ ಭಾಗದಲ್ಲಿ ದ್ವಾರಗಳಿವೆ. ಪೂರ್ವ ದಿಕ್ಕಿನಲ್ಲಿರುವುದು ಮುಖ್ಯದ್ವಾರವಾಗಿದೆ. ಈ ಮುಖ್ಯದ್ವಾರದ ಎಡ ಮತ್ತು ಬಲಭಾಗದಲ್ಲಿ ಮಂಟಪಗಳನ್ನು ರಚಿಸಿದ್ದು ಇವು ಕಲ್ಯಾಣ ಮಂಟಪ ಮತ್ತು ಪಾಕಶಾಲೆಗಳಾಗಿವೆ. ಇವುಗಳನ್ನು ಇತ್ತೀಚೆಗೆ ನಿರ್ಮಿಸಲಾಗಿದೆ.

ಈ ದೇವಾಲಯದ ಮುಖ್ಯದ್ವಾರವು ಸುಮಾರು ಐದು ಅಡಿ ಅಗಲ ೧೨ ಅಡಿ ಎತ್ತರವಾಗಿದೆ. ಇದು ಸಾಧಾರಣವಾಗಿದ್ದು ಯಾವುದೇ ಅಲಂಕಾರವಿಲ್ಲ ಲಲಾಟಬಿಂದಲ್ಲಿ ಯಾವುದೇ ಚಿತ್ರಗಳ ಕೆತ್ತನೆ ಕಂಡುಬರುವುದಿಲ್ಲ. ಈ ದ್ವಾರದ ಪಕ್ಕದ ಗೋಡೆಯು ನಯವಾಗಿ ಕೆತ್ತಿದ ಪ್ರಮಾಣಬದ್ದ ಕಲ್ಲುಗಳಿಂದ ನಿರ್ಮಿಸಿದ್ದಾರೆ. ಇದಕ್ಕೆ ಹೊಂದಿಕೊಂಡಂತೆ ದ್ವಾರಮಂಟಪವನ್ನು. ೮ ಕಂಬಗಳಿಂದ ನಿರ್ಮಿಸಿದ್ದು, ಕೂರಲು ಜಗುಲಿ ನಿರ್ಮಿಸಿದ್ದಾರೆ. ದ್ವಾರದ ಮೇಲ್ಭಾಗದಲ್ಲಿ ಗಾರೆಯಿಂದ ವಜ್ರಪಟ್ಟಿಗಳು ಹಾಗೂ ಅದರ ಮೇಲ್ಭಾಗದಲ್ಲಿ ದ್ವಿತಳ ಶಿಖರವನ್ನು ದ್ರಾವಿಡ ಶೈಲಿಯಲ್ಲಿ ರಚಿಸಿದ್ದಾರೆ. ಶಿಖರದ ಗ್ರೀವ ಭಾಗದಲ್ಲಿ ಕೋಷ್ಠಕ ರಚಿಸಿದ್ದು ಅದರಲ್ಲಿ ಗೋವಿನ ಸಮೇತನಾಗಿರುವ ಕೃಷ್ಣನನ್ನು ಗಾರೆಯಲ್ಲಿ ರಚಿಸಿದ್ದಾರೆ.

ಕಣಿವೆ ಶ್ರೀ ಲಕ್ಷ್ಮಿನರಸಿಂಹ ದೇವಾಲಯ

130201

ಕಣಿವೆ ಲಕ್ಷ್ಮೀನರಸಿಂಹ ದೇವಾಲಯವು ಪಾವಗಡದಿಂದ ದಕ್ಷಿಣಕ್ಕೆ ೧ಕಿ.ಮೀ ದೂರದಲ್ಲಿ ತುಮಕೂರಿನ ರಸ್ತೆಯ ರಾಷ್ಟ್ರೀಯ ಹೆದ್ದಾರಿ ೩ರ ಪಕ್ಕದಲ್ಲಿ ಕಂಡುಬರುತ್ತದೆ. ಈ ದೇವಾಲಯವು ಪಶ್ಚಿಮಾಭಿಮುಖವಾಗಿದ್ದು ಹೆಸರೇ ಸೂಚಿಸುವಂತೆ ಈ ದೇವಾಲಯವು ಎರಡು ಬೆಟ್ಟಗಳ ಮಧ್ಯದಲ್ಲಿ ಪೂರ್ವಬೆಟ್ಟದ ಹುಟ್ಟ ಬಂಡೆಯಲ್ಲಿ ಕಂಡುಬರುತ್ತದೆ. ಇದು ದ್ರಾವಿಡ ಶೈಲಿಯ ಶಿಖರವನ್ನು ಹೊಂದಿದ್ದು, ಪಾಳೆಯಗಾರರ ನಂತರ ಕಾಲದಲ್ಲಿ ನಿರ್ಮಾಣವಾಗಿರಬಹುದೆಂದು ತಿಳಿದುಬರುತ್ತದೆ. ಪ್ರಸ್ತುತ ಈ ದೇವಾಲಯವು ಜೀರ್ಣೋದ್ದಾರಗೊಂಡಿದೆ. ದೇವಾಲಯದ ತಳವಿನ್ಯಾಸದಲ್ಲಿ ಗರ್ಭಗೃಹ ಅಂತರಾಳ, ಮುಖಮಂಟಪ ಅದರ ಸುತ್ತಲೂ ಪ್ರದಕ್ಷಿಣಾಪಥ ಪ್ರಾಕಾರಗೋಡೆಯ ಜೊತೆಗೆ ಕಲ್ಯಾಣ ಮಂಟಪಗಳನ್ನು ಅವಲೋಕನದಿಂದ ತಿಳಿಯಬಹುದಾಗಿದೆ. ಕಲ್ಯಾಣ ಮಂಟಪ ಇತ್ತೀಚೆಗೆ ರಚನೆಗೊಂಡುದುದಾಗಿದೆ.

ಈ ದೇವಾಲಯದ ಗರ್ಭಗುಡಿಯು ಚೌಕಾಕಾರವಾಗಿದ್ದು ಸರಳತೆಯಿಂದ ಕೂಡಿದೆ. ಗರ್ಭಗೃಹದಲ್ಲಿ ಸುಮಾರು ೩ ಅಡಿಯ ಎತ್ತರದ ಬಂಡೆಯಲ್ಲಿಯೇ ಉದ್ಭವವಾದ ಮೂರ್ತಿ ಕಂಡುಬರುತ್ತದೆ. ಇದನ್ನು ನರಸಿಂಹಸ್ವಾಮಿಯೆಂದು ಪೂಜಿಸಲಾಗುತ್ತಿದೆ. ಆದರೆ ಈ ಮೂರ್ತಿಯು ಅಸ್ಪಷ್ಟವಾಗಿದ್ದು, ತನ್ನ ಎರಡೂ ಕೈಗಳನ್ನು ಜೋಡಿಸಿರುವಂತೆ ಕಂಡುಬರುತ್ತದೆ. ಬಾಗಿಲುವಾಡದ ಲಲಾಟಬಿಂಬದಲ್ಲಿ ಯಾವುದೇ ರೀತಿಯ ಕೆತ್ತನೆ ಕಾಣುವುದಿಲ್ಲ. ಗರ್ಭಗೃಹದ ಬಾಗಿಲಲ್ಲಿ ನಕ್ಷತ್ರಾಕಾರದ ಅಲಂಕಾರ ಗಾರೆಯಿಂದ ಮಾಡಲಾಗಿದೆ. ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯಲ್ಲಿ ರಚಿತವಾದಂತಹ ಶಿಖರ ಕಾಣಬಹುದಾಗಿದೆ.

ಗರ್ಭಗೃಹಕ್ಕೆ ಹೊಂದಿಕೊಂಡಂತೆ ಅಂತರಾಳವಿದೆ. ಇದು ಚೌಕಕಾರದ್ದಾಗಿದ್ದು, ಅದರ ದ್ವಾರವು ಸರಳತೆಯಿಂದ ಕೂಡಿದೆ. ದ್ವಾರದ ಪಾದದಲ್ಲಿ ವಿಷ್ಣುವಿನ ದ್ವಾರಪಾಲಕರಿದ್ದಾರೆ. ಈ ದ್ವಾರಪಾಲಕರನ್ನು ಗಾರೆಯಿಂದ ರಚಿಸಲಾಗಿದೆ. ಲಲಾಟದಲ್ಲಿ ಕಮಲವನ್ನು ಕೆತ್ತಲಾಗಿದೆ. ಅದರ ಮೇಲ್ಭಾಗದಲ್ಲಿ ಗಾರೆಯಿಂದ ನಿರ್ಮಿಸಿದ ಎಲೆಯಾಕಾರದ ಅರ್ಧ ಕಮಾನುಗಳನ್ನು ರಚಿಸಲಾಗಿದೆ.

ನಂತರ ತೆರೆದ ಮಂಟಪ ಕಂಡುಬರುತ್ತದೆ. ಇದು ಚೌಕಾಕಾರವಾಗಿದ್ದು ಅಂತರಾಳದಿಂದ ಮುಂದುವರೆದ ಭಾಗವಾಗಿದೆ. ಇದು ಗರ್ಭಗೃಹ ಮತ್ತು ಅಂತಾಳಕ್ಕಿಂತ ವಿಶಾಲವಾಗಿದ್ದು. ಇಲ್ಲಿ ಯಾವುದೇ ಅಲಂಕಾರ ಕಂಡುಬರುವುದಿಲ್ಲ. ಇಲ್ಲಿ ಎರಡು ಸಾಲುಗಳಲ್ಲಿ ಒಟ್ಟು ೧೨ ಕಂಬಗಳನ್ನು ಹೊಂದಿದೆ. ಈ ತೆರೆದ ಮಂಟಪಕ್ಕೆ ಇತ್ತೀಚಿಗೆ ಕಬ್ಬಿಣದ ಬಾಗಿಲನ್ನು ಹೊಸದಾಗಿ ಜೋಡಿಸಲಾಗಿದೆ. ಇಲ್ಲಿಯ ಕಂಬಗಳು ವಿಜಯನಗರ ಶೈಲಿಯಲ್ಲಿ ರಚನೆಗೊಂಡಿವೆ. ಕೆಳಭಾಗದ ಪೀಠ, ಕಾಂಡಭಾಗದಲ್ಲಿ ಚೌಕಾಕಾರವಾಗಿದ್ದು, ಇದರ ಮೇಲೆ ೧೬ಮುಖ, ಅಷ್ಟಕೋನ, ಇದರ ಮೇಲೆ ಬೋದಿಗೆಯನ್ನು ಹೊಂದಿದೆ. ಈ ಮುಖಮಂಟಪಕ್ಕೆ ಹೊಂದಿಕೊಂಡಂತೆ ಮುಂಭಾಗದಲ್ಲಿ ಗೂಡನ್ನು ಮಾಡಿದ್ದು ಅಲ್ಲಿ ಗಣೇಶನ ಮೂರ್ತಿ ಪ್ರತಿಷ್ಠಾಪಿಸಿದ್ದಾರೆ ಇದು ಇತ್ತೀಚಿನ ಜೋಡಣೆಯಾಗಿದೆ.

ಇವುಗಳಿಗೆ ಹೊಂದಿಕೊಂಡಂತೆ ಪ್ರದಕ್ಷಿಣ ಪಥವನ್ನು ಕಾಣಬಹುದು ಮುಂಭಾಗದಲ್ಲಿ ಹಲವಾರು ಚಿಕ್ಕಚಿಕ್ಕ ವಿಗ್ರಹಳನ್ನಿಡಲಾಗಿದೆ. ನಂತರ ಪ್ರಾಕಾರಗೋಡೆಗೆ ಅಂಟಿಕೊಂಡಂತೆ ಕಂಬಗಳಿಂದಾವೃತವಾದ ವಿಶಾಲ ಮಂಟಪಗಳನ್ನು ನೋಡಬಹುದು. ಎಡಭಾಗದಲ್ಲಿ ಕಲ್ಯಾಣಮಂಟಪ ಹಾಗೂ ಬಲಭಾಗದಲ್ಲಿ ಪಾಕಶಾಲೆಯನ್ನು ನೋಡಬಹುದು ಇವುಗಳು ಇತ್ತೀಚೆಗೆ ರಚನೆಗೊಂಡಿರಬಹುದು.

ಇಲ್ಲಿಂದ ಮುಂದೆ ಮುಖ್ಯ ಪ್ರವೇಶದ್ವಾರವಿದ್ದು ಇದು ದ್ವಾರ ಮಂಟಪವನ್ನು ಹೊಂದಿದೆ. ಈ ಮಂಟಪವು ೨ ಕಂಬಗಳಿಂದ ಕೂಡಿದೆ. ಇಲ್ಲಿ ಕುಳಿತುಕೊಳ್ಳಲು ಕಕ್ಷಾಸನವಿದೆ.

ಮುಖ್ಯದ್ವಾರದ ಮುಂಭಾಗದಲ್ಲಿ ಕಲ್ಲಿನಿಂದ ಮಾಡಿದ ಅಲಂಕೃತ ಆನೆಗಳನ್ನು ರಚಿಸಿದ್ದಾರೆ. ಲಲಾಟಬಿಂಬದಲ್ಲಿ ಕಮಲದ ಕೆತ್ತನೆ ಕಾಣಬಹುದಾಗಿದೆ. ಈ ದ್ವಾರದ ಮೇಲೆ ಇತ್ತೀಚೆಗೆ ನಿರ್ಮಾಣಗೊಂಡಂತಹ ಗೋಪುರ ಕಾಣಬಹುದಾಗಿದೆ. ಇದರಲ್ಲಿ ವಿಷ್ಣುವಿನ ಅವತಾರ ಮೂರ್ತಿಗಳನ್ನು ಗಾರೆಯಿಂದ ರಚಿಸಲಾಗಿದೆ. ಈ ದ್ವಾರಕ್ಕೆ ತಾಗಿದಂತೆ ಪ್ರಕಾರ ಗೋಡೆಯ ಹೊರಭಾಗದ ಮೇಲ್ಭಾಗದಲ್ಲಿ ಗರುಡನ ಉಬ್ಬುಶಿಲ್ಪವನ್ನು ನೋಡಬಹುದು. ಇಲ್ಲಿ ಗರಡ ಮಲಗಿರುವಂತೆ ರಚಿಸಲಾಗಿದೆ. ಪ್ರವೇಶದ್ವಾರದ ಎಡ ಮತ್ತು ಬಲಭಾಗದಲ್ಲಿ ಚಿಕ್ಕ ಗೂಡುಗಳನ್ನು ಬಿಡಲಾಗಿದೆ. ಬಹುಷಾ ಇದು ವಸ್ತುಗಳನ್ನಿಡಲು ರಚಿಸಿರಬಹುದು. ಮುಖ್ಯದ್ವಾರದ ಮುಂಭಾಗದಲ್ಲಿ ಸುಮಾರು ೧೪ ಅಡಿ ಎತ್ತರದ ದೀಪಸ್ತಂಭವಿದೆ. ಇದು ಕೆಳಗೆ ಚೌಕಾಕಾರವಾಗಿದ್ದು ಮೇಲೆ ಅಷ್ಟಕೋನ ಚೌಕ, ವೃತ್ತಕಾರ ಅದರ ಮೇಲೆ ದೀಪದ ವ್ಯವಸ್ಥೆ ಮಾಡಲಾಗಿದೆ. ಇದರ ಮುಂಭಾಗದಲ್ಲಿ ಪುಷ್ಕರಣಿ ಇದ್ದು ಪ್ರಸ್ತುತ ನೀರು ಕಂಡುಬರುವುದಿಲ್ಲ.

ಕೋಟೆ ಆಂಜನೇಯ ಸ್ವಾಮಿ ದೇವಾಲಯ

ಪಾವಗಡ ನಗರದ ಎರಡನೇ ಸುತ್ತಿನ ಕೋಟೆಯ ಒಳಭಾಗದಲ್ಲಿ ಈ ದೇವಾಲಯವಿದೆ. ಈ ಆಂಜನೇಯ ದೇವಾಲಯವು ದಕ್ಷಿಣಾಭಿಮುಖವಾಗಿದ್ದು; ಇದು ಕೋಟೆಯ ಒಳಭಾಗದಲ್ಲಿದ್ದರಿಂದ ಇದನ್ನು ಕೋಟೆ ಆಂಜನೇಯ ದೇವಾಲಯವೆಂದು ಕರೆಯುತ್ತಾರೆ. ಇದು ಪಾಳೆಯಗಾರರ ಕಾಲದಲ್ಲಿ ನಿರ್ಮಾಣವಾಗಿದ್ದು ಪ್ರಸ್ತುತ ಜೀರ್ಣೋದ್ಧಾರಗೊಂಡಿದೆ. ಗರ್ಭಗುಡಿಯನ್ನು ಬಿಟ್ಟು ಮಿಕ್ಕೆಲ್ಲಾ ಭಾಗವನ್ನು ಹೊಸದಾಗಿ ನಿರ್ಮಿಸಲಾಗಿದೆ. ಗರ್ಭಗೃಹದ ವಿಗ್ರಹವು ದಕ್ಷಿಣಾಭಿಮುಖವಾಗಿ ಪೂರ್ವಭಾಗಕ್ಕೆ ತನ್ನ ಮುಖವನ್ನು ತಿರುಗಿಸಿದೆ. ಇದು ಸುಮಾರು ೧೩ ಅಡಿಯ ಎತ್ತರವಿದ್ದು ಅಕ್ಷಯನನ್ನು ಸಂಹಾರ ಮಾಡುತ್ತಿರುವಂತೆ ಉಗ್ರರೂಪದಲ್ಲಿ ಖಂಡರಿಸಲಾಗಿದೆ. ವಿಗ್ರಹದ ಮೇಲ್ಭಾಗದಲ್ಲಿ ಶಂಖ, ಚಕ್ರ, ಸೂರ್ಯ, ಚಂದ್ರರ ಚಿಹ್ನೆಗಳನ್ನು ಬಿಡಿಸಿದ್ದಾರೆ. ಗರ್ಭಗೃಹವು ಚೌಕಾಕಾರವಾಗಿದ್ದು ಯಾವುದೇ ಅಲಂಕಾರವಿಲ್ಲ. ಗರ್ಭ ಗೃಹದ ಸುತ್ತ ಸಾಂದರ ಮಾದರಿಯ ಪ್ರದಕ್ಷಿಣ ಪಥ ಕಂಡುಬರುತ್ತದೆ. ಗರ್ಭಗುಡಿಯ ಮುಂದೆ ನಾಲ್ಕು ಕಂಬಗಳಿಂದ ಕೂಡಿದ ನವರಂಗವಿದ್ದು ಇದು ಈಗ ಜೀರ್ಣೋದ್ದಾರಗೊಂಡಿದೆ. ಗರ್ಭಗುಡಿಯ ಭಿತ್ತಿಯಲ್ಲಿ ಹಲವು ಉಬ್ಬು ಶಿಲ್ಪಗಳನ್ನು ಕೆತ್ತಿದ್ದಾರೆ. ಇದರಲ್ಲಿ ಸ್ತ್ರೀಯರು, ಸ್ತ್ರೀಪುರುಷರು, ವರಹ, ಮೀನು, ಹುಲಿ, ನಕ್ಷತ್ರ ಮುಂತಾದ ಗರ್ಭಗುಡಿಯ ಭಿತ್ತಿಯಲ್ಲಿ ಕಾಣಬಹುದು. ನವರಂಗದ ಕಂಬಗಳು ಸಾಧಾರಣವಾಗಿದ್ದು ಕೆಳಭಾಗದಲ್ಲಿ ಪೀಠ, ಚೌಕ, ಅಷ್ಟಕೋನ, ಚೌಕಾಕಾರ ಇದರ ಮೇಲೆ ಬೋದಿಗೆ ಹೊಂದಿದೆ. ಇದರ ಮುಂಭಾಗದಲ್ಲಿ ಗರುಡಗಂಬವಿದೆ. ಇದರ ಕೆಳಭಾಗದಲ್ಲಿ

ವಿಜಯನಗರ ಕಾಲದ ಮಹಾಸತಿ ಶಿಲ್ಪವಿದೆ. ಇದರ ಮುಂಭಾಗದಲ್ಲಿ ದೇವಾಲಯದ ಸುತ್ತಲು ಈಗ ಪ್ರಾಕಾರ ಗೋಡೆಯನ್ನು ಕಟ್ಟಿದ್ದಾರೆ.

ಗುಂಡಾರ್ಲಹಳ್ಳಿಯ ಆಂಜನೇಯ ದೇವಾಲಯ

ಈ ದೇವಾಲಯವು ಗುಂಡಾರ್ಲಹಳ್ಳಿಯ ಗ್ರಾಮದ ದಕ್ಷಿಣಭಾಗದಲ್ಲಿದ್ದು ವಾಹನ ನಿಲ್ದಾಣಕ್ಕೆ ಸಮೀಪದಲ್ಲಿ ನಿರ್ಮಿಸಲಾಗಿದೆ. ಈ ದೇವಾಲಯವು ದಕ್ಷಿಣಾಭಿಮುಖವಾಗಿದೆ. ಇದು ಪಾಳೆಯಗಾರರ ಕಾಲದಲ್ಲಿ ನಿರ್ಮಾಣಗೊಂಡಿದೆ. ಪ್ರಸ್ಥುತ ಈ ದೇವಾಲಯವು ಇತ್ತೀಚೆಗೆ ಜೀರ್ಣೋದ್ದಾರಗೊಂಡಿದೆ. ಇದು ಗರ್ಭಗೃಹ ಮತ್ತು ಮುಖಮಂಟಪ ಹೊಂದಿದ್ದು ಇದರ ಸುತ್ತಲು ಪ್ರದಕ್ಷಿಣ ಪಥವಿದೆ. ನಂತರ ಮುಖ್ಯದ್ವಾರ ಇದರ ಸುತ್ತಲು ಪ್ರಾಕಾರ ಗೋಡೆಯನ್ನು ರಚಿಸಲಾಗಿದೆ. ಗರ್ಭಗುಡಿಯ ವಿಗ್ರಹವು ದಕ್ಷಿಣಾಭಿಮುಖವಾಗಿದ್ದು ಸುಮಾರು ೬ ಅಡಿಯ ಬಂಡೆಯ ಮೇಲೆ ಆಂಜನೇಯನ ವಿಗ್ರಹವನ್ನು ಕೆತ್ತಲಾಗಿದೆ. ಈ ವಿಗ್ರಹವು ಪೂರ್ವಕ್ಕೆ ಮುಖಮಾಡಿದ್ದು ರಾಕ್ಷಸನನ್ನು ಸಂಹಾರ ಮಾಡುತ್ತಿರುವಂತಹ ಉಗ್ರರೂಪದಲ್ಲಿ ಕೆತ್ತಲಾಗಿದೆ. ಗರ್ಭಗುಡಿಯು ಚೌಕಾಕಾರವಾಗಿದ್ದು ಯಾವುದೇ ಅಲಂಕಾರವಿಲ್ಲದ ಸಾಧಾರಣ ಕಂಬಗಳಿಂದ ಕೂಡಿದೆ.

ಗರ್ಭಗುಡಿಯ ಮುಂಭಾಗದಲ್ಲಿ ೧೨ ಕಂಬಗಳಿಂದ ಕೂಡಿದ ಮುಖಮಂಟಪ ಕಂಡುಬರುತ್ತದೆ. ದ್ವಾರದಲ್ಲಿ ಯಾವುದೇ ರೀತಿಯ ಅಲಂಕಾರವಿಲ್ಲದೇ ಸಾಧಾರಣವಾಗಿದೆ. ಮುಖಮಂಟಪದಲ್ಲಿ ೬ ಕಂಬಗಳು ಸುಂದರವಾಗಿವೆ. ೬ಕಂಬಗಳು ಸಾಧಾರಣವಾಗಿದೆ. ಇವುಗಳಲ್ಲಿ ಎರಡು ಮಾದರಿ ಅಲಂಕಾರವಿರುವ ಕಂಬಗಳನ್ನು ನೋಡಬಹುದು. ಕೆಳಗೆ ಚೌಕಾಕಾರ ಅದರ ಮೇಲೆ ಅಷ್ಠಕೋನ, ನಂತರ ವೃತ್ತಾಕಾರ ಅಷ್ಠಕೋನ, ವೃತ್ತಾಕಾರ, ಅಷ್ಠಕೋನ, ಚೌಕಾಕಾರ, ಅಷ್ಠಕೋನ ಇದರ ಮೇಲೆ ಪುಷ್ಪಬೋದಿಗೆಯನ್ನು ಕಾಣಬಹುದಾಗಿದೆ. ಮತ್ತೊಂದು ಮಾದರಿ ಕಂಬವು ಕೆಳಗೆ ಚೌಕಾಕಾರವಾಗಿದ್ದು ಮೇಲೆ ಅಷ್ಠಕೋನ ನಂತರ ೧೬ ಮುಖ, ಅಷ್ಟ ಮುಖ ನಂತರ ೧೬ನಂತರ ಅಷ್ಟ ಮುಖ ಇದರ ಮೇಲೆ ಚೌಕಾಕಾರ ನಂತರ ಅಷ್ಟ ಮುಖ ಇದಕ್ಕೆ ಎಲೆಯ ಅಲಂಕಾರ ಮಾಡಲಾಗಿದೆ. ಇದರ ಮೇಲೆ ಪುಷ್ಪ ಬೋದಿಗೆಯನ್ನು ರಚಿಸಿದ್ದಾರೆ. ಗರ್ಭಗುಡಿ ಮತ್ತು ಮುಖ ಮಂಟಪದ ಸುತ್ತ ಪ್ರದಕ್ಷಿಣ ಪಥವನ್ನು ಕಾಣಬಹುದಾಗಿದೆ.

ಈ ದೇವಾಲಯದ ಮುಖ್ಯದ್ವಾರವು ದಕ್ಷಿಣದ ಕಡೆ ಕಂಡುಬರುತ್ತದೆ. ಪಶ್ಚಿಮದ ಕಡೆ ಮತ್ತೊಂದು ದ್ವಾರ ಕಾಣಬಹುದಾಗಿದೆ. ಮುಖ್ಯದ್ವಾರದ ಹೊರಭಾಗದ ದ್ವಾರವು ನಾಗಬಂಧ ಹೊಂದಿದ್ದು ದ್ವಾರದ ಇಕ್ಕೆಲಗಳಲ್ಲಿ ಪೂರ್ಣಕುಂಭದ ಅಲಂಕಾರ ಕಾಣಬಹುದಾಗಿದೆ. ದ್ವಾರದ ಮೇಲೆ ಹೂವಿನ ಅಲಂಕಾರ ಹೊಂದಿದೆ. ಇದರ ಮೇಲ್ ಎರಡೂ ಕಡೆ ಗಜ

ಲಕ್ಷ್ಮಿಯ ಉಬ್ಬು ಶಿಲ್ಪಗಳನ್ನು ಗಾರೆಯಿಂದ ರಚಿಸಲಾಗಿದೆ. ಇದರ ಮೇಲ್ಭಾಗದಲ್ಲಿ ಎಲೆಯ ಕೆತ್ತನೆ ಮಾಡಿದ್ದು ಪಕ್ಕದಲ್ಲಿ ಹನುಮಂತ ಮತ್ತು ಗರುಡರ ಉಬ್ಬು ಶಿಲ್ಪಗಳನ್ನು ನೋಡಬಹುದು. ತುದಿಯಲ್ಲಿ ಪದ್ಮದ ಅಲಂಕಾರ ಹಾಗೂ ನಾಲ್ಕು ಸಿಂಹಗಳನ್ನು ಕೆಳಗಡೆ ಇಣುಕಿ ನೋಡುತ್ತಿರುವಂತೆ ರಚಿಸಲಾಗಿದೆ. ಇದರ ಕೆಳಭಾಗದಲ್ಲಿ ಗರುಡ ಕೈಮುಗಿದು ನಿಂತಿರುವಂತೆ ನಿರ್ಮಿಸಲಾಗಿದೆ. ಈ ದ್ವಾರವು ದ್ವಾರ ಮಂಟಪವನ್ನು ಹೊಂದಿದ್ದು ಇದು ಕೂರಲು ಎತ್ತರವಾದ ಜಗಲಿಯ ಮೇಲೆ ಎರಡು ಕಂಬಗಳಿಂದ ರಚನೆಗೊಂಡಿದೆ. ಈ ಕಂಬಗಳು ಚೌಕಾಕಾರ ಆಯತಾಕಾರ ಚೌಕ, ಅಷ್ಟ ಮುಖ, ಚೌಕ, ೮ ಮುಖ ಮತ್ತೇ ಬೋದಿಗೆಯನ್ನು ಹೊಂದಿದೆ. ಈ ಕಂಬಗಳಲ್ಲಿ ಕೆಲವು ಉಬ್ಬುಶಿಲ್ಪಗಳ ಕೆತ್ತನೆಯನ್ನು ಕಾಣಬಹುದು ಅದರಲ್ಲಿ ಹನುಮಂತ, ಗರುಡ, ಹೂವು, ನವಿಲಿನ ಶಿಲ್ಪಗಳಿವೆ ಮತ್ತೊಂದು ಕಂಬದಲ್ಲಿ ವ್ಯಾಳಿ, ಹೂವು, ಹನುಮಂತ, ಹೂವಿನ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಪ್ರಾಕಾರಗೋಡೆಯ ಒಳಭಾಗದಲ್ಲಿ ಇಂದು ಹಲವಾರು ಹೊಸ ಕಟ್ಟಡಗಳನ್ನು ರಚಿಸಲಾಗಿದೆ. ಮುಖ್ಯದ್ವಾರಕ್ಕೆ ಹೊಂದಿಕೊಂಡಂತೆ ಪ್ರಾಕಾರಗೋಡೆಯ ಮೇಲ್ಭಾಗದಲ್ಲಿ ಹಲವಾರು ಗಾರೆಯ ಉಬ್ಬು ಶಿಲ್ಪಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಕುದುರೆಯ ಮೇಲೆ ಕುಳಿತ ವೀರ ಕೈಯಲ್ಲಿ ಆಯುಧ ಹಿಡಿದಿರುವುದು ಇದರ ಹಿಂದೆ ಹುಲಿಯು ಇವರ ಮೇಲೆ ಆಕ್ರಮಣ ಮಾಡುವಂತೆ ಇರುವ ಉಬ್ಬುಶಿಲ್ಪ ಹಾಗೂ ಇನ್ನೂ ಹಲವು ಉಬ್ಬು ಶಿಲ್ಪಗಳನ್ನು ಗಾರೆಯಲ್ಲಿ ರಚಿಸಲಾಗಿದೆ.

೪.೨ ರಕ್ಷಣಾ ವಾಸ್ತುಶಿಲ್ಪ

ಸಾಮಾನ್ಯವಾಗಿ ಕೋಟೆ ಎಂದರೆ ಒಳಗಿರುವ ವ್ಯಕ್ತಿಗಳಿಗೆ, ವಸ್ತುಗಳಿಗೆ ಭದ್ರತೆ ಮತ್ತು ರಕ್ಷಣೆಯನ್ನು ಒದಗಿಸಿಕೊಡುವಂತಹದ್ದಾಗಿದೆ. ವಾಸ್ತವವಾಗಿ ಕೋಟೆ ಎಂದರೆ ರಕ್ಷಣಾ ಆವರಣವುಳ್ಳ ಪ್ರದೇಶ ಎಂದರ್ಥ. ಮುಖ್ಯವಾಗಿ ರಾಜನಿಗೆ ರಕ್ಷಣೆ ಒದಗಿಸುವ ಮಹತ್ವವಾದ ಸ್ಥಳವಾಗಿದೆ.[೭] ರಾಜ್ಯಗಳು ಉದಯವಾಗುವುದಕ್ಕೂ ಮುಂಚೆ ಎಲ್ಲಾ ಜನರು ಚಿಕ್ಕ ಗ್ರಾಮಗಳಲ್ಲಿ ವಾಸಿಸುತ್ತಿದ್ದರು ತಮ್ಮನ್ನು ತಮ್ಮ ಸಂಪತ್ತನ್ನು ಕಳ್ಳರಿಂದ, ವೈರಿಗಳಿಂದ, ಕಾಡು ಪ್ರಾಣಿಗಳಿಂದ ಸಂರಕ್ಷಿಸಿಕೊಳ್ಳಲು ಅವರು ಊರುಗಳ ಸುತ್ತಲೂ ಎತ್ತರವಾದ ಗೋಡೆ ಕಟ್ಟಲಾರಂಭಿಸಿದರು. ಇದಕ್ಕೂ ಮೊದಲು ಮರದ ಕೊಂಬೆಗಳಿಂದಲೂ ನಂತರ ಕಾಲದಲ್ಲಿ ಮಣ್ಣಿನ ಗೋಡೆಯನ್ನು ಕಟ್ಟಲಾರಂಭಿಸಿದರು. ನಂತರ ಗ್ರಾಮಗಳು ಬೆಳೆದು ಪಟ್ಟಣಗಳಾದಂತೆ, ಇವುಗಳೆಲ್ಲವೂ ಒಟ್ಟಾಗಿ ರಾಜ್ಯಸ್ಥಾಪನೆಯಾದ ಮೇಲೆ ಆಳುವ ರಾಜ ತನ್ನ ರಾಜ್ಯ ರಕ್ಷಿಸಿಕೊಳ್ಳಲು ಕೋಟೆಗಳನ್ನು ಕಟ್ಟಲಾರಂಭಿಸಿದನು. ಪ್ರಾಚೀನ ರಾಜನೀತಜ್ಞರು ಒಂದು ರಾಜ್ಯಕ್ಕೆ ಅತ್ಯವಶ್ಯಕವಾಗಿ ಸಪ್ತಾಂಗಗಳು ಬೇಕು ಎಂದು ತಿಳಿಸಿದ್ದಾರೆ. ಅವುಗಳೆಂದರೆ ಸ್ವಾಮಿ(ಪ್ರಭು) ಅಮಾತ್ಯ (ಮಂತ್ರಿ) ರಾಷ್ಟ್ರ (ಸಂಸ್ಥಾನ) ದುರ್ಗ(ಕೋಟೆ) ಕೋಶ (ಖಜಾನೆ) ದಂಡ (ಸೈನ್ಯ) ಮತ್ತು ಮಿತ್ರ

ರಾಜ್ಯಗಳಾಗಿವೆ. ಒಂದು ರಾಜ್ಯವನ್ನು ಕಟ್ಟಲು ಈ ಏಳು ಮೂಲತತ್ವಗಳಲ್ಲಿ ಕೋಟೆ ಮುಖ್ಯವೆಂದು ಭಾವಿಸಲಾಗಿದೆ. ಸಂಸ್ಕೃತ ಸಾಹಿತ್ಯದಲ್ಲಿ ಕೋಟೆಗಳನ್ನು ದುರ್ಗ ಎಂಬ ಹೆಸರಿನಿಂದ ಕರೆಯಲಾಗಿದೆ. ಇದರ ಅರ್ಥ ಹೊರಗಿನ ಶತೃಗಳಿಂದ, ಕ್ರೂರ ಪ್ರಾಣಿಗಳಿಂದ ರಕ್ಷಿಸಿಕೊಳ್ಳಬಹುದಾದ ಸ್ಥಳ ಎಂಬುದಾಗಿದೆ. ದುರ್ಗಂ ಎಂಬ ಪದವು ಅಜೇಯ ಅಥವಾ ಗೆಲ್ಲಲಾಗದ ಕೋಟೆಗಳನ್ನು ಸೂಚಿಸುವುದಾಗಿದೆ.[೮] ಹಳಗನ್ನಡದಲ್ಲಿ ಕೊಂಟೆ ಎಂಬ ಮೂಲರೂಪದಲ್ಲಿದ್ದು ಇದನ್ನು ಕೋಟೆ ಎಂದು ಹೊಸಗನ್ನಡದಲ್ಲಿ ಕರೆಯಲಾಗಿದೆ. ಅದೇ ರೀತಿ ಕೋಟೆಗೆ ದುರ್ಗ, ಪುರ, ಜಿಲ್ಲೆ, ವಾಡಿ, ಪ್ರಾಕಾರ, ಗಡ ಎಂಬ ಪದಗಳಿರುವುದು ಕಾಣಬಹುದಾಗಿದೆ. ಇಂಗ್ಲೀಷ್‌ನಲ್ಲಿ ಪೋರ್ಟ್ ಎಂತಲೂ ಕರೆಯುತ್ತಾರೆ. ಒಟ್ಟಾರೆಯಾಗಿ ರಾಜ್ಯಕ್ಕೆ ಹಾಗೂ ರಾಜನಿಗೆ ರಕ್ಷಣೆಯನ್ನು ಒದಗಿಸುವ ಮಹತ್ವವಾದ ಅಂಶವಾಗಿದೆ.

ಪ್ರಾಚೀನ ಕಾಲದಿಂದಲೂ ರಕ್ಷಣೆಯ ದೃಷ್ಠಿಯಿಂದ ಕೋಟೆಗಳು ಮಹತ್ವದ ಪಾತ್ರವಹಿಸಿದ್ದವು. ಕೋಟೆಯ ಬಗ್ಗೆ ಕೌಟಿಲ್ಯನ ಅರ್ಥಶಾಸ್ತ್ರ, ಕಾಮಾಂಧಕನ ನೀತಿಸಾರ, ಕನಕದಾಸರ ಮೋಹನ ತರಂಗಿಣಿ, ಶುಕ್ರ ನೀತಿಸಾರ, ಲಿಂಗಣ್ಣ ಕವಿಯ ಕೆಳದಿ ನೃಪ ವಿಜಯ ಮುಂತಾದ ಕೃತಿಗಳಲ್ಲಿ ಕೋಟೆಗಳ ನಿರ್ಮಾಣ ಮತ್ತು ಅವುಗಳ ಮಹತ್ವದ ಕುರಿತು ವಿವರ ನೀಡುತ್ತವೆ. ರಾಜನು ತನ್ನ ರಾಣಿ, ಪ್ರಜೆಗಳ ಮತ್ತು ಸಂಪತ್ತಿನ ರಕ್ಷಣೆಗಾಗಿ ಭದ್ರವಾದ ಗೋಡೆ ಮತ್ತು ಬಾಗಿಲುಗಳುಳ್ಳ ಕೋಟೆಯನ್ನು ಅವಶ್ಯಕವಾಗಿ ಕಟ್ಟಲೇಬೇಕೆಂದು ರಾಜನೀತಿ ಪ್ರಕಾಶನದಲ್ಲಿ ಬೃಹಸ್ಪತಿಯ ವಚನ ಉಲ್ಲೇಖಿಸುತ್ತದೆ.[೯] ಕೌಟಿಲ್ಯನ ಅರ್ಥಶಾಸ್ತ್ರವು ರಾಜನು ತನ್ನ ರಾಜ್ಯದ ಎಲ್ಲೆಯ ನಾಲ್ಕು ದಿಕ್ಕುಗಳಲ್ಲಿ ಶತೃಗಳನ್ನು ತಡೆಗಟ್ಟಲು ಸೂಕ್ತವಾದ ಕೋಟೆಗಳನ್ನು ಕಟ್ಟಬೇಕೆಂದು ತಿಳಿಸಿದ್ದಾನೆ.[೧೦] ಅಲ್ಲದೆ ಕೋಟೆಯು ಕೋಶಕ್ಕಿಂತಲ್ಲೂ ಮಿಗಿಲಾದುದೆಂದು ಹೇಳುತ್ತಾನೆ. ಯುದ್ಧದಲ್ಲಿ ಸಾವಿರಾರು ಆನೆಗಳಿಂದ ಲಕ್ಷಾಂತರ ಕುದುರೆಗಳಿಂದ ನಿರ್ವಹಿಸಲಾಗದ ಕಾರ್ಯವನ್ನು ಒಬ್ಬ ರಾಜ ಕೋಟೆಯ ಸಹಾಯದಿಂದ ನಿರ್ವಹಿಸಬಲ್ಲನು ಎಂದು ಪಂಚತಂತ್ರ ತಿಳಿಸುತ್ತದೆ.[೧೧] ಅದೇ ರೀತಿಯಾಗಿ ಮನು ಕೋಟೆಯಲ್ಲಿರುವ ಒಬ್ಬ ಯೋಧನು ಹೊರಗಿನ ನೂರು ಜನ ಯೋಧರೊಂದಿಗೂ, ನೂರು ಜನ ಯೋಧರು ಹತ್ತು ಸಾವಿರ ಯೋಧರೊಂದಿಗೆ ಸರಿಸಮನಾಗಿ ಕಾದಾಡಬಲ್ಲರು[೧೨] ಎಂದಿದ್ದಾನೆ. ಒಟ್ಟಾರೆಯಾಗಿ ಕೋಟೆಗಳು ಅಂದಿನ ರಾಜಕೀಯ ಹಾಗೂ ಸಾಮಾಜಿಕ ಜೀವನದಲ್ಲಿ ಅವಿಭಾಜ್ಯ ಅಂಗಗಳಾಗಿ ತಮ್ಮದೇ ಆದಂತಹ ಪ್ರಮುಖ ಪಾತ್ರವಹಿಸುತ್ತಿದ್ದವು.

ಕರ್ನಾಟಕದಲ್ಲಿ ವಿವಿಧ ರಾಜವಂಶಗಳ ಸಂಘಟನೆಯಲ್ಲಿ ಕೋಟೆಗಳು ಅತೀ ಮುಖ್ಯ ಪಾತ್ರವಹಿಸಿವೆ. ಅನೇಕ ರಾಜವಂಶಗಳ ಏಳಿಗೆ ಮತ್ತು ವಿನಾಶಕ್ಕೆ ಮುಖ್ಯ ಕಾರಣ ಕೋಟೆಗಳನ್ನು ವಶಪಡಿಸಿಕೊಳ್ಳುವುದಾಗಿದೆ. ಅನೇಕ ರಾಜರು ಆಯಾಕಾಲಕ್ಕೆ ಭೌಗೋಳಿಕ

ಪರಿಸರಕ್ಕೆ ತಕ್ಕಂತೆ ಭೂಮಿಯ ಮೇಲೆ, ಬೆಟ್ಟದ ಮೇಲೆ ವನದ ಮಧ್ಯೆ, ಜಲದ ಮಧ್ಯೆ ಕೋಟೆಗಳನ್ನು ಕಟ್ಟುತ್ತಿದ್ದರು. ಪ್ರಾಚೀನ ಹಾಗೂ ಮಧ್ಯಕಾಲೀನ ಕೃತಿಗಳಲ್ಲಿ ಈ ಕೊಟೆಗಳ ಬಗ್ಗೆ ವಿವಿಧ ಪ್ರಕಾರಗಳನ್ನು ತಿಳಿಸಿವೆ. ಕಾಟಿಲ್ಯನು ನಾಲ್ಕು ಪ್ರಕಾರದ ಕೋಟೆಗಳ ಬಗ್ಗೆ ಹೇಳಿದರೆ, ಮನುಸ್ಮೃತಿಯು ಆರು, ಶುಕ್ರ ನೀತಿಸಾರ ಒಂಬತ್ತು ಬಗೆಯನ್ನು ಮಾನಾಸಾರ ಎಂಟು ವಿಧದ ಮತ್ತು ಪಂಚತಂತ್ರವು ಎಂಟುಬಗೆಯ ಕೋಟೆಯನ್ನು ಮಾನಸೋಲ್ಲಾಸವು ಒಂಬತ್ತು ಬಗೆಯ ಕೋಟೆಗಳನ್ನು ತಿಳಿಸುತ್ತವೆ. ಬಹಳ ಜನಪ್ರಿಯವಾದ ಹಾಗೂ ಹೆಚ್ಚಾಗಿ ಕಂಡುಬರುವ ಕೋಟೆಗಳೆಂದರೆ ರಾಜಧಾನಿದುರ್ಗ, ಗಿರಿದುರ್ಗ, ವನದುರ್ಗ, ಜಲದುರ್ಗಗಳಾಗಿವೆ. ಈ ಹಿನ್ನೆಲೆಯಲ್ಲಿ ನಾವು ಕೋಟೆಗಳನ್ನು ಸಮೀಕ್ಷಿಸಬೇಕಾಗಿದೆ.

ಕೋಟೆಗಳಿಗೆ ಸಮಕಾಲೀನ ಭೌಗೋಳಿಕ ನೆಲೆಯ ಹಿನ್ನೆಲೆ ಒಂದೆಡೆಯಾದರೆ ಆ ಕಾಲದ ರಾಜ್ಯದ ತಂತ್ರಗಾರಿಕೆ, ರಾಜಕೀಯ ಪ್ರತಿಷ್ಠೆ, ಇನ್ನೊಂದೆಡೆಯಾಗಿದೆ. ಪ್ರಕೃತಿಯ ಸಮೃದ್ಧಿ, ಆರ್ಥಿಕ ಸ್ಥಿತಿಗತಿ, ಸಮಕಾಲೀನ ವಾಸ್ತುಶೈಲಿಗಳ ಪರಿಚಯ, ಕಲಾಭಿರುಚಿ ಸ್ಥಳೀಯವಾಗಿ ಲಭ್ಯವಿದ್ದ ಕಲ್ಲು, ಶಿಲೆಗಳು ಕೋಟೆಯ ವಾಸ್ತು ಕಲೆಯಲ್ಲಿ ನಿರ್ಣಾಯಕವಾಗಿದ್ದವು. ದೇಗುಲ ವಾಸ್ತುಕಲೆಯಂತೆ ಇದೂ ಸಂಕೀರ್ಣವಾದುದು. ನಿವೇಶನದ ಆಯ್ಕೆ, ರಕ್ಷಕಭಿತ್ತಿ, ಬುರುಜು, ಕೊಡೆತೆನೆ, ಕಂದಕ, ನೀರಿನ ಸರಬರಾಜು, ಗೋಡೆಯ ಎತ್ತರ, ಬಳಸಿದ ಕಲ್ಲು, ಬತೇರಿ, ಮದ್ದಿನ ಮನೆ, ಕೋತವಾಲರ ಗೂಡು, ಕಣಜಗಳು, ತುಪ್ಪದ ಕೊಳ, ಅರಮನೆ ತೋಪುಖಾನೆ, ನೀರಿನ ವ್ಯವಸ್ಥೆ ಈ ಎಲ್ಲಾ ಸೌಲಭ್ಯಗಳು ಬೇಕಾಗಿದ್ದವು. ಈ ಕೋಟೆಗಳು ಒಂದು ಸುತ್ತಿನಿಂದ ಹಿಡಿದು ಹಲವು ಸುತ್ತುಗಳವರೆಗೆ ನಿರ್ಮಿಸಿರುವುದು ಕಾಣಬಹುದು. ಕೋಟೆಗಳನ್ನು ಸ್ಥಳಕ್ಕನುಗುಣವಾಗಿ ವೃತ್ತಾಕಾರವಾಗಿ, ಚೌಕಾಕಾರವಾಗಿ ಕಟ್ಟಿರುವುದನ್ನು ಕಾಣಬಹುದಾಗಿದೆ.

ಪಾವಗಡದ ಕೋಟೆ

ಪಾವಗಡವು ತಾಲ್ಲೂಕು ಕೇಂದ್ರವಾಗಿದ್ದು ಪಾಳೇಗಾರರ ಕಾಲದ ಸುಂದರ, ಜೀವಂತ ಕೋಟೆಯನ್ನು ಈಗಲೂ ನೋಡಬಹುದಾಗಿದೆ. ಇದು ಜಿಲ್ಲಾ ಕೇಂದ್ರದಿಂದ ಸುಮಾರು ೯೬ ಕಿ.ಮೀ ದೂರದಲ್ಲಿದೆ. ಈ ಪಾವಗಡ ಮೂಲಕ ರಾಷ್ಟ್ರೀಯ ಹೆದ್ದಾರಿ ೩ ಹಾದುಹೋಗುತ್ತದೆ. ಹಾಗೂ ರೈಲ್ವೇ ರಸ್ತೆಗೆ ಸುಮಾರು ೧೮ ಕಿ.ಮೀ ದೂರದಲ್ಲಿದೆ. ಈ ಪಾವಗಡ ಕೋಟೆಯು ಗಿರಿದುರ್ಗವಾಗಿದ್ದು, ಈ ಬೆಟ್ಟವು ಉತ್ತರ-ದಕ್ಷಿಣವಾಗಿ ಸುಮಾರು ೩ಕಿ.ಮೀ ಹಾಗೂ ಪೂರ್ವ-ಪಶ್ಚಿಮವಾಗಿ ೪ ಕಿ.ಮೀ ಒಟ್ಟಾರೆ ೬ ಕಿ.ಮೀ ವ್ಯಾಪ್ತಿಯನ್ನು ಈ ಬೆಟ್ಟವು ಹರಡಿಕೊಂಡಿದೆ. ಈ ಬೆಟ್ಟವು ಸಮುದ್ರ ಮಟ್ಟದಿಂದ ಸುಮಾರು ೩೦೧೨

ಅಡಿ ಎತ್ತರದಲ್ಲಿದೆ. ಪ್ರಸ್ತುತ ನಗರಕ್ಕೂ ಮತ್ತು ಬೆಟ್ಟಕ್ಕೂ ಕೋಟೆಕಟ್ಟಿರುವುದು ಕಂಡುಬರುತ್ತದೆ. ಪಾವಗಡವನ್ನು ಶಾಸನಗಳಲ್ಲಿ ಹಲವು ಹೆಸರುಗಳಿಂದ ಕರೆಯಲಾಗಿದ್ದು, ಪಾಮುಕೊಂಡ, ಪಾಗೊಂಡೆ, ಪಾವಗೊಂಡೆ, ಪಾವುಗೊಂಡ, ಪಾಗೊಂಡ ಎಂಬ ಹೆಸರುಗಳಿಂದ ಉಲ್ಲೇಖಿಸಲಾಗಿದೆ. ಕ್ರಿ.ಶ. ೧೭೭೭ರಲ್ಲಿ ಮರಾಠರು ಈ ಪ್ರದೇಶವನ್ನು ಆಕ್ರಮಿಸಿಕೊಂಡಾಗ ಇದಕ್ಕೆ ಪಾವಗಡ ಎಂದು ಕರೆಯಲಾಯಿತು.

ಪಾವಗಡ ಕೋಟೆಯು ಪ್ರಾಗೈತಿಹಾಸಿಕ ನೆಲೆಯ ಮೇಲೆ ಕಟ್ಟಿದಂತಹ ಕೋಟೆಯಾಗಿದೆ. ಇಲ್ಲಿ ಬೃಹತ್ತಾದ ಬಂಡೆ ಕಲ್ಲುಗಳಿಂದ ನೀರಿನ ಒರೆತಗಳಲ್ಲಿ ಪ್ರಾಗೈತಿಹಾಸಿಕ ಕಾಲದ ಮಾನವ ಜೀವಿಸಿರುವಂತಹ ಕುರುಹುಗಳು ಇಲ್ಲಿ ಕಂಡುಬರುತ್ತವೆ. ಪಾವಗಡ ಬೆಟ್ಟವು ಹಲವು ಹಂತಗಳಲ್ಲಿ ಮೇಲೆದುದ್ದು ಸಮೀಪದ ಮಧುಗಿರಿ ಮತ್ತು ಮಿಡಿಗೇಶಿಯ ಮಾದರಿಯ ಒಂದೇ ಕಲ್ಲಿನಲ್ಲಿ ಬೆಟ್ಟವರಡಿರದೇ ಹಲವು ಹಂತಗಳಲ್ಲಿ ಅಸಂಖ್ಯಾತವಾದ ರಾಕ್ಷಸಾಕಾರದ ಕೋಡುಗಲ್ಲುಗಳಿಂದ ರಚನೆಯಾಗಿದೆ. ಇಂತಹ ಕೋಡುಗಲ್ಲುಗಳ ಎತ್ತರ ಸುಮಾರು ೮೦ರಿಂದ ೧೦೦ ಅಡಿಗಳ ಎತ್ತರವಿರುವುದು ಕಾಣಬಹುದು. ಇಲ್ಲಿ ವೃತ್ತಾಕಾರದ ಕೋಟೆ ನಿರ್ಮಿಸಿರುವರು.

ಪಾವಗಡ ಕೋಟೆಗೆ ಮೊಟ್ಟಮೊದಲು ತಳಪಾಯವನ್ನು ಹಾಕಿದ ಕೀರ್ತಿವಿಜಯನಗರದ ೧ನೇ ದೇವರಾಯನ ಸಾಮಂತರಾದ ಗೋಪರಾಜನಿಗೆ ಸಲ್ಲುತ್ತದೆ. ಈತನು ಕ್ರಿಶ ೧೪೦೫ಿಲ್ಲಿ ಅಶ್ವಯುಜ ಶುಕ್ಲ ದಿನದಿಂದ ಕೋಟೆಕಟ್ಟಲು ಪ್ರಾರಂಭಿಸಿದನೆಂದು ಇಲ್ಲಿ ದೊರೆತ ಶಾಸನದಿಂದ ತಿಳಿಯಬಹುದಾಗಿದೆ.[೨] ಆದರೆ ವಿಜಯನಗರದ ಅರಸರು ಕೋಟೆಕಟ್ಟಲು ಅಡ್ಡಿಪಡಿಸಿದ್ದರಿಂದ ಕೋಟೆ ನಿರ್ಮಾಣದ ಕಾರ್ಯ ಸ್ಥಗಿತವಾಗುತ್ತದೆ. ನಂತರ ಪೆನುಗೊಂಡೆಯನ್ನಾಳ್ವಿಕೆ ಮಾಡುತ್ತಿದ್ದ ವೆಂಕಟಪತಿ ಮಹಾರಾಜರ ಆದೇಶದ ಮೇರೆಗೆ ಅರ್ಧಕ್ಕೆ ನಿಂತಿದ್ದ ಕೋಟೆಯನ್ನು ಬಲ್ಲಪ್ಪ ನಾಯಕನು ಕ್ರಿ.ಶ. ೧೫೮೫ರಲ್ಲಿ ನಿರ್ಮಿಸಿದನು. ನಂತರ ಹೈದರಾಲಿಯು ಚಿತ್ರದುರ್ಗದ ಮೇಲೆ ದಂಡೆತ್ತಿಬಂದಾಗ ಇಲ್ಲಿ ತಂಗಿದ್ದು ಈ ಕೋಟೆಯ ಜೀರ್ಣೋದ್ಧಾರ ಮಾಡಿರುವುದು ಇಲ್ಲಿ ಕಂಡುಬರುವ ಮುಸ್ಲಿಂ ವಾಸ್ತುಶೈಲಿಯ ಲಕ್ಷಣಗಳಿಂದ ತಿಳಿಯಬಹುದಾಗಿದೆ.

ಕೋಟೆಯ ರಚನೆ

ವ್ಯವಸ್ಥಿತಿವಾಗಿ ನಿರ್ಮಾಣಗೊಂಡ ಕೋಟೆಗಳಲ್ಲಿ ಪಾವಗಡ ಕೋಟೆಯು ಒಂದಾಗಿದೆ, ಶಾಸನೋಕ್ತ ಉಲ್ಲೇಖದಂತೆ ಈ ಕೋಟೆಯು ೧೫ನೇ ಶತಮಾನದಲ್ಲಿ ನಿರ್ಮಿಸಿದಂತಹ ಕೋಟೆಯಾಗಿದೆ. ಈ ಕೋಟೆಯ ನಿರ್ಮಾಣಕ್ಕೆ ಸ್ಥಳೀಯವಾಗಿ ದೊರೆಯುವಂತಂಹ ಗ್ರಾನೈಟ್ ಕಲ್ಲುಗಳನ್ನು ಬಳಸಿದ್ದಾರೆ. ಕಲ್ಲು ಮತ್ತು ಮಧ್ಯದಲ್ಲಿ ಮಣ್ಣನ್ನು

ಬಳಸಿ ಕೋಟೆಕಟ್ಟಿದ್ದು ಮಧ್ಯದಲ್ಲಿ ಚಿಕ್ಕ ಜಲ್ಲಿಕಲ್ಲು ಬಳಸಿದ್ದಾರೆ ಕೋಟೆಯು ಸುಮಾರು ೫ ಅಡಿ ಅಗಲವನ್ನು ಹೊಂದಿದೆ. ಕೆಳಭಾಗಗಳಲ್ಲಿ ಬೃಹತ್ ಕಲ್ಲುಗಳನ್ನು ಬಳಸಿದ್ದು ಮೇಲಕ್ಕೆ ಹೋದಂತೆ ಮದ್ಯಮ ಗಾತ್ರದ ಕಲ್ಲುಗಳನ್ನು ಬಳಸಿದ್ದಾರೆ. ಈ ಕೋಟೆಯು ಸುಮಾರು ೧೫ ಅಡಿ ಎತ್ತರವನ್ನು ಹೊಂದಿದೆ. ಕೋಟೆಯ ಒಳಭಾಗದಲ್ಲಿ ಪಹರೆ ಕಾಯಲು ಇಟ್ಟಿಗೆ ಮತ್ತು ಗಾರೆಯಿಂದ ಕೈಪಿಡಿಗೋಡೆಯನ್ನು ರಚಿಸಿದ್ದು ಇದರಲ್ಲಿ ಅಂಬುಕಿಂಡಿ, ಬಂದೂಕು ಕಿಂಡಿಗಳನ್ನು ರಚಿಸಿದ್ದಾರೆ. ಆಯಕಟ್ಟಿನ ಪ್ರದೇಶಗಳಲ್ಲಿ ಬುರುಜುಗಳ ರಚನೆ ಕಂಡುಬರುತ್ತದೆ. ಇಲ್ಲಿ ಸುಮಾರು ೪೦ ಬುರುಜುಗಳನ್ನು ಕಾಣಬಹುದಾಗಿದೆ. ಇವುಗಳಲ್ಲಿ ಫಿರಂಗಿಗಳನ್ನು ಇಟ್ಟುಕೊಳ್ಳಲು ಫಿರಂಗಿ ಕಿಂಡಿಗಳು ಕಂಡುಬರುತ್ತವೆ. ಇಷ್ಟೇ ಅಲ್ಲದೇ ಕೋಟೆಯ ಗೋಡೆಯಲ್ಲಿ ನೀರು ಕಿಂಡಿಗಳು. ಜೋರು ಕಿಂಡಿಗಳಿವೆ ಕೋಟೆಗೆ ಸುತ್ತಲು ಕಂದಕ ನಿರ್ಮಿಸಿದ್ದು ಇದಕ್ಕೆ ಬೆಟ್ಟದಿಂದ ಬರುವ ನೀರನ್ನು ನೀರು ಕಿಂಡಿಗಳ ಮೂಲಕ ಕಂದಕಗಳಿಗೆ ಹರಿಸುತ್ತಿದ್ದರು ಆದರೆ ಇಂದು ನಗರ ಬೆಳವಣಿಗೆಯಿಂದ ಈ ಕಂದಕವು ಸಂಪೂರ್ಣವಾಗಿ ಮುಚ್ಚಿಹೋಗಿದೆ.

ಪಾವಗಡ ನಗರ ಹಾಗೂ ಬೆಟ್ಟವು ೭ ಸುತ್ತಿನ ಕೋಟೆಯನ್ನು ಒಳಗೊಂಡಿದ್ದು ಗ್ರಾಮದ ರಕ್ಷಣೆಗೆ ಎರಡು ಸುತ್ತಿನ ಕೋಟೆಯನ್ನು, ಉಳಿದ ೫ ಸುತ್ತ ಬೆಟ್ಟದಲ್ಲಿರುವವರ ರಕ್ಷಣೆಗೆ ನಿರ್ಮಿಸಲಾಗಿದೆ. ಈ ಕೋಟೆಯು ಸುಮಾರು ೧೦ ಬಾಗಿಲುಗಳನ್ನು ದಿಡ್ಡಿ ಬಾಗಿಲುಗಳನ್ನು, ಒಳಗೊಂಡಿದೆ. ಪಾವಗಡ ನಗರದ ಹೊರ ಸುತ್ತಿನ ಕೋಟೆಯು ಮೂರು ಹೆಬ್ಬಾಗಿಲುಗಳನ್ನು ಒಳಗೊಂಡಿದೆ. ಅವುಗಳೆಂದರೆ ದಕ್ಷಿಣದಿಕ್ಕಿಗಿರುವ ಬಾಗಿಲನ್ನು ಮಧುಗಿಯ ಹೆಬ್ಬಾಗಿಲೆಂದು; ಪೂರ್ವದಿಕ್ಕಿಗಿರುವ ಬಾಗಿಲಿಗೆ ಪೆನುಗೊಂಡೆ ಬಾಗಿಲೆಂದು, ಪಶ್ಚಿಮ ದಿಕ್ಕಿಗಿರುವ ಬಾಗಿಲನ್ನು ನಿಡುಗಲ್ಲು ಬಾಗಿಲೆಂದು ಕರೆಯುತ್ತಾರೆ. ಈ ಬಾಗಿಲುಗಳು ವಿಜಯನಗರ ಶೈಲಿಯ ವಾಸ್ತುವಿನ್ಯಾಸದಿಂದ ರಚನೆಗೊಂಡಂತಹವುಗಳಾಗಿವೆ. ಈ ಬಾಗಿಲುಗಳಿಗೆ ಈ ಹೆಸರುಗಳನ್ನಿಡಲು ಆ ದಿಕ್ಕುಗಳಲ್ಲಿರುವ ಪ್ರಮುಖ ಪಟ್ಟಣಗಳ ಹೆಸರನ್ನಿಟ್ಟಿದ್ದಾರೆ. ಅಂದರೆ ಇವುಗಳ ನಡುವಿನ ಸಂಬಂಧವನ್ನು ಹಾಗೂ ಪ್ರಮುಖಗಡಿ ರಾಜ್ಯಗಳಾಗಿದ್ದರಿಂದ ಆ ಪಟ್ಟಣಗಳ ಹೆಸರುಗಳಿಂದ ಕರೆದಿದ್ದಾರೆ. ಇಂದು ನಮಗೆ ನಿಡುಗಲ್ಲು ಊರುಬಾಗಿಲು ಕಂಡುಬರುವುದಿಲ್ಲ.

ಮಧುಗಿರಿ ಊರುಬಾಗಿಲು ವಿಜಯನಗರ ವಾಸ್ತುಶೈಲಿಯಲ್ಲಿ ಪಾಳೆಯಗಾರರ ಕಾಲದಲ್ಲಿ ನಿರ್ಮಾಣವಾದಂತಹ ಬೃಹತ್ ಹಾಗೂ ಸುಂದರವಾದಂತಹ ಬಾಗಿಲಾಗಿದೆ. ಇದನ್ನು ದಕ್ಷಿಣದಿಕ್ಕೆಗೆ ಕಟ್ಟಿದ್ದು ಇದಕ್ಕೆ ಮಧುಗಿರಿ ಊರುಬಾಗಿಲೆಂದು ಕರೆಯುತ್ತಾರೆ. ಈ ಬಾಗಿಲು ನೇರವಾಗಿ ಕಾಣುವುದಿಲ್ಲ. ಎರಡು ಬೃಹತ್ ಗೋಡೆಗಳಿಂದ ಮುಂದೆ ಹೋದರೆ ಅಲ್ಲಿ ಈ ಬಾಗಿಲು ಕಂಡುಬರುತ್ತದೆ. ಇಲ್ಲಿಂದ ನೇರವಾಗಿ ಬೆಟ್ಟದ ಮೇಲಕ್ಕೆ ರಸ್ತೆಯಿದೆ

ಈ ದ್ವಾರವು ದ್ವಾರ ಮಂಟಪವನ್ನು ಒಳಗೊಂಡಿದೆ. ಎಡಭಾಗದಲ್ಲಿ ದಿಡ್ಡಿ ಬಾಗಿಲು ಕಂಡುಬರುತ್ತದೆ. ಆದರೆ ಈಗ ಇದಕ್ಕೆ ಕಲ್ಲನ್ನು ಹಾಕಿ ಮುಚ್ಚಿದ್ದಾರೆ. ಈ ದ್ವಾರವು ಹೊರಭಾಗದಲ್ಲಿ ಸುಮಾರು ೪.೮೦ಮೀಟರ್ ಹಾಗೂ ಒಳಭಾಗದಲ್ಲಿ ೨.೯೫ಮೀ ಅಗಲ ಸುಮಾರು ೧೦ ಮೀಟರ್ ಎತ್ತರವಾಗಿದೆ. ದ್ವಾರ ಮಂಟಪವು ಉತ್ತರ–ದಕ್ಷಿಣವಾಗಿ ೧೦ ಮೀ ಪೂರ್ವ ಪಶ್ಚಿಮವಾಗಿ ೧೮.೪ ಮೀಟರ್ ವಿಸ್ತೀರ್ಣವನ್ನು ಹೊಂದಿದೆ. ದ್ವಾರದ ಲಲಾಟದಲ್ಲಿ ಗಣಪತಿಯ ಮೂರ್ತಿಕೆತ್ತಲಾಗಿದೆ. ಇದರ ಎಡ ಮತ್ತು ಬಲಭಾಗದಲ್ಲಿ ಕಮಲದ ಚಿತ್ರಗಳನ್ನು ಕೆತ್ತಿದ್ದಾರೆ. ಈ ದ್ವಾರಕ್ಕೆ ಹೊಂದಿಕೊಂಡಂತೆ ಎಡ ಮತ್ತು ಬಲಭಾಗದಲ್ಲಿ ಗಾರೆಯಿಂದ ಪಟ್ಟಿಕೆಗಳನ್ನು ರಚಿಸಿ ಅದರಲ್ಲಿ ಕಮಲದ ಹೂವು, ಪುಷ್ಪ ಎಲೆಬಳ್ಳಿಗಳನ್ನು ಬಿಡಿಸಿದ್ದಾರೆ. ದ್ವಾರದ ಮೇಲ್ಭಾಗದಲ್ಲಿ ಮುಗುಚಿದ ಪದ್ಮದ ಅಲಂಕಾರವುಳ್ಳ ಬೋದಿಗೆಯು ಕಂಡುಬರುತ್ತದೆ. ದ್ವಾರದ ಎಡಭಾಗದಲ್ಲಿ ಪುರುಷನ ತೊಡೆಯ ಮೇಲೆ ಸ್ತ್ರೀ ಕುಳಿತಿರುವಂತೆ ಇಬ್ಬರು ಕೈಜೋಡಿಸಿರುವಂತೆ ಉಬ್ಬು ಶಿಲ್ಪ ಕೆತ್ತಲಾಗಿದೆ.

ಈ ದ್ವಾರ ಬಾಗಿಲಿನ ಮೇಲ್ಭಾಗದಲ್ಲಿ ಗಾರೆಯಲ್ಲಿ ಅರ್ಧಕಮಾನು ಅಥವಾ ಎಲೆಗಳ ಮಾದರಿಯಲ್ಲಿ ರಚಿಸಿ ಇವುಗಳ ಮಧ್ಯ ಕಮಲದ ಹೂವಿನ ವಜ್ರಪಟ್ಟಿಗಳನ್ನು ಇದರ ಕೆಳಗೆ ಎಲೆಬಳಿಗಳ ಸುಂದರ ಅಲಂಕಾರವನ್ನು ನೋಡಬಹುದು. ಇದರ ಮಧ್ಯೆ ಒಂದು ಶಿಲ್ಪದ ಉಬ್ಬು ಶಿಲ್ಪವಿದೆ ಇದರ ಮೇಲೆ ವಿಜಯನಗರ ಶೈಲಿಯ ದ್ವಾರಾಲಂಕಾರ ಕಂಡುಬರುತ್ತದೆ. ದ್ವಾರ ಮಂಟಪದ ಮಧ್ಯ ಎಡಭಾಗದಲ್ಲಿ ಸುಮಾರು ೬ ಅಡಿಯ ಜಗುಲಿಯ ಮೇಲೆ ಕಂಬದಲ್ಲಿ ಆಂಜನೇಯನ ಮೂರ್ತಿ ಕೆತ್ತಿದ್ದು ಇದಕ್ಕೆ ಚಿಕ್ಕದಾದ ಮಂಟಪವನ್ನು ರಚಿಸಿದ್ದಾರೆ. ದ್ವಾರ ಮಂಟಪವು ೮ ಕಂಬಗಳಿಂದ ರಚನೆಗೊಂಡಿದೆ. ಕಂಬಗಳು ಸಾಧಾರಣವಾಗಿವೆ. ಬಲಭಾಗದ ಕಂಬದ ಮೇಲೆ ಗರುಡನು ಕೈ ಮುಗಿದು ನಿಂತಿರುವ ಕೆತ್ತನೆ ನೋಡಬಹುದು ಮತ್ತೊಂದು ಕಂಬದಲ್ಲಿ ೩ ಮೀನುಗಳನ್ನು ಕೆತ್ತಿದ್ದಾರೆ. ದ್ವಾರದ ಮುಚ್ಚಿಗೆಯಲ್ಲಿ ಅರಳಿದ ಕಮಲದ ಕೆತ್ತನೆ ಮಾಡಲಾಗಿದೆ. ಈ ಮಹಾದ್ವಾರದ ಮೇಲೆ ಹೋಗಲು ಹಾಗೂ ಪಹರೆಯನ್ನು ಕಾಯಲು ಪಕ್ಕದಲ್ಲಿ ಮೆಟ್ಟಿಲುಗಳನ್ನು ಮಾಡಲಾಗಿದೆ. ಈ ದ್ವಾರಕ್ಕೆ ಹೊಂದಿಕೊಂಡಂತೆ ಕೋಟೆಯಿದ್ದು ಇಂದು ಈ ಕೋಟೆಯು ನಗರ ಬೆಳವಣಿಗೆಯಿಂದ ಶಿಥಿಲಾವಸ್ಥೆಯಲ್ಲಿರುವುದು ಕಾಣಬಹುದಾಗಿದೆ.

ಹೊರಕೋಟೆಯಲ್ಲಿರುವ ಮತ್ತೊಂದು ಪ್ರಮುಖ ಊರುಬಾಗಿಲೆಂದರೆ ಪೂರ್ವದಿಕ್ಕಿಗೆ ಇರುವಂತಹ ಪೆನುಗೊಂಡ ಊರುಬಾಗಿಲು ಈ ಬಾಗಿಲು ಹೊರಗಡೆ ನೇರವಾಗಿ ಕಾಣುವುದಿಲ್ಲ ಎರಡು ಬೃಹತ್ ಗೋಡೆಗಳನ್ನು ದಾಟಿ ಮುಂದೆ ಬಂದಾಗ ಕಂಡುಬರುತ್ತದೆ. ಈ ಬಾಗಿಲ ಲಲಾಟದಲ್ಲಿ ಗಣೇಶನ ಉಬ್ಬು ಶಿಲ್ಪ ಕೆತ್ತಲಾಗಿದ್ದ ಬೋದಿಗೆ ಮೇಲೆ ನಗ್ನ

ಸ್ತ್ರೀಯರ ಶಿಲ್ಪಗಳನ್ನು ಕೆತ್ತಲಾಗಿದೆ. ಈ ಬಾಗಿಲಿಗೆ ಎಡಭಾಗದಲ್ಲಿ ದಿಟ್ಟ ಬಾಗಿಲನ್ನು ಮಾಡಿದ್ದಾರೆ. ಈ ದ್ವಾರವು ಹೊರಬಾಗದಲ್ಲಿ ೪ ಮೀ-ಒಳಭಾಗದಲ್ಲಿ ೩ ಮೀಟರ್ ಅಗಲ ಹೊಂದಿದೆ. ಸುಮಾರು ೯ ಮೀ ಎತ್ತರವನ್ನು ಹೊಂದಿದ ಈ ದ್ವಾರವು ಸಾಧಾರಣವಾಗಿದ್ದು ಒಳಭಾಗದ ಮುಚ್ಚಿಗೆಯಲ್ಲಿ ಕಮಲದ ಹೂವಿನ ಚಿತ್ರ ಕೆತ್ತಲಾಗಿದೆ. ಕೆಳಭಾಗದ ಎಡಭಾಗದಲ್ಲಿ ಆಮೆ, ನವಿಲು, ವರಹ, ನವಿಲಿನ ಚಿತ್ರಗಳನ್ನು ಕೆತ್ತಿದ್ದಾರೆ. ಬಲಭಾಗದಲ್ಲಿ ಹುಲಿ, ಕುದುರೆಯ ಮೇಲೆ ಆಯುಧವಿಡಿದಿರುವ ಸೈನಿಕನ ಶಿಲ್ಪಗಳನ್ನು ಬಿಡಿಸಿದ್ದಾರೆ. ರಕ್ಷಣೆಯ ದೃಷ್ಟಿಯಿಂದ ಹೊರ ಕೋಟೆಯಲ್ಲಿ ಸುಮಾರು ೭ ಬುರುಜುಗಳನ್ನು ನಾವು ಕಾಣಬಹುದಾಗಿದೆ. ಇಂದು ಇವು ಶಿಥಿಲಾವಸ್ಥೆಯಲ್ಲಿವೆ. ಇವುಗಳಲ್ಲಿ ಕೆಲವು ಬುರುಜುಗಳಿಗೆ ಕೊರಚ ಮುತ್ಯಾಲಮ್ಮ ಬುರುಜು, ಆಚಾರ ಬುರುಜು ಎಂಬ ಹೆಸರುಗಳಿಂದ ಕರೆಯುತ್ತಾರೆ.

ಮತ್ತೊಂದು ಊರುಬಾಗಿಲಾದ ನಿಡುಗಲ್ಲಿನ ಬಾಗಿಲು ಇಂದು ಕಂಡುಬರುವುದಿಲ್ಲ. ಎರಡನೇ ಸುತ್ತಿನ ಕೋಟೆಯಲ್ಲಿ ಎರಡು ಬಾಗಿಲುಗಳಿದ್ದು, ಇಂದು ಒಂದು ಬಾಗಿಲು ಕಂಡುಬರುತ್ತವೆ. ಇವನ್ನು ಸಂತೇ ಊರು ಬಾಗಿಲು ಜನಗಾರ ಬಾಗಿಲೆನ್ನುವರು. ಈ ೨ನೇ ಕೋಟೆಯಲ್ಲಿ ವೇಣುಗೋಪಾಲ ಸ್ವಾಮಿ ದೇವಾಲಯವನ್ನು ಕಾಣಬಹುದು. ಇದು ಮೊದಲು ಮೇಲಿದ್ದು, ನಂತರ ಕಾಲದಲ್ಲಿ ನಗರದಲ್ಲಿ ನಿರ್ಮಿಸಿದ್ದಾರೆ. ಈ ಕೋಟೆಯ ಒಂದು ಕೊತ್ತಲಕ್ಕೆ ತೆರುಕೊತ್ತಲ ಎನ್ನುವರು. ಇದಕ್ಕೆ ಕೋಟಮ್ಮಳು ಬಲಿಯಾದ್ದರಿಂದ ಹಾಗೇ ಕರೆಯುತ್ತಾರೆ. ಇಂದಿಗೂ ಇದಕ್ಕೆ ಪೂಜೆ ಮಾಡುತ್ತಾರೆ. ಇಲ್ಲಿ ಪ್ರತಿ ವರ್ಷ ವೇಣುಗೋಪಾಲ ಸ್ವಾಮಿಯ ತೇರನ್ನು ಎಳೆಯುತ್ತಾರೆ. ಇಲ್ಲಿಂದ ಮುಂದೆ ಹೋದರೆ ಈಶ್ವರ ದೇವಾಲಯ ಕಂಡುಬರುತ್ತದೆ. ಇದಕ್ಕೆ ಸಮೀಪದಲ್ಲೇ ಒಂದು ಸುಂದರವಾಗಿ ನಿರ್ಮಿಸಿದ ಬಾವಿ ಕಾಣಬಹುದು. ಇಲ್ಲಿಂದ ಮುಂದೆ ಹೋದಂತೆ ಬೆಟ್ಟದ ಹೊರಭಾಗದಿಂದ ಮೆಟ್ಟಿಲುಗಳನ್ನು ಮಾಡಿದ್ದು ಇವು ಬೆಟ್ಟದ ಮೇಲ್ಭಾಗದವರೆಗೂ ಮುಂದುವರೆಯುತ್ತವೆ. ಇದನ್ನು ದೊಡ್ಡ ದೊಡ್ಡ ಚಪ್ಪಡಿ ಕಲ್ಲುಗಳನ್ನು ಹಾಸಿ ಮೆಟ್ಟಿಲುಗಳಿಂದ ದಾರಿ ನಿರ್ಮಿಸಿದ್ದಾರೆ. ೩ನೇ ಸುತ್ತಿನ ಕೋಟೆಯ ಹೊರಭಾಗದಲ್ಲಿ ಬೆಟ್ಟದ ತಪ್ಪಲಲ್ಲಿ ರಾಮದೇವರ ಗುಡಿಯೆಂದು ಕರೆಯುವ ಪಾಳೆಯಗಾರರ ಕಾಲದ ದೇವಾಲಯ ಕಂಡುಬರುತ್ತದೆ ಇದರ ಗರ್ಭಗುಡಿಯಲ್ಲಿ ಯಾವುದೇ ಮೂರ್ತಿ ಕಂಡುಬರುವುದಿಲ್ಲ.

ಮೂರನೇ ಸುತ್ತಿನ ಕೋಟೆಯು ಬೆಟ್ಟದ ಬುಡದಿಂದ ಆರಂಭವಾಗುತ್ತದೆ. ಇಲ್ಲಿಂದ ಬೆಟ್ಟದ ಮೇಲಿನವರಗೆ ಹಲವು ಸುತ್ತಿನ ಕೋಟೆಯಲ್ಲಿ, ಹಲವು ಬಾಗಿಲುಗಳು ಕಂಡುಬರುತ್ತವೆ. ಇವುಗಳನ್ನು ಈ ಕೆಳಕಂಡ ಹೆಸರುಗಳಿಂದ ಕರೆಯುತ್ತಾರೆ. ಪತ್ತೇ ಊರುಬಾಗಿಲು, ಅಬ್ಬೂರು ಬಾಗಿಲು, ಪಪ್ಪಮ್ಮನ ಬಾಗಿಲು, ಆಂಜನೇಯ ಬಾಗಿಲು, ಕೋನೇರುಬಾಗಿಲು ಮತ್ತು ಗೋಪಾಲಸ್ವಾಮಿ ಬಾಗಿಲು ಎಂದು ಕರೆದಿದ್ದಾರೆ ಆದರೆ ನಿರ್ಧಿಷ್ಟವಾಗಿ ಇಂತಹ ಬಾಗಿಲಿಗೆ

ಇಂತಹ ಹೆಸರೆಂದು ಗುರ್ತಿಸಲು ಕಷ್ಟವಾಗಿದೆ. ಮೂರನೇ ಸುತ್ತಿನ ಕೋಟೆಯ ಪ್ರವೇಶದಲ್ಲಿ ಎರಡು ಬೃಹತ್ ಬುರುಜುಗಳು ಕಂಡುಬರುತ್ತವೆ. ಈ ಬುರುಜುಗಳಿಗೆ ಕೆಳಭಾಗದಲ್ಲಿ ಬೃಹತ್ ಗಾತ್ರದ ಕಲ್ಲು ಬಳಸಿ ಕಟ್ಟಿದ್ದಾರೆ. ಮೇಲ್ಭಾಗದಲ್ಲಿ ಗಾರೆಯಲ್ಲಿ ನಿರ್ಮಿಸಲಾಗಿದೆ. ಇಲ್ಲಿ ಅಂಬುಗಿಂಡಿಗಳು ಬಂದೂಕು ಕಿಂಡಿಗಳನ್ನು ನೋಡಬಹುದಾಗಿದೆ. ಈ ಬುರುಜುಗಳನ್ನು ದಾಟಿ ಮುಂದೆ ಬಂದರೆ ಬಾಗಿಲು ಕಂಡುಬರುತ್ತದೆ. ಈ ಬಾಗಿಲು ೨.೨೦ ಮೀಟರ್ ಅಗಲ ೨.೮ ಮೀಟರ್ ಎತ್ತರವನ್ನು ಹೊಂದಿದೆ. ಇದರ ಲಲಾಟದಲ್ಲಿ ಕಮಲದ ಹೂವಿನ ಚಿತ್ರವಿದ್ದು ಇದರ ಅಕ್ಕಪಕ್ಕದಲ್ಲಿ ಸೂರ್ಯ ಚಂದ್ರರನ್ನು ಕೆತ್ತಲಾಗಿದೆ. ಬೋದಿಗೆಯಲ್ಲಿ ವ್ಯಾಳಿ ಚಿತ್ರವನ್ನು ಕಾಣಬಹುದಾಗಿದೆ. ಈ ದ್ವಾರದ ಮೇಲ್ಭಾಗದಲ್ಲಿ ಗಾರೆಯಲ್ಲಿ ಎಲೆಗಳನ್ನು ರಚಿಸಿ ಅದರಲ್ಲಿ ಹೂಬಳ್ಳಿ, ಚೌಕಾಕಾರದ ಪಟ್ಟಿಕೆಗಳು, ಎಲೆಗಳು, ಕಮಾನುಗಳ ಅಲಂಕಾರವನ್ನು ಕಾಣಬಹುದಾಗಿದೆ. ದ್ವಾರದ ಒಳಭಾಗದ ಮುಚ್ಚಿಗೆಯಲ್ಲಿ ಕಮಲದ ಕೆತ್ತನೆ ಕಂಡುಬರುತ್ತದೆ.

ಇಲ್ಲಿಂದ ಮುಂದೆ ಹೋದರೆ ಬಲಭಾಗಕ್ಕೆ ಕಮ್ಮಾರ ಮಂಟಪ ಕಂಡುಬರುತ್ತದೆ. ಇದು ಕಂಬಗಳಿಂದ ಕೂಡಿದ ಸಾಧಾರಣ ಮಂಟಪವಾಗಿದೆ. ಇದನ್ನು ಪಾಳೆಯಗಾರರ ಕಾಲದಲ್ಲಿ ಕಬ್ಬಿಣದ ವಸ್ತುಗಳನ್ನು ಹಾಗೂ ಯುದ್ದಕ್ಕೆ ಅವಶ್ಯಕವಾದ ಆಯುಧಗಳನ್ನು ಮಾಡಲು ಬಳಸುತ್ತಿದ್ದರು. ಇಲ್ಲಿ ಕುಲುಮೆಗಳಿದ್ದವೆಂದು ಹೇಳಲಾಗುತ್ತದೆ. ಈಗಲೂ ಸಹ ಇಲ್ಲಿ ಸುಟ್ಟಂತಹ ಬೂದಿ ಹಾಗೂ ಕಬ್ಬಿಣದ ಅಂಶವನ್ನು ಹೊಂದಿರುವ ಮಣ್ಣನ್ನು ಕಾಣಬಹುದಾಗಿದೆ. ಈ ಮಂಟಪ ಪೂರ್ವಭಾಗಕ್ಕೆ ಬಾಗಿಲನ್ನು ಬಿಡಲಾಗಿದೆ. ಮೇಲ್ಛಾವಣಿಯಲ್ಲಿ ಬೆಳಕಿನ ವ್ಯವಸ್ಥೆಗೆ ಒಂದು ಗೂಡನ್ನು ಬಿಡಲಾಗಿದೆ. ಇಲ್ಲಿಂದ ಮುಂದೆ ಹೋದಂತೆ ಬೃಹತ್ ಬಂಡೆಗಳನ್ನು ಕೊರೆದು ಕೋಟೆಯನ್ನು ಕಟ್ಟಲಾಗಿದೆ. ಇಳಿಜಾರಾಗಿರುವ ಕಡೆಗಳಲ್ಲಿ ತಳಭಾಗದಲ್ಲಿ ಕೋಟೆಗೆ ಕಲ್ಲಿನ ಹಿಡಿಕೆಗಳನ್ನು ಹಾಕಿ ಭದ್ರಪಡಿಸಲಾಗಿದೆ. ಕೋಟೆಯ ಹೊರ ಭಾಗದ ಕಲ್ಲನ್ನು ಇಳಿಜಾರಾಗಿ ಕೆತ್ತಲಾಗಿದ್ದು ಶತೃಗಳ ಆಕ್ರಮಣ ತಡೆಯಲು ಇದು ಸಹಕಾರಿಯಾಗುತ್ತಿತ್ತು. ಇಲ್ಲಿಂದ ಮುಂದೆ ಬಂದಂತೆ ಕಾವಲುಗಾರರ ಶಿಥಿಲವಾಗಿರುವ ಮಂಟಪಗಳು ಕಂಡುಬರುತ್ತವೆ. ನಂತರದ ಬಾಗಿಲು ಎರಡು ಬುರುಜುಗಳ ನಡುವೆ ನಿರ್ಮಿಸಿದ್ದಾರೆ. ಈ ಬಾಗಿಲು ಸಾಧಾರಣವಾಗಿದ್ದು ಯಾವುದೇ ಅಲಂಕಾರ ಕಂಡುಬರುವುದಿಲ್ಲ. ಈ ಬಾಗಿಲು ೧.೭ ಮೀಟರ್ ಒಳಭಾಗದಲ್ಲಿ ೧.೩ ಮೀ ಮತ್ತು ೨.೬ ಮೀ ಎತ್ತರವನ್ನು ಒಳಗೊಂಡಿದೆ. ಇದಕ್ಕೆ ದ್ವಾರಮಂಟಪವನ್ನು ರಚಿಸಿದ್ದಾರೆ. ಇದು ಸುಮಾರು ೮ ಮೀ ಅಗಲವಿದೆ. ಕೂರಲು ಕಂಬಗಳಿಂದ ಕೂಡಿದ ಜಗುಲಿ ಕಾಣಬಹುದು. ಲಲಾಟಬಿಂಬ ಪದ್ಮದ ಕೆತ್ತನೆ ಕಾಣಬಹುದು. ಮಂಟಪದ ಮುಚ್ಚಿಗೆಯಲ್ಲಿ ಪದ್ಮವನ್ನು ಕೆತ್ತಿದ್ದಾರೆ. ದ್ವಾರದ ಮೇಲೆ ಗಾರೆಯಿಂದ ಅರ್ಧಕಮಾನುಗಳನ್ನು ರಚಿಸಿ ಇದರಲ್ಲಿ ಹೂಬಳ್ಳಿ, ತ್ರಿಕೋನಾಕಾರದ ಹೂವಿನ ಹಾಗೂ ರೇಖೆಗಳ ಅಲಂಕಾರ ಮಾಡಲಾಗಿದೆ. ಬಲಭಾಗದಲ್ಲಿ ದಿಡ್ಡಿ ಬಾಗಿಲಿದೆ.

ಇಲ್ಲಿಂದ ಮುಂದೆ ನಡೆದರೆ ಮತ್ತೊಂದು ಬಾಗಿಲು ಕಂಡುಬರುತ್ತದೆ. ಇದು ಬೃಹತ್ ಬಂಡೆಗೆ ತಾಗಿದಂತೆ ಕೋಟೆ ನಿರ್ಮಿಸಿದ್ದು ಇದರ ಪಕ್ಕದಲ್ಲಿ ದ್ವಾರವನ್ನು ಮಾಡಿದ್ದಾರೆ. ಲಲಾಟದಲ್ಲಿ ಕಮಲದ ಕೆತ್ತನೆ ಮಾಡಿದ್ದಾರೆ. ಇದು ೧.೫ಮೀ ಅಗಲ ೨.೨ ಮೀ ಎತ್ತರವನ್ನು ಒಳಗೊಂಡಿದೆ. ಈ ದ್ವಾರಕ್ಕೆ ಕಂಬಗಳಿಂದ ಕೂಡಿದ ದ್ವಾರ ಮಂಟಪ ರಚಿಸಿದ್ದಾರೆ. ಮುಂದೆ ದೊಡ್ಡ ಗುಂಡಿನಲ್ಲಿ ಕೆತ್ತಿರುವ ಸುಮಾರು ೭ ಅಡಿ ಎತ್ತರದ ಆಂಜನೇಯನ ವಿಗ್ರಹ ಕಂಡುಬರುತ್ತದೆ. ಇದನ್ನು ಬೆಟ್ಟದಾಂಜನೇಯ ಎಂದು ಕರೆಯುವರು. ದಕ್ಷಿಣಾಭಿಮುಖವಾಗಿರುವ ಹನುಮನು ತನ್ನ ಮುಖವನ್ನು ಪೂರ್ವಕ್ಕೆ ತಿರುಗಿಸಿರುವನು. ಈತನ ಪಾದದಲ್ಲಿ ಚಿಕ್ಕ ಕೋತಿಯೊಂದು ಕೈಯಲ್ಲಿ ಹಣ್ಣನ್ನಿಡಿದು ತಿನ್ನುತ್ತಿರುವಂತೆ ಚಿತ್ರಿಸಲಾಗಿದೆ. ಪಾದಗಳ ಕೆಳಭಾಗದಲ್ಲಿ ರಾಕ್ಷಸನನ್ನು ಕೆತ್ತಿದ್ದಾರೆ. ಈ ವಿಗ್ರಹಕ್ಕೆ ಪ್ರಾಕಾರಗೋಡೆಯನ್ನು ಕಟ್ಟಿದ್ದಾರೆ. ಮುಂಭಾಗದಲ್ಲಿ ಶಿಥಿಲವಾಗಿರುವ ದೀಪಸ್ತಂಭ ಕಂಡುಬರುತ್ತದೆ. ಇಲ್ಲಿಂದ ಮುಂದೆ ಹೋದಂತೆ ಬಲಭಾಗದಲ್ಲಿ ಗುಂಡಿನ ಮೇಲೆ ಶಾಸನವನ್ನು ನೋಡಬಹುದು.

ನಂತರದ ಬಾಗಿಲಿಗೆ ತಾಗಿದಂತೆ ಬುರುಜುಗಳು ಕಟ್ಟಿದ್ದು ದೊಡ್ಡ ಬಂಡೆಯನ್ನು ಕೊರೆದು ದಾರಿ ನಿರ್ಮಿಸಿದ್ದಾರೆ. ಇದರ ಪಕ್ಕದಲ್ಲಿ ಸುಮಾರು ೮೦ ಅಡಿ ಎತ್ತರದ ಬಂಡೆಯ ಮೇಲೆ ಕೋಟೆಯನ್ನು ಕಟ್ಟಿದ್ದಾರೆ. ಈ ದ್ವಾರವು ೧.೬ಮೀ ಅಗಲ ೨.೫ಮೀ ಎತ್ತರವನ್ನು ಒಳಗೊಂಡಿದೆ. ಲಲಾಟಬಿಂಬದಲ್ಲಿ ಕಮಲವನ್ನು ಕೆತ್ತಿದ್ದಾರೆ. ನಾಗಬಂಧವಿದ್ದು ಇದರ ಮೇಲೆ ಗಾರೆಯಿಂದ ಎಲೆಗಳ ರಚಿಸಿದ್ದಾರೆ. ಇಲ್ಲಿಂದ ಮುಂದೆ ಹೋದಂತೆ ಮತ್ತೊಂದು ಬಾಗಿಲು ಸಿಗುತ್ತದೆ. ಇದು ೧.೬ಮೀ ಅಗಲ ೨.೫ಮೀ ಎತ್ತರವನ್ನೊಂದಿದೆ. ಲಲಾಟಬಿಂಬದಲ್ಲಿ ಕಮಲದ ಕೆತ್ತನೆ ಮಾಡಿದ್ದಾರೆ. ಎಡಭಾಗದಲ್ಲಿ ಡಿಡ್ಡಿ ಬಾಗಿಲು ಮಾಡಿದ್ದಾರೆ. ನಂತರದ ಬಾಗಿಲಿಗೆ ಚೌಕಾಕಾರದ ಮಂಟಪದ ಮಾದರಿಯ ಬುರುಜನ್ನು ನಿರ್ಮಿಸಿದ್ದಾರೆ. ಇದಕ್ಕೆ ನಯಗೊಳಿಸಿದ ಪ್ರಮಾಣಬದ್ಧವಾದ ಕಲ್ಲನ್ನು ಬಳಸಿದ್ದಾರೆ. ಈ ಬಾಗಿಲಿಗೆ ಸುಂದರವಾಗಿ ಅಲಂಕಾರ ಮಾಡಿದ್ದಾರೆ. ಇದು ಹೊರಭಾಗದಲ್ಲಿ ೩.೧೦ಮೀ ಒಳಭಾಗದಲ್ಲಿ ೧.೬ಮೀ ಅಗಲ ಹಾಗೂ ೨.೭ಮೀ ಎತ್ತರವನ್ನು ಒಳಗೊಂಡಿದೆ ಲಲಾಟಬಿಂಬದಲ್ಲಿ ಕಮಲವನ್ನು ನೋಡಬಹುದು ಇದರ ಅಕ್ಕಪಕ್ಕದಲ್ಲಿ ಸೂರ್ಯಚಂದ್ರರನ್ನು ಕೆತ್ತಿದ್ದಾರೆ. ಈ ದ್ವಾರದ ಹೊರಭಾಗದಲ್ಲಿ ಮುಗುಚಿದ ಪದ್ಮದ ಬೋದಿಗೆಯೂ ಎರಡೂ ಕಡೆ ಕಾಣಬಹದು ಇದರ ಪಕ್ಕದಲ್ಲಿ ಹರಳಿದ ಪದ್ಮದ ಕೆತ್ತನೆ ಮಾಡಿದ್ದಾರೆ. ಬಾಗಿಲಿನ ಎರಡೂ ಕಡೆ ಗಾರೆಯಿಂದ ಉದ್ದವಾಗಿ ಕಾಂಡದ ಮಾದರಿಯಲ್ಲಿ ರಚಿಸಿದ್ದಾರೆ. ಇದು ಕೆಳಭಾಗದಲ್ಲಿ ದೊಡ್ಡದಾಗಿದ್ದು ಮೇಲ್ಭಾಗದಲ್ಲಿ ಸಣ್ಣದಾಗಿವೆ. ಈ ಬುರುಜಿನ ಮೇಲೆ ಹೋಗಲು ಮೆಟ್ಟಿಲುಗಳಿವೆ. ಇಲ್ಲಿಂದ ಮುಂದೆ ಹೋದಂತೆ ಸಾಧಾರಣಬಾಗಿಲಿದ್ದು ಇದು೧.೬ಮೀ ಅಗಲ, ೨.೭ಮೀ ಎತ್ತರವನ್ನು

ಒಳಗೊಂಡಿದೆ. ದ್ವಾರದ ಮೇಲೆ ಗಾರೆಯಿಂದ ಪಟ್ಟಿಕೆಗಳನ್ನು ರಚಿಸಿ ಅದರಲ್ಲಿ ಹೂವಿನ ಅಲಂಕಾರ ಮಾಡಿದ್ದು ಪಕ್ಕದಲ್ಲಿ ಅರ್ಧ ಕಮಾನುಗಳನ್ನು ರಚಿಸಿದ್ದಾರೆ.

ನಂತರದ ಬಾಗಿಲನ್ನು ಕೋನೇರು ಬಾಗಿಲು ಎಂದು ಕರೆಯುತ್ತಾರೆ. ಇದು ೧.೬ ಮೀ ಅಗಲ, ೨.೬ ಮೀ ಎತ್ತರವನ್ನು ಹೊಂದಿದೆ. ಈ ದ್ವಾರಕ್ಕೆ ದ್ವಾರ ಮಂಟಪವಿದ್ದು ಇದು ೮ಮೀ. ಉದ್ದ ಹಾಗೂ ೭.೫ ಮೀ ಅಗಲವನ್ನು ಹೊಂದಿದೆ. ದ್ವಾರದ ಲಲಾಟಬಿಂಬದಲ್ಲಿ ಗಣೇಶನನ್ನು ಕೆತ್ತಿದ್ದಾರೆ. ದ್ವಾರಕ್ಕೆ ನಾಗಬಂಧವಿದ್ದು ದ್ವಾರದ ಮೇಲ್ಭಾಗದಲ್ಲಿ ಮುಗುಚಿದ ಪದ್ಮದ ಅಲಂಕಾರವಿರುವ ಬೋಧಿಗೆಯನ್ನು ಕಾಣಬಹುದಾಗಿದೆ. ದ್ವಾರದ ಮೇಲ್ಭಾಗದಲ್ಲಿ ಗಾರೆಯಿಂದ ಅರ್ಧಕಮಾನ್ನು, ರಚಿಸಿದ್ದಾರೆ ಇದರ ಮಧ್ಯದಲ್ಲಿ ಬಂದೂಕು ಕಿಂಡಿಗಳನ್ನು ರಚಿಸಿದ್ದಾರೆ. ಇದಕ್ಕೆ ಎಡಭಾಗದಲ್ಲಿ ದಿಡ್ಡಿಬಾಗಿಲು ಕಂಡುಬರುತ್ತದೆ. ಈ ದ್ವಾರ ಮಂಟಪವು ೩ ಅಡಿಯ ಜಗುಲಿಯ ಮೇಲೆ ೪ ಕಂಬಗಳಿಂದ ರಚಿಸಲಾಗಿದೆ. ಕಂಬಗಳು ಚೌಕ, ಅಷ್ಟ ಮುಖ ಚೌಕ ಬೋದಿಗೆಯನ್ನು ಒಳಗೊಂಡಿವೆ. ಒಳಭಾಗದ ಮುಚ್ಚಿಗೆಯಲ್ಲಿ ಆಮೆ, ಕಮಲ, ಹಾವನ್ನು ಕೆತ್ತಲಾಗಿದೆ.

ಮುಂದೆ ಹೋದಂತೆ ನಮಗೆ ಎಡಭಾಗದಲ್ಲಿ ಕೋನೇರು ಮಂಟಪ ಹಾಗೂ ಕೋನೇರು ದೊಣಿ ಮತ್ತು ಪುಷ್ಕರಣಿ ಕಂಡುಬರುತ್ತದೆ ಇದರ ಹಿಂಭಾಗದಲ್ಲಿ ಒಂದು ಕಣಜವಿದೆ ಇದು ಕೊನೆಯ-ಸುತ್ತಿನ ಕೋಟೆಯಾಗಿದೆ. ಕಣಜದ ಉತ್ತರ ಭಾಗಕ್ಕೆ ಬಂಡೆಯ ಮೇಲೆ ತುಪ್ಪದ ಕೊಳ ಅಥವ ಕಣಜಗಳು ಕಂಡುಬರುತ್ತವೆ. ಇದರ ಸಮೀಪದಲ್ಲಿ ಶಿಥಿಲಾವಸ್ಥೆಯಲ್ಲಿರುವ ಕಾವಲುಗಾರರನ ಮಂಟಪ ಕಾಣಬಹುದು. ಇಲ್ಲಿಂದ ಮುಂದೆ ಹೋದರೆ ಎಡಭಾಗದಲ್ಲಿ ಒಂದು ಬೃಹತ್ ಬಂಡೆಯಿದ್ದು ಅದು ಸುಮಾರು ೮೦ ರಿಂದ ೧೦೦ ಅಡಿ ಎತ್ತರವಿದೆ. ಇದರ ಕೆಳಭಾಗದಲ್ಲಿ ಬಾವಿಯಿದ್ದು ಇದು ೮೦ ಅಡಿ ಆಳದ್ದು.ಈ ಬಾವಿಯಿಂದ ನೀರೆತ್ತಲಾಗುತ್ತಿತ್ತು ಎಂದಿದ್ದಾರೆ. ಆದರೆ ಇಂದು ಈ ಬಾವಿ ಮುಚ್ಚಿ ಹೋಗಿದೆ. ಇದರಿಂದ ಮುಂದಿನ ಬಾಗಿಲನ್ನು ದಾಟಿ ಹೋದರೆ ಇಲ್ಲಿ ವಿಶಾಲವಾದ ಮೈದಾನದೋಪಾದಿಯಲ್ಲಿರುವ ಪ್ರದೇಶ ಕಂಡುಬರುತ್ತದೆ. ಇಲ್ಲಿ ರಾಜನ ದರ್ಭಾರು ನಡೆಯುತ್ತಿತ್ತೆಂದು ಸ್ಥಳೀಯರ ಅಭಿಪ್ರಾಯವಾಗಿದೆ. ಇದರ ಮಧ್ಯದಲ್ಲಿ ಎತ್ತರವಾದ ವೇದಿಕೆ ರಚಿಸಿದ್ದು ಮೆಟ್ಟಿಲುಗಳನ್ನು ರಚಿಸಿದ್ದಾರೆ. ಇದರ ಎರಡೂ ಕಡೆ ಗ್ರಾನೇಟ್ ಕಲ್ಲುಗಳಿಂದ ಅಲಂಕೃತ ಆನೆಗಳನ್ನು ಕೆತ್ತಿದ್ದಾರೆ. ಬಲಭಾಗದ ಆನೆಯ ಕೆಳಗಡೆ ಊರುಳಿದೆ ಇಲ್ಲಿ ರಾಜರ ಸಭೆಗಳು ನಡೆಯುತ್ತಿದ್ದವೆನ್ನಲಾಗುತ್ತದೆ. ಇದರ ಪಕ್ಕದಲ್ಲಿ ಮಂಟಪಗಳಿವೆ ಮುಂದೆ ನೀರಿಗಾಗಿ ದೊಣೆಗಳನ್ನು ರಚಿಸಿರುವುದು ಕಾಣಬಹುದು. ಅಕ್ಕಮ್ಮನ ದೊಣೆ ಇದರ ಪಕ್ಕದಲ್ಲಿ ಮಂಟಪಗಳು, ಮಸೀದಿ, ಬಾಬಯ್ಯನ ಕೆರೆ ಇದರ ಪಕ್ಕದಲ್ಲಿ ಕಳ್ಳರ ಜರುಗು ಕಾಣಬಹುದು,

ಇಲ್ಲಿ ಕಳ್ಳರನ್ನು ಇಲ್ಲಿಂದ ತಳ್ಳಿ ಶಿಕ್ಷಿಸುತ್ತಿದ್ದರು. ಇಲ್ಲಿಂದ ಮುಂದೆ ಕಣಜಗಳು. ಭೀಮನ ದೊಣೆ ಕಂಡುಬರುತ್ತದೆ. ಇದು ತುಂಬಾ ಆಕರ್ಷಕವಾಗಿದ್ದು ಇಲ್ಲಿಯ ನೀರು ಯಾವಾಗಲೂ ತಿಳಿಯಾಗಿ ಹಾಗೂ ತಂಪಾಗಿರುತ್ತವೆ. ಇಲ್ಲಿಂದ ಮುಂದೆ ಕೆಲವೊಂದು ಕಟ್ಟಡದ ಅವಶೇಷಗಳನ್ನು ಕಂಡುಬರುತ್ತವೆ. ಮುಂದೆ ಸುಲ್ತಾನ್ ಬತೇರಿಯನ್ನು ಕಾಣಬಹುದು. ಇದನ್ನು ಬಾವುಟದ ಬತೇರಿ ಎಂತಲೂ ಕರೆಯುತ್ತಾರೆ. ಇದು ಇಡೀ ಬೆಟ್ಟದಲ್ಲಿ ಎತ್ತರವಾದಂತಹ ಹಾಗೂ ತುತ್ತತುದಿಯಾದ ಸ್ಥಳವಾಗಿದೆ. ಇಲ್ಲಿಂದ ಶತೃಗಳನ್ನು ವೀಕ್ಷಿಸಲು ಯುದ್ಧ ಮಾಡಲು ಪ್ರಶಸ್ತವಾದ ಸ್ಥಳವಾಗಿದೆ. ಇದರ ಕೆಳಗೆ ನೆಲಮಾಳಿಗೆ ಹಾಗೂ ಮುಂಭಾಗದಲ್ಲಿ ಅರಮನೆಯ ಆವರಣ, ಇದರ ಪಶ್ಚಿಮಕ್ಕೆ ಸುಬ್ಬಯ್ಯ ಬತೇರಿ, ಇದರ ಕೆಳಗೆ ಬೃಹತ್ತಾದ ಮಂಟಪ ಕಾಣಬಹುದಾಗಿದೆ. ಮೇಲಿನ ಕೋಟೆಯಲ್ಲಿ ಆಯಕಟ್ಟಿನ ಸ್ಥಳಗಳಲ್ಲಿ ಬುರುಜುಗಳನ್ನು ನಿರ್ಮಿಸಲಾಗಿದೆ. ಪಾವಗಡ ಬೆಟ್ಟದ ಮೇಲೆ ಮೂರು ಪಿರಂಗಿಗಳಿದ್ದು, ಅವುಗಳಲ್ಲಿ ಬೆಟ್ಟದ ಮೇಲಿನ ಫಿರಂಗಿಯು ೮ ಅಡಿ ಉದ್ದವಿತ್ತು. ಆದರೆ ಇಂದು ಕೇವಲ ೩ ಅಡಿಯ ಫಿರಂಗಿಯು ಪಾವಗಡ ಪೋಲಿಸ್ ಠಾಣೆಯಲ್ಲಿ ಕಂಡುಬರುತ್ತದೆ. ಮಿಕ್ಕವುಗಳು ಕಳೆದು ಹೋಗಿವೆ.

ಬೆಟ್ಟದ ಮೇಲೆ ಕಂಡುಬರುವ ಸ್ಮಾರಕಗಳು

ಕೋನೇರು ಮಂಟಪ

ಕೋನೇರು ಮಂಟಪವು ಕೋನೇರು ದೊಣೆಯ ಬಲಭಾಗದಲ್ಲಿ ಕಂಡುಬರುತ್ತದೆ. ಇದು ಪೂರ್ವಾಭಿಮುಖವಾಗಿದ್ದು ತೆರದ ಮಂಟಪವಾಗಿದೆ. ಇದು ಶಿಥಿಲಾವಸ್ಥೆಯಲ್ಲಿದ್ದು ಇಲ್ಲಿ ನಿಧಿಗಳ್ಳರು ಹಲವು ಕಡೆ ಭಗ್ನ ಗೊಳಿಸಿದ್ದು, ರಂಧ್ರಗಳನ್ನು ಮಾಡಿದ್ದಾರೆ. ಇದು ಸುಮಾರು ೧೨ ಕಂಬಗಳಿಂದ ಕೂಡಿದಂತಹ ಮಂಟಪವಾಗಿದೆ. ಇದರ ಉದ್ದ ೭ ಮೀಟರ, ಅಗಲ ೧೧.೬ಮೀಟರ್ ಹಾಗೂ ೧೩ಮೀ ಎತ್ತರಗಳ ಒಳಗೊಂಡಿದೆ. ಇದರ ಕಂಬಗಳು ಚೌಕ ಅಷ್ಟಮುಖ ಚೌಕ ಬೋದಿಗೆಯನ್ನು ಕಾಣಬಹುದು. ಮಂಟಪದ ಮಧ್ಯದಲ್ಲಿ ಮುಚ್ಚಿಗೆಯಲ್ಲಿ ಹರಳಿದ ಪದ್ಮದ ಕೆತ್ತನ ಮಾಡಿದ್ದು ಇದಕ್ಕೆ ಚೌಕಾಕಾರದ ಎಲೆಬಳ್ಳಿಗಳನ್ನು ಅಲಂಕಾರ ಮಾಡಿದ್ದಾರೆ, ಮೇಲೆ ಗಾರೆಯಿಂದ ಮಂಟಪದ ಮೇಲ್ಭಾಗ ಮುಚ್ಚಿದ್ದಾರೆ.

ರಾಜದರ್ಭಾರಿನ ಮುಂಭಾಗ ಮಂಟಪ

ರಾಜದರ್ಭಾರೆಂದು ಕರೆಯುವ ವಿಶಾಲ ಪ್ರದೇಶದ ಬಲಭಾಗಕ್ಕೆ ಉತ್ತರಾಭಿಮುಖವಾಗಿದೆ. ಇದು ಶಿಥಿಲಾವಸ್ಥೆಯಲ್ಲಿದ್ದು ಉತ್ತರ-ದಕ್ಷಿಣವಾಗಿ ೭.೬ಮೀ, ಹಿಂಭಾಗದ ಪೂರ್ವ-ಪಶ್ಚಿಮ ೯ ಮೀ, ಮುಂಭಾಗದಲ್ಲಿ ೯ ಮೀ ಅಗಲ ೪ ಮೀ ಎತ್ತರವನ್ನು ಒಳಗೊಂಡಿದೆ. ಈ

ಮಂಟಪವು ೧೨ ಕಂಬಗಳಿಂದ ಕೂಡಿದೆ ಇವು ಸಾಧಾರಣವಾಗಿವೆ ಚೌಕ, ಅಷ್ಟಮುಖ ಚೌಕ ಅಷ್ಟ ಮುಖ ಚೌಕ ಬೋದಿಗೆ ಹೊಂದಿವೆ. ಮೇಲ್ಭಾಗವನ್ನು ಗಾರೆಯಿಂದ ಮುಚ್ಚಿದ್ದಾರೆ.

ಅಕ್ಕಮ್ಮಗಾರನ ದೊಣೆ ಪಕ್ಕದಲ್ಲಿರುವ ಮಂಟಪಗಳು

ಇದು ಅಕ್ಕಮ್ಮಗಾರನ ದೊಣೆಯ ಬಲಭಾಗಕ್ಕೆ ಈ ಮಂಟಪಗಳು ಕಂಡುಬರುತ್ತದೆ. ಇವು ತಿರುಗಿದ ಆಂಗ್ಲ ಭಾಷೆಯ L ಅಕ್ಷರದ ಮಾದರಿ ನಿರ್ಮಿಸಿದ್ದಾರೆ. ಇವು ಇಂದು ಶಿಥಿಲಾವಸ್ಥೆಯಲ್ಲಿವೆ. ಇದರ ವಿಸ್ತೀರ್ಣ ಉತ್ತರ-ದಕ್ಷಿಣವಾಗಿ ೨೮.೪ ಮೀ ಪೂರ್ವಪಶ್ಚಿಮವಾಗಿ ೪.೧೦ ಮೀಟರ್, ಹಿಂಭಾಗದಲ್ಲಿ ೫.೧೦ಮೀ ಅಗಲವನ್ನು ಹೊಂದಿದೆ. ಇದು ಸುಮಾರು ೫ ಮೀ ಎತ್ತರವನ್ನು ಒಳಗೊಂಡಿದೆ. ಮಸೀದಿ ಹಿಂಭಾಗದ ಮಂಟಪವು ಕಂಬಗಳಿಂದ ಕೂಡಿದಂತಹದ್ದಾಗಿದೆ. ಒಟ್ಟು ೩ ಸಾಲಿನಲ್ಲಿ ೨೮ ಕಂಬಗಳನ್ನು ಒಳಗೊಂಡಿದ್ದು ಉತ್ತರಾಭಿಮುಖವಾಗಿ ತೆರೆದ ಮಂಟಪವಾಗಿದೆ. ಇದು ಉತ್ತರ ದಕ್ಷಿಣವಾಗಿ ೭.೪ ಮೀ ಪೂರ್ವ ಪಶ್ಚಿಮವಾಗಿ ೭.೨೦ ಮೀ ಒಳಗೊಂಡಿದೆ. ಮೇಲ್ಭಾಗದಲ್ಲಿ ಇಟ್ಟಿಗೆ ಮತ್ತು ಗಾರೆಯಿಂದ ಮುಚ್ಚಲ್ಪಟ್ಟಿದೆ.

ಮಸೀದಿ

ಇದು ಹೈದರ್ ಕಾಲದಲ್ಲಿ ನಿರ್ಮಿಸಲ್ಪಟ್ಟ ಅಪೂರ್ಣಗೊಂಡಿರುವಂತಹ ಮಸೀದಿಯಾಗಿದೆ. ಇಲ್ಲಿ ಮೊದಲು ವೇಣುಗೋಪಾಲ ಸ್ವಾಮಿಯ ದೇವಾಲಯವಿದ್ದು, ಇದನ್ನು ಕೆಡವಿ ಈ ಮಸೀದಿಯನ್ನು ಕಟ್ಟಲಾಗಿದೆ ಎಂದು ಸ್ಥಳೀಯ ಸಂಶೋಧಕರಾದ ವಿ.ಆರ್.ಸಿ. ರಾಜನ್ ಅವರು ಹೇಳುತ್ತಾರೆ. ಈ ಮಸೀದಿಯನ್ನು ಎತ್ತರವಾದ ವೇದಿಕೆಯ ಮೇಲೆ ದಕ್ಷಿಣಾಭಿಮುಖವಾಗಿ ನಿರ್ಮಿಸಿದ್ದಾರೆ. ಈ ಮಸೀದಿಯನ್ನು ಸುಮಾರು ೩ ಅಡಿ ಅದಿಷ್ಟಾನದ ಮೇಲೆ ಕಟ್ಟಲಾಗಿದೆ. ಇದರ ಮೇಲೆ ಕಲ್ಲಿನ ಗೋಡೆ ಅದರ ಮೇಲೆ ಗಾರೆ ಮತ್ತು ಇಟ್ಟಿಗೆಯಿಂದ ಮೇಲ್ಭಾಗವನ್ನು ನಿರ್ಮಿಸಿದ್ದಾರೆ. ಮುಂಭಾಗದಲ್ಲಿ ಇಟ್ಟಿಗೆ ಮತ್ತು ಗಾರೆಯಿಂದ ಅಪೂರ್ಣಗೊಂಡ ಗೋಪುರಗಳನ್ನು ಕಾಣಬಹುದು. ಕಟ್ಟಡದ ಹಿಂಭಾಗವು ಗೋಡೆಯಿಂದ ಹೊರಬಂದಿದೆ. ಈ ಮಸೀದಿಯು ಉತ್ತರ ದಕ್ಷಿಣವಾಗಿ ೮.೫ಮೀ ಪೂರ್ವಪಶ್ಚಿಮ ಹಿಂಭಾಗದಲ್ಲಿ ೮ ಮೀ ಮುಂಭಾಗದಲ್ಲಿ ೮.೫ ಮೀ ಹಾಗೂ ಮುಂಭಾಗದ ಮುಖ್ಯದ್ವಾರ ೬.೨೦ಮೀ ಅಗಲವನ್ನು ಹೊಂದಿದೆ. ಒಳಭಾಗದಲ್ಲಿ ಮಸೀದಿಯ ವಿಸೀರ್ಣ ೭ಮೀ ಅಗಲ ೭ಮೀ ಉದ್ದವಿದೆ. ಮಸೀದಿಯ ಎತ್ತರ ೪ ಮೀಟರ್ ಮುಂಭಾಗದ ಗೋಪುರದ ಎತ್ತರವು ಸುಮಾರು ೭ಮೀಟರಾಗಿದೆ. ಒಳಭಾಗದಲ್ಲಿ ೪ ಕಂಬಗಳಿಂದ ಮಸೀದಿ ರಚಿಸಿದ್ದಾರೆ. ಒಳಭಾಗದಲ್ಲಿ ಗೋಡೆಗೆ ಇಟ್ಟಿಗೆ ಮತ್ತು ಗಾರೆಯಿಂದ ಮುಸ್ಲಿಂವಾಸ್ತು ಶೈಲಿಯ ಗೂಡುಗಳು,

ಕಮಾನುಗಳು ಅರ್ಧ ಕಮಾನುಗಳನ್ನು ರಚಿಸಿದ್ದಾರೆ. ಮುಸೀದಿ ಒಳಗಿನ ಕಂಬಗಳ ರಚನೆಯು ಕೆಳಗೆ ಪೀಠ ಇದರ ಮೇಲೆ ಚೌಕಾಕಾರ ೧೬ಮುಖ ವೃತ್ತಾಕಾರ ಫಲಕ ಬೋದಿಗೆಯನ್ನು ಒಳಗೊಂಡಿದೆ. ಮತ್ತೊಂದು ಮಾದರಿಯ ಕಂಬವು ಪೀಠ, ಚೌಕ ಅಷ್ಟಕೋನ ನಾಗಬಂಧ, ಅಷ್ಟ ಮುಖ, ವೃತ್ತಾಕಾರ ಫಲಕ ಬೋದಿಗೆಯನ್ನು ಒಳಗೊಂಡಿದ್ದು, ಒಳಭಾಗದಲ್ಲಿ ಗಾರೆಯಿಂದ ಪ್ಲಾಸ್ಟಿಂಗ್ ಮಾಡಲಾಗಿದೆ.

ಮಸೀದಿ ಮುಂಭಾಗದ ದ್ವಾರ ಮಂಟಪ

ಇದು ಪಾಳೇಗಾರರ ಕಾಲದಲ್ಲಿ ರಚನೆಯಾದ ಮುಖ್ಯದ್ವಾರವಾಗಿದೆ. ಇದು ವಿಜಯನಗರ ಶೈಲಿಯ ಕಂಬಗಳಿಂದ ಕೂಡಿದ ಸುಂದರ ದ್ವಾರ ಮಂಟಪವಾಗಿದೆ. ಇದರ ಅಗಲ ೬.೬ಮೀ, ಉದ್ದ ೪.೮ಮೀ ಹಾಗೂ ೧.೫ಮೀ ಅಗಲ ೩.೧೦ಮೀ ಎತ್ತರವನ್ನು ಒಳಗೊಂಡಿದೆ. ಎತ್ತರವಾದ ಜಗುಲಿಯ ಮೇಲೆ ಎರಡು ಕಂಬಗಳಿಂದ ರಚಿಸಿದ್ದಾರೆ. ಇವು ಪೀಠ, ಚೌಕ, ಅಷ್ಟಮುಖ, ಚೌಕ, ಘಟ, ಕುಂಭ, ಫಲಕ ಬೋದಿಗೆಯನ್ನು ಒಳಗೊಂಡಿದೆ. ದ್ವಾರದ ಎರಡೂ ಕಡೆ ಕೆಳಭಾಗದಲ್ಲಿ ನೃತ್ಯ ಗಾರ್ತಿಯರು ಕಂಡುಬರುತ್ತಾರೆ. ಇವರು ಕೈಗಳನ್ನು ಒಂದು ಸೊಂಟದ ಮೇಲೂ ಮತ್ತೊಂದು ಕೈನಲ್ಲಿ ಕಮಲದ ಹೂವನ್ನು ಹಿಡಿದು ವೈಯಾರದಿಂದ ಒಂದು ಕಾಲಿನ ಮೇಲೆ ನಿಂತು ಪಶ್ಚಿಮದ ಕಡೆ ಮುಖಮಾಡಿದ್ದಾರೆ. ಇದಕ್ಕೆ ತಾಗಿದಂತೆ ಎಡಭಾಗಕ್ಕೆ ಒಂದು ಶಿಥಿಲವಾದ ಮಂಟಪವಿದ್ದು ಇದು ಬಹುಷ ಹಿಂದೆ ಇಲ್ಲಿದ್ದ ದೇವಾಲಯಕ್ಕೆ ಸಂಬಂಧಿಸಿದಂತಹ ಮಂಟಪವಾಗಿರಬಹುದೆಂದು ಹೇಳಬಹುದಾಗಿದೆ ಈಗ ಶಿಥಿಲಾವಸ್ಥೆಯಲ್ಲಿದೆ.

ಸುಬ್ಬಯ್ಯ ಬತೇರಿಯ ಕೆಳಗಿನ ಮಂಟಪ

ಇದನ್ನು ಪಾಳೇಗಾರರ ಕಾಲದಲ್ಲಿ ಲೆಕ್ಕ ಪತ್ರ ಇಲಾಖೆಗೆ ಬಳಸುತ್ತಿದ್ದಂತಹ ಕೊಠಡಿ ಎಂದು ಸ್ಥಳೀಯರು ಹೇಳುತ್ತಾರೆ. ಇದು ಕಂಬಗಳಿಂದ ಕೂಡಿದ್ದು ಪೂರ್ವಭಾಗದಲ್ಲಿ ದ್ವಾರವಿದೆ. ದಕ್ಷಿಣ ಭಾಗದಲ್ಲಿ ಒಂದು ಗೂಡನ್ನು ಬಿಡಲಾಗಿದೆ. ಕಲ್ಲು ಮತ್ತು ಗಾರೆಯಿಂದ ಕಟ್ಟಿದ್ದು ಮೇಲ್ಭಾಗದಲ್ಲಿ ಇಟ್ಟಿಗೆ ಗಾರೆಯಿಂದ ಮುಚ್ಚಿದ್ದಾರೆ. ಇದು ಮುಂಭಾಗದಲ್ಲಿ ೧೫ಮೀ ಅಗಲ, ೧೫ಮೀ ಉದ್ದ ಹಾಗೂ ೨.೭ಮೀಟರ್ ಎತ್ತರವನ್ನು ಹೊಂದಿದೆ.

ಮದ್ದಿನ ಮನೆ

ಕೋಟೆಯಲ್ಲಿ ಮದ್ದುಗುಂಡುಗಳನ್ನು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುವ ಸ್ಥಳಕ್ಕೆ ಮದ್ದಿನ ಮನೆ ಎನ್ನುವರು. ಇವುಗಳನ್ನು ಆಯುಧಶಾಲೆ, ಆಯುಧಾಗಾರ, ಎಂದು ಕರೆಯುತ್ತಾರೆ. ದುರ್ಗದ ಸಂಪತ್ತುಗಳಲ್ಲಿ ಶಶಾಸ್ತ್ರಗಳು ಒಂದು ಬಗೆಯ ಸಂಪತ್ತಾಗಿತ್ತೆಂದು ನೀತಿ ವಾಕ್ಯ ವೃತದಲ್ಲಿ ಹೇಳಲಾಗಿದೆ[೪] ಕೋಟೆಯ ಭದ್ರವಾದ ಸ್ಥಳಗಳಲ್ಲಿ ಯುದ್ಧ ಸಾಮಗ್ರಿಗಳಾದ

ಮದ್ದುಗುಂಡುಗಳನ್ನು ರಕ್ಷಿಸುವುದಕ್ಕಾಗಿ ಮದ್ದಿನ ಮನೆಗಳನ್ನು ನಿರ್ಮಿಸಿರುವುದು ಕಾಣಬಹುದು. ಪಾವಗಡ ಕೋಟೆಯಲ್ಲೂ ಹೈದರ್ ಕಾಲದಲ್ಲಿ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಲ್ಪಟ್ಟ ಮದ್ದಿನ ಮನೆ ಕಾಣಬಹುದು. ಇದನ್ನು ನೆಲಮಾಳಿಗೆ ಎಂದು ಸ್ಥಳೀಯರು ಹೇಳುವರು ಇದನ್ನು ಸುಲ್ತಾನ್ ಬತೇರಿಯ ಕೆಳಗೆ ಕಂಡುಬರುತ್ತದೆ. ಮದ್ದಿನ ಮನೆಯ ದ್ವಾರವು ದಕ್ಷಿಣಾಭಿಮುಖವಾಗಿದ್ದು ಪೂರ್ಣಾಭಿಮುಖವಾದ ಮೆಟ್ಟಿಲುಗಳನ್ನಿಳಿದು ಹೋದರೆ ಇಟ್ಟಿಗೆ ಗಾರೆಯಿಂದ ಕೂಡಿದ ಗೋಡೆಗಳು ಅರ್ಧ ಕಮಾನುಗಳ ಮಾದರಿಗಳನ್ನು ಗೋಡೆಗಳು ಕೋಟೆಗಳ ಮಾದರಿಯಲ್ಲಿ ಕಂಡುಬರುತ್ತದೆ. ಈ ಗೋಡೆಯ ಮೇಲೆ ಯುದ್ಧ ಚಿತ್ರಗಳು ಕೆತ್ತಲಾಗಿದೆ. ಆದರೆ ಇಂದು ಇವು ಕಂಡುಬರುವುದಿಲ್ಲ ಇದಕ್ಕೆ ಬೆಳಕಿನ ವ್ಯವಸ್ಥೆಗೆ ಒಂದು ಕಿಂಡಿಯನ್ನು ಬಿಡಲಾಗಿದೆ. ಮೇಲ್ಭಾಗದ್ದು ಎರಡೂ ಕಡೆ ಇಳಿಜಾರಾಗಿ ನಿರ್ಮಿಸಿದ್ದಾರೆ. ಇದರ ಹೊರಭಾಗದ ಸುತ್ತಳತೆ. ೧೨.೫ಮೀಟರ್ ಹೊರಭಾಗ ೮.೩ ಮೀಟರ್, ಒಳಭಾಗದಲ್ಲಿ ೧೦ ಮೀಟರ್ ಒಳಗೊಂಡಿದೆ. ಈ ಮನೆಗಳು ಮೇಲ್ಭಾಗದಲ್ಲಿ ಮಡಿಕೆ ಚೂರುಗಳಿಂದ ಅಲಂಕಾರ ಮಾಡಿದ್ದು ೩ ರೀತಿಯ ಇಟ್ಟಿಗೆಯನ್ನು ಬಳಸಿದ್ದಾರೆ. ಇದರ ಅಳತೆ ೨೧X೧೯X೧೪ ಸೆಂ.ಮೀ ಮೇಲ್ಭಾಗದ ತುದಿಯಲ್ಲಿರುವ ಇಟ್ಟಿಗೆಗಳು ೨೦X೧೩.೫X೪ ಸೆಂ.ಮೀ ಒಳಭಾಗದಲ್ಲಿ ೨೪X೧೯X೫ ಸೆಂ.ಮೀ ಅಳತೆಯ ಇಟ್ಟಿಗೆಯನ್ನು ಬಳಸಿದ್ದಾರೆ.

ಕಣಜಗಳು

ಕಣಜಗಳು ಕೋಟೆಯ ಸ್ಮಾರಕಗಳಲ್ಲಿ ಅತೀ ಮುಖ್ಯವಾದ ಅಂಗಭಾಗಗಳಾಗಿವೆ. ದುರ್ಗಗಳಲ್ಲಿ ಬಹಳ ವರ್ಷಗಳ ಕಾಲ ಕೆಡದೆ ಉಪಯೋಗಿಸಲು ಯೋಗ್ಯವಾದ ೨೨ ವಸ್ತುಗಳನ್ನು ಸಂಗ್ರಹಿಸಬೇಕೆಂದು ಕೌಟಿಲ್ಯನು ಅರ್ಥಶಾಸ್ತ್ರದಲ್ಲಿ ಹೇಳಿದ್ದಾನೆ.[೧೫] ಈ ರೀತಿಯ ವಸ್ತುಗಳನ್ನು ಸಂಗ್ರಹಿಸುವ ಸ್ಮಾರಕಗಳೇ ಕಣಜಗಳಾಗಿವೆ. ಒಟ್ಟಾರೆಯಾಗಿ ಇದು ಧಾನ್ಯಗಳನ್ನು ಸಂಗ್ರಹಿಸುವ ಸ್ಥಳವಾಗಿದೆ. ಎಲ್ಲಾ ಸಂಗ್ರಹಗಳಿಗಿಂತಲೂ ಮುಖ್ಯವಾದುದು ಧಾನ್ಯ ಸಂಗ್ರಹವೆಂದು ನೀತಿ ವಾಕ್ಯಮೃತದಲ್ಲಿ ಹೇಳಲಾಗಿದೆ.[೧೬] ಈ ಕಣಜಗಳು ವೃತ್ತಾಕಾರವಾಗಿ, ಚೌಕಾಕಾರವಾಗಿ ರಚಿಸುವರು ಇದಕ್ಕೆ ಕಲ್ಲು ಇಟ್ಟಿಗೆ ಮತ್ತು ಗಾರೆಯಿಂದ ರಚಿಸುವರು. ಪಾವಗಡ ಕೋಟೆಯಲ್ಲೂ ಇಂತಹ ಹಲವು ಕಣಜಗಳನ್ನು ನಾವು ನೋಡಬಹುದಾಗಿದೆ. ಇವು ಕೋಟೆಯೊಳಗಿನ ವ್ಯಕ್ತಿಗಳಿಗೆ ಆಹಾರ ಒದಗಿಸುವಂತಹವುಗಳಾಗಿದ್ದವು. ಇಲ್ಲಿನ ಕಣಜಗಳೆಂದರೆ.

ಕೋನೇರು ದೋಣೆಯ ಹಿಂಭಾಗದ ಕಣಜ

ಈ ಕಣಜಕ್ಕೆ ಯಾವುದೇ ರೀತಿಯ ಬಾಗಿಲುಗಳಿರುವುದಿಲ್ಲ ಮೇಲ್ಭಾಗದಲ್ಲಿ ಎರಡೂ ರಂಧ್ರಗಳಿದ್ದು ಇದರಿಂದ ಧಾನ್ಯಗಳನ್ನ ಸಂಗ್ರಹಿಸುತ್ತಿರಬಹುದು. ಕಲ್ಲು ಮತ್ತು ಗಾರೆಯಿಂದ

ರಚಿಸಿದ್ದು ಮೇಲ್ಭಾಗದಲ್ಲಿ ಗಾರೆ ಇಟ್ಟಿಗೆಯನ್ನು ಬಳಸಿ ಪ್ಲಾಸ್ಟಿಂಗ್ ಮಾಡಿದ್ದಾರೆ. ಈ ಕಣಜದ ಅಗಲ ೧೧.೩ ಮೀಟರ್ ಮೇಲ್ಭಾಗದಲ್ಲಿ ೧೧ ಮೀ ಉದ್ದ, ೫.೧೦ಮೀಟರ್ ಮುಂಭಾಗದಲ್ಲಿ ೩.೪ಮೀಟರ್ ಹೊಂದಿದೆ.

ಭೀಮನ ದೋಣೆಯ ಮುಂದಿರುವ ಚಿಕ್ಕ ಕಣಜ

ಭೀಮನ ದೋಣೆಯ ಪಕ್ಕದಲ್ಲಿ ೩ ಕಣಜಗಳು ಕಂಡುಬರುತ್ತವೆ. ಇವು ಗಾತ್ರದಲ್ಲಿ ಬೇರೆ ಬೇರೆ ಇದ್ದು ಚೌಕಾಕಾರವಾಗಿ ರಚಿಸಿದ್ದಾರೆ. ಕಲ್ಲು ಮತ್ತು ಗಾರೆಯನ್ನು ಬಳಸಿದ್ದು ಮೇಲ್ಭಾಗದಲ್ಲಿ ಗಾರೆ ಮತ್ತು ಇಟ್ಟಿಗೆಯಿಂದ ಮುಚ್ಚಿದ್ದಾರೆ. ಈ ಕಣಜವು ಉತ್ತರ-ದಕ್ಷಿಣವಾಗಿ ೭.೮ಮೀ, ಪೂರ್ವ-ಪಶ್ಚಿಮವಾಗಿ ೪.೮ಮೀಟರ್ ಮುಂಭಾಗದ ಅಗಲ ೭.೮ಮೀಟರ್ ವಿಸ್ತೀರ್ಣತೆ ಒಳಗೊಂಡಿದ್ದು ಪಶ್ಚಿಮಾಭಿಮುಖವಾಗಿ ಚಿಕ್ಕ ಗೂಡನ್ನು ಬಿಡಲಾಗಿದೆ. ಇದರ ಮೂಲಕ ದಾನ್ಯಗಳನ್ನು ಸಂಗ್ರಹಿಸುತ್ತಿದ್ದರು.

ಭೀಮನ ದೋಣೆಯ ಮುಂದಿರುವ ದೊಡ್ಡ ಕಣಜ

ಇದು ಮಿಕ್ಕೆಲ್ಲಾ ಕಣಜಗಳಗಿಂತ ದೊಡ್ಡದಾಗಿದ್ದು ಉತ್ತರ-ದಕ್ಷಿಣವಾಗಿ ೧೭ಮೀ ಪೂರ್ವ-ಪಶ್ಚಿಮವಾಗಿ ೮.೭ಮೀಟರ್ ಹಿಂಭಾಗದಲ್ಲಿ ಉಳಿದ ೧೭ಮೀ ಹಾಗೂ ಹಿಂಭಾಗದ ಕಣಜದ ಎತ್ತರ ೪ ಮೀಟರ್ ಮುಂಭಾಗದ ಎತ್ತರ ೩ಮೀಟರ್. ಪಶ್ಚಿಮ ಭಾಗದಲ್ಲಿ ಕಿಂಡಿಯನ್ನು ಬೆಟ್ಟದ ಒಳಭಾಗದಲ್ಲಿ ಕೆಳಗೆ ಗಾರೆಯಿಂದ ಪ್ಲಾಸ್ಟಿಂಗ್ ಮಾಡಿದ್ದಾರೆ. ಈ ಕಣಜವನ್ನು ಒಳಭಾಗದಲ್ಲಿ ಕಂಬಗಳಿಂದ ರಚಿಸಲಾಗಿದೆ. ಈ ಕಣಜಕ್ಕೆ ಬಳಸಿದ ಕಲ್ಲು ಮಧ್ಯಮ ಗಾತ್ರದ್ದಾಗಿದೆ. ಮೇಲ್ಭಾಗದಲ್ಲಿ ಗಾರೆಯಿಂದ ಮುಚ್ಚಿದ್ದು ಎರಡು ರಂಧ್ರಗಳನ್ನು ಬಿಡಲಾಗಿದೆ.

ಬಾಬಯ್ಯನ ಕೆರೆ ಹಿಂಭಾಗದ ಕಣಜ

ಇದು ಮಧ್ಯಮ ಗಾತ್ರದ ಕಣಜವಾಗಿದೆ. ಉತ್ತರ-ದಕ್ಷಿಣವಾಗಿ ೯.೮೦ಮೀಟರ್ ಪೂರ್ವ-ಪಶ್ಚಿಮದ ಉದ್ದ, ೬.೮೦ ಮೀಟರ್, ಹಿಂಭಾಗದಲ್ಲಿ ಉತ್ತರ-ದಕ್ಷಿಣ, ಉದ್ದ ೧೦ ಮೀಟರ್ ಒಳಗೊಂಡಿದೆ. ಈ ಕಣಜದ ಎತ್ತರ ಹಿಂಭಾಗದಲ್ಲಿ ೪ ಮೀಟರ್ ಇದ್ದರೆ ಮುಂಭಾಗದಲ್ಲಿ ೩.೧೦ ಮೀಟರ್ ಎತ್ತರ ಹೊಂದಿದೆ.

ಇಲ್ಲಿನ ಕಣಜಗಳನ್ನು ನೀರಿನ ಆಸರೆ ಇರುವ ಕಡೆ ಕಟ್ಟಿದ್ದಾರೆ. ಇಲ್ಲಿಯು ಮೂರು ಕಣಜಗಳು ಹಿಂಭಾಗದಲ್ಲಿ ಭೀಮನ ದೋಣೆಯಿದ್ದರೆ ಮುಂಭಾಗದಲ್ಲಿ ಬಾಬಯ್ಯನ ಕೆರೆ ಕಾಣಬಹುದು. ಮತ್ತೊಂದು ಕಣಜ ಕೋನೇರು ದೋಣೆಯ ಪಕ್ಕದಲ್ಲಿ ಕಂಡುಬರುತ್ತದೆ. ಅಂದರೆ ನೀರು ಯಥೇಚ್ಛವಾಗಿರುವ ಕಡೆ ಕಣಜಗಳನ್ನು ನಿರ್ಮಿಸಿರುವುದನ್ನು ಇಲ್ಲಿ ನಾವು

ಕಾಣಬಹುದಾಗಿದೆ. ಇಲ್ಲಿಯ ಕಣಜಗಳನ್ನು ಕೇವಲ ದವಸ ದಾನ್ಯಗಳನ್ನು ಕೂಡಿಡಲು ಅಷ್ಟೇ ಅಲ್ಲದೇ ಮದ್ದು ಗುಂಡುಗಳ ಸಂಗ್ರಹವನ್ನು ಮಾಡಲು ಸಹ ಬಳಸಿರಬಹುದೆಂದು ಹೇಳಬಹುದು.

ಪ್ರಮುಖ ಬತೇರಿಗಳು

ಶತ್ರುಗಳ ಸುಳಿವನ್ನು ದೂರದಿಂದಲೇ ವೀಕ್ಷಿಸಲು ಅನುಕೂಲವಾಗುವಂತೆ ನಿರ್ಮಾಣಗೊಂಡ ಕಟ್ಟಡಗಳೇ ಬತೇರಿಗಳು. ಇವು ವೃತ್ತಾಕಾರದಲ್ಲಿ ಕಂಡುಬರುತ್ತವೆ. ಇವುಗಳನ್ನು ಹೆಚ್ಚಾಗಿ ಗಿರಿದುರ್ಗಗಳಲ್ಲಿ ಕಾಣಬಹುದಾಗಿದೆ. ಸ್ಥಳೀಯವಾಗಿ ಇಂತಹ ಬತೇರಿಗಳನ್ನು ಕಹಳೆ ಬತೇರಿ, ಝುಂಡಾ ಬತೇರಿ, ರಣಬತೇರಿ ಎಂಬಿತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ಪಾವಗಡ ಕೋಟೆಯಲ್ಲಿ ನಾವು ಇಂತಹ ಬತೇರಿಗಳನ್ನು ಕಾಣಬಹುದಾಗಿದೆ. ಇಲ್ಲಿ ಕಂಡುಬರುವ ಪ್ರಮುಖ ಬತೇರಿಗಳಲ್ಲಿ ಸುಲ್ತಾನ ಬತೇರಿ ಅತ್ಯಂತ ಬೃಹತ್ ಹಾಗೂ ಎತ್ತರವಾಗಿರುವಂತಹ ಬತೇರಿಯಾಗಿದೆ. ಇದು ತುಂಬಾ ವಿಶಾಲವಾಗಿದ್ದು ನೆಲಮಾಳಿಗೆಯಿಂದ ಸುಮಾರು ೬೦ ಮೆಟ್ಟಿಲುಗಳನ್ನು ಹತ್ತಿ ಹೋದರೆ ವಿಶಾಲವಾಗಿರುವಂತ ಬತೇರಿ ಕಂಡುಬರುತ್ತದೆ. ಇದು ಮೇಲ್ಭಾಗದ ಸುತ್ತಳತೆ ಪೂರ್ವ ಪಶ್ಚಿಮಾಭಿಮುಖವಾಗಿ ೩೨ಮೀಟರ್ ಉತ್ತರ ದಕ್ಷಿಣವಾಗಿ ೩೧.೫೦ ಮೀಟರ್ ವಿಶಾಲವಾಗಿರುವಂತಹ ಬತೇರಿಯಾಗಿದ್ದು ಇದರ ಸುತ್ತಳತೆ ಮೇಲ್ಭಾಗದಲ್ಲಿ ೧೦೫ ಮೀಟರ್ ಅನ್ನು ಹೊಂದಿದ ವಿಶಾಲವಾದ ಬತೇರಿಯಾಗಿದೆ. ಮೇಲ್ಭಾಗದಲ್ಲಿ ಚಿಕ್ಕ ಚಿಕ್ಕ ಕಲ್ಲುಗಳು ಹಾಸಿ ಮತ್ತು ಗಾರೆಯಿಂದ ಸಮತಟ್ಟಾಗಿ ಮಾಡಿದ್ದಾರೆ. ಮಧ್ಯದಲ್ಲಿ ಎತ್ತರವಾದ ವೇದಿಕೆಯನ್ನು ಮಾಡಿದ್ದು ಇದರ ಮೇಲೆ ಹೋಗಲು ಮೆಟ್ಟಿಲು ವ್ಯವಸ್ಥೆ ಇದೆ ಇಲ್ಲಿ ಬಾವುಟವನ್ನು ಹಾರಿಸುತ್ತಿದ್ದರು ಹಾಗೂ ಫಿರಂಗಿಯನ್ನಿಡಲು ಇದನ್ನು ಕಟ್ಟಲಾಗುತ್ತಿತ್ತು ಎಂದು ಹೇಳಬಹುದು. ಇಲ್ಲಿ ಸೈನಿಕರು, ೧೪ ಕಾವಲು ಗೂಡುಗಳು ಹಾಗೂ ಫಿರಂಗಿಗಳ ಗೂಡುಗಳು ೨ ಮತ್ತು ಮದ್ದುಗುಂಡುಗಳನ್ನು ಶೇಖರಿಸಲು ವಿಶಾಲವಾದ ೨ ಗೂಡುಗಳು ಕಂಡುಬರುತ್ತವೆ ಸುತ್ತಲು ಇಟ್ಟಿಗೆ ಮತ್ತು ಗಾರೆಯಿಂದ ಕೈಪಿಡಿಗೋಡೆಯನ್ನು ರಚಿಸಿದ್ದಾರೆ.

ಇದರ ಪಶ್ಚಿಮ ಭಾಗಕ್ಕೆ ಮತ್ತೊಂದು ಎತ್ತರವಾದ ಚಿಕ್ಕ ಬತೇರಿ ಕಾಣಬಹುದು ಇದನ್ನು ಸುಬ್ಬಯ್ಯ ಬತೇರಿ ಎಂದು ಕರೆಯುತ್ತಾರೆ. ಸುಬ್ಬಯ್ಯನೆಂಬ ಮಂತ್ರಿಯ ಸೇವೆಯ ನೆನಪಿಗಾಗಿ ಅವನ ಹೆಸರನ್ನಿಡಲಾಗಿದೆ. ಇದು ಗಾತ್ರದಲ್ಲಿ ಚಿಕ್ಕದಾಗಿದ್ದು ದೂರದಲ್ಲಿ ಬರುವ ಶತ್ರುಗಳನ್ನು ಗುರುತಿಸಲು ಈ ಬತೇರಿಗಳನ್ನು ನಿರ್ಮಿಸುತ್ತಿದ್ದರು. ಬತೇರಿಗಳಲ್ಲದೇ ಬೆಟ್ಟದ ಮೇಲೆ ಹಲವು ಬುರುಜುಗಳನ್ನು ನೋಡಬಹುದು. ಕೋಟೆಯ ಅಯಕಟ್ಟಿನ ಭಾಗಗಳಲ್ಲಿ ಬುರುಜುಗಳು ತುಂಬಾ ಪ್ರಾಮುಖ್ಯತೆ ಪಡೆದುಕೊಂಡಿವೆ. ಕೋಟೆಯ ಪ್ರಾಕಾರದ ಮೇಲೂ

ಗೋಪುರದ ತುದಿಯಲ್ಲಿ ಕಟ್ಟುವ ಮತ್ತೊಂದು ವರ್ತುಲಾಕಾರದ ಕಟ್ಟಡವೇ ಬುರುಜು. ಕೋಟೆ ಗೋಡೆಯ ಮೇಲಿನ ಬುರುಜನ್ನು ಕೊತ್ತಲವೆಂದು ಕರ್ನಾಟಕ ವಾಸ್ತುಶಿಲ್ಪದಲ್ಲಿ ವಿವರಿಸಲಾಗಿದೆ.[೧೨] ಇಂತಹ ಬುರುಜುಗಳು ಇಲ್ಲಿ ನಾವು ಕಾಣಬಹುದಾಗಿದೆ. ಪಾವಗಡ ಕೋಟೆಯಲ್ಲಿ ಸುಮಾರು ೩೯ ಬುರುಜುಗಳನ್ನು ಕಾಣಬಹುದಾಗಿದೆ. ಇವುಗಳನ್ನು ಕೆಳಕೋಟೆಯಿಂದ ಬೆಟ್ಟದ ಮೇಲಿನ ಕೋಟೆಯವರೆಗೂ ಕಂಡುಬರುತ್ತವೆ. ಇವುಗಳನ್ನು ಹೆಚ್ಚಾಗಿ ವೃತ್ತಾಕಾರವಾಗಿ ಕಂಡುಬಂದರೆ ಒಂದು ಚೌಕಾಕಾರದ ಬುರುಜು ಕಂಡುಬರುತ್ತದೆ. ಇವುಗಳು ಕೆಳಭಾಗದಲ್ಲಿ ದೊಡ್ಡಗಾತ್ರದ ಕಲ್ಲನ್ನು ಬಳಸಿದ್ದು ಮೇಲ್ಭಾಗದಲ್ಲಿ ಮಧ್ಯಮ ಗಾತ್ರದ ಕಲ್ಲು ಬಳಸಿ ಮಧ್ಯದಲ್ಲಿ ಮಣ್ಣನ್ನು ಕಲ್ಲು ಗಚ್ಚು ಬಳಸಿದ್ದಾರೆ. ಮೇಲ್ಭಾಗದಲ್ಲಿ ಇಟ್ಟಿಗೆ ಮತ್ತು ಗಾರೆಯನ್ನು ಬಳಸಿ ಕಟ್ಟಿದ್ದಾರೆ. ಇವುಗಳು ೧೦ ಮೀಟರ್‌ನಿಂದ ಹಿಡಿದು ೧೮ ಮೀಟರ್ ವಿಸ್ತೀರ್ಣವಿರುವ ಬುರುಜುಗಳನ್ನು ಕಾಣಬಹುದಾಗಿದೆ. ಮೊದಲ ಸುತ್ತಿನ ಕೋಟೆಗಳು ಕೆಲವು ಕೊತ್ತಲಗಳಿಗೆ ಬಲಿಯಾದ ಸ್ತ್ರೀಯರ ಹೆಸರಿಂದ ಇವುಗಳನ್ನು ಕರೆಯುತ್ತಾರೆ. ಅವುಗಳಲ್ಲಿ ಕೊರಚು ಮುತ್ಯಾಲಮ್ಮನ ಬುರುಜು, ಆಚಾರಿ ಬುರುಜು, ಮತ್ತೊಂದು ಕೊಟಮ್ಮಳ ಬುರುಜು ಅಥವಾ ತೇರು ಕೊತ್ತಲ ಎಂದು ಕರೆಯುತ್ತಾರೆ. ಈ ಬುರುಜುಗಳನ್ನ ಕೋಟೆಯ ಆಯಕಟ್ಟಿನ ಪ್ರದೇಶದಲ್ಲಿ ರಚಿಸಿದ್ದು ಇವುಗಳಿಗೆ ಮೇಲ್ಭಾಗದಲ್ಲಿ ಬಂದೂಕು ಕಿಂಡಿಗಳು ಫಿರಂಗಿ ಇಡಲು ಗೂಡುಗಳನ್ನು ರಚಿಸಿರುವುದನ್ನು ಕಾಣಬಹದುದಾಗಿದೆ.

ತುಪ್ಪದ ಕೊಳ ಮತ್ತು ತುಪ್ಪದ ಕಣಜಗಳು

ಕರ್ನಾಟಕದ ಇತಿಹಾಸ ಪ್ರಸಿದ್ಧ ಕೋಟೆಗಳಲ್ಲಿ ಅವಿಭಾಜ್ಯ ಅಂಗವೆನಿಸಿದ ತುಪ್ಪದ ಕೊಳ ಅಥವಾ ತುಪ್ಪದ ಕಣಜಗಳೆಂಬ ವಿಶೇಷ ನಿರ್ಮಾಣಗಳನ್ನು ಇಂದಿಗೂ ಪಾವಗಡ ಬೆಟ್ಟದಲ್ಲಿ ಕಾಣಬಹುದು. ಇಲ್ಲಿ ಬೆಟ್ಟದ ಮೇಲ್ಭಾಗದ ಕೋನೇರು ಬಾವಿಯಿಂದ ಮುಂದೆ ನೇರವಾಗಿ ಹೋದರೆ ೨ ತುಪ್ಪದ ಕಣಜಗಳು ಕಂಡುಬರುತ್ತವೆ. ಇವುಗಳನ್ನು ತಲುಪುವ ಮಾರ್ಗವು ದುರ್ಗಮವಾಗಿದ್ದು ಸುಲಭವಾಗಿ ಇಲ್ಲಿಗೆ ತಲುಪಲು ಹಾಗುವುದಿಲ್ಲ. ಅಂತಹ ಸ್ಥಳದಲ್ಲಿ ಇವುಗಳನ್ನು ನಿರ್ಮಾಣಮಾಡಿರುವುದನ್ನು ಕಾಣಬಹುದು. ಈ ಎರಡು ತುಪ್ಪದ ಕೊಳಗಳ ರಚನಾ ವಿನ್ಯಾಸದಲ್ಲಿ ವ್ಯತ್ಯಾಸವಿದೆ. ತುಪ್ಪದ ಕೊಳಗಳು ಸಾಮಾನ್ಯವಾಗಿ ನೆಲಮಟ್ಟದಿಂದ ಕೆಳಗೆ ಬಾವಿಯಂತೆ ವರ್ತುಲಾಕಾರವಾಗಿ ನಿರ್ಮಿತವಾಗಿದ್ದು, ಇದರ ಒಳಭಾಗದಲ್ಲಿ ಗಾರೆಯಿಂದ ಗಿಲಾವು ಮಾಡಲಾಗಿದೆ. ಮೇಲ್ಭಾಗದ ಬಾಯಿ ಚಿಕ್ಕದಾಗಿದ್ದು ಒಳಗಡೆ ಹೋದಂತೆಲ್ಲಾ ವಿಶಾಲವಾಗುತ್ತ ಹೋಗಿವೆ. ನೆಲಮಟ್ಟದಿಂದ ಬಂಡೆಗಳ ಮೇಲೆ ವರ್ತುಲಾಕಾರದ ಇಟ್ಟಿಗೆ ಗಾರೆಗಳಿಂದ ನಿರ್ಮಿತವಾಗಿರುವ ಜಾಡಿಯಾಕಾರದ ಮಮ್ಮಟಿಗಳನ್ನು ಹೋಲುವ ಸಂಗ್ರಹಣಸ್ಥಾವರವೇ ತುಪ್ಪದ ಕಣಜಗಳು. ಪಾವಗಡ ಕೋಟೆಯಲ್ಲಿರುವ ತುಪ್ಪದ

ಕಣಜಗಳಲ್ಲಿ ಪೂರ್ವಭಾಗದ ತುಪ್ಪದ ಕೊಳದ ಸುತ್ತಳತೆಯು ೯.೬ಮೀಟರ್ ಹೊಂದಿದ್ದು, ೧.೭ ಮೀಟರ್ ಎತ್ತರವನ್ನು ಹೊಂದಿದೆ. ಮೇಲ್ಭಾಗದ ಮುಚ್ಚಳದ ಸುತ್ತಳತೆಯು ಸುಮಾರು ೮೦ ಸೆಂ.ಮೀ ಹೊಂದಿದೆ. ಹಾಗೂ ತುಪ್ಪದ ಕೊಳದ ಆಳ ೨.೨೦ ಮೀಟರ್ ಹೊಂದಿದೆ. ಪಶ್ಚಿಮ ಭಾಗದ ತುಪ್ಪದ ಕೊಳ ಮೊದಲ ತುಪ್ಪದ ಕೊಳಕ್ಕಿಂತ ಸುತ್ತಳತೆ ಕಡಿಮೆ. ಇದು ಸುಮಾರು ೭.೬ ಮೀಟರ್ ಸುತ್ತಳತೆ ಹೊಂದಿದೆ. ಇದಕ್ಕೆ ಕೆಳಭಾಗದಲ್ಲಿ ಕಲ್ಲಿನಿಂದ ಒಂದು ಸಾಲಲ್ಲಿ ೧ ಅಡಿ ಅಗಲದ ಗೋಡೆ ಕಟ್ಟಲಾಗಿದೆ. ಇದರ ಎತ್ತರ ೨ ಮೀಟರ್ ಇದೆ. ಇದು ಪೂರ್ವಭಾಗದ ತುಪ್ಪದ ಕೊಳಕ್ಕಿಂತ ನೋಡಲು ಆಕರ್ಷಕವಾಗಿದೆ. ಈ ತುಪ್ಪದ ಕೊಳಗಳಿಗೆ ರಕ್ಷಣಾ ವ್ಯವಸ್ಥೆ ಇದ್ದು ಇವುಗಳ ಪಕ್ಕದಲ್ಲಿಯೇ ಕಾವಲುಗಾರರ ಮಂಟಪವು ಶಿಥಿಲಾವಸ್ಥೇಯಲ್ಲಿದೆ. ಇವುಗಳಲ್ಲಿ ಶೇಖರಿಸಿದ ತುಪ್ಪವನ್ನು ಯುದ್ಧ ಸಮಯದಲ್ಲಿ ತುಪಾಕಿಗಳಿಗೆ, ಕೋವಿಗಳಿಗೆ ಸವರಲು ಹಾಗೂ ಗಾಯಗೊಂಡ ಸೈನಿಕರಿಗೆ ಶಸ್ತ್ರ ಚಿಕಿತ್ಸೆಯ ಸಮಯದಲ್ಲಿ ಇದನ್ನು ಉಪಯೋಗಿಸಲಾಗುತ್ತಿತ್ತು.[೧೮] ಇಂತಹ ತುಪ್ಪದ ಕಣಜಗಳು ಆ ಕಾಲದಲ್ಲಿ ಮಹತ್ವದ ಸ್ಥಾನವನ್ನು ಪಡೆದಿದ್ದವು.

ಈ ರೀತಿಯಾಗಿ ಪಾವಗಡ ಕೋಟೆಯು ಹಲವು ಸ್ಮಾರಕಗಳನ್ನು ಹೊಂದಿದ್ದು, ಅಂದಿನ ಸಂಸ್ಕೃತಿಯನ್ನು ತಿಳಿಸುವಂತಹದ್ದಾಗಿದೆ.

ಅಡಿ ಟಿಪ್ಪಣಿಗಳು

೧. ಬಾಲಸುಬ್ರಮಣ್ಯಂ (ಸಂ): ೨೦೦೪, ಕುರುಗೋಡು, ಲೇ.ರಮೇಶನಾಯಕ, ಪು-೮೮

೨. ಪ್ರಭಾಕರ್ ಎಂ.ಎಸ್: ೧೯೯೯, ದೇವಾಲಯಗಳ ವಾಸ್ತು ಚಂದ್ರಿಕೆ, ಪು-೨೭

೩. ರಾಮಚಂದ್ರರಾವ್ ಎಸ್.ಕೆ: ೧೯೯೪, ಭಾರತದ ದೇವಾಲಯಗಳು ನೆಲೆ-ಹಿನ್ನೆಲೆ, ಪು-೦೧

೪. ಸುರೇಶ್ ಕೆ.ಎಂ: ವಾಸುದೇವ ಬಡಿಗೇರ: ಸೋಮಶೇಖರ ಎಸ್.ವೈ: ಮೂಡಲಗೇರಿ ಕೊಟ್ರೇಶ್: ೨೦೦೧, ಕರ್ನಾಟಕ ದೇವಾಲಯಗಳ ಕೋಶ, ಹಾವೇರಿ ಜಿಲ್ಲೆ, ಪು-XV

೫. ಜ್ಞಾನಂದ ಜಿ: ೨೦೦೨, ಶಿಲ್ಪದರ್ಶ ಸಂಪುಟ-೨, ಕನ್ನಡ ವಿಶ್ವವಿದ್ಯಾಲಯ, ಪು-೧೬

೬. ವಾಸುದೇವ ಬಡಿಗೇರ: ಕರ್ನಾಟಕ ದೇವಾಲಯಗಳ ಕೋಶ, ಬಿಜಾಪುರ ಜಿಲ್ಲೆ, ಪು-೨

೭. ರಾಮಶೇಷನ್ ನಿ.ಕೃ: ೧೯೮೦, ಕರ್ನಾಟಕದ ಕೋಟೆ ಕೊತ್ತಲಗಳು, ಪು-೯

೮ Jagadish Ayyar P.V: 1921-22, Construction of Fort's QJMS. VOL II, Pg-370

೯. ರಾಮಕೃಷ್ಣ ಮೂರ್ತಿ: ೧೯೯೦, ಸಂಸ್ಕೃತ ಗ್ರಂಥಗಳಲ್ಲಿ ಕೋಟೆಗಳ ವರ್ಣನೆ, ಇತಿಹಾಸದರ್ಶನ ಸಂ.೬, ಪು-೧೫೭

೧೦. ಕೃಷ್ಣಭಟ್ಟ ಕೆ(ಅನು): ೧೯೭೨, ಕೌಟಿಲ್ಯನ ಅರ್ಥಶಾಸ್ತ್ರ, ಪು-೪೫

೧೧. ರಾಧಾಕೃಷ್ಣಮೂರ್ತಿ: ಇ.ದ.ಪೂರ್ವೋಕ್ತ, ಪು-೧೫೮

೧೨. ಈಶ್ವರಶಾಸ್ತ್ರಿ ಚಿ.(ಅನು): ೧೯೮೭, ಮನುಸ್ಮೃತಿ, ಪು-೨೭೦

೧೩. EC VOL-XII, 97, ೧೪೦೫, ಪಾವಗಡ, ತುಮಕೂರು (ಜಿಲ್ಲೆ)

೧೪. ದೀಕ್ಷಿತ್ ಜಿ.ಎಸ್ ಮತ್ತು ಇತರರು (ಸಂ): ೨೦೦೦, ಆಚಾರ್ಯಸೋಮದೇವ ವಿರಚಿತ ನೀತಿವಾಕ್ಯಂಮೃತಂ, ಪು-೨೧೮

೧೫. ಕೌಟಿಲ್ಯನ ಅರ್ಥಶಾಸ್ತ್ರ, ಪು-೧೦೨

೧೬. ದೀಕ್ಷಿತ್ ಜಿ.ಎಸ್, ಮತ್ತು ಇತರರು, ಪೂರ್ವೋಕ್ತ, ಪು-೨೦೬

೧೭. ರಮೇಶ್ ಚಿ.ಗೂ, ೧೯೭೭, ಕರ್ನಾಟಕ ವಾಸ್ತುಶಿಲ್ಪ, ಪು-೩೧

೧೮. ವಾಙ್ಮಯ ಇತಿಹಾಸ, ಕನ್ನಡ ಪ್ರಭ, ಜೂನ್ ೧೯೮೭

ಅಧ್ಯಾಯ–ಐದು

ಮೂರ್ತಿಶಿಲ್ಪ

ಅಧ್ಯಾಯ–ಐದು

ಮೂರ್ತಿಶಿಲ್ಪ

ಭಾರತದಲ್ಲಿ ದೇವತಾರಾಧನೆ ಮತ್ತು ವ್ಯವಸ್ಥಿತ ದೇವಾಲಯಗಳ ನಿರ್ಮಾಣ ಎಂದು ಆರಂಭವಾಯಿತೋ ಅಂದಿನಿಂದಲೂ ದೇವತಾ ಮೂರ್ತಿಗಳ ಪ್ರತಿಷ್ಠಾಪನೆಗೆ ಮತ್ತು ಆರಾಧನೆ ನಡೆದುಕೊಂಡು ಬಂದಿತೆಂದು ಹೇಳಬಹುದು. ಯಾವುದೇ ಪಂಥದ ದೇವಾಲಯವಿರಲಿ ಆ ದೇವಾಲಯಕ್ಕೊಂದು ದೇವತಾಮೂರ್ತಿ ಇದ್ದೇ ಇರುತ್ತದೆ. ಈ ರೀತಿಯ ಮೂರ್ತಿಗಳನ್ನು ಕುರಿತು ಶಾಸ್ತ್ರೀಯವಾಗಿ ಅಧ್ಯಯನ ಮಾಡುವ ಶಾಸ್ತ್ರವನ್ನು ಸ್ಥೂಲವಾಗಿ ಮೂರ್ತಿಶಾಸ್ತ್ರ ಎಂದು ಕರೆಯಬಹುದು. ಮೂರ್ತಿಶಿಲ್ಪವನ್ನು ವಿಗ್ರಹ ಪ್ರತಿಮಾ, ಶಿಲ್ಪ, ಮೂರ್ತಿ, ಬಿಂಬ, ಪ್ರತಿಕೃತಿ ಮೊದಲಾದ ಸಮಾನಾರ್ಥಕ ಪದಗಳಿಂದ ಕರೆಯಲಾಗುತ್ತದೆ. ಶಾಸ್ತ್ರೀಯ ನಿರೂಪಣೆಯ ಪ್ರಕಾರ ಮೂರ್ತಿಯ ಒಂದುರೂಪ ಒಂಬತ್ತು ಅಂಗಗಳನ್ನೂ ಒಳಗೊಂಡಿರುತ್ತದೆ. ಅವೆಂದರೆ ನ್ಯಾಸ (ರೂಪ ಸಂಯೋಜನೆ) ಅಲಂಕಾರ, ಮುದ್ರಾ (ಹಸ್ತಮುದ್ರೆಗಳು) ಆಯುಧ, ಭಾಪ್ರಕಕ್ಷ (ಆಸನ) ವಾಹನ, ಉಪದೇವ (ಪ್ರಧಾನ ದೇವತೆಯ ಜೊತೆ ತೋರಿಸಲ್ಪಡುವ ಇತರೆ ಕಡಿಮೆ ಮಹತ್ವದ ದೇವತೆಗಳು)[೧] ಈ ಶಾಸ್ತ್ರೀಯ ಸಂಪ್ರದಾಯಕ್ಕನುಗಣವಾಗಿ ದೇವತಾ ಮೂರ್ತಿಗಳು ರೂಪುಗೊಳ್ಳುತ್ತವೆ.

ಭಾರತದ ವಿವಿಧ ನೆಲೆಗಳ ಉತ್ಖನನದಲ್ಲಿ ದೊರೆತ ಪ್ರಾಕ್ತನಶಾಸ್ತ್ರ ಆಧಾರಗಳಿಂದ ಮೂರ್ತಿಶಿಲ್ಪವು ವಾಸ್ತುಶಿಲ್ಪದಷ್ಟೇ ಪ್ರಾಚೀನವಾದುದೆಂದು ತಿಳಿದುಬರುತ್ತದೆ. ಸಿಂಧೂ ನದಿ ಬಯಲಿನ ಸಂಸ್ಕೃತಿಯಲ್ಲಿ ದೊರೆತ ಶಿಲ್ಪಗಳೇ ಈವರೆಗೆ ಲಭ್ಯವಾದ ಅತ್ಯಂತ ಪ್ರಾಚೀನ ಮೂರ್ತಿ ಶಿಲ್ಪಗಳೆಂದು ಪರಿಗಣಿಸಲಾಗಿದೆ.[೨] ಇವು ನಂತರದ ಭಾರತೀಯ ಮೂರ್ತಿಶಿಲ್ಪಗಳ ಬೆಳವಣಿಗೆಗಳಿಗೆ ಪ್ರೇರಕವಾದವು. ವೇದಗಳ ಕಾಲದಲ್ಲಿ ಪ್ರಕೃತಿಯನ್ನು ಪೂಜಿಸುತ್ತಿದ್ದರೂ ಇಂದ್ರ, ವರುಣ, ರುದ್ರ, ಮೊದಲಾದ ದೇವತೆಗಳಿಗೆ ಮನುಷ್ಯಾಕೃತಿಯ ಕಲ್ಪನೆಯನ್ನು

ನೀಡಿರುವುದು ತಿಳಿದು ಬರುತ್ತದೆ.[೩] ರಾಮಾಯಣ ಹಾಗೂ ಮಹಾಭಾರತಗಳಲ್ಲಿ ದೇವಾಲಯಗಳ ಉಲ್ಲೇಖವಿರುವುದರಿಂದ ಆ ಕಾಲದಲ್ಲಿ ವಿಗ್ರಹರಾಧನೆ ಸ್ವಲ್ಪಮಟ್ಟಿಗೆ ಪ್ರಚಲಿತದಲ್ಲಿತ್ತೆಂದು ಪ್ರಾಕ್ತನಶಾಸ್ತ್ರಜ್ಞರ ಅಭಿಪ್ರಾಯವಾಗಿದೆ.[೪]

ಆದಿ ಇತಿಹಾಸ ಕಾಲದಲ್ಲಿ ಮೌರ್ಯರ ಶಿಲ್ಪಾಕೃತಿಗಳು ಅತ್ಯಂತ ಪ್ರಾಚೀನವಾದವು. ತನ್ನ ಪೂರ್ವಿಕರಿಗಿಂತ ಭಿನ್ನವಾಗಿ ಅಶೋಕ ಶಿಲಾ ಮಾಧ್ಯಮಕ್ಕೆ ಆಧ್ಯತೆಯನ್ನು ನೀಡಿದನು. ಕಲ್ಲಿನಿಂದ ಮಾಡಿದ ಮೂರ್ತಿಗಳಲ್ಲಿ ಸ್ತಂಭಗಳ ಮೇಲ್ಭಾಗದಲ್ಲಿ ವೃಷಭ, ಆನೆ, ಸಿಂಹ, ಕುದುರೆಯ ಆಕೃತಿಗಳು ಮುಖ್ಯವಾದುವಾಗಿವೆ.[೫] ಮೌರ್ಯರ ಶಕ್ತಿಯು ಇಳಿಮುಖವಾಗುತ್ತಿದ್ದಂತೆ ಶುಂಗರು, ಕುಶಾನರು, ಕಳಿಂಗರು ಹಾಗೂ ಗುಪ್ತರ ಕಾಲಗಳಲ್ಲಿ ಮೂರ್ತಿಶಿಲ್ಪಗಳ ರಚನೆಗೆ ಹೆಚ್ಚು ಪ್ರೋತ್ಸಾಹ ನೀಡಿದರು. ಅಲ್ಲದೇ ಇದೇ ಕಾಲದಲ್ಲಿ ವಿವಿಧ ಸಂಸ್ಕೃತಿಗಳ ಸಂಗಮವಾದ ಗಾಂಧಾರ ಶಿಲ್ಪ ಕಲೆಯು ಬೆಳವಣಿಗೆಯಾಯಿತು.[೬]

ಕರ್ನಾಟಕದಲ್ಲಿನ ಮೂರ್ತಿಶಿಲ್ಪ ಬೆಳವಣಿಗೆಯ ಪ್ರಾಚೀನತೆಯನ್ನು ಗಮನಿಸುವುದಾದರೆ ಕುಪ್ಪಗಲ್, ಪಿಕ್ಲಿಹಾಳ್, ಸಂಗನಕಲ್ಲು, ತೆಕ್ಕಲಕೋಟೆ ಮುಂತಾದ ನೆಲೆಗಳಲ್ಲಿ ನಡೆಸಿದ ಉತ್ಖನನಗಳಿಂದ ನೂತನ ಶಿಲಾಯುಗ ಕಾಲದ ಸುಡಾವೆ ಮಣ್ಣಿನ ಗೊಂಬೆಗಳು ದೊರೆತಿವೆ.[೭] ದಕ್ಷಿಣ ಭಾರತದಲ್ಲಿ ಐತಿಹಾಸಿಕ ಯುಗದಲ್ಲಿ ಶಾತವಾಹನ ಕಾಲದ ಗುಡಿಮಲ್ಲಂ, ಶಿವಲಿಂಗಂ ಅತ್ಯುತ್ತಮ ಕೊಡಗೆಯಾಗಿದೆ.[೮] ಅದೇ ರೀತಿ ಕದಂಬರು, ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಹೊಯ್ಸಳರು ಮತ್ತು ವಿಜಯನಗರದ ಅರಸರು ಹಾಗೂ ಸ್ಥಳೀಯ ಪಾಳೇಗಾರರು ಇವರೆಲ್ಲರೂ ಮೂರ್ತಿ ಶಿಲ್ಪಕಲೆಗೆ ನೀಡಿದ ಕಾಣಿಕೆ ಗಣನೀಯವಾದುದು. ಪಾವಗಡ ಪರಿಸರದ ಮೂರ್ತಿಶಿಲ್ಪಗಳ ಅಧ್ಯಯನದ ದೃಷ್ಟಿಯಿಂದ ನಾವು ಪ್ರಮುಖವಾಗಿ ಈ ಕೆಳಕಂಡಂತೆ ವಿಂಗಡಿಸಲಾಗಿದೆ.

೧. ಶಿಲಾ ಶಿಲ್ಪಗಳು

೨. ಕಂಚಿನ ಶಿಲ್ಪಗಳು

೩. ಗಾರೆ ಶಿಲ್ಪಗಳು

೫.೧ ಶಿಲಾ ಶಿಲ್ಪಗಳು

ಆರಂಭದಿಂದಲೂ ಮಾನವನು ಶಿಲೆಯೊಂದಿಗೆ ನಿಕಟ ಸಂಬಂಧ ಹೊಂದಿದ್ದು, ಹಿಂದಿನಿಂದಲೂ ಶಿಲೆಯಿಂದ ಮೂರ್ತಿಗಳ ನಿರ್ಮಾಣ ಕಾರ್ಯಕೈಗೊಳ್ಳುತ್ತಾ ಬಂದಿದ್ದಾನೆ. ಮತ್ಸ್ಯ ಪುರಾಣ ಕಲ್ಲಿನ ಮೂರ್ತಿಯ ತಯಾರಿಕೆಯ ಬಗ್ಗೆ ನಿರ್ಧರಿಸಿದೆ. ಶಿಲೆಗಳಲ್ಲಿ ಪುರುಷ ಶಿಲೆ, ಸ್ತ್ರೀಶಿಲೆ, ನಪುಂಸಕ ಶಿಲೆಗಳಿದ್ದು ಅವುಗಳನ್ನು ಕ್ರಮವಾಗಿ ಮುಖ್ಯ ಮೂರ್ತಿ, ಪೀಠ,

ಪಿಂಡಕ ಅಥವಾ ಕೆಳಭಾಗದ ರಚನೆಗೆ ಬಳಸಬೇಕೆಂದು ತಿಳಿಸಲಾಗಿದೆ. ಪಾವಗಡ ಪರಿಸರದಲ್ಲಿ ಶಿಲೆಯಿಂದ ರಚನೆಗೊಂಡಂತಹ ಹಲವು ಮೂರ್ತಿಶಿಲ್ಪಗಳನ್ನು ನಾವು ಕಾಣಬಹುದು. ಇವುಗಳು ವಿವಿಧ ಅರಸರ ಕಾಲದಲ್ಲಿ ರಚನೆಗೊಂಡಂತಹವುಗಳಾಗಿವೆ. ಈ ಪರಿಸರದಲ್ಲಿ ಹೆಚ್ಚಾಗಿ ಶೈವ ಪಂಥ, ವೈಷ್ಣವ ಪಂಥ, ಶಾಕ್ತಪಂಥ ಹಾಗೂ ಜೈನ ಧರ್ಮಕ್ಕೆ ಸಂಬಂಧಿಸಿದ ಮೂರ್ತಿಶಿಲ್ಪಗಳು ಕಂಡುಬಂದಿವೆ.

ಶೈವ ದ್ವಾರಪಾಲಕರು

ಪಾವಗಡ ಮತ್ತು ಗುಂಡ್ಲಹಳ್ಳಿಯಲ್ಲಿಯ ಈಶ್ವರ ದೇವಾಲಯಗಳ ತೆರೆದ ಮಂಟಪ ಮತ್ತು ನವರಂಗ ಭಾಗದಲ್ಲಿ ಶೈವ ದ್ವಾರಪಾಲಕರನ್ನು ಖಂಡರಿಸಲಾಗಿದೆ. ಇವುಗಳು ತೆರೆದ ಮಂಟಪ ದ್ವಾರದ ಇಕ್ಕೆಲಗಳಲ್ಲಿ ಇದ್ದು ಇವು ಚತುರ್ಭುಜಧಾರಿಯಾಗಿ ದ್ವಿಭಂಗಿಯನ್ನು ಸ್ಥಾನಿಕವಾಗಿವೆ. ಕಿರೀಟ ಮುಕುಟದಾರಿಯಾದ ಈ ಮೂರ್ತಿ ಕಿವಿಗಳಲ್ಲಿ ಕುಂಡಲಿಗಳಿದ್ದು, ನೀಳವಾದ ಕಣ್ಣು ಮಂದಹಾಸ ಬೀರುತ್ತಿರುವ ಮುಖ. ಜಡೆಯು ಭುಜದ ಮೇಲೆ ಇಳಿಬಿಟ್ಟಂತಿದೆ. ಕೊರಳಲ್ಲಿ ಕಂಠಿಹಾರ, ಮೊಣಕಾಲಿನವರೆಗೂ ಇಳಿಬಿಟ್ಟಿರುವ ವಸ್ತ್ರ ಕೈಯಲ್ಲಿ ಕಡಗ, ಭುಜ ಪಟ್ಟಿಗಳನ್ನು ಹೊಂದಿದೆ. ಮೇಲಿನ ಬಲಗೈಯಲ್ಲಿ ತ್ರಿಶೂಲ ಎಡಗೈಯಲ್ಲಿ ಡಮರುಗ, ಬಲಭಾಗದ ಕೆಳಗಿನ ಕೈ ಅಭಯ ಮುದ್ರೆಯಲ್ಲಿ, ಕೆಳ ಎಡಗೈಯಲ್ಲಿ ಗದೆ ಇದೆ. ಕಾಲಿನಲ್ಲಿ ದಪ್ಪವಾದ ಕಾಲ್ಕಡಗ ಇದೆ. ಬಲಭಾಗದ ಮೂರ್ತಿಯು ಬಲಗಾಲಿನ ಮೇಲೆ ದೇಹದ ಭಾರಬಿಟ್ಟಿರುವಂತೆ ಹಾಗೂ ಎಡಭಾಗದ ಮೂರ್ತಿಯು ಎಡಗಾಲಿನ ಮೇಲೆ ದೇಹದ ಭಾರವನ್ನು ಬಿಟ್ಟಿರುವಂತೆ ಖಂಡರಿಸಲಾಗಿದೆ. ಪಾವಗಡ ಈಶ್ವರ ದೇವಾಲಯದ ಶೈವ ದ್ವಾರಪಾಲಕರು ಕಪ್ಪು ಶಿಲೆಯಲ್ಲೂ, ಗುಂಡ್ಲಹಳ್ಳಿ ಈಶ್ವರ ದೇವಾಲಯದ ದ್ವಾರಪಾಲಕರನ್ನು ಬಿಳಿ ಗ್ರಾನೈಟ್ ಕಲ್ಲಿನಲ್ಲಿ ಖಂಡರಿಸಿದ್ದಾರೆ.

ಶಿವಲಿಂಗ

ಪಾವಗಡ ನಗರದ ಬೆಟ್ಟಕ್ಕೆ ಹೋಗುವ ದಾರಿಯಲ್ಲಿರುವ ಈಶ್ವರ ದೇವಾಲಯದ ಗರ್ಭಗುಡಿಯಲ್ಲಿರುವ ಲಿಂಗವು ೨ ಅಡಿ ಎತ್ತರದಲ್ಲಿ ಕಂಡುಬರುತ್ತದೆ. ಲಿಂಗವು ಪೂರ್ವಾಭಿಮುಖವಾಗಿದ್ದು ಈ ಶಿವಲಿಂಗಕ್ಕೆ ಬ್ರಹ್ಮ ಮತ್ತು ವಿಷ್ಣು ಭಾಗಗಳು ಕಂಡುಬರುವುದಿಲ್ಲ ರುದ್ರಭಾಗ ಮಾತ್ರ ಕಂಡುಬರುತ್ತದೆ. ಈ ಲಿಂಗಕ್ಕೆ ಜಲಿಹರಿಯು ಕಾಣುವುದಿಲ್ಲ. ಇದು ಪಾಳೆಯಗಾರರ ಕಾಲದಲ್ಲಿ ನಿರ್ಮಿಸಲ್ಪಟ್ಟಂತಹದ್ದಾಗಿದೆ. ಮತ್ತೊಂದು ಗುಂಡಾರ್ಲಹಳ್ಳಿಯ ಆಂಜನೇಯ ದೇವಾಲಯದ ಒಳಗೆ ಇರುವ ಈಶ್ವರ ದೇವಾಲಯದ ಗರ್ಭಗುಡಿಯಲ್ಲಿರುವ ಶಿವಲಿಂಗ. ಇದು ಪೂರ್ವಾಭಿಮುಖವಾಗಿದ್ದು ಪಾಣಿಪೀಠದ ಮೇಲೆ ಸುಮಾರು ೩ ಅಡಿ ಎತ್ತರವನ್ನು ಹೊಂದಿದೆ. ಈ ಶಿವಲಿಂಗಕ್ಕೆ ಬ್ರಹ್ಮ, ವಿಷ್ಣು ಮತ್ತು ರುದ್ರಭಾಗಗಳು ಗೋಚರಿಸುತ್ತವೆ. ಸೋಮಸೂತ್ರ ಮಧ್ಯದಲ್ಲಿ ಕಂಡುಬರುತ್ತದೆ. ಪಾಣಿಪೀಠವು ದೇವಾಲಯದ

ಅದಿಷ್ಟಾನದಂತೆ ಇದ್ದು ಅದೋಪದ್ಮ, ತ್ರಿಪಟಿಕುಮುದ, ಭಾಗಗಳು ಹೊಂದಿದೆ. ಇದಕ್ಕೆ ಜಲಹರಿಯು ಎಡಭಾಗಕ್ಕೆ ಇದೆ. ಇದನ್ನು ಕಪ್ಪು ಗ್ರಾನೈಟ್‌ಶಿಲೆಯಿಂದ ರಚಿಸಲಾಗಿದೆ. ಇದನ್ನು ತುಂಬಾ ಸುಂದರವಾಗಿ ಕೆತ್ತಲಾಗಿದೆ.

ಶಿವ

ಪಳವಳ್ಳಿ ಕೆರೆ ಕಟ್ಟೆಯ ಏರಿಯ ಮೇಲಿರುವ ಶಿವನ ಮೂರ್ತಿಯನ್ನು ಪಶ್ಚಿಮಾಭಿಮುಖವಾಗಿ ನಿಲ್ಲಿಸಲಾಗಿದೆ. ಇದನ್ನು ಕಪ್ಪು ಮತ್ತು ಬಿಳಿ ಮಿಶ್ರಿತ ಕಣಶಿಲೆಯಿಂದ ರಚಿಸಲಾಗಿದೆ. ಇದು ೨ ಅಡಿ ಎತ್ತರ ೯ ಇಂಚು ದಪ್ಪವಿದೆ. ಚತುರ್ಭುಜ ಧಾರಿಯಾದ ಶಿವನ ಮೂರ್ತಿ ಸ್ಥಾನಿಕ ಬಂಗಿಯಲ್ಲಿದೆ, ಕಿವಿಯಲ್ಲಿ ಸರ್ಪಕುಂಡಲಗಳನ್ನು ಧರಿಸಿರುವನು. ಈ ಮೂರ್ತಿಯ ಬಲಭಾಗದ ಮೇಲಿನ ಕೈಯಲ್ಲಿ ತ್ರಿಶೂಲವಿಡಿದಿದ್ದು ಅದನ್ನು ಹಾವು ಸುತ್ತುಕೊಂಡಿದೆ. ಕೆಳಭಾಗದ ಕೈ ತೃಟಿತಗೊಂಡಿದೆ. ಎಡಭಾಗದ ಮೇಲ್ಭಾಗದ ಕೈಯಲ್ಲಿ ಡಮರುಗವನ್ನಿಡಿದಿದ್ದಾನೆ. ಕೆಳಭಾಗ ತೃಟಿತಗೊಂಡಿದೆ. ಕೈಗಳಿಗೆ ಭುಜಕೀರ್ತಿ, ಕೇಯೂರ, ಕೈಕಡಗ ಧರಿಸಿರುವನು. ಎದೆಯಭಾಗ ಸ್ವಲ್ಪ ತೃಟಿತಗೊಂಡಿದ್ದು, ಯಜ್ಞೋಪವೀತ, ಸೊಂಟಪಟ್ಟಿ ಸರಗಳಿಂದ ಅಲಂಕೃತವಾದ ವಸ್ತ್ರ ಕೆಳಗಿನ ಕಾಲಿನವರೆಗೂ ಇದೆ.

ಭೈರವ ಮೂರ್ತಿ

ಪಾವಗಡದ ಈಶ್ವರ ದೇವಾಲಯದ ಪ್ರಸ್ತರ ಭಾಗದ ಕೋಷ್ಟಕದಲ್ಲಿರುವ ಭೈರವ ಮೂರ್ತಿಯು ಪೂರ್ವಾಭಿಮುಖವಾಗಿ ನಿಂತಿರುವಂತೆ ಖಂಡರಿಸಲಾಗಿದೆ. ಇದನ್ನು ಕಪ್ಪು ಗ್ರಾನೇಟ್ ಶಿಲೆಯಲ್ಲಿ ನಿರ್ಮಿಸಲಾಗಿದೆ. ಚತುರ್ಭುಜದಾರಿಯಾದ ಭೈರವನು ನಗ್ನವಾಗಿದ್ದು, ಕೆದರಿದ ಜಡೆ, ಸರ್ಪಕುಂಡಲ, ಎದೆಪಟ್ಟಿ ಹೊಂದಿದೆ. ಮುಖದಲ್ಲಿ ಉಗ್ರರೂಪ ಎದ್ದುಕಾಣುತ್ತಿರುವಂತೆ ಖಂಡರಿಸಲಾಗಿದೆ. ಯಜ್ಞೋಪವೀತ, ಸೊಂಟದಲ್ಲಿ ಪಟ್ಟಿಯನ್ನು ಧರಿಸಿರುವನು. ರುಂಡಗಳ ಹಾರವು ಎಡಗಾಲಿನ ಕೆಳಗಿನವರೆಗೂ ಇದೆ. ಬಲಭಾಗದ ಕೈಗಳಲ್ಲಿ ತ್ರಿಶೂಲ ಹಾಗೂ ಕತ್ತಿಯನ್ನು ಹಿಡಿದಿರುವನು. ಎಡಭಾಗದ ಕೈಗಳಲ್ಲಿ ಡಮರು ಮತ್ತೊಂದು ಕೈನಲ್ಲಿ ರಾಕ್ಷಸನ ತಲೆಯನ್ನು ಹಿಡಿದಿರುವನು ಕಾಲುಗಳಲ್ಲಿ ಕಾಲ್ಕಡಗ, ಪಾದಸರಗಳನ್ನು ಧರಿಸಿದ್ದು ಚಪ್ಪಲಿಗಳನ್ನು ಧರಿಸಿದ್ದಾನೆ. ಭೈರವನ ಎಡಭಾಗದ ಕೆಳಭಾಗದಲ್ಲಿ ತನ್ನ ಎರಡೂ ಕಾಲೆತ್ತಿ ನಾಯಿಯೊಂದು ರಾಕ್ಷಸನ ತಲೆಯಿಂದ ಓಸರುತ್ತಿರುವ ರಕ್ತವನ್ನು ನೆಕ್ಕುತ್ತಿರುವಂತೆ ಕಂಡುಬರುತ್ತದೆ.

ನಂದಿ ವಿಗ್ರಹಗಳು

ನಂದಿ ವಿಗ್ರಹಗಳು ಈಶ್ವರ ದೇವಾಲಯಗಳಲ್ಲಿ ಸಾಮಾನ್ಯವಾಗಿ ಕಾಣಬಹುದು ಕೆಲವು ದೇವಾಲಯಗಳಲ್ಲಿ ಅಪರೂಪಕ್ಕೆ ಕಂಡುಬರುವುದಿಲ್ಲ. ನಂದಿಗಳು ಕೆಲವು ಅಲಂಕಾರ

ರಹಿತವಾಗಿರುವವು. ಈ ರೀತಿಯ ನಂದಿಯನ್ನು ಪಾವಗಡದ ಈಶ್ವರ ದೇವಾಲಯದಲ್ಲೂ ಅಲಂಕಾರ ಸಹಿತವಾಗಿರುವ ನಂದಿಯನ್ನು ಗುಂಡಾರ್ಲಹಳ್ಳಿಯ ಈಶ್ವರ ದೇವಾಲಯದಲ್ಲಿ ಕಾಣಬಹುದು. ಸಾಧಾರಣ ಅಲಂಕಾರಿತವಾದ ನಂದಿಯು ತಲೆಯನ್ನು ತಗ್ಗಿಸಿ ಲಿಂಗಕ್ಕೆ ಎದುರಾಗಿ ಮುಂದಿನ ಬಲಗಾಲನ್ನು ಮುಂದೆ ಚಾಚಿ ಎಡಗಾಲನ್ನು ಮಡಚಿದೆ. ಕೊರಳಲ್ಲಿ ಸಾಧಾರಣ ಗಂಟೆಯಿದ್ದು ಭುಜವು ಅಷ್ಟೇನು ಎತ್ತರವಾಗಿಲ್ಲ. ಇನ್ನೂ ಅಲಂಕಾರ ಸಹಿತವಾದ ಗುಂಡಾರ್ಲ ಹಳ್ಳಿಯ ನಂದಿಯು ಸುಂದರವಾಗಿ ಕೆತ್ತಲಾಗಿದೆ. ವಿನೀತಭಾವದಿಂದ ತಲೆತಗ್ಗಿಸಿ ಲಿಂಗಕ್ಕೆ ಎದುರಾಗಿ, ಎಡಗಾಲನ್ನು ಮುಂದೆ ಚಾಚಿ ಬಲಗಾಲ ಮೇಲೆ ಒರಗಿ ಮಲಗಿಕೊಂಡ ಹಾಗೆ ಕಂಡು ಬರುತ್ತದೆ. ಈ ಮೂರ್ತಿಗಳ ಕೊರಳಲ್ಲಿ ಗಂಟೆಸರ, ಹಣೆಪಟ್ಟಿ, ಬೆನ್ನ ಮೇಲೆ ಗಂಟೆಸರ ಮತ್ತು ಮೈಯನ್ನು ಅಲಂಕಾರಿಕ ಬಟ್ಟೆಯಿಂದ ಅಲಂಕರಿಸಿರುವರು ಬಾಲವು ಬಲಗಾಲಿನ ಒಳಭಾಗದಿಂದ ಹೊರಬಂದಿದೆ.

ಹರಿಹರರೇಶ್ವರ

ಪಾವಗಡದ ತಾಲ್ಲೂಕು ಪಂಚಾಯಿತಿ ಆವರಣದಲ್ಲಿರುವ ಈ ವಿಗ್ರಹವು ಉತ್ತರಾಭಿಮುಖವಾಗಿದ್ದು ಎತ್ತರವಾದ ಪೀಠದ ಮೇಲೆ ಸುಮಾರು ೫ ಅಡಿ ಎತ್ತರದ ಹಾಗೂ ೨೧/೨ ಅಡಿ ಅಗಲದಲ್ಲಿ ಬಳಪದ ಕಲ್ಲಿನಲ್ಲಿ ಕೆತ್ತಲಾಗಿದೆ. ಚರ್ತುಭುಜದಾರಿಯಾದ ಈ ಮೂರ್ತಿಯು ಸಮಭಂಗಿಯಲ್ಲಿ ಸ್ಥಾನಿಕವಾಗಿದೆ. ಕಿರೀಟಧರಿಸಿದ ಈ ಮೂರ್ತಿಯ ಶಿರದ ಹಿಂಭಾಗದಲ್ಲಿ ಶಿರಶಚಕ್ರವಿದೆ. ಮುಖದಲ್ಲಿ ಮಂದಾಹಾಸ ಬೀರುವಂತಿದೆ. ಕಿವಿಯಲ್ಲಿ ಮಕರ ಕುಂಡಲಗಳಿವೆ. ಕೊರಳಲ್ಲಿ ಕಂಠಾಭರಣ ಹಾಗೂ ಅನೇಕ ಬಗೆಯ ಹಾರಗಳಿವೆ, ಯಜ್ಞೋಪವೀತ, ವೈಜಯಂತೀ ಹಾರಗಳಿದ್ದು ಭುಜದಲ್ಲಿ ಭುಜಕೀರ್ತಿ, ಕೇಯೂ ಕೈಗಡಗಳಿವೆ ಕೈಗಳಲ್ಲಿ ಎಡಭಾಗದ ಕೈಗಳಲ್ಲಿ ಶಂಕು ಚಕ್ರಗಳಿದ್ದು ಐದು ಬೆರಳಿಗೂ ಉಂಗುರಳನ್ನು ಧರಿಸಲಾಗಿದೆ. ಬಲಭಾಗದ ಕೈಗಳಲ್ಲಿ ತ್ರಿಶೂಲ ಮತ್ತೊಂದು ಕೈ ತೃಟಿತಗೊಂಡಿದೆ. ಬಲಗೈ ಮೂರು ಬೆರಳುಗಳಿಗೆ ಉಂಗುರ ಧರಿಸಲಾಗಿದೆ. ನಡುವಿನಿಂದ ಇಳಿಬಿದ್ದ ದೋತಿ ಇದ್ದು ಅದರ ಮುಂಭಾಗವನ್ನು ಹಾಗೂ ಪಕ್ಕದಲ್ಲಿ ಮಣಿಸರಗಳಿಂದ ಅಲಂಕರಿಸಲಾಗಿದೆ. ಕಾಲಿನಲ್ಲಿ ಕಾಲ್ಕಡಗ, ಪಾದಸರಗಳಿವೆ. ಪೀಠದಲ್ಲಿ ಎಡಭಾಗದಲ್ಲಿ ಗರುಡ ಕೈ ಮುಗಿದು ಕುಳಿತಿದ್ದು ಬಲಭಾಗದಲ್ಲಿ ಶಿವನ ವಾಹನವಾದ ನಂದಿ ನಿಂತಿರುವುದನ್ನು ಕಾಣಬಹುದಾಗಿದೆ. ಈ ಮೂರ್ತಿಯ ಬಲಭಾಗದಲ್ಲಿ ಶಿವನಿಗೆ ಸಂಬಂಧಿಸಿದಂತಹ ಲಕ್ಷಣಗಳನ್ನು ಎಡಭಾಗದಲ್ಲಿ ವಿಷ್ಣುವಿಗೆ ಸಂಬಂಧಿಸಿದ ಲಕ್ಷಣಗಳನ್ನೊಂದಿರುವುದರಿಂದ ಇದು ಹರಿಹರೇಶ್ವರ ಮೂರ್ತಿಯಾಗಿದೆ. ಸುತ್ತಲೂ ಹೂ ಬಳ್ಳಿಯ ಪ್ರಭಾವಳಿ ಕಾಣಬಹುದಾಗಿದೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದು ಹೊಯ್ಸಳರ ಕಾಲದಲ್ಲಿ ರಚನೆಗೊಂಡಿರಬಹುದೆಂದು ಹೇಳಬಹುದಾಗಿದೆ.

ವೇಣುಗೋಪಾಲ

ಪಾವಗಡ ನಗರದ ಎರಡನೆಯ ಕೋಟೆಯೊಳಗೆ ವೇಣುಗೋಪಾಲಸ್ವಾಮಿ ದೇವಾಲಯ ಕಂಡುಬರುತ್ತದೆ. ಈ ದೇವಾಲಯದ ಗರ್ಭಗುಡಿಯಲ್ಲಿರುವ ವೇಣುಗೋಪಾಲ ಮೂರ್ತಿಯು ಪೀಠದ ಮೇಲೆ ಸ್ಥಾನಿಕವಾಗಿದೆ. ಚತುರ್ಭುಜಧಾರಿಯಾದ ಈ ಮೂರ್ತಿಯ ಎಡಬಲಗಳಲ್ಲಿ ರುಕ್ಮಿಣಿ ಮತ್ತು ಸತ್ಯಭಾಮೆಯರನ್ನು ಕೆತ್ತಲಾಗಿದೆ. ಕಿರೀಟ ಮುಕುಟದಾರಿಯಾದ ಈ ಮೂರ್ತಿಯ ಕಿವಿಯಲ್ಲಿ ಕುಂಡಲಗಳಿವೆ. ಎಡ ಮತ್ತು ಬಲಭಾಗದ ಮೇಲ್ಗಡೆಯ ಕೈಗಳಲ್ಲಿ ಶಂಖ ಚಕ್ರಗಳನ್ನಡಿದಿದ್ದು ಕೆಳಗಿನ ಕೈಗಳಲ್ಲಿ ವೇಣು(ಕೊಳಲು)ವನ್ನು ಹಿಡಿದಿರುವಂತೆ ಕೆತ್ತಲಾಗಿದೆ. ಕೈಗಳಲ್ಲಿ ಕೈಕಡಗ, ಕೇಯೂರಗಳಿದ್ದು, ಕೊರಳಲ್ಲಿ ವಿವಿಧ ಬಗೆಯ ಹಾರಗಳಿವೆ, ಯಜ್ಞೋಪವೀತ ಹಾಗೂ ವೈಜಯಂತಿಹಾರಗಳಿವೆ. ನಡುವಿನಲ್ಲಿ ನಡುಬಂಧವಿದ್ದು ಮಣಿಸರಗಳಿಂದ ಅಲಂಕರಿಸಲಾದ ದೋತ್ರಿಯೂ ಎರಡೂ ಕಾಲಿನ ಕೆಳಭಾಗದವರೆಗೂ ಇದೆ. ಕಾಲಿನಲ್ಲಿ ಕಡಗ ಪಾದಸರಗಳನ್ನು ಹಾಗೂ ಪಾದದ ಎರಡೂ ಕಡೆ ಎರಡು ಗೋವುಗಳು ತನ್ನ ಕರುವಿಗೆ ಹಾಲುಣಿಸುತ್ತಿರುವಂತೆ ಕೆತ್ತಲಾಗಿದೆ. ಈ ಮೂರ್ತಿಯ ಹಿಂಭಾಗದಲ್ಲಿ ಹೂ ಬಳ್ಳಿಯ ಪ್ರಭಾವಳಿಯನ್ನು ಕಾಣಬಹುದು. ಇದರ ಪಕ್ಕದಲ್ಲಿ ಸತ್ಯಭಾಮೆ ಮತ್ತು ರುಕ್ಮಿಣಿಯರ ಶಿಲ್ಪಗಳನ್ನು ಕೆತ್ತಿಡಲಾಗಿದೆ. ಎಡಬಲಗಳಲ್ಲಿರುವ ಇವೆರಡೂ ಮೂರ್ತಿಗಳು ಆಕಾರ ಅಲಂಕಾರದಲ್ಲಿ ಒಂದೇ ತೆರನಾಗಿವೆ. ಕಿರೀಟಮುಖಿಯಾಗಿದ್ದು ಕಿವಿಯಲ್ಲಿ ಚಕ್ರಕುಂಡಲ ಕೊರಳಲ್ಲಿ ಕಠಾಭರಣ, ಕುಚಬಂಧಗಳನ್ನು ಧರಿಸಿದ್ದಾರೆ. ದ್ವಿಬಾಹುಧಾರಿಯಾದ ರುಕ್ಮಿಣಿ ಸತ್ಯಭಾಮೆಯರು ವರದ ಮುದ್ರೆಯಲ್ಲಿ ನಿಂತಿರುವ ಇವರ ನಡುವಿನಲ್ಲಿ ನಡುಬಂಧ, ಯಜ್ಞೋಪವೀತ ಭುಜಕೀರ್ತಿ, ಕೇಯೂರಗಳಿವೆ. ಎರಡೂ ಕಾಲಿನ ಮಧ್ಯ ಇಳಿಬಿಟ್ಟ ದೋತಿ ಕಾಣಬಹುದು ಕಾಲಿನಲ್ಲಿ ದಪ್ಪ ಕಡಗ ಪಾದಸರಗಳಿವೆ. ವೇಣುಗೋಪಾಲ ರುಕ್ಮಿಣಿ, ಹಾಗೂ ಸತ್ಯಭಾಮೆಯರು ಈ ವಿಗ್ರಹಗಳನ್ನು ಕಪ್ಪು ಗ್ರಾನೇಡ್ ಶಿಲೆಯಲ್ಲಿ ರಚಿಸಲಾಗಿದೆ.

ಲಕ್ಷ್ಮೀನರಸಿಂಹ ಮೂರ್ತಿ

ಬೆಟ್ಟದ ಬುಡದಲ್ಲಿರುವ ದೊಡ್ಡ ದೋಣಿಯಲ್ಲಿ ನೀರಿನ ಪಕ್ಕದ ಬಂಡೆಯ ಕೆಳಗೆ ಈ ಮೂರ್ತಿಯನ್ನು ಪೂರ್ವಾಭಿಮುಖವಾಗಿ ಕುಳ್ಳಿರಿಸಲಾಗಿದೆ. ಇದರ ಎಡಭಾಗದ ಮೂರ್ತಿಯು ತೃಟಿತಗೊಂಡಿದ್ದು ಇದರ ಪಕ್ಕದಲ್ಲಿಯೇ ಇರಿಸಲಾಗಿದೆ. ಇದನ್ನು ಬಿಳಿ ಬಣ್ಣದ ಗ್ರಾನೇಡ್ ಶಿಲೆಯಿಂದ ರಚಿಸಲಾಗಿದೆ. ಚತುರ್ಭುಜಧಾರಿಯಾದ ಲಕ್ಷ್ಮೀನರಸಿಂಹನು ಪೀಠದ ಮೇಲೆ ಲಲಿತಾಸನದಲ್ಲಿ ಕುಳಿತಿದ್ದು ಎಡತೊಡೆಯ ಮೇಲೆ ಲಕ್ಷ್ಮಿ ಕುಳಿತಿರುವಳು. ಈ ಪೀಠವು ದೇವಸ್ಥಾನದ ಅದಿಷ್ಠಾನದಂತಿದ್ದು ಚೌಕಾಕಾರವಾಗಿದೆ. ನರಸಿಂಹ ಮೂರ್ತಿಯೂ ಕಿರೀಟಧರಿಸಿದ್ದು ಹಿಂಭದಿಯಲ್ಲಿ ಶಿರಶ್ಚಕ್ರವಿದೆ. ಕಿವಿಯಲ್ಲಿ ಕುಂಡಲಗಳಿವೆ ಕೊರಳಲ್ಲಿ ವಿಭಿನ್ನ ಬಗೆಯ ಹಾರಗಳಿವೆ. ಎದೆಹಾರ, ಉದರ ಬಂಧ, ಯಜ್ಞೋಪವೀತವನ್ನು ಹೊಂದಿದೆ. ಕೈಗಳಲ್ಲಿ

ಭುಜಕೀರ್ತಿ, ಕೇಯೂರ, ಕೈಗಡಗಳಿವೆ. ಒಂದು ಹಸ್ತ ತೃಟಿತವಾಗಿದ್ದು ಮತ್ತೊಂದು ಹಸ್ತ ವರದ ಮುದ್ರೆಯಲ್ಲಿದೆ, ಸೊಂಟ ಪಟ್ಟಿ ಹೊಂದಿದ್ದು ಎರಡೂ ಕಾಲಿನ ಮಧ್ಯೆ ಇಳಿಬಿದ್ದ ವೈಜಂತಿಹಾರ, ಮಣಿಸರಗಳಿಂದ ಅಲಂಕರಿಸಲಾದ ದೋತಿ ಕಾಲಕೆಳಗೆ ಇಳಿಬಿದ್ದಿದೆ. ನರಸಿಂಹನ ಎಡತೊಡೆಯ ಮೇಲೆ ಕುಳಿತ ಲಕ್ಷ್ಮಿಯು ಕಿರೀಟಮುಖಿಯಾಗಿದ್ದು ಕಿವಿಯಲ್ಲಿ ಚಕ್ರ ಕುಂಡಲಗಳನ್ನು ಕೊರಳಲ್ಲಿ ಕಠಾಣಭರಣ, ಹಾಗೂ ಕುಚಬಂಧ ಧರಿಸಿದ್ದಾಳೆ. ದ್ವಿಭುಜದಾರಿಯಾದ ಲಕ್ಷ್ಮಿಯ ಬಲಗೈಯಿಂದ ನರಸಿಂಹನ ಭುಜವನ್ನಿಡಿದಿರುವಂತಿದೆ ಮತ್ತೊಂದು ಕೈಯಲ್ಲಿ ಕಮಲವನ್ನಿಡಿದಿದೆ. ಮಣಿಸರಗಳಿಂದ ಅಲಂಕೃತ ಸೀರೆಯಿದ್ದು, ಕಾಲಿನಲ್ಲಿ ದಪ್ಪ ಕಡಗ ಹಾಗೂ ಪಾದಸರಗಳಿವೆ. ಈ ಮೂರ್ತಿಯ ಬಲಭಾಗದಲ್ಲಿ ಮತ್ತೊಂದು ತೃಟಿತವಾದ ಮೂರ್ತಿ ಇದ್ದು ಚೆಂಚು ಲಕ್ಷ್ಮಿ ಎಂದು ಕರೆಯುತ್ತಾರೆ. ಇದು ನಿಂತ ಬಂಗಿಯಲ್ಲಿದ್ದು ಕಿರೀಟದಾರಿಯಾಗಿದೆ. ಕಿವಿಯಲ್ಲಿ ಕುಂಡಲಿಗಳಿವೆ, ಎದೆಹಾರ, ಕಂಠಾಭರಣ ಕುಚಬಂಧವನ್ನೊಂದಿದೆ. ಅದೇ ರೀತಿ ಕಾಲಲ್ಲಿ ಕಾಲ್ಕಡಗ, ಹಾಗೂ ಸೊಂಟಪಟ್ಟಿ ಕಾಲಿನವರಗೆ ವಸ್ತ್ರವನ್ನುಡಿಸಿದಂತಿದೆ. ಕೈಗಳು ತೃಟಿತಗೊಂಡಿವೆ. ಈ ಮೂರ್ತಿಯ ಲಕ್ಷಣಗಳನ್ನು ಗಮನಿಸಿದಾಗ ಚಾಲುಕ್ಯರ ಕಾಲದಲ್ಲಿ ರಚನೆಗೊಂಡಿರಬಹುದೆಂದು ಹೇಳಬಹುದಾಗಿದೆ.

ಪೋಲೀಸ್ ಠಾಣೆಯ ಆವರಣದೊಳಗಿರುವ ಕಾಳಿ ಪ್ರತಿಮೆ

ಪಾವಗಡ ನಗರದ ಪೋಲೀಸ್ ಠಾಣೆಯ ಆವರಣದಲ್ಲಿರುವ ಈ ಮೂರ್ತಿಯು ಸುಮಾರು ನಾಲ್ಕು ಅಡಿ ಎತ್ತರವಿದ್ದು ಕಪ್ಪು ಗ್ರಾನೇಟ್ ಶಿಲೆಯಲ್ಲಿ ರಚನೆಗೊಂಡಿದೆ. ಇದು ಪೀಠದ ಮೇಲೆ ಅಲೀಡ ಭಂಗಿಯಲ್ಲಿರುವ ಈ ಮೂರ್ತಿಯು ಅಷ್ಟ ಭುಜಧಾರಿಯಾಗಿದೆ. ಈ ಮೂರ್ತಿಯ ಬಲಭಾಗದ ಕೈಗಳಲ್ಲಿ ಶಂಖ, ಚಕ್ರ, ಖಡ್ಗ, ಧನಸ್ಸನ್ನು ಹೊಂದಿದ್ದು,ಎಡಭಾಗ ಕೈಗಳಲ್ಲಿ ತ್ರಿಶೂಲ, ಪಾಶ, ಗದೆ, ರಾಕ್ಷಸನ ತಲೆಯನ್ನು ಹಿಡಿದಿದೆ. ಉಗ್ರರೂಪದಲ್ಲಿರುವ ಕಾಳಿಯ ಕಿವಿಯಲ್ಲಿ ಕುಂಡಲಗಳಿವೆ, ಕೊರಳಲ್ಲಿ ಕಂಠಾಭರಣ, ಕೊರಳಹಾರ, ಕುಚಬಂಧವನ್ನು ಧರಿಸಿದೆ, ಕೈಗಳಲ್ಲಿ ಕೈಕಡಗ, ಕೇಯೂರ, ಭುಜಕೀರ್ತಿಯನ್ನು ಧರಿಸಿದೆ. ಸೊಂಟದಿಂದ ಎರಡೂ ಕಾಲಿನ ಮಧ್ಯದಲ್ಲಿ ಇಳಿಬಿದ್ದಿದೆ. ಕಾಲಲ್ಲಿ ಕಾಲ್ಕಡಗ, ಹಾಗೂ ಪಾದಸರಗಳನ್ನೊಂದಿದೆ. ಪಾದಗಳ ಹತ್ತಿರ ಇಬ್ಬರು ರಾಕ್ಷಸರನ್ನು ತುಳಿಯುತ್ತಿರುವಂತೆ ಕೆತ್ತಲಾಗಿದೆ. ಈ ಮೂರ್ತಿಗೆ ಸುತ್ತಲೂ ಪ್ರಭಾವಳಿಯಿದೆ. ಮೂರ್ತಿಯೂ ಲಕ್ಷಣಗಳ ಆಧಾರದ ಮೇಲೆ ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಸೇರಿದ್ದಿರಬಹುದೆಂದು ಹೇಳಬಹುದಾಗಿದೆ.

ರಾಮದೇವರ ಗುಡಿಯಲ್ಲಿರುವ ಲಕ್ಷ್ಮಿ ವಿಗ್ರಹ

ಪಾವಗಡ ಬೆಟ್ಟದ ಕೆಳಗಿನ ಕೋಟೆಯ ಪಕ್ಕದಲ್ಲಿರುವ ರಾಮದೇವರ ಗುಡಿಯಲ್ಲಿ ಲಕ್ಷ್ಮಿ ಮೂರ್ತಿಯು ಕಂಡುಬರುತ್ತದೆ. ಪೂರ್ವಾಭಿಮುಖವಾಗಿರುವ ಮೂರ್ತಿಯು ಸುಮಾರು

ಎರಡು ಅಡಿ ಎತ್ತರವಿದ್ದು. ಇದನ್ನು ಕೆಂಪುಮಿಶ್ರಿತ ಗ್ರಾನೇಡ್ ಕಲ್ಲಿನಲ್ಲಿ ಕೆತ್ತಲಾಗಿದೆ. ದ್ವಿಭುಜದಾರಿಯಾದ ಲಕ್ಷ್ಮಿಯು ಪೀಠದ ಮೇಲೆ ಲಲಿತಾಸನದಲ್ಲಿ ಕುಳಿತಿದೆ. ಎಡಗಾಲನ್ನು ಮಡಚಿದ್ದು ಬಲಗಾಲನ್ನು ಪೀಠದ ಕೆಳಕ್ಕೆ ಬಿಡಲಾಗಿದೆ. ಕಿರೀಟ ದಾರಿಯಾದ ಈ ಮೂರ್ತಿಯು ಕಿವಿಯಲ್ಲಿ ಚಕ್ರ ಕುಂಡಲಗಳಿವೆ. ಕೊರಳಲ್ಲಿ ಕಂಠಾಭರಣ ಕೊರಳ ಹಾರ ಕುಚಬಂಧವನ್ನು ಹೊಂದಿದೆ. ಕೈಗಳಲ್ಲಿ ಆಯುಧಗಳನ್ನು ಹಿಡಿದಿದ್ದು ಅವು ಅಸ್ಪಷ್ಟವಾಗಿವೆ. ಕೈಗಳಲ್ಲಿ ಕೈಕಡಗ ಭುಜಕೀರ್ತಿಗಳಿವೆ. ಕಾಲಲ್ಲಿ ಕಾಲ್ಕಡಗ ಹಾಗೂ ಪಾದಸರಗಳನ್ನು ಧರಿಸಲಾಗಿದೆ. ಈ ವಿಗ್ರಹದ ಹಿಂಬಾಗದಲ್ಲಿ ಪ್ರಭಾವಳಿ ಕಂಡುಬರುತ್ತದೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದು ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಸಂಬಂಧಿಸಿದ್ದಾಗಿದೆ.

೫.೨ ಕಂಚಿನ ಮೂರ್ತಿಗಳು

ಕಂಚನ್ನು ವಿವಿಧ ಮಿಶ್ರಲೋಹಗಳ ಸಂಮಿಶ್ರಣದಿಂದ ತಯಾರಿಸಲಾಗುತ್ತದೆ. ತಾಮ್ರ, ಬೆಳ್ಳಿ, ಬಂಗಾರ, ಹಿತ್ತಾಳೆ, ಬಿಳಿಸೀಸ ಈ ಐದು ಲೊಹಗಳಿಂದ ತಯಾರಿಸಲ್ಪಟ್ಟ ತಾಮ್ರ ಲೋಹವನ್ನು ಪಂಚಲೋಹವೆನ್ನುತ್ತಾರೆ.[೯] ಹೀಗೆ ತಯಾರಿಸಿದ್ದನ್ನು ಕಂಚು ಎನ್ನುತ್ತಾರೆ. ಜೇಡಿಮಣ್ಣಿನ ಮೂರ್ತಿಗಳಿಗೆ ಮೇಣವನ್ನು ಲೇಪಿಸಿ ಅದನ್ನು ಬಿಸಿಲಿನಲ್ಲಿ ಒಣಗಿಸಿ ನಂತರ ಸುಟ್ಟಾಗ ಉತ್ತಮ ಮೂರ್ತಿಗಳು ಸಿದ್ದವಾಗುತ್ತವೆಂದು, ಇದೇ ವಿಧಾನದ ಮೂಲಕ ಲೋಹ ಮೂರ್ತಿಗಳನ್ನು ತಯಾರಿಸಿ ನೀರಿನಿಂದ ತೊಳೆಯಬೇಕೆಂದು ಶಿಲ್ಪಶಾಸ್ತ್ರವು ತಿಳಿಸುತ್ತದೆ.[೧೦] ಭಾರತದಲ್ಲಿ ಬಹಳ ಹಿಂದೆಯೇ ಕಂಚಿನ ಮೂರ್ತಿಗಳು ಅಂದರೆ ಕ್ರಿ.ಪೂ ೩ನೇ ಶತಮಾನದಲ್ಲಿ ಹರಪ್ಪ ಸಂಸ್ಕೃತಿಯ ಸ್ತ್ರೀ ಮೂರ್ತಿಯೊಂದು ದೊರೆತಿದ್ದರಿಂದ ಇದರ ಪ್ರಾಚೀನತೆಯನ್ನು ಗುರುತಿಸಬಹುದಾಗಿದೆ. ನಮ್ಮ ಪೂರ್ವಜರು ಲೋಹವನ್ನು ಮತ್ತೆ ಮತ್ತೆ ಕರಗಿಸಿ ಉಪಯೋಗಿಸುತ್ತಿದ್ದರಿಂದ ಹಳೆಯ ಲೋಹದ ವಸ್ತುಗಳು ದೊರೆಯುವುದು ಅಪರೂಪ ದಕ್ಷಿಣ ಭಾರತದಲ್ಲೂ ಲೋಹ ಕಲೆ ಸಾಕಷ್ಟುಪ್ರವರ್ಧಮಾನವಾಗಿ ಬೆಳೆದಿದ್ದು, ತಮಿಳುನಾಡಿನ ಆದಿ ಚೆನ್ನಲೂರು ಉತ್ಖನನದಲ್ಲಿ ದೊರೆತಿದೆ. ಇದು ಕ್ರಿ.ಪೂ. ೨೦೦೦ದಷ್ಟು ಹಳೆಯದಾದ ಮಾತೃದೇವತೆ ಎನ್ನಲಾಗಿದೆ.[೧೧] ಕರ್ನಾಟಕದಲ್ಲಿ ಗಂಗರು ಮತ್ತು ನೊಳಂಬರ ಕಾಲದ ಕಂಚಿನ ಪ್ರತಿಮೆಗಳು ಹೆಚ್ಚಾಗಿ ದೊರೆತರೂ ಅಷ್ಟೊಂದು ಅಲಂಕಾರ ಕಂಡುಬರುವುದಿಲ್ಲ. ಚಾಲುಕ್ಯರು, ಹೊಯ್ಸಳರ ಕಾಲದಲ್ಲಿ ವಾಸ್ತುಶಿಲ್ಪದ ಪರ್ವಕಾಲವಾಗಿದ್ದು, ಹಲವು ಮೂರ್ತಿಗಳು ದೊರೆತಿವೆ. ಕರ್ನಾಟಕದಲ್ಲಿ ಕಂಚಿನ ಶಿಲ್ಪಗಳ ಸುವರ್ಣಯುವು ವಿಜಯನಗರ ಕಾಲದಲ್ಲಿ ನೋಡಬಹುದು.[೧೨] ಈ ಶೈಲಿಯು ಪಾಳೆಗಾರರ ಕಾಲದಲ್ಲೂ ಮುಂದುವರೆಯಿತು. ಇಂತಹ ಮೂರ್ತಿಗಳನ್ನು ಪಾವಗಡ ಪರಿಸರದಲ್ಲೂ ನಾವು ಕಾಣಬಹುದಾಗಿದೆ.

೧. ಗರುಡ

ಪಾವಗಡದ ವೇಣುಗೋಪಾಲಸ್ವಾಮಿ ದೇವಾಲಯದಲ್ಲಿ ಕಂಡು ಬರುತ್ತದೆ. ಇದು ಒಂದು ಕಾಲನ್ನು ಮಡಚಿ ಮಂಡಿಯೂರಿ ಕುಳಿತು ಎರಡೂ ಕೈ ಜೋಡಿಸಿ ವಂಧಿಸುವ ಭಂಗಿಯಲ್ಲಿದೆ. ಇದು ಪೂರ್ವಾಭಿಮುಖವಾಗಿಡಲಾಗಿದೆ. ಕಿರೀಟ ಮುಕುಟದಾರಿಯಾದ ಗರಡನ ಮೂಗು ತುಂಬಾ ಉದ್ದವಾಗಿದೆ. ಕಿರೀಟವನ್ನು ಮಣಿ ಸರಗಳಿಂದ ಅಲಂಕಾರ ಮಾಡಲಾಗಿದೆ. ಕಿವಿಯಲ್ಲಿ ವರ್ತುಲಾಕಾರದ ಓಲೆಗಳು ದ್ವಿಭುಜಧಾರಿಯಾಗಿದ್ದು, ಎರಡೂ ಕೈಗಳಿಂದ ವಂದಿಸುವಂತಿದೆ. ಕೊರಳಲ್ಲಿ ವಿವಿಧ ಮಾದರಿಯ ಹಾರಗಳಿವೆ. ಕೈಗಳಲ್ಲಿ ಕೈಕಡಗ, ತೋಳು ಬಂದವಿದೆ. ರೆಕ್ಕೆಗಳು ಭುಜದ ಹಿಂಭಾಗದಲ್ಲಿ ಅಗಲವಾಗಿ ಹರಡಿಕೊಂಡಿವೆ. ಎದೆಗೆ ನಾಗಬಂಧವಿದೆ. ಉದರಬಂಧ, ಕಾಲಲ್ಲಿ ಕಾಲ್ಕಡಗ ಧರಿಸಿದ್ದಾನೆ.

೫.೩ ಗಾರೆ ಶಿಲ್ಪಗಳು

ಗಾರೆಯು ಕಟ್ಟಡ, ಕೋಟೆ, ದೇವಾಲಯ, ಶಿಲ್ಪಗಳು ಮುಂತಾದವುಗಳನ್ನು ನಿರ್ಮಿಸಲು ಬಳಸುವಂತಹ ಒಂದು ಸಾಮಗ್ರಿ. ಇಂತಹ ಗಾರೆಯನ್ನು ಹೆಚ್ಚಾಗಿ ವಿಜಯನಗರ ಕಾಲದಲ್ಲಿ ಬಳಸಿರುವುದನ್ನು ಕಾಣಬಹುದಾಗಿದೆ. ವಿಜಯನಗರ ಕಾಲದಲ್ಲಿ ಗಾರೆ ಶಿಲೆಯಷ್ಟೆ ಪ್ರಮುಖವಾದ ಮಾಧ್ಯಮವಾಯಿತು. ಗಾರೆಯು ಕಲಾ ಮಾಧ್ಯಮವಾಗಿ ಬೆಳೆದದ್ದನ್ನು ನಾವು ಪ್ರಾಚೀನ ಕಾಲದಿಂದಲೇ ನೋಡಬಹುದಾಗಿದೆ. ಕ್ರಿ.ಪೂ. ೩೦೦೦ ವರ್ಷಗಳಿಂದೆಯೇ ಹರಪ್ಪ ಮತ್ತು ಮಹೆಜೋದಾರೋಗಳಲ್ಲಿ ಗಾರೆಯನ್ನು ಬಳಸಿಕೊಂಡಿರುವುದು ಸ್ಪಷ್ಟವಾಗುತ್ತದೆ. ಕುಶಾನರ ಕಾಲದಲ್ಲಿ ಗಾಂಧಾರ ಶೈಲಿಯಲ್ಲಿ ಬೌದ್ಧ ಧರ್ಮಕ್ಕೆ ಸೇರಿದ ಹಲವು ಬಿಡಿ ಆಕೃತಿಗಳು ಮತ್ತು ಕಥಾನಕ ಆಕೃತಿಗಳು ಕಂಡುಬರುತ್ತವೆ. ಶಾತವಾಹನರ ಕಾಲದಲ್ಲಿ ಹಾಗೂ ಗುಪ್ತ, ವಾಕಟಕರ ರಾಜ ಮನೆತನದವರು ನಿರ್ಮಿಸಿದ ಬೌದ್ಧ, ಚೈತ್ಯ ವಿಹಾರಗಳಲ್ಲಿನ ಭಿತ್ತಿ ಚಿತ್ರಗಳ ಹಿನ್ನಲೆಯ ಲೇಪನವಾಗಿ ಗಾರೆಯನ್ನು ಬಳಸಿದ್ದಾರೆ. ನಂತರ ಕಾಲದಲ್ಲಿ ಇದರ ಬಳಕೆ ಸ್ವಲ್ಪ ವಿರಳವೆಂದೇಳಬಹುದು, ಕಾರಣ ಶಿಲೆಯನ್ನು ಹೆಚ್ಚಾಗಿ ಬಳಸಿರುವುದನ್ನು ಕಾಣಬಹುದು. ನಂತರ ೧೩&೧೪ನೇ ಶತಮಾನದಲ್ಲಿ ಇದರ ಪ್ರಭಾವ ಹೆಚ್ಚಾಯಿತು. ಮುಸ್ಲಿಂರ ಅರಸರ ಆಳ್ವಿಕೆಯ ಸಂದರ್ಭದಲ್ಲಿ ಗಾರೆಯನ್ನು ಹೆಚ್ಚು ಬಳಸಿದರು. ಅವರು ಮಹಾದ್ವಾರ, ಮಸೀದಿ,, ಗೋಡೆಗಳ ಅಲಂಕರಣಕ್ಕೆ ಬಳಸಿದರು. ಹೀಗೆ ಪ್ರಾರಂಭವಾದ ಗಾರೆಯ ಉಪಯೋಗ ಕಾಲಕ್ರಮೇಣ ವಿಜಯನಗರ ಕಾಲದಲ್ಲಿ ಶಿಲೆಗೆ ಪರ್ಯಾಯವಾಗಿ ಇಟ್ಟಿಗೆಯೊಂದಿಗೆ ಪ್ರಮುಖ ಮಾಧ್ಯಮವಾಗಿ ಬಳಸಿದರು. ಇಂತಹ ಗಾರೆಯನ್ನು ಮುಖ್ಯವಾಗಿ ಸುಣ್ಣ, ಮರುಳು, ನೀರು & ಕೆಲವು ಅಂಟು ದ್ರವಗಳಾದ ಲೋಳೆರಸ ಬಿಲ್ವ ಪತ್ರೆಕಾಯಿ, ಬೆಲ್ಲ ಅಥವಾ ಕೆಲವು ಸಲ ಮೊಟ್ಟೆ ಕೂಡ ಅಂಟು ದ್ರಾವಣ ರೂಪದಲ್ಲಿ ಉಪಯೋಗವಾಗುತ್ತಿತ್ತು. ಎಲ್ಲವನ್ನು ಹದಕ್ಕೆ ತಕ್ಕಂತೆ ಹಾಕಿ ರುಬ್ಬಬೇಕು ಈ ವಿಧಾನದ ಮೂಲಕ ಗಾರೆಯನ್ನು ತಯಾರಿಸಿಕೊಳ್ಳುತ್ತಿದ್ದರು.[೧೪]

ವಿಜಯನಗರ ಹಾಗೂ ಪಾಳೆಗಾರರ ಕಾಲದ ಕಲಾವಿದರು ಗಾರೆಯನ್ನು ಉಪಯೋಗಿಸಿ ಕಲಾತ್ಮಕವಾದ ಆಕೃತಿಗಳನ್ನು ನಿರ್ಮಿಸಿರುವುದನ್ನು ನೋಡಬಹುದಾಗಿದೆ. ಸಾಮಾನ್ಯವಾಗಿ ಇವು ಬಿಡಿ ಆಕೃತಿಗಳಲ್ಲಿ ಗೋಡೆಗೆ ಅಂಟಿಕೊಂಡಂತೆ ರಚಿಸಿದ್ದಾರೆ. ಇವುಗಳು ಹೆಚ್ಚು ಉಬ್ಬುಶಿಲ್ಪಗಳ ಮಾದರಿಯ ರಚನೆಯನ್ನು ಕಾಣಬಹುದಾಗಿದೆ. ಪಾವಗಡ ಪರಿಸರದಲ್ಲಿ ಪಾಳೇಗಾರರ ಕಾಲದಲ್ಲಿ ರಚನೆಯಾದಂತಹ ಗಾರೆ ಶಿಲ್ಪಗಳನ್ನು ಕಾಣಬಹುದಾಗಿದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ.

ಗಜಲಕ್ಷ್ಮಿ

ಗುಂಡಾರ್ಲ ಹಳ್ಳಿಯ ಆಂಜನೇಯ ದೇವಾಲಯದ ಮುಖ್ಯದ್ವಾರದ ಮೇಲ್ಭಾಗದಲ್ಲಿ ಗಾರೆಯಿಂದ ರಚಿಸಿದಂತಹ ಗಜಲಕ್ಷ್ಮಿ ಮೂರ್ತಿಯು ಕಂಡುಬರುತ್ತದೆ. ದಕ್ಷಿಣಾಭಿಮುಖವಾಗಿರುವ ಈ ಗಾರೆಯ ಶಿಲ್ಪವು ಸುಮಾರು ಎರಡು ಅಡಿ ಎತ್ತರವಿದೆ. ಇದನ್ನು ಗಾರೆಯಿಂದ ದ್ವಾರದ ಗೋಡೆಗೆ ಅಂಟಿಕೊಂಡಂತೆ ನಿರ್ಮಿಸಲಾಗಿದೆ. ಚತುರ್ಭುಜದಾರಿಯಾಗಿದ್ದು ಮೇಲಿನ ಕೈಗಳಲ್ಲಿ ಕಮಲವನ್ನು, ಕೆಳಭಾಗದ ಬಲಗೈ ವರದ ಹಸ್ತವನ್ನು, ಎಡಗೈ ಕೆಳಭಾಗಕ್ಕೆ ತೋರುವಂತೆ ಇದ್ದು ಕಮಲದಲ್ಲಿ ಕೂತಿರುವಂತಿದೆ. ಕಿರೀಟಧಾರಿಯಾದ ಈ ಮೂರ್ತಿಯ ಕಿವಿಯಲ್ಲಿ ಕುಂಡಲಗಳಿವೆ. ಕೊರಳಲ್ಲಿ ಕಂಠಿಹಾರವಿದ್ದು ಕೊರಳ ಹಾರವನ್ನು ಹೊಂದಿದೆ. ಕೈಯಲ್ಲಿ ಕೈಕಡಗವನ್ನು ಹೊಂದಿದೆ, ಈ ಮೂರ್ತಿಯ ಇಕ್ಕೆಲಗಳಲ್ಲಿ ಎರಡು ಆನೆಗಳು ಹಾರವನ್ನಿಡಿದು ನಿಂತಿರುವಂತೆ ರಚಿಸಲಾಗಿದೆ. ಈ ಮೂರ್ತಿಯು ಪಾಳೆಗಾರರ ಕಾಲದಲ್ಲಿ ರಚಿಸಿದಂತಹದ್ದಾಗಿದೆ.

ಗರುಡ

ಪಾವಗಡ ಶ್ರೀ ಕಣಿವೆ ನರಸಿಂಹಸ್ವಾಮಿ ದೇವಾಲಯದ ಪ್ರಾಕಾರದ ಗೋಡೆಯ ಮೇಲೆ ಗರುಡಶಿಲ್ಪವು ಮಲಗಿರುವಂತೆ ರಚಿಸಲಾಗಿದೆ. ಈ ಮೂರ್ತಿಯು ಎಡಭಾಗಕ್ಕೆ ಮಲಗಿರುವಂತೆ ರಚಿಸಲಾಗಿದೆ. ಕಿರೀಟ ಮುಕುಟದಾರಿಯಾದ ಈ ಮೂರ್ತಿಯು ಕೊರಳಲ್ಲಿ ಯಾವುದೇ ರೀತಿಯ ಹಾರಧರಿಸಿಲ್ಲ ದ್ವಿಭುಜಧಾರಿಯಾಗಿದ್ದು ಕೈಗಳನ್ನು ಎಡಗೈ ಮುಂದಕ್ಕೆ ಮತ್ತು ಬಲಭಾಗದ ಕೈಯನ್ನು ಹಿಂದಕ್ಕೆ ಚಾಚಿರುವಂತೆ ರಚಿಸಲಾಗಿದ್ದು ಕೈಗಳಲ್ಲಿ ಕೈಗಡ ಧರಿಸಿರುವನು. ಸೊಂಟಕ್ಕೆ ವಸ್ತ್ರವಿದ್ದು ಅದು ಮೊಣಕಾಲಿನವರೆಗೂ ಉಡಲಾಗಿದೆ. ಭುಜದ ಹಿಂಭಾಗದಲ್ಲಿ ಹಕ್ಕಿಯ ರೆಕ್ಕೆಗಳನ್ನು ಹೊಂದಿದೆ. ಕಾಲಲ್ಲಿ ಕಾಲ್ಕಡಗವನ್ನು ಕಾಣಬಹುದಾಗಿದೆ.

ನಂದಿ

ಗುಂಡ್ಲಹಳ್ಳಿ ರಾಮೇಶ್ವರ ಗುಡಿಯ ಮುಂಭಾಗದ ಮಂಟಪಕ್ಕೆ ಶಿಖರವಿದ್ದು ಅದರ ಮೇಲ್ಭಾಗದಲ್ಲಿ ಪ್ರಸ್ತಾರದ ಭಾಗದಲ್ಲಿ ನಾಲ್ಕು ದಿಕ್ಕಿನಲ್ಲಿ ಗಾರೆಯ ನಂದಿಶಿಲ್ಪಗಳನ್ನು

ರಚಿಸಲಾಗಿದೆ. ಈ ನಂದಿಯ ಶಿಲ್ಪಗಳು ಒಂದೇ ತೆರನಾಗಿವೆ. ನಂದಿ ಮೂರ್ತಿಗಳು ಎಡಗಾಲನ್ನು ಮುಂದೆ ಚಾಚಿ ಬಲಗಾಲನ್ನು ಮಡಚಿವೆ. ಕೊರಳಲ್ಲಿ ಗಂಟೆಯಿದ್ದು ಭುಜವು ಅಲಂಕಾರಿಕ ಬಟ್ಟೆಯಿಂದ ಅಲಂಕರಿಸಿದ್ದಾರೆ. ಹಣೆಯಲ್ಲಿ ಹಣೆಪಟ್ಟಿ ರಚಿಸಿದ್ದು ಭುಜವನ್ನು ಎತ್ತರವಾಗಿ ರಚಿಸಲಾಗಿದೆ. ಕಾಲಿಗೆ ಸರವಿರುವುದನ್ನು ಕಾಣಬಹುದಾಗಿದೆ.

ಆಂಜನೇಯನ ಮೂರ್ತಿಗಳು

ಪಾವಗಡ ಪರಿಸರದಲ್ಲಿ ಪ್ರತಿಯೊಂದು ಊರುಗಳಲ್ಲೂ ಹನುಮಂತನ ಮೂರ್ತಿಗಳನ್ನು ಕಾಣಬಹುದು. ಇವುಗಳೆಲ್ಲವೂ ಶಿಲೆಗಳಿಂದ ಕೆತ್ತಿದಂತಹ ಉಬ್ಬು ಶಿಲ್ಪಗಳಾಗಿವೆ. ಇಲ್ಲಿ ಪ್ರಮುಖವಾಗಿ ಪಾಳೇಗಾರರ ಕಾಲದಲ್ಲಿ ನಿರ್ಮಿಸಲ್ಪಟ್ಟ ಕೋಟೆ ಆಂಜನೇಯ ಸ್ವಾಮಿ, ಬೆಟ್ಟದ ಮಧ್ಯದಲ್ಲಿ ಬಯಲಾಂಜನೇಯ, ಗುಂಡಾರ್ಲ ಹಳ್ಳಿಯ ಆಂಜನೇಯ ಹಾಗೂ ಗುಂಡ್ಲ ಹಳ್ಳಿಯ ಆಂಜನೇಯ ಹಾಗೂ ಪಳವಳ್ಳಿ ಕೆರೆಯ ಏರಿಯ ಪಕ್ಕದಲ್ಲಿರುವ ಆಂಜನೇಯ ಮೂರ್ತಿಗಳು ಪ್ರಮುಖವಾಗಿವೆ. ಸಾಮಾನ್ಯವಾಗಿ ಈ ಮೂರ್ತಿಗಳು ದಕ್ಷಿಣಾಭಿಮುಖವಾಗಿದ್ದು ಪೂರ್ವಕ್ಕೆ ಮುಖತಿರುಗಿಸಿ ನಿಂತಿವೆ. ಇವುಗಳಲ್ಲಿ ಸುಮಾರು ೬ ಅಡಿಯಿಂದ ಸುಮಾರು ೧೨ ಅಡಿಯವರಗೆ ಎತ್ತರವಾಗಿವೆ. ಗುಂಡ್ಲಳ್ಳಿಯ ಆಂಜನೇಯ ಸುಮಾರು ೧೨ ಅಡಿ ಎತ್ತರವಿದೆ. ಅದೇ ರೀತಿ ಪಳವಳ್ಳಿಕೆರೆಯ ಮೂರ್ತಿಯು ೧೧ ಅಡಿ ಕೋಟೆ ಆಂಜನೇಯ ೧೦ ಅಡಿ ಬೆಟ್ಟದಾಂಜನೇಯ ೭ ಅಡಿ ಎತ್ತರದಲ್ಲಿ ಕೆತ್ತಲಾಗಿದೆ. ಇವೆಲ್ಲವೂ ಸುಂದರವಾಗಿದ್ದು ಇವುಗಳ ಮೇಲ್ಭಾಗದಲ್ಲಿ ವೈಷ್ಣವ ಧರ್ಮವನ್ನು ಸೂಚಿಸುವ ಚಿಹ್ನೆಗಳು ಕಾಣಬಹುದು. ಕೆಳಭಾಗದಲ್ಲಿ ಆಯುಧ ಹಿಡಿದ ರಾಕ್ಷಸನ ಮಲಗಿರುವಂತೆ ಕೆತ್ತಲಾಗಿದೆ. ಬೆಟ್ಟದಾಂಜನೇಯ ಮೂರ್ತಿಯ ಕೆಳಭಾಗದಲ್ಲಿ ಚಿಕ್ಕ ಕೋತಿಯೊಂದು ಏನನ್ನೋ ತಿನ್ನುತ್ತಿರುವಂತೆ ಕೆತ್ತಲಾಗಿದೆ.

ಈ ಮೂರ್ತಿಗಳಲ್ಲಿ ಕಂಡುಬರುವ ಪ್ರಮುಖ ಲಕ್ಷಣಗಳೆಂದರೆ ಕಿವಿಯಲ್ಲಿ ಕುಂಡಲಗಳನ್ನು ಧರಿಸಿದ್ದು ಕಂಠಿಹಾರ ಧರಿಸಿದ್ದು ಸೊಂಟದಲ್ಲಿ ಸೊಂಟಪಟ್ಟಿ ಹಾಗೂ ಕಂಠದಲ್ಲಿ ಹಲವು ಹಾರಗಳಿವೆ. ಯಜ್ಞೋಪವೀತ ಕಾಣಬಹುದು. ಮಣಿಸರಗಳಿಂದ ಅಲಂಕರಿಸಿದ ದೋತಿ ಇದೆ. ಭುಜದ ಮೇಲು ಮಣಿಸರಗಳಿಂದ ಅಲಂಕರಿಸಿದ ವಸ್ತ್ರವಿದೆ. ಬಲಗೈಯನ್ನು ಮೇಲೆತ್ತಿರುವಂತಿದೆ. ಎಡಗೈಯಲ್ಲಿ ಪಾಶವನ್ನು ಹಿಡಿದಿರುವಂತೆ ಖಂಡರಿಸಲಾಗಿದೆ. ಕೈಯಲ್ಲಿ ಕೈಕಡಗ, ಭುಜಕೀರ್ತಿ ಕೇಯೂರಗಳನ್ನು ಹಾಗೂ ಕಾಲಲ್ಲಿ ಕಾಲ್ಕಡಗ, ಪಾದಸರಗಳನ್ನು ಕೆತ್ತಲಾಗಿದೆ.

ಈ ರೀತಿಯಾಗಿ ಪಾವಗಡ ಪರಿಸರದಲ್ಲಿ ಕಲ್ಯಾಣಿ ಚಾಲುಕ್ಯರ ಕಾಲದಿಂದ ಪಾವಗಡ ಪಾಳೆಯಗಾರರ ಕಾಲಾವಧಿಯನ್ನು ನಿರ್ಮಿಸಲ್ಪಟ್ಟಂತಹ ಮೂರ್ತಿಶಿಲ್ಪಗಳಾಗಿವೆ. ಇವುಗಳನ್ನು ನಿರ್ಮಿಸಿದ್ದಂತಹ ಶಿಲೆ ಹಾಗೂ ಶಿಲ್ಪಗಳ ಲಕ್ಷಣಗಳಿಂದ ಅವುಗಳ ಕಾಲವನ್ನು ಗುರುತಿಸಬಹುದಾಗಿದೆ.

ಅಡಿ ಟಿಪ್ಪಣಿಗಳು

೧. ರಾಜಾರಾಂ ಹೆಗಡೆ, ಭಾರತೀಯ ಮೂರ್ತಿಶಾಸ್ತ್ರ, ಧರ್ಮ ದೇವತಾರಾಧನೆ ಹಾಗೂ ಸಾಂಸ್ಕೃತಿಕ, ರಜಕೀಯ, ಐತಿಹಾಸಿಕ ವಿಶ್ಲೇಷಣೆ, ಅರಿವು ಬರಹ ಸಂ-೨, ಭಾಗ-೧, ಪು-೩೫, ೩೬, ೧೯೯೨.

೨. ತಿಪ್ಪೇರುದ್ರಸ್ವಾಮಿ ಹೆಚ್, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು-೬, ೨೭.

೩. ಅದೇ ಪು--೬, ೨೭.

೪. ರಾಜಾರಾಂ ಹೆಗಡೆ, ಪೂರ್ವೋಕ್ತ, ಪು-೭೨.

೫. ತಿಪ್ಪೇಸ್ವಾಮಿ ಹೆಚ್, ದಾವಣಗೆರೆ ಜಿಲ್ಲೆಯ ದೇವಾಲಯಗಳು (ಅಪ್ರಕಟಿತ ಪಿಎಚ್.ಡಿ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೧೭೭, ೨೦೦೦.

೬. ತಿಪ್ಪೇಸ್ವಾಮಿ ಹೆಚ್.ಕೂಡ್ಲಿಗಿ ತಾಲ್ಲೂಕಿನ ಅಪರೂಪದ ಮಾನವಾಕೃತಿಗಳು. ಇತಿಹಾಸ ದರ್ಶನ, ಸಂ-೧೪, ಪು-೧೯, ೨೨.

೭. ರಾಮಚಂದ್ರರಾವ್ ಎಸ್.ಕೆ., ಪ್ರತಿಮಾಕೋಶ, ಸಂಪುಟ-VI ,ಪು-೨೧೩, ೧೯೯೨,

೮. ತಿಪ್ಪೇಸ್ವಾಮಿ ಹೆಚ್, ದಾವಣಗೆರೆ ಜಿಲ್ಲೆಯ ಪೊರ್ವೋಕ್ತ, ಪು-೧೭೯.

೯. ಗಂಗೋಲಿ ಬಿ.ಸಿ., ಸೌತ್ ಇಂಡಿಯನ್ ಬ್ರಾಂಜಸ್, ಪು-೨೨, ೧೯೭೮

೧೦. ಶಿವಮೂರ್ತಿ ಸಿ. ಸೌತ್ ಇಂಡಿಯನ್ ಬ್ರಾಂಜಸ್, ಪು-೧೪, ೧೯೬೩

೧೧. ಶ್ರೀನಿವಾಸ್ ವಿ.ಆರ್., ಬುಲೆಟಿನ್ ಆಫ್ ದಿ, ಮದ್ರಾಸ್ ಗೌರ್ವನಮೆಂಟ್ ಮ್ಯೂಸಿಯಂ ಬ್ರಾಂಜ್ ಆಫ್ ಸೌತ್ ಇಂಡಿಯ, ಪು-೧೧,

೧೨. ಲಕ್ಷಣ್ ತೆಲಗಾವಿ (ಸಂ) ಸಂಶೋಧನೆ, ಕೃಷ್ಣಮೂರ್ತಿ ಎಂ.ಕರ್ನಾಟಕದ ಕಂಚು ಶಿಲ್ಪಗಳು, ಪು-೧೪೦

೧೩. ಕುಲಕರ್ಣಿ ಆರ್.ಎಚ್.ವಿಜಯನಗರ ಕಾಲದ ಗಾರೆ ಕಲೆಯ ಒಂದು ಅವಲೋಕನ, ವಿಜಯನಗರ ಅಧ್ಯಯ ಸಂಪುಟ-೪, ಪು-೧

೧೪. ಅದೇ ಪು-೧

ಅಧ್ಯಾಯ-ಆರು

ಕೆರೆಕಟ್ಟೆಗಳು

ಅಧ್ಯಾಯ-ಆರು

ಕೆರೆಕಟ್ಟೆಗಳು

ನೀರು ಪ್ರಪಂಚದ ಸಕಲ ಜೀವಗಳಿಗೂ ಅತ್ಯಂತ ಅವಶ್ಯಕವಾಗಿದೆ. ಈ ನೀರಿನಿಂದಲೇ ಕೆಲವು ಜೀವ ರಾಶಿಗಳು, ಪ್ರಾಣಿಗಳು ಉಗಮ ಹೊಂದಿವೆ. ಮಾನವನ ದೈನಂದಿನ ಜೀವನಕ್ಕೆ ಸೀರು ಅತೀ ಅಗತ್ಯವಾಗಿದೆ. ಮಾನವನ ಜೀವನದ ಉಗಮ ಕಾಲದಿಂದ ಮಹತ್ತರವಾದ ಪಾತ್ರ ವಹಿಸಿದೆ. ಮೊದಲು ಅಲೆಮಾರಿಯಾಗಿದ್ದ ಮಾನವನು ಶಿಲೆಗಳಿಂದ ಆಯುಧಗಳನ್ನು ತಯಾರಿಸಿಕೊಂಡು ಬೇಟೆಯಾಡುತ್ತಾ ಜೀವನ ನಡೆಸುತ್ತಿದ್ದ. ಇವನ ಚಟುವಟಿಕೆಗಳ ಕಾರ್ಯಕ್ಷೇತ್ರವು ಸರೋವರ, ಕೆರೆ, ನದಿ, ತೊರೆಗಳ ಸಮೀಪದಲ್ಲಿಯೇ ಕೇಂದ್ರಿಕೃತವಾಗಿತ್ತು. ಇದಕ್ಕೆ ಪೂರಕವಾಗಿ ನಡೆಸಿದಂತಹ ಅನೇಕ ಸಂಶೋಧನೆಗಳು ವಿಶ್ವದಾದ್ಯಂತ ನಡೆದು ಅನೇಕ ಸಾಕ್ಷ್ಯಾಧಾರಗಳು ದೊರಕಿವೆ. ಇದರಿಂದ ಮಾನವನಿಗೆ ನೀರು ಎಷ್ಟು ಉಪಯೋಗವೆಂಬುದು ವೇದ್ಯವಾಗುತ್ತದೆ. ಆರಂಭ ಕಾಲದಲ್ಲಿ ಅಲೆಮಾರಿಯಾಗಿದ್ದ ಮಾನವನು ಒಂದು ಕಡೆ ನೆಲೆನಿಲ್ಲಲು ಆರಂಭಿಸಿದನು. ಈ ಹಂತವನ್ನು ಪ್ರಾಕ್ತನಶಾಸ್ತ್ರಜ್ಞರು ನೂತನ ಶಿಲಾಯುಗದ ಕಾಲ ಎಂದು ಕರೆದಿದ್ದಾರೆ. ಈ ಕ್ರಾಂತಿಯ ಪರಿಣಾಮವಾಗಿ ಮಾನವನು ಒಂದೆಡೆ ನಿರಂತರವಾಗಿ ವಾಸಿಸಲು ಪ್ರಾರಂಭಿಸಿ ತನ್ನ ಆಯುಧಗಳ ಬಹಳಷ್ಟು ಸುಧಾರಣೆ ಮಾಡಿದ್ದು, ಕೃಷಿ ಜೀವನವನ್ನು ಪ್ರಾರಂಭಿಸಿದ. ಈ ಕೃಷಿಕ ಜೀವನವು ಸುಧಾರಣೆಗೊಳ್ಳುತ್ತಾ ಪ್ರಾಣಿಗಳನ್ನು ಸಾಕಲಾರಂಭಿಸಿ ಅವುಗಳ ಸಹಾಯದಿಂದ ವ್ಯವಸಾಯ ಮಾಡಲು ತೊಡಗಿಸಿಕೊಂಡನು. ಈ ವ್ಯವಸಾಯದ ಜೀವನ ಮಾನವನು ಸ್ಥಿರವಾಗಿ ನೆಲೆ ನಿಲ್ಲಲು ಕಾರಣವೆಂದು ಹೇಳಬಹುದಾಗಿದೆ.

೬.೧ ಕೆರೆ ನೀರಾವರಿಯ ಪ್ರಾಚೀನತೆ

ಮಾನವನು ಮೊದಲಿಗೆ ವ್ಯವಸಾಯವನ್ನು ಪ್ರಾರಂಭಿಸಿದಾಗ ಅವನು ಮಳೆಯನ್ನೇ ನಂಬಿದ್ದ. ಅವನು ವಿಪುಲವಾಗಿ ನೀರು ದೊರೆಯುವ ಜಾಗವಾಗಿದ್ದ ನದಿಯನ್ನು

ಆಶ್ರಯಿಸಿದ್ದನು. ಪರಿಸರದಲ್ಲಿ ಆಗುತ್ತಿದ್ದ ಬದಲಾವಣೆಗಳು ಮತ್ತು ಮಳೆಯ ವೈಪಲ್ಯತೆಯು ಅವನನ್ನು ಆಗ್ಗಿಂದ್ದಾಗ್ಗೆ ಕಷ್ಟಕ್ಕೆ ಒಳಪಡಿಸುತ್ತಿತ್ತು. ಇದರಿಂದ ಅವನು ನೀರನ್ನು ಸಂಗ್ರಹ ಮಾಡಿ ತನ್ನ ಹತೋಟಿಯಲ್ಲಿಟ್ಟುಕೊಳ್ಳವ ಪ್ರಯತ್ನದಲ್ಲಿ ತೊಡಗಿದ. ಮಳೆಗಾಲವು ವರ್ಷದಲ್ಲಿ ಕೆಲವು ಮಾಸಗಳು ಮಾತ್ರ ಇರುತ್ತಿತ್ತು. ಬೇರೆ ಸಮಯದಲ್ಲಿ ನೀರಿನ ಅಗತ್ಯತೆಗೆ ನೀರಿನ ಸಂಗ್ರಹ ಅನಿವಾರ್ಯವಾಗಿ ನೀರನ್ನು ಕೂಡಿಡುವ ತಂತ್ರವನ್ನು ಬೆಳೆಸಿಕೊಂಡ. ಮಳೆಯ ನೀರು ತಗ್ಗಾದ ಪ್ರದೇಶದಲ್ಲಿ ಕೂಡಿಕೊಳ್ಳುತ್ತಿತ್ತು. ಅಂತಹ ಜಾಗಗಳಲ್ಲಿ ನೀರು ಹರಿದು ಹೋಗದಂತೆ ಸಣ್ಣಕಟ್ಟೆಗಳನ್ನು ನಿರ್ಮಿಸುತ್ತಿದ್ದ. ಆರಂಭದಲ್ಲಿ ರೆಂಬೆ, ಎಲೆ, ಮಣ್ಣುಗಳನ್ನು ಬಳಸಿ, ಸಣ್ಣಸಣ್ಣ ಒಡ್ಡುಗಳನ್ನು ಕಟ್ಟಿದ ಆದರೆ ಜೋರಾಗಿ ಮಳೆ ಬಿದ್ದಾಗ ಆ ಒಡ್ಡುಗಳು ಕೊಚ್ಚಿ ಹೋಗುತ್ತಿದ್ದವು. ಅದನ್ನು ಮತ್ತೇ ಕಟ್ಟುತ್ತಿದ್ದ ತನ್ನ ಜೀವನದಲ್ಲಿ ಸುಧಾರಣೆ ಬೆಳದಂತೆ ಕಲ್ಲು ಮತ್ತು ಮಣ್ಣಿನಿಂದ ಭದ್ರವಾಗಿ ಇರುವಂತಹ ಕಟ್ಟೆಗಳನ್ನು ಕಟ್ಟಿದ. ಇವೇ ಮುಂದೆ ಕೆರೆಗಳಾದವು. ಇಲ್ಲಿ ಸಂಗ್ರಹವಾದ ನೀರನ್ನು ಸಣ್ಣ ಸಣ್ಣ ಕಾಲುವೆಗಳನ್ನು ತೋಡಿ ಕೃಷಿ ಚಟುವಟಿಕೆಗಳಿಗೆ ಬಳಸಿಕೊಳ್ಳಲು ಪ್ರಾರಂಭಿಸಿದ.

ಈ ದಿಸೆಯಲ್ಲಿ ವಿಶ್ವದಾದ್ಯಂತ ಅನೇಕ ಸಂಶೋಧನೆಗಳು ನಡೆದಿವೆ ಹಾಗೂ ನಡೆಯುತ್ತಲಿವೆ. ಕೆಲವು ಪ್ರಾಕ್ತನಾನ್ವೇಷಣೆಯಿಂದ ದೊರಕಿರುವ ಮಾಹಿತಿಗಳು ನಿಜಕ್ಕೂ ರೋಚಕವಾಗಿವೆ. ಈಜಿಪ್ಟ್ ದೇಶದಲ್ಲಿ ದೊರೆತಿರುವ ರೇಖಾಚಿತ್ರಗಳಲ್ಲಿ ಮಾನವನು ನೀರನ್ನು ಸಂಗ್ರಹಿಸಿ ಬಳಸಿಕೊಂಡಿರುವುದನ್ನು ಚಿತ್ರಿಸಲಾಗಿದೆ. ಇದರಿಂದಾಗಿ ಆ ದೇಶದಲ್ಲಿಯೇ ಮೊಟ್ಟ ಮೊದಲಿಗೆ ಕೆರೆ–ನೀರಾವರಿ ಪದ್ಧತಿಯನ್ನು ಬಳಕೆಗೆ ತಂದರೆಂದು ಪುರಾತತ್ವಜ್ಞರು ಅಭಿಪ್ರಾಯಪಡುತ್ತಾರೆ.[೧] ಭಾರತವೂ ಸಹ ಈಜಿಪ್ಟ್‌ನಷ್ಟೇ ಪ್ರಾಚೀನವಾದ ದೇಶ. ಈಜಿಪ್ಟ್‌ಗೆ ಸಮಕಾಲೀನವಾಗಿ ಕೃಷಿಕ ಜೀವನದ ಕುರುಹುಗಳನ್ನು ನೋಡಬಹುದು. ಇಲ್ಲಿ ಇನ್ನೂ ಪೂರ್ಣ ಪ್ರಮಾಣದ ಅಧ್ಯಯನವಾಗದ ಕಾರಣ ಖಚಿತವಾಗಿ ಹೇಳಲು ಸಾಧ್ಯವಾಗದಿದ್ದರೂ, ಅಲ್ಲಲ್ಲಿ ದೊರೆತಿರುವ ಪುರಾವೆಗಳ ಆಧಾರದಿಂದ ಭಾರತದಲ್ಲಿ ಆರು ಸಾವಿರ ವರ್ಷಗಳ ಹಿಂದೆಯೇ ಕೃಷಿ ಜೀವನ ಪ್ರಾರಂಭವಾಯಿತು ಎಂದು ಹೇಳಬಹುದು.[೨] ಸಿಂಧೂ ಸಂಸ್ಕೃತಿಯ ಜನರು ನೀರಿನ ವ್ಯವಸ್ಥೆಯನ್ನು ವೈಜ್ಞಾನಿಕ ಮಾದರಿಯಲ್ಲಿ ಮಾಡಿಕೊಂಡಿದ್ದರು. ಹೀಗಾಗಿ ಸಿಂಧೂ ನದಿ ಸಂಸ್ಕೃತಿಯ ಅನೇಕ ನೆಲೆಗಳಲ್ಲಿ ನೀರಾವರಿ ವ್ಯವಸ್ಥೆಯ ಪುರಾವೆಗಳು ದೊರೆತಿವೆ. ರಾಜಸ್ಥಾನದ ಗಂಗಾನಗರ ಜಿಲ್ಲೆಯಲ್ಲಿರುವ ಕಾಲಿಬಂಗನ್ ಎಂಬ ಸಿಂಧೂ ಸಂಸ್ಕೃತಿಯ ನೆಲೆಯಲ್ಲಿ ನಡೆಸಿದ ಉತ್ಖನನದಲ್ಲಿ ಉತ್ತಿರುವ ಜಮೀನು ದೊರೆತಿದೆ.[೩] ಇದರಿಂದಪ್ರಾಚೀನ ಕಾಲದಿಂದಲೇ ಸಮರ್ಪಕ ನೀರು ಸರಬರಾಜು ಪದ್ದತಿ ಕಂಡುಬರುತ್ತದೆ.

ದಕ್ಷಿಣ ಭಾರತದಲ್ಲಿ ಕ್ರಿಸ್ತ.ಪೂರ್ವದಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಜನರು ವಾಸಿಸುತ್ತಿದ್ದರು. ಇವರ ಕಾಲಮಾನ ಕ್ರಿ.ಪೂ.೮೦೦ ರಿಂದ ಕ್ರಿ.ಶ.೨ನೇ ಶತಮಾನ. ಉತ್ತರ ತಮಿಳುನಾಡಿನಲ್ಲಿ ಸ್ವಾಭಾವಿಕವಾಗಿಯೇ ಅನೇಕ ತಗ್ಗು ಪ್ರದೇಶಗಳು ಕಂಡು ಬರುತ್ತವೆ. ಈ ಪ್ರದೇಶಗಳಲ್ಲಿ ಮಳೆಯ ನೀರು ಸಂಗ್ರಹಗೊಳ್ಳುತ್ತದೆ. ಈ ಸಂಸ್ಕೃತಿಯ ಜನರು ಅಂತಹ ಸ್ವಾಭಾವಿಕವಾಗಿ ಉಂಟಾದಂತಹ ಕೆರೆಯ ನೀರನ್ನು ಬಳಸಿಕೊಂಡು ಮೊಟ್ಟಮೊದಲಿಗೆ ದಕ್ಷಿಣ ಭಾರತದಲ್ಲಿ ನೀರಾವರಿ ಕೃಷಿ ಪದ್ಧತಿಯನ್ನು ಪ್ರಾರಂಭಿಸಿದರೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.[೪] ದಕ್ಷಿಣ ಭಾರತದ ಬೃಹತ್ ಶಿಲಾಯುಗದ ನೆಲೆಗಳ ಉತ್ಖನನ ನಡೆದಿದ್ದು ಕೆಲವು ನೆಲೆಗಳಲ್ಲಿ ಅಕ್ಕಿ, ರಾಗಿ ಮುಂತಾದ ಧಾನ್ಯಗಳನ್ನು ಬೆಳೆಯುತ್ತಿದ್ದರೆಂಬುದು ಇದರಿಂದ ದೃಢವಾಗುತ್ತದೆ.[೫]

ಭಾರತದ ಪ್ರಾಚೀನ ಸಾಹಿತ್ಯ ಕೃತಿಗಳಾದ ರಾಮಾಯಣ, ಮಹಾಭಾರತ, ಕೌಟಿಲ್ಯನ ಅರ್ಥಶಾಸ್ತ್ರ, ಮನುವಿನ ಧರ್ಮಶಾಸ್ತ್ರ, ಪದ್ಮಪುರಾಣ, ಜಾತಕ ಕಥೆಗಳು, ಶುಕ್ರನೀತಿ ಸಾರ, ಅಮರಕೋಶ, ನಾಮಲಿಂಗಾನು ಶಾಸನ, ಗಾಥಾಸಪ್ತಶತಿ ಮತ್ತು ತಮಿಳು ಸಂಗಮ್ ಸಾಹಿತ್ಯವು ಕೆರೆ ನೀರಾವರಿ, ಕೃತಕ ಸಂಗ್ರಹಗಳು, ನಾಲೆಗಳು, ಸಾಗುವಳಿ ಪ್ರದೇಶ ಮತ್ತು ಕೃಷಿಗೆ ಸಂಬಂಧಿಸಿದ ಅನೇಕ ವಿಚಾರಗಳನ್ನು ಪ್ರಸ್ತಾಪಿಸುತ್ತವೆ.[೬] ಇವುಗಳೊಂದಿಗೆ ಶಾಸನಗಳು, ಕೆರೆಗಳ ಮತ್ತು ಕೃಷಿಗೆ ಸಂಬಂಧಿಸಿದ ಅನೇಕ ವಿಚಾರಗಳನ್ನು ತಿಳಿಸುತ್ತವೆ. ಅವುಗಳಲ್ಲಿ ಗುಜರಾತ್ ರಾಜ್ಯದಲ್ಲಿರುವ ಜುನಾಗಡ್‌ನಲ್ಲಿ ದೊರೆತಿರುವ ಮಹಾಕ್ಷತ್ರಪ ರುದ್ರಧಾಮನ್ (ಕ್ರಿ.ಶ.೧೫೦) ಶಾಸನವು ಸುದರ್ಶನ ಕೆರೆಯನ್ನು ಉಲ್ಲೇಖಿಸುತ್ತದೆ.[೭] ಈ ಶಾಸನವು ಕೆರೆಗೆ ಸಂಬಂಧಿಸಿದ ಅನೇಕ ವಿವರಗಳನ್ನು ನೀಡುತ್ತದೆ. ಒಂದು ಕೆರೆಯ ಬಗ್ಗೆ ಪೂರ್ಣ ಇತಿಹಾಸವನ್ನು ನೀಡುವುದು ಈ ಶಾಸನ ವಿಶಿಷ್ಟ ಪುಲುಮಾಯಿಯ ಮೇಕೆದೋಣೆ ಶಾಸನವು ಮೊಟ್ಟ ಮೊದಲಬಾರಿಗೆ ಕರ್ನಾಟಕದ ಕೆರೆಯ ಬಗೆಗೆ ಉಲ್ಲೇಖಿಸುತ್ತದೆ.[೮] ಕರ್ನಾಟಕದ ಅತ್ಯಂತ ಪ್ರಾಚೀನ ಕೆರೆಗಳಲ್ಲಿ ಚಂದ್ರವಳ್ಳಿಯ ಸಮೀಪವಿರುವ ಚಂದ್ರವಳ್ಳಿ ಕೆರೆಯು ಒಂದಾಗಿದೆ. ಈ ಕೆರೆಯನ್ನು ಕದಂಬರ ರಾಜನಾದ ಮಯೂರ ವರ್ಮನು ಈ ಕೆರೆಯನ್ನು ನಿರ್ಮಿಸಿದನೆಂದು ಈ ಶಾಸನವು ತಿಳಿಸುತ್ತದೆ.[೯] ಈ ಪ್ರದೇಶದಲ್ಲಿ ನಡೆಸಿದ ಉತ್ಖನನದಿಂದ ಸಹ ಈ ಕೆರೆಯು ಪ್ರಾಚೀನವಾದುದ್ದೆಂದು ದೃಢಪಟ್ಟಿದೆ. ಕರ್ನಾಟಕದಲ್ಲಿ ಶಾತವಾಹನರು, ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಚೋಳರು(ತಮಿಳುನಾಡು) ಹೊಯ್ಸಳರು, ಸೇವುಣರು ಮತ್ತು ವಿಜಯನಗರ ಕಾಲದವರೆಗೆ ಕೆರೆ ನೀರಾವರಿ ಕಾಮಗಾರಿಗಳು ಸುಮಾರು ಒಂದು ಸಾವಿರ ವರ್ಷಕ್ಕೂ ಹೆಚ್ಚು ಕಾಲ ಅವ್ಯಾಹತವಾಗಿ ನಡೆಯಿತು.[೧೦] ಇವರಲ್ಲದೆ ಅನೇಕ ಸಾಮಂತ ಮನೆತನಗಳ ಅರಸರು ಸಹ

ಕೆರೆಗಳನ್ನು ನಿರ್ಮಿಸಿರುವುದನ್ನು ಶಾಸನಗಳಿಂದ ತಿಳಿಯಬಹುದು. ಇವರಲ್ಲಿ ನೊಳಂಬರು. ಕಾಲದಲ್ಲೂ ಹಲವು ಕೆರೆಗಳನ್ನು ನಿರ್ಮಿಸಿರುವುದು ತಿಳಿಯಬಹುದಾಗಿದೆ. ಕಲ್ಯಾಣಿ ಚಾಲುಕ್ಯರ ಕಾಲವನ್ನು ಕೆರೆಗಳ ಸುವರ್ಣಯುಗವೆಂದು ಸಹ ಕರೆಯಲಾಗಿದೆ. ಇವರ ಕಾಲದಲ್ಲಿ ಅಸಂಖ್ಯಾತ ಹೊಸ ಹಳ್ಳಿಗಳು. ಅಗ್ರಹಾರ, ಕೆರೆಗಳ, ಛತ್ರ, ದೇವಾಲಯ ಮುಂತಾದವುಗಳನ್ನು ನಿರ್ಮಿಸಲಾಯಿತು.[೧೧] ಕೇವಲ ಅರಸು ಮನೆತನದವರೆ ಅಲ್ಲದೆ ಶ್ರೀ ಸಾಮಾನ್ಯರು ಸಹ ಕೆರೆಗಳನ್ನು ನಿರ್ಮಿಸಿರುವುದು ತಿಳಿದುಬರುತ್ತದೆ. ಸಿರಾ ತಾಲ್ಲೂಕನಲ್ಲಿ ಅಮರಾಪುರ ಶಾಸನ (ಕ್ರಿ.ಶ.೧೧೦೦) ಬೆಟ್ಟ ರಾಚಯ್ಯ ಎಂಬ ಕಾವಲುಗಾರನೊಬ್ಬ ಒಂದು ಕೆರೆಯನ್ನು ಮತ್ತು ಒಂದು ಗುಡಿಯನ್ನು ಕಟ್ಟಿಸಿದ ಎನ್ನುತ್ತದೆ.[೧೨]

ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯು ದಕ್ಷಿಣ ಭಾರತದದಲ್ಲಿ ಒಂದು ನೂತನ ತಿರುವನ್ನು ಪಡೆಯಿತು. ಇವರ ಕಾಲದಲ್ಲಿ ದಕ್ಷಿಣ ಭಾರತದ ಹಲವು ಭಾಗಗಳಲ್ಲಿ ಬೃಹತ್ ನೀರಾವರಿ ಯೋಜನೆಗಳನ್ನು ತಂದರು. ಇವರ ಕಾಲದ ಮದಗ ಮಾಸೂರು, ಆಂದ್ರಪ್ರದೇಶದಲ್ಲಿ ಪೊರುಮಾಮಿಲ್ಲ, ಕಂಬಂ, ವ್ಯಾಸಸಮುದ್ರ ಹಾಗೂ ರಾಯರಕೆರೆ ಮುಂತಾದ ಹಲವಾರು ಬೃಹತ್ ಕೆರೆಗಳನ್ನು ನಿರ್ಮಿಸಿದ ಹೆಗ್ಗಳಿಕೆ ಇವರಿಗೆ ಸಲ್ಲುತ್ತದೆ.[೧೩] ವಿಜಯನಗರ ಸಾಮ್ರಾಜ್ಯವು ವಿಶಾಲವಾಗಿದ್ದು ಅವರ ಆಶಯದಂತೆಯೇ ಅವರ ನೀರಾವರಿ ಯೋಜನೆಗಳು ಸಹ ದೊಡ್ಡದಾಗಿದ್ದವು. ಇವರು ಹಳೆಯ ಕೆರೆಗಳ ಜೀರ್ಣೋದ್ಧಾರ ಮಾಡುವುದರೊಂದಿಗೆ ಹೊಸ ಜಲಾಶಯಗಳನ್ನು ಕಟ್ಟಿದರು. ಅವರ ತರುವಾಯ ಅವರ ಪಾಳೆಯಗಾರರಾಗಿದ್ದ ಚಿತ್ರದುರ್ಗದ ಪಾಳೆಯಗಾರರು, ಮೈಸೂರು ಒಡೆಯರು, ಕೆಳದಿಯ ನಾಯಕರು ಕೆರೆ ನಿರ್ಮಾಣ ಕೆಲಸಗಳನ್ನು ಮುಂದುವರೆಸಿದರು ಸುಮಾರು ಕ್ರಿ.ಶ.೧೬೩೬ರಿಂದ ೧೭೯ರವರೆಗೆ ಕರ್ನಾಟಕದ ರಾಜಕೀಯ ಪರಿಸ್ಥಿತಿಯು ಬದಲಾಯಿತು. ಈ ಕಾಲಾವಧಿಯಲ್ಲಿ ದಕ್ಷಿಣ ಭಾರತದಲ್ಲಿ ಬಿಜಾಪುರ ಸುಲ್ತಾನರು, ಹೈದರ್, ಟಿಪ್ಪು, ಮತ್ತು ಆಂಗ್ಲರು ಹೆಚ್ಚಾಗಿ ಯುದ್ಧಗಳಲ್ಲಿ ತೊಡಗಿಸಿಕೊಂಡು ಕೆರೆ ನೀರಾವರಿಯನ್ನು ಕಡೆಗಣಿಸಿದರೂ ಅಲ್ಪ ಪ್ರಮಾಣದಲ್ಲಿ ಕೆರೆ ನೀರಾವರಿಗೆ ಪ್ರೋತ್ಸಾಹ ನೀಡಿದ್ದರು.

ಒಟ್ಟಾರೆಯಾಗಿ ಪ್ರಾಚೀನ ಕಾಲದಿಂದಲೂ ಕೆರೆಗಳು ನೀರಾವರಿ ವ್ಯವಸ್ಥೆಗೆ ಕೆರೆಗಳು ಪ್ರಮುಖ ಪಾತ್ರವಹಿಸಿರುವುದು ಕಂಡುಬರುತ್ತದೆ.

ಪಾವಗಡ ಪರಿಸರದ ಕೆರೆಗಳು

ಮೈಸೂರು ಪ್ರಾಂತ್ಯಕ್ಕೆ ಸೇರಿದಂತಹ ತುಮಕೂರು ಜಿಲ್ಲೆಯ ಪಾವಗಡವು ಬಯಲು ಸೀಮೆ ಪ್ರದೇಶವಾಗಿದ್ದು, ಮಳೆಯೇ ಇಲ್ಲಿಯ ಕೃಷಿಗೆ ಮೂಲಾಧಾರವಾಗಿದೆ. ಹಾಗೂ ಇಲ್ಲಿ ಯಾವುದೇ ಜೀವಂತ ನದಿಗಳಿಲ್ಲದ್ದರಿಂದ ಈ ಭಾಗದಲ್ಲಿ ಕೆರೆಗಳನ್ನು ಕಟ್ಟಿಸಿ ಕೃಷಿಗೆ

ಬಳಸಿಕೊಳ್ಳುವುದು ಅನಿವಾರ್ಯವಾಯಿತು. ಪಾವಗಡ ಪರಿಸರವೂ ಬೆಟ್ಟಗುಡ್ಡಗಳಿಂದ ಕೂಡಿದ ಸಮತಟ್ಟಾದ ಇಳಿಜಾರು ಪ್ರದೇಶವಾದ್ದರಿಂದ ಮಳೆ ನೀರಿನ ಪರ್ಯಾಯ ವ್ಯವಸ್ಥೆಯಾಗಿ ಕೆರೆಕಟ್ಟೆಗಳ ನಿರ್ಮಾಣಕಾರ್ಯ ಅವಶ್ಯಕವಾಗಿತ್ತು. ಪಾವಗಡ ಪರಿಸರವು ಪ್ರಾಚೀನ ಕಾಲದಿಂದಲೂ ಕೆರೆಕಟ್ಟೆ ನಿರ್ಮಾಣಕ್ಕೆ ಯೋಗ್ಯವಾಗಿದೆ. ಈ ಪ್ರದೇಶದಲ್ಲಿ ಮೆಕೆಂಜಿ ಸಮೀಕ್ಷೆಯ ವರದಿಯಂತೆ ಕ್ರಿ.ಶ.೧೭೯೯ರ ಅವಧಿಯಲ್ಲಿ ಪಾವಗಡ ತಾಲ್ಲೂಕಿನಲ್ಲಿ ಸುಮಾರು ೩೨ ದೊಡ್ಡಕೆರೆಗಳು ೩೫ ಕಟ್ಟೆಗಳು ಹಾಗೂ ೩೭ ಕುಂಟೆಗಳಿದ್ದವೆಂದು ತಿಳಿಸಿದ್ದಾರೆ. ನಂತರ ಕಾಲದಲ್ಲಿ ಇವುಗಳ ಸಂಖ್ಯೆ ಹೆಚ್ಚಾಗಿರುವುದು ಕಂಡುಬರುತ್ತದೆ.[೧೪] ಪ್ರಸ್ತುತ ಪಾವಗಡ ಪರಿಸರದಲ್ಲಿ ೧೨೦ಕ್ಕೂ ಹೆಚ್ಚು ಕೆರೆಗಳುಕಂಡುಬರುತ್ತವೆ. ಅವುಗಳಲ್ಲಿ ಗುಂಡ್ಲಹಳ್ಳಿ ಕೆರೆ ವಿರುಪಸಮುದ್ರ ಕೆರೆ ಅರಸೀಕೆರೆ ಹಂಪಯ್ಯನಕೆರೆ, ಪಳವಳ್ಳಿಕರೆ, ನಾಗಲಮಡಿಕೆ ಕೆರೆ, ವಳ್ಳೂರಿನ ಕೆರೆ, ಕಾಮನ ದುರ್ಗದ ಅಕ್ಕಮ್ಮನ ಕೆರೆ ಪ್ರಮುಖವಾದವುಗಳಾಗಿವೆ.

ಪಾವಗಡ ಪರಿಸರದಲ್ಲಿ ನೂರಾರು ಪ್ರಾಚೀನ ಕೆರೆಗಳಿವೆ. ಇವುಗಳ ಬಗ್ಗೆ ಈ ಭಾಗದ ಹಲವಾರು ಶಾಸನಗಳು ದಾಖಲೆ ಒದಗಿಸುತ್ತವೆ. ಪಾವಗಡ ತಾಲೂಕಿನ ಪ್ರಾಚೀನ ಕೆರೆಯ ಉಲ್ಲೇಖವು ಗುಂಡ್ಲಹಳ್ಳಿ ಗ್ರಾಮದ ಮೂರು ಶಾಸನಗಳಲ್ಲಿ ದೊರೆಯುತ್ತದೆ. ಗಂಗರ ದೊರೆ ಶ್ರೀಪುರುಷನ ಅವಧಿಯ ಕ್ರಿ.ಶ.೭೫೪ಕ್ಕೆ ಸೇರಿದ ಈ ಮೂರು ಶಾಸನಗಳಲ್ಲಿ ಆಕಳತಿ ಎಂಬುವನು ಆಕಳ ಸಮುದ್ರವೆಂಬ ಕೆರೆಯನ್ನು ಕಟ್ಟಿಸಿ, ಅದರ ಬಳಿ ನಾಲ್ಕು ಖಂಡುಗ ಬೆಳೆಯ ಭೂಮಿಯನ್ನು ಕೌಂಡಿನ್ಯ ಗೋತ್ರದ ದೇವದತ್ತನೆಂಬ ಬ್ರಾಹ್ಮಣನಿಗೆ ದಾನ ನೀಡದ ವಿಷಯ ಈ ಶಾಸನದಲ್ಲಿದೆ.[೧೫] ನಮ್ಮ ಪೂರ್ವಿಕರು ಕೆರೆಯನ್ನು ಸಮುದ್ರವೆಂದು ಕರೆದಿರುವುದು. ಆ ಕೆರೆಯ ಮೇಲಿವು ಭಕ್ತಿ ಗೌರವಗಳನ್ನು ಸೂಚಿಸುತ್ತದೆ. ಈ ಕೆರೆಯು ೧೨೫೦ ವರ್ಷಗಳ ನಂತರವೂ ಉಳಿದು ಬಂದಿರುವುದು ಆ ಕೆರೆಯ ಮಹತ್ವವನ್ನು ತೋರಿಸುತ್ತದೆ. ನಂತರ ಕ್ರಿ.ಶ.೧೪೮೭ರ ನಿಡುಗಲ್ಲು ಬೆಟ್ಟದ ಚಿಕ್ಕತಿಪ್ಪರಾಜೇಂದ್ರನ ಎರಡು ಶಾಸನಗಳಲ್ಲಿ ತನ್ನ ರಾಣಿ ಲಕ್ಷ್ಮೀದೇವಿಯ ಹೆಸರಿನಲ್ಲಿ ಕೆರೆಯೊಂದನ್ನು ನಿರ್ಮಿಸಿದ ವಿಷಯವಿದೆ.[೧೬] ಕ್ರಿ.ಶ.೧೫೫೦ರ ವಿಜಯನಗರದ ಅರಸ ಸದಾಶಿವರಾಯನು ಮಹಾಮಂಡಳೇಶ್ವರನಾದ ರಾಮರಾಜ ವಿಠಲಯ್ಯನು ಕೋಣನಕುರಿಕೆ ಗ್ರಾಮದಲ್ಲಿ ಕೆರೆನಿರ್ಮಿಸಲು ದಾನ ನೀಡಿರುವ ವಿವರವಿದೆ.[೧೭] ಅದೇ ರೀತಿ ರಂಗಾಪುರದ ಕ್ರಿ.ಶ.೧೫೪೧ರ ಅಚ್ಯುತರಾಯನ ಅವಧಿಯ ಶಾಸನದಲ್ಲಿ ಕೇತಗೌಡನ ಕೆರೆಯ ಉಲ್ಲೇಖವಿದೆ.[೧೮] ನನ್ನಿಗಾನ ಹಳ್ಳಿಯ ಶಾಸನದ ಪ್ರಕಾರ ಕ್ರಿ.ಶ.೧೫೦೩ರಲ್ಲಿ ಜಾಮಲಕದರಾಯ, ಇವನ ಮಗ ಚಿಕ್ಕ ಕದುರೆಯ್ಯ ಇಬ್ಬರೂ ಕೆರೆಯ ಏರಿಯನ್ನು ಕಟ್ಟಿಸಲು ಭೂಮಿ ಧಾನ ನೀಡಿರುವ ವಿವರವಿದೆ.[೧೯] ಇವುಗಳಲ್ಲದೆ ಪಾವಗಡ ಪರಿಸರದ ಶಾಸನಗಳಲ್ಲಿ ಉಲ್ಲೇಖವಾಗಿಲ್ಲದ ಅನೇಕ ಪ್ರಾಚೀನ ಕೆರೆಗಳು ಇಂದಿಗೂ

ಅಸ್ಥಿತ್ವದಲ್ಲಿವೆ. ಇಷ್ಟೇ ಅಲ್ಲದೆ ಹಲವು ಕಾಲುವೆಗಳನ್ನು ಕಟ್ಟಿಸಿರುವುದು ಈ ಪ್ರದೇಶದ ಶಾಸನಗಳಿಂದ ತಿಳಿಯಬಹುದಾಗಿದೆ. ಪಾವಗಡ ಪರಿಸರದಲ್ಲಿ ಅನೇಕ ಕೆರೆಗಳಿದ್ದು ಅವುಗಳಲ್ಲಿ ಚಿಕ್ಕವು, ದೊಡ್ಡವು ಕಾಲುವೆ ಕುಂಟೆಗಳು ಸೇರಿವೆ. ಇವುಗಳಲ್ಲಿ ಬಹುಪಾಲು ಪ್ರಾಚೀನ ಕಾಲದಲ್ಲಿ ನಿರ್ಮಿಸಿದವುಗಳಾಗಿವೆ. ಇವುಗಳಲ್ಲಿ ಅನೇಕ ಕೆರೆ, ಕಟ್ಟೆ, ಕಾಲುವೆಗಳು ಇಂದಿಗೂ ಇಲ್ಲಿಯ ವ್ಯವಸಾಯಗಳಿಗೆ ನೀರನ್ನು ಪೂರೈಸುತ್ತಿದ್ದು, ಕೃಷಿ ಕಾರ್ಯಗಳಿಗೆ ಅನುವು ಮಾಡಿಕೊಟ್ಟಿವೆ. ಇಲ್ಲಿಯ ಬಹುಪಾಲು ಕೆರೆಗಳು ವಿಜಯನಗರ ಕಾಲದಲ್ಲಿ ರಚನೆಗೊಂಡಂತಹವುಗಳಾಗಿವೆ. ಗುಂಡ್ಲಹಳ್ಳಿಯ ಕೆರೆಯು ಗಂಗರ ಶ್ರೀಪುರುಷನ ಕಾಲಾವಧಿಯಲ್ಲಿ ರಚನೆಗೊಂಡಂತಹದ್ದಾಗಿದೆ. ಇಲ್ಲಿಯ ಬಹುತೇಕ ಕೆರೆಗಳು ಸಮುದ್ರಮಟ್ಟದಿಂದ ಸುಮಾರು ೫೦೦ರಿಂದ ೬೦೦ ಮೀಟರಗಳಷ್ಟು ಎತ್ತರ ಪ್ರದೇಶದಲ್ಲಿ ನಿರ್ಮಿಸಲಾಗಿದೆ. ಈ ಕೆರೆಗಳು ಒಂದೇ ಕಾಲದಲ್ಲಿ ನಿರ್ಮಾಣಗೊಂಡಿಲ್ಲ. ಅವುಗಳನ್ನು ಬೇರೆ ಬೇರೆ ಕಾಲಘಟ್ಟಗಳಲ್ಲಿ ನಿರ್ಮಿಸಲಾಗಿದೆ. ಆದರೂ ಎಲ್ಲಾ ಕೆರೆಗಳ ಸರಾಸರಿ ಎತ್ತರವನ್ನು ನಾವು ಗಣನೆಗೆ ತೆಗೆದುಕೊಂಡರೆ ಇವು ಸುಮಾರು ೫೫೦ ಮೀಟರಳ ವ್ಯಾಪ್ತಿಯಲ್ಲಿಯೇ ಬರುತ್ತವೆ.

ಈ ಪರಿಸರದಲ್ಲಿ ನಿರ್ಮಿಸಿರುವ ಕೆರೆಗಳ ಏರಿಯು ವಿವಿಧ ದಿಕ್ಕುಗಳನ್ನು ಹೊಂದಿವೆ. ಆದರೂ ಬಹುತೇಕ ಕೆರೆಗಳಿಗೆ ಪೂರ್ವದಿಕ್ಕಿನಲ್ಲಿ ಏರಿಯನ್ನು ನಿರ್ಮಿಸಲಾಗಿದೆ. ಈ ಪ್ರದೇಶದಲ್ಲಿ ಬೀಳುವ ಮಳೆಯು ಸಣ್ಣ ತೊರೆ, ಹಳ್ಳಗಳಾಗಿ ಪೂರ್ವಭಾಗಕ್ಕೆ ಹರಿಯುತ್ತವೆ ಆದುದರಿಂದ ಕೆರೆ ನೀರು ಸಂಗ್ರಹಿಸಲು ಏರಿಯನ್ನು ಪೂರ್ವ ದಿಕ್ಕಿಗೆ ಕಟ್ಟಲಾಗಿದೆ. ಇಲ್ಲಿನ ಕೆರೆಗಳಿಗೆ ಪ್ರಾಚೀನ ಕಾಲದಿಂದಲೂ ಹಲವು ಹೆಸರುಗಳಿಂದ ಕಟ್ಟೆ, ಸಾಗರ, ತಟಾಕ, ಸಮುದ್ರ, ಕೊಳ ಕುಂಟೆ ಇವೇ ಮುಂತಾದ ಪದಗಳು ಈ ಪ್ರದೇಶದಲ್ಲಿ ದೊರೆತಿರುವಂಥ ಶಾಸನಗಳಿಂದ ತಿಳಿದು ಬರುತ್ತದೆ. ಇವುಗಳಲ್ಲದೆ ಅರಸರ, ರಾಣಿಯರ, ದಾನಿಗಳ, ಕೆರೆ ಕಟ್ಟಿಸಿದವರ ಹೆಸರುಗಳಿಂದಲೂ ಕರೆಯುತ್ತಾರೆ. ಇವುಗಳೊಂದಿಗೆ ಕೆರೆಯ ವಿಸ್ತೀರ್ಣತೆಯನ್ನು ಸೂಚಿಸುವ ಕೆಲವೊಂದು ಪದಗಳು ಸಹ ಕೆರೆಯ ಹೆಸರಿನ ಜೊತೆಯಲ್ಲಿಯೇ ಉಲ್ಲೇಖಿಸಲಾಗಿದೆ. ಅವುಗಳಲ್ಲಿ ಮುಖ್ಯವಾಗಿ ಚಿಕ್ಕಕೆರೆ, ಗಂಗಸಾಗರ, ಆಕಳಿಸಮುದ್ರ, ಭೀಮಸಮುದ್ರ ಎಂಬ ಹೆಸರುಗಳಲ್ಲಿ ಹಿರಿಯ, ಚಿಕ್ಕ, ಸಾಗರ, ಸಮುದ್ರ ಇತ್ಯಾದಿ ಗುಣವಾಚಕಗಳನ್ನು ಬಳಸಲಾಗಿದೆ.

ಒಂದುಕೆರೆಯ ವಿಸ್ತೀರ್ಣ, ಅಳತೆ, ಅಗಾಧತೆ ಮತ್ತು ಆಳವನ್ನು ಗಮನದಲ್ಲಿರಿಸಿಕೊಂಡು ಅವುಗಳನ್ನು ವರ್ಗೀಕರಿಸಿದ್ದಾರೆ. ಕೆರೆಯ ಆಯಕಟ್ಟು ಪ್ರದೇಶಗಳಿಗೆ ನೀರುಣಿಸುವ ಸಾಮರ್ಥ್ಯವನ್ನು ಅಳತೆಗೋಲಾಗಿಸಿಕೊಂಡು ಕೆರೆಗೆ ಹಿರಿಯ, ಪಿರಿಯ ಚಿಕ್ಕ ಇವೇ ಮುಂತಾದ ಗುಣವಾಚಕಗಳನ್ನು ಜೋಡಿಸಿರುವುದನ್ನು ಕಂಡುಕೊಳ್ಳಬಹುದಾಗಿದೆ. ಮತ್ತೊಂದು ಸಾಧ್ಯತೆಯೆಂದರೆ ಒಂದು ಗ್ರಾಮದಲ್ಲಿ ಒಂದಕ್ಕಿಂತ ಅಧಿಕವಾದ ಕೆರೆಗಳಿದ್ದಲ್ಲಿ, ಅವುಗಳ ನಡುವಿನ ವ್ಯತ್ಯಾಸವನ್ನು

ಕಂಡುಕೊಳ್ಳಲು ಈ ರೀತಿಯಾಗಿ ಕೆರೆಗಳನ್ನು ಹೆಸರಿಸುವ ಪದ್ಧತಿಯು ಜನಪದರಲ್ಲಿ ಇಂದಿಗೂ ಪ್ರಚಲಿತವಾಗಿದೆ. ಈ ರೀತಿ ಹೆಸರಿನ ಮೂಲಕ ವಿಶ್ಲೇಷಿಸುವಾಗ ಕೆರೆಗಳನ್ನು ಪ್ರತ್ಯಕ್ಷವಾಗಿ ನೋಡದೆ ತೀರ್ಮಾನಿಸುವುದು ಅಷ್ಟು ಸಮಂಜಸವಾಗುವುದಿಲ್ಲ. ಉದಾಹರಣೆಗೆ ಗಂಗಸಾಗರ, ಭೀಮಸಮುದ್ರ, ಅಕಳೆ ಸಮುದ್ರ ಎಂಬ ಹೆಸರಿನಿಂದ ನೀಡಬಹುದು. ಸಾಗರ ಎಂದರೆ ಸಮುದ್ರ ಎಂದರ್ಥ ಇಲ್ಲಿ ಕೆರೆಯು ವಿಶಾಲವಾದದ್ದು ಎಂದು ಹೆಸರಿಸಲಾಗಿದೆ. ಇಲ್ಲಿಯ ಕೆರೆಗಳು ಮಳೆಯ ನೀರನ್ನು ಆಶ್ರಯಿಸಿರುವಂಹತವುಗಳು. ಈ ಕೆರೆಗಳನ್ನು ನಿರ್ಮಿಸುವಾಗ ಪರಿಸರಕ್ಕನುಗುಣವಾಗಿ ಮೂರು ಅಥವಾ ನಾಲ್ಕು ಕೆರೆಗಳನ್ನು ಸಮೀಪದಲ್ಲಿಯೇ, ಒಂದಕ್ಕೊಂದು ಹೊಂದಿಕೊಂಡಿರುವಂತೆ ಕಟ್ಟಿರುವುದನ್ನು ಗಮನಿಸಬಹುದು. ಈ ರೀತಿ ಕಟ್ಟುವುದರಿಂದ ಒಂದು ಕೆರೆ ತುಂಬಿದಾಗ, ಹೆಚ್ಚುವರಿ ನೀರು ಮತ್ತೊಂದು ಕೆರೆಗೆ ಹರಿದುಬರುತ್ತದೆ. ಇದರಿಂದಾಗಿ ಎತ್ತರದಲ್ಲಿರುವ ಕೆರೆಗೆ ಹೆಚ್ಚುವರಿ ನೀರು ಬಂದ ಪಕ್ಷದಲ್ಲಿಯೂ ಏರಿಗೆ ಯಾವುದೇ ವಿಧದ ಅಪಾಯವುಂಟಾಗುವುದಿಲ್ಲ. ಆ ಕೆರೆಯೂ ಸುರಕ್ಷಿತವಾಗಿರುತ್ತದೆ ಮತ್ತು ನೀರು ವ್ಯರ್ಥವಾಗದಂತೆ ಎರಡನೆಯ ಕೆರೆಯಲ್ಲಿ ಶೇಖರಗೊಳ್ಳುತ್ತದೆ. ಇದು ನಮ್ಮ ಪೂರ್ವಜರು ತಮ್ಮ ದೀರ್ಘ ಅನುಭವದಿಂದ ಕಟ್ಟಿರುವಂತಹದ್ದು, ಇಲ್ಲಿ ಅವರ ಬುದ್ಧಿವಂತಿಕೆ ಇಲ್ಲಿ ತಿಳಿದು ಬರುತ್ತದೆ. ಪಾವಗಡ ತಾಲೂಕಿನಲ್ಲಿ ಇಂತಹ ಕೆರೆಗಳ ಸಮುಚ್ಚಯವನ್ನು ಇಂದಿಗೂ ನಾವು ಕಾಣಬಹುದು.

ಕೆರೆಯು ನಿರ್ಮಾಣ ಹಂತದಲ್ಲಿಯೇ ಅನೇಕ ಕಾರ್ಯಾಚರಣೆಗಳಿಂದ ಕೂಡಿರುತ್ತದೆ. ಅವುಗಳೆಂದರೆ ಭೌಗೋಳಿಕ ಪರಿಸ್ಥಿತಿಯ ಅಧ್ಯಯನ, ಜಲಾನಯನ ಪ್ರದೇಶ, ಸೂಕ್ತ ಸ್ಥಳದ ಆಯ್ಕೆ, ಅಡವಿಯನ್ನು ತೆಗೆದು ಹಾಕುವದು, ಕೆರೆಕಟ್ಟೆ ನಿರ್ಮಿಸುವುದು ಇತ್ಯಾದಿ ಒಂದು ಕೆರೆಯ ನಿರ್ಮಾಣ ಮಳೆಯ ಪ್ರಮಾಣವನ್ನು, ಹಾಗೂ ಕೆರೆಯ ಜಲಾನಯನ ಪ್ರದೇಶವನ್ನು ಅವಲಂಭಿಸಿರುತ್ತದೆ. ಈ ಪ್ರದೇಶವು ಸಾಮಾನ್ಯವಾಗಿ ಕೆರೆಯ ಭಾಗಕ್ಕಿಂತ ಎತ್ತರದಲ್ಲಿರುತ್ತದೆ. ಜಲಾನಯನ ಪ್ರದೇಶದಲ್ಲಿ ಅಧಿಕ ಮಳೆಯಾಗುತ್ತದೆ ಮತ್ತು ಇಲ್ಲಿ ಬೀಳುವ ಮಳೆಯ ನೀರು ಹರಿದುಬಂದು ಕೆರೆಯನ್ನು ಸೇರುತ್ತದೆ. ಹೀಗೆ ಹರಿದು ಬರುವ ನೀರನ್ನು ತಡೆಯಲು ಕೆರೆಯ ಏರಿಯು ಪ್ರಮುಖ ಪಾತ್ರವಹಿಸುತ್ತದೆ. ಅದ್ದರಿಂದ ಈ ಭಾಗವು ಅತ್ಯಂತ ಗಟ್ಟಿಯಾಗಿರಬೇಕಾಗುತ್ತದೆ. ಸಾಮಾನ್ಯವಾಗಿ ಕೆರೆಯ ಏರಿ ಅಥವಾ ಒಡ್ಡನ್ನು ಒರಟಾದ ಗುಂಡು ಬಂಡೆಗಳಿಂದ ನಿರ್ಮಿಸಲಾಗಿದೆ. ನೀರಿನ ಬದಿಗೆ ಬಂಡೆಗಳನ್ನು ಹಾಗೂ ಇನ್ನೊಂದು ಬದಿಯಲ್ಲಿ ಕೆರೆಯನ್ನು ಅಗೆದಾಗ ಬಂದ ಮಣ್ಣನ್ನು ನೀರಿನಲ್ಲಿ ನೆನೆಸಿ ಗಟ್ಟಿಮಾಡಿ, ಅದರ ಮೇಲೆ ಮತ್ತಷ್ಟು ಮಣ್ಣನ್ನು ಹಾಕುತ್ತಾ ಹೋಗುತ್ತಾರೆ. ಏರಿಯ ಆಯಕಟ್ಟಿನ ಭಾಗವು ಇಳಿಜಾರಾಗಿರುತ್ತದೆ. ಈ ಇಳಿಜಾರು ರಚನೆಯು ನೀರಿನ ಒತ್ತಡವನ್ನು ವಿರುದ್ಧ ದಿಕ್ಕಿನಿಂದ

ತಡೆದು ಏರಿಗೆ ಸಾಕಷ್ಟು ಬಲವನ್ನು ಕೊಡುತ್ತದೆ. ಈ ಇಳಿಜಾರು ಪ್ರದೇಶದಲ್ಲಿ ಹುಲ್ಲಿನಂತಹ ಸಸ್ಯಗಳನ್ನು ಬೆಳೆಸಿ ಅದರ ಮಣ್ಣು ಕೆಳಕ್ಕೆ ಹೋಗದಂತೆ ಮತ್ತಷ್ಟು ಬಲಪಡಿಸುವ ಪದ್ಧತಿ ಇತ್ತು. ಕೆರೆಯ ಏರಿಯನ್ನು ಯಾವಾಗಲೂ ಲಂಬವಾಗಿ ಕಟ್ಟದೆ ಅಂಕುಡೊಂಕಾಗಿಯೇ ಕಟ್ಟುತ್ತಾರೆ. ಇದರಿಂದ ನೀರಿನಿಂದ ಏರಿಗೆ ಬೀಳುವ ಒತ್ತಡ ಸಮನಾಗಿ ಹಂಚಿ ಹೋಗುತ್ತದೆ. ಮತ್ತು ಏರಿ ಒಡೆದಾಗ ಅದನ್ನು ಸರಿಪಡಿಸುವುದು ಸುಲಭವಾಗುತ್ತದೆ.

ಕೆರೆಯ ರಚನೆಯಲ್ಲಿ ತೂಬುಗಳು ಒಂದು ಮುಖ್ಯ ಅವಿಭಾಜ್ಯ ಅಂಗವಾಗಿದೆ. ತೂಬುಗಳೇ ಕೆರೆಯ ನೀರನ್ನು ಹೊರಗೆ ಹೋಗದಂತೆ ತಡೆಹಿಡಿಯುವ ಸಾಧನಗಳು. ತೂಬುಗಳನ್ನು ಎರಡು ಅಥವಾ ನಾಲ್ಕು ಕಂಬಗಳಿಂದ ರಚಿಸಿದ್ದು ಎರಡು ಕಂಬಗಳ ನಡುವಿನಲ್ಲಿ ಒಂದು ಅಡ್ಡ ಕಲ್ಲನ್ನು ಇರಿಸಲಾಗುತ್ತದೆ. ನಂತರ ಉದ್ದವಾದ ಕಲ್ಲುಗಳ ಮೇಲ್ಭಾಗದಲ್ಲಿ ಅಡ್ಡಗಲ್ಲನ್ನು ಹಾಸಲಾಗುತ್ತದೆ. ಈ ಎರಡು ಅಡ್ಡಗಲ್ಲುಗಳ ನಡುವೆ ಸುಮಾರು ೨೫ರಿಂದ ೩೦ ಸೆಂ.ಮಿ. ವ್ಯಾಸದ ರಂಧ್ರವಿರುತ್ತದೆ. ಈ ರಂಧ್ರದ ಅಳತೆಗೆ ತಕ್ಕ ವ್ಯಾಸವುಳ್ಳ ಮರದ ತುಂಡನ್ನು ಇಟ್ಟು ರಂದ್ರವನ್ನು ಮುಚ್ಚಲಾಗುತ್ತದೆ. ಆ ಮರದ ದಿಮ್ಮಿಯನ್ನು ಮೇಲೆತ್ತಿದಾಗ ನೀರು ಹೊರ ಹೋಗುತ್ತದೆ. ಈ ಮರದ ದಿಮ್ಮಿಯು ನೀರಲ್ಲಿದ್ದಾಗ ನೆನೆದು ಹಿಗ್ಗುತ್ತದೆ. ಈ ಹಿಗ್ಗಿದ ಮರದ ತುಂಡು ರಂಧ್ರದಲ್ಲಿ ಬಿಗಿಯಾಗಿ ಕೂತು ನೀರು ಹೊರಬರದಂತೆ ಅದಷ್ಟು ತಡೆಯುತ್ತದೆ. ತೂಬುಗಳು ಸಾಮಾನ್ಯವಾಗಿ ಕೆರೆ ಏರಿಯಿಂದ ಸುಮಾರು ಹತ್ತರಿಂದ ಹದಿನೈದು ಅಡಿ ದೂರದಲ್ಲಿ ಇರಿಸಿರುತ್ತಾರೆ. ಇದರಿಂದ ಕಾಲುವೆ, ತೂಬು ಮತ್ತು ಏರಿಗೆ ಯಾವುದೇ ವಿಧವಾದ ಅಪಾಯವಿರುವುದಿಲ್ಲ.[೨೦] ಕೆರೆಯ ಏರಿಯಿಂದ ತೂಬಿರುವ ಜಾಗವನ್ನು ತಲುಪಲು ಕಬ್ಬಿಣ ಮತ್ತು ಕಲ್ಲನ್ನು ಬಳಸಿ ಸೇತುವೆಯನ್ನು ಕಟ್ಟಿರುತ್ತಾರೆ.

ಪ್ರತಿಯೊಂದು ಕೆರೆಯಲ್ಲೂ ತೂಬಿನ ಜೊತೆಗೆ ಕಲ್ಲು ಕಟ್ಟಡದ ಕೊಡಿಯು ಇರುತ್ತಿತ್ತು. ಅದರ ಮೂಲಕ ಕೆರೆಯಲ್ಲಿನ ಹೆಚ್ಚುವರಿ ನೀರು ಕೆಳಗಣ ಇತರೆ ಕೆರೆಗಳಿಗೆ ಹರಿದು ಹೋಗುತ್ತಿತ್ತು. ಕೋಡಿಯ ಪ್ರದೇಶವನ್ನು ಆಯ್ಕೆ ಮಾಡಿ ಅದನ್ನು ಅಳವಡಿಸುವುದರಲ್ಲಿಯೇ ಕೆರೆಯನ್ನು ಕಟ್ಟುವವನಿಗೆ ಇರುವ ಸಾಮರ್ಥ್ಯ ತೋರಿಸಿಕೊಡುತ್ತದೆ. ಸಾಮಾನ್ಯವಾಗಿ ಕೋಡಿಯು ಕೆರೆಯ ನೀರಿರುವ ಯಾವುದಾದರು ಒಂದು ದಿಕ್ಕಿಗೆ ಇರುತ್ತದೆ. ಏರಿಯ ದಿಕ್ಕಿನಲ್ಲಿ ಇರುವುದಿಲ್ಲ. ಕೆರೆಯಲ್ಲಿ ನೀರು ಸಂಗ್ರಹವಾಗಿ ಗರಿಷ್ಠ ಮಟ್ಟ ತಲುಪಿದಾಗ ಹೆಚ್ಚುವರಿ ನೀರು ಈ ಕೋಡಿಯ ಮೂಲಕ ಹಾದು ಹೋಗುತ್ತದೆ. ಅತೀ ಹೆಚ್ಚು ನೀರು ಬಂದಾಗ ಕೆರೆಏರಿಗೆ ಒತ್ತಡಬೀಳುತ್ತದೆ. ಆ ಒತ್ತಡವನ್ನು ತಡೆಯಲು ಕೋಡಿಗಳನ್ನು ಅಳವಡಿಸಲಾಗುತ್ತದೆ.

ಕೆರೆಯ ಗರಿಷ್ಠ ಮಟ್ಟ ಹಾಗೂ ಕೋಡಿಯ ಮಟ್ಟ ಒಂದೇ ಆಗಿರಬೇಕು. ಕೆರೆಯು ಅತೀ ದೊಡ್ಡದಾಗಿದ್ದರೆ, ಎರಡು ಕೋಡಿಗಳಿರುವುದನ್ನು ನೋಡಬಹುದು.

ಕೆರೆಯಲ್ಲಿ ಸಂಗ್ರಹವಾದ ನೀರು ತೂಬಿನ ಮೂಲಕ ಅದು ಕಾಲುವೆಯ ಮೂಲಕ ಹೊರಬರುತ್ತದೆ. ಕೆರೆಯ ನೀರನ್ನು ಸಂಗ್ರಹಿಸಿ ಆಯಕಟ್ಟು ಪ್ರದೇಶಕ್ಕೆ ನೀರು ಹಾಯಿಸುವ ಮಾರ್ಗಕ್ಕೆ ಕಾಲುವೆ ಎಂದು ಹೆಸರು. ಕಾಲುವೆಯು ಕೆರೆ ಏರಿಯ ಕೆಳಗಡೆಯಿಂದ ಹಾದುಬರುತ್ತದೆ. ಇವುಗಳನ್ನು ಕಲ್ಲುಗಳಿಂದ ಕಟ್ಟಲಾಗಿರುತ್ತದೆ. ಕೆಲವೊಂದು ಸಂದರ್ಭಗಳಲ್ಲಿ ನಾಲೆಗೆ ಮರವನ್ನು ಬಳಸುತ್ತಿದ್ದರು. ಹತ್ತಿರದ ದೇವಾಲಯಕ್ಕೆ ನೀರನ್ನು ಹಾಯಿಸುವ ನಾಲೆಗೆ ಮರವನ್ನು ಬಳಸಿದ್ದರೆಂದು ತುಮಕೂರು ಜಿಲ್ಲೆಯ ರಾಮಚಂದ್ರನಹಳ್ಳಿಯ ಶಾಸನವು ತಿಳಿಸುತ್ತದೆ. ಒಂದು ಕೆರೆಗೆ ಒಂದು, ಎರಡು, ಮೂರು ಕಾಲುವೆಗಳು ಸಹ ಇರುತ್ತಿದ್ದವು. ಕಾಲುವೆಗಳ ಮೂಲಕ ನೀರನ್ನು ಬಳಸಿಕೊಂಡು ವ್ಯವಸಾಯ ಮಾಡುತ್ತಿದ್ದರು. ಈ ರೀತಿ ಕೆರೆ ನೀರಾವರಿಗೊಳಪಟ್ಟ ಕೃಷಿ ಭೂಮಿಯನ್ನು ಅಚ್ಚುಕಟ್ಟು ಪ್ರದೇಶವೆಂದು ಕರೆಯಲಾಗುತ್ತಿತ್ತು. ಈ ಕೆರೆಗಳ ನಿರ್ವಹಣೆಯನ್ನು ಪಾವಗಡ ಪರಿಸರದಲ್ಲಿ ನೀರುಗಂಟಿಗಳೆಂಬುವವರು ಮಾಡುತ್ತಿದ್ದರು. ಇವರುಗಳು ಕೆರೆಯಿಂದ ನೀರನ್ನು ಆಯಕಟ್ಟು ಪ್ರದೇಶಗಳಿಗೆ, ತೂಬುಗಳನ್ನು ನಿಯಂತ್ರಿಸಿ, ಕಾಲುವೆಗಳ ಮುಖಾಂತರ ಹಾಯಿಸುತ್ತಿದ್ದರು. ಇವರು ಈ ಸೇವೆಗೆ ಪ್ರತಿಫಲವಾಗಿ ಆಯಕಟ್ಟಿನ ಉಪಯೋಗಕಾರರು ನಿರ್ದಿಷ್ಟ ವೇತನವನ್ನು, ಧನ ಅಥವಾ ಧಾನ್ಯಗಳ ರೂಪದಲ್ಲಿ ನೀಡುತ್ತಿದ್ದರು.

ಪಾವಗಡ ಪರಿಸರದ ಕೆಲವು ಮುಖ್ಯ ಕೆರೆಗಳು

ಗುಂಡ್ಲಹಳ್ಳಿ ಕೆರೆ

ಇದು ಪಾವಗಡದಿಂದ ಪಶ್ಚಿಮಕ್ಕೆ ೮.ಕಿ.ಮೀ ದೂರದಲ್ಲಿದೆ. ಇಲ್ಲಿ ಎರಡು ಕೆರೆಗಳಿದ್ದು, ದೊಡ್ಡ ಕೆರೆ ಮತ್ತು ಚಿಕ್ಕಕೆರೆ ಎಂದು ಕರೆಯುವರು. ಇದನ್ನು ಗಂಗರ ಶ್ರೀಪುರುಷನ ಅವಧಿಯ ಕ್ರಿ.ಶ. ೭೫೪ಕ್ಕೆ ಸೇರಿದ ಮೂರು ಶಾಸನಗಳು ಇಲ್ಲಿ ಕಂಡುಬರುತ್ತವೆ. ಇದನ್ನು ಆಕಳೆತಿ ಎಂಬುವವನು ಕಟ್ಟಿಸಿದನೆಂದು ಇದನ್ನು ಆಕಳೆ ಸಮುದ್ರವೆಂದು, ಅದರ ಬಳಿ ನಾಲ್ಕು ಖಂಡುಗ ಬೆಳೆಯ ಭೂಮಿಯನ್ನು ಕೌಂಡಿನ್ಯ ಗೋತ್ರದ ದೇವದತ್ತ ಎಂಬ ಬ್ರಾಹ್ಮಣನಿಗೆ ದಾನ ನೀಡಿದ ವಿಷಯ ಈ ಶಾಸನದಲ್ಲಿದೆ. ಈ ಸಮಯದಲ್ಲಿ ಆಕಳೆಯ ಮಕ್ಕಳಾದ ಅಲ್ಲಗ ಮತ್ತು ದಾಳಿಗರು ಹಾಜರಿರುತ್ತಾರೆ. ಈ ಆಕಳ ಸಮುದ್ರ ಲೋಕ ಪ್ರಸಿದ್ಧವಾಗಿತ್ತೆಂದು ಈ ಶಾಸನ ತಿಳಿಸುತ್ತದೆ.[೨೧] ಈಗಿನ ದೊಡ್ಡ ಕೆರೆಯೇ ಶಾಸನದಲ್ಲಿ ಉಲ್ಲೇಖವಾಗಿರುವ ಆಕಳೆ ಸಮುದ್ರವಾಗಿದೆ. ನಮ್ಮ ಪೂರ್ವಿಕರು ಕೆರೆಯನ್ನು ಸಮುದ್ರವೆಂದು ಬಹುಶಃ ಭಕ್ತಿ-ಗೌರವದಿಂದ ಕರೆದಿರಬಹುದು ಅಥವಾ ಗುಣವಾಚಕವಾಗಿ

ವಿಶಾಲವಾಗಿರುವುದರಿಂದ ಸಮುದ್ರವೆಂದು ಕರೆದಿರಬಹುದು. ಗುಂಡ್ಲಹಳ್ಳಿ ದೊಡ್ಡ ಕೆರೆಯ ಏರಿಯ ಉದ್ದವು ಸುಮಾರು ೧ ಕಿ.ಮೀ ಇದ್ದು ಎತ್ತರ ೮ ಮೀ ಮತ್ತು ಏರಿಯ ಮೇಲ್ಭಾಗದಲ್ಲಿ ೨ ಮೀ ಮತ್ತು ೪ ಮೀ ಇದೆ. ಈ ಕೆರೆಗೆ ಎರಡು ಕಾಲುವೆಗಳಿವೆ. ಇದಕ್ಕೆ ವೃತ್ತಾಕಾರ ಮಾದರಿಯ ಎರಡು ತೂಬುಗಳು ಇವೆ. ತೂಬಿನ ಮುಂಭಾಗದಲ್ಲಿ ಸುಮಾರು ೧೦ ಮೀಟರ್‌ನ ಎರಡು ಕಂಬಗಳು ಅದರ ಮೇಲೆ ಅಡ್ಡ ತೊಲೆಯಾಗಿ ಕಂಬವನ್ನು ನಿಲ್ಲಿಸಿದ್ದು ಈ ಕಂಬಗಳ ಎರಡೂ ಭಾಗದಲ್ಲಿ ವಿವಿಧ ಅಲಂಕಾರಿಕ ಗೆರೆಗಳು ನಾಗರಹಾವಿನ ರೀತಿಯ ಅಲಂಕಾರಿಕ ಕೆತ್ತನೆ ಕಂಡುಬರುತ್ತದೆ. ಮಧ್ಯದಲ್ಲಿ ಕೆಳಭಾಗದಲ್ಲಿ ಅರಳಿದ ಕಮಲದ ಕೆತ್ತನೆ ಇದೆ. ಈ ಕೆರೆಯ ಏರಿಯ ಮೇಲೆ ಅಕ್ಕಮ್ಮಗಾರರು ಎಂಬ ದೇವರಿದ್ದು, ಇಲ್ಲಿಗೆ ಭಕ್ತಾದಿಗಳು ಹಬ್ಬದ ದಿನಗಳಲ್ಲಿ ಬಂದು ಪೂಜೆ ಸಲ್ಲಿಸುತ್ತಾರೆ. ಹಾಗೆಯೇ ಕೆರೆಯ ಒಳಗೆ ಏಳು ಬೃಹತ್ತಾದ ಗುಂಡುಗಳಿದ್ದು, ಇವುಗಳನ್ನು ಅಕ್ಕಮ್ಮಗಾರರ ಗುಂಡುಗಳೆಂದು ಕರೆಯಲಾಗಿದೆ. ಇವುಗಳ ಮೇಲೆಯೇ ಮೂರು ಶಾಸನಗಳನ್ನು ಸಹ ಕೆತ್ತಲಾಗಿದೆ.

ಗುಂಡ್ಲಹಳ್ಳಿಯ ಊರಿನ ದಕ್ಷಿಣಕ್ಕೆ ಮತ್ತೊಂದು ಕೆರೆ ಕಂಡುಬರುತ್ತದೆ. ಇದನ್ನು ಚಿಕ್ಕಕೆರೆ ಎಂದು ಕರೆಯುತ್ತಾರೆ. ಈ ಕೆರೆಯ ಏರಿಯು ಪೂರ್ವದಿಕ್ಕಿನಲ್ಲಿದೆ. ಇದರ ಏರಿಯ ಉದ್ದ ಸುಮಾರು ೦.೮ಕಿ.ಮೀ ಇದೆ ಎತ್ತರ ೬ ಮೀಟರನ್ನು ಒಳಗೊಂಡಿದೆ ಬಹುಶಃ ಈ ಕೆರೆಯನ್ನು ದೊಡ್ಡ ಕೆರೆಯ ನಂತರ ಕಟ್ಟಿಸಿರಬಹುದು. ಈ ಕೆರೆಯ ಏರಿಯ ಮೇಲೆ ಚೋಳರ ಕಾಲದಲ್ಲಿ ನಿರ್ಮಿಸಿದ್ದತಹ ಈಶ್ವರ ದೇವಾಲಯವಿದೆ ಆದರೆ ಇದರ ಗರ್ಭಗುಡಿಯಲ್ಲಿ ಯಾವುದೇ ವಿಗ್ರಹವಿಲ್ಲದ ಕಾರಣ ಇದಕ್ಕೆ ಯಾವುದೇ ಪೂಜೆಗಳನ್ನು ಮಾಡುವುದಿಲ್ಲ. ಇಲ್ಲಿ ಎರಡು ಶಾಸನಗಳಿವೆ ಆದರೆ. ಈ ಕೆರೆಗೆ ಸಂಬಂಧಿಸಿದಂತೆ ಈ ಶಾಸನ ಏನು ಹೇಳುವುದಿಲ್ಲ.

ಪಳವಳ್ಳಿ ಕೆರೆ

ಇದು ಪಾವಗಡ ತಾಲೂಕಿನಲ್ಲಿಯೇ ಅತ್ಯಂತ ದೊಡ್ಡ ಕೆರೆಯಾಗಿದೆ. ಇಂದಿಗೂ ಅದು ಸುಸ್ಥಿತಿಯಲ್ಲಿದ್ದು, ಅದರ ಪ್ರಯೋಜನವನ್ನು ಜನರು ಪಡೆಯುತ್ತಿದ್ದಾರೆ. ಇದು ಪಾವಗಡದಿಂದ ಉತ್ತರಕ್ಕೆ ಸುಮಾರು ೬ ಕಿ.ಮೀ ದೂರದಲ್ಲಿದೆ. ಈ ಕೆರೆಯನ್ನು ಪಲ್ಲವರಾಯನೆಂಬುವವನು ಕಟ್ಟಿಸಿದನು. ಇವನು ಈ ಪ್ರದೇಶದಲ್ಲಿ ಆಳ್ವಿಕೆ ಮಾಡುತ್ತಿದ್ದವನೆಂದು ಸ್ಥಳೀಯರ ಅಭಿಪ್ರಾಯವಾಗಿದೆ. ಆದರೆ ಇದಕ್ಕೆ ಸಂಬಂಧಿಸಿದಂತಹ ಯಾವುದೇ ಶಾಸನಗಳು ಲಭ್ಯವಾಗುವುದಿಲ್ಲ. ಈ ಕೆರೆಯು ಸುಮಾರು ೨೦೦ ಎಕರೆ ಪ್ರದೇಶದ ವಿಸ್ತಾರವನ್ನು ಒಳಗೊಂಡಿದೆ. ಮತ್ತು ಅಚ್ಚುಕಟ್ಟು ಸುಮಾರು ೧೬೦೦ ಎಕರೆಗೂ ಹೆಚ್ಚು ಪ್ರದೇಶಕ್ಕೆ

ನೀರುಣಿಸುವುದು. ಈ ಕೆರೆಯ ಮೇಲ್ಭಾಗದಲ್ಲಿ ಹಲವಾರು ಕೆರೆಕುಂಟೆಗಳಿದ್ದು, ಅವುಗಳಲ್ಲಿ ಹೆಚ್ಚುವರಿಯಾದ ನೀರು ಈ ಕೆರೆಯಲ್ಲಿ ಸಂಗ್ರಹಗೊಳ್ಳುತ್ತವೆ. ಈ ಕೆರೆಯ ಕೋಡಿಯು ಕೆರೆಯ ಏರಿಯ ಎರಡೂ ಕೊನೆಯಂಚಿನಲ್ಲಿ ಮಾಡಿರುವರು. ಈ ಏರಿಯ ಮೇಲೆಯೇ ಪಾವಗಡ ಮತ್ತು ಬಳ್ಳಾರಿಗೆ ಹೋಗುವ ರಾಷ್ಟ್ರೀಯ ಹೆದ್ದಾರಿ ಹಾದು ಹೋಗುತ್ತದೆ. ಇದರ ಏರಿಯು ಪೂರ್ವ ದಿಕ್ಕಿನಲ್ಲಿದ್ದು, ಏರಿಯ ಉತ್ತರ ಭಾಗದಲ್ಲಿ ವಿಜಯನಗರ ಕಾಲದಲ್ಲಿ ಕೆತ್ತಲ್ಪಟ್ಟ ಬೃಹದಾಕಾರದ ಆಂಜನೇಯನ ವಿಗ್ರಹವಿದೆ. ಇದು ಸುಮಾರು ೧೩ ಅಡಿಯ ಗ್ರಾನೈಟ್ ಶಿಲೆಯಲ್ಲಿ ಕೆತ್ತಲಾಗಿದೆ. ಇತ್ತೀಚಿನ ವರ್ಷಗಳಲ್ಲಿ ಇದರ ಪಕ್ಕದಲ್ಲಿಯೇ ಮತ್ತೊಂದು ಆಂಜನೇಯನ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ.

ಪಾವಗಡ ಪಾಳೇಗಾರ ತಿಮ್ಮಪ್ಪನಾಯಕನ ಆಳ್ವಿಕೆ ಸಂದರ್ಭದಲ್ಲಿ ರಾಯಚುರ್ಲು ಕೋಟೆಯ ನಾಯಕರು ಸರಿಯಾಗಿ ಹೈದರನಿಗೆ ಕಪ್ಪ ನೀಡದಿದ್ದಾಗ ಕಪ್ಪ ವಸೂಲಿ ಕಾರ್ಯವನ್ನು ಪಾವಗಡ ಅರಸನಿಗೆ ನೀಡವನು. ತಿಮ್ಮಪ್ಪ ನಾಯಕನು ಅದಕ್ಕಾಗಿ ಒಂದು ಪಡೆ ಸಿದ್ದಮಾಡಿದಾಗ ನಾಗಪ್ಪನೆಂಬ ಸೈನಿಕ ನಾನೊಬ್ಬನೆ ಸೆರೆಯಿಡಿಯುತ್ತೇನೆಂದು ಹೇಳಿ, ರಾಯಚರ್ಲು ನಾಯಕರನನ್ನು ಸೆರೆಹಿಡಿದು ತಂದಾಗ ಅವನು ಪೆನುಗೊಂಡೆ ಊರು ಬಾಗಿಲಲ್ಲಿ ಮೋಸದಿಂದ ತಿವಿದು ತಪ್ಪಿಸಿಕೊಂಡು ಹೋಗುವವನು. ಇವನನ್ನು ಬೆನ್ನಟ್ಟಿ ಬಂದ ನಾಗಪ್ಪನು ಪಳವಳ್ಳಿ ಕೆರೆಯ ಏರಿಯ ಮೇಲೆ ಪ್ರಾಣಾರ್ಪಣೆ ಮಾಡುವನು. ನಾಗಪ್ಪನ ಕುಟುಂಬಕ್ಕೆ ಪಳವಳ್ಳಿ ಕೆರೆಯವರೆಗೂ ರಕ್ತಮಾನ್ಯವನ್ನು ಕೊಡಿಸಿದರು. ಈ ನಾಗಪ್ಪನನ್ನು ವೀರನಾಗಪ್ಪನೆಂದು ಕರೆದಿದ್ದು, ಸಾಹಸ ಗಾದೆಯ ಕಲ್ಲನು ಈಗಲು ಸಹ ನೋಡಬಹುದಾಗಿದೆ. ಈ ಮೇಲಿನ ಅಂಶವನ್ನು ಗಮನಿಸಿದಾಗ ಈ ಕೆರೆಯನ್ನು ಹೈದರ್ ಕಾಲಕ್ಕಿಂತಲೂ ಮುಂಚಿತವಾಗಿ ಚೋಳರ ಕಾಲದಲ್ಲಿ ನಿರ್ಮಿಸಿರುವ ಸಾಧ್ಯತೆಗಳಿವೆ.

ಈ ಕೆರೆಯ ನಿರ್ಮಾಣದ ಬಗ್ಗೆ ಒಂದು ಕಥೆ ಇದೆ ಪಲ್ಲವರಯನು ಕೆರೆ ಕಟ್ಟಿಸಿದನೆಂದು, ಕೆರೆ ನಿರ್ಮಾಣದ ಸಮಯದಲ್ಲಿ ಶ್ರಮಿಕ ಜೀವನಕ್ಕೆ ಬೆಲೆ ಕೊಡುತ್ತಿದ್ದ ಪಲ್ಲವರಾಯನು ಕೆರೆಕಟ್ಟುವ ಕೂಲಿಯನ್ನು ಅವರ ಶ್ರಮವನ್ನಾಧರಿಸಿ ನೀಡುತ್ತಿದ್ದ. ಕೆರೆ ಕಟ್ಟೆ ಕೆಲಸ ಮುಗಿದ ಪ್ರತಿ ದಿನ ಸಂಜೆ ಅವರವರ ಮುಂದೆ ಮಣ್ಣಿನ ರಾಶಿ ಮಾಡಿಸಿ ನಂತರ ತೆಗೆಯಲು ಹೇಳಿದಾಗ ಅವರ ಶ್ರಮಕ್ಕೆ ತಕ್ಕ ಪ್ರತಿಫಲ ಹಣದ ರೂಪದಲ್ಲಿ ದೊರೆಯುತ್ತಿತ್ತು. ಎಂದು ಇದರಿಂದ ಅವರು ಶ್ರಮಪಟ್ಟು ಬೇಗ ಕೆರೆಯನ್ನು ಕಟ್ಟುತ್ತಿದ್ದರು ಎಂದು ಸ್ಥಳೀಯರು ಹೇಳುತ್ತದೆ.

ಈ ಕೆರೆಯ ಏರಿಯು ಸುಮಾರು ೧.೫ ಕಿ.ಮೀ ಉದ್ದ ಮತ್ತು ೩೬ ಅಡಿಗಳಷ್ಟು ಎತ್ತರವಿದೆ. ಪಳವಳ್ಳಿ ಕೆರೆಯು ಸುಮಾರು ೧೬೦೦ಕ್ಕೂ ಹೆಚ್ಚು ಎಕರೆಗಳಿಗೆ ನೀರುಣಿಸುವ

ಸಾಮರ್ಥ್ಯವನ್ನು ಹೊಂದಿದೆ. ಈ ಕೆರೆಗೆ ಮೇಲ್ಭಾಗದಲ್ಲಿರುವ ಪೊನ್ನಸಮುದ್ರ ಕೆರೆಯ ಹೆಚ್ಚುವರಿ ನೀರು ಹರಿದು ಬರುತ್ತದೆ. ಅದೇ ರೀತಿ ಹಲವು ಹಳ್ಳಗಳಿಂದ ನೀರು ಈ ಕೆರೆಗೆ ಹರಿದು ಬರುತ್ತವೆ. ಕೆರೆಯ ಏರಿಯು ಮೇಲ್ಭಾಗದಲ್ಲಿ ವಿಶಾಲವಾಗಿದ್ದು, ಪಾವಗಡ ಮತ್ತು ಬಳ್ಳಾರಿಗೆ ಹೋಗುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ ೪ ಇದರ ಮೇಲ್ಭಾಗದಲ್ಲಿಯೇ ಹೋಗುತ್ತದೆ. ಏರಿಯ ಮೆಲ್ಭಾಗವು ಸುಮಾರು ೪೫ ಅಡಿಗಳಷ್ಟು ಅಗಲವಿದೆ. ಈ ಕೆರೆಯ ಒಳಭಾಗದ ಏರಿಗೆ ಗುಂಡು ಕಲ್ಲುಗಳಿಂದ ನಿರ್ಮಿಸಿದ್ದಾರೆ ಹೊರಭಾಗದಲ್ಲಿ ಇಳಿಜಾರಾಗಿದ್ದು, ಕೆಲವು ಹುಲ್ಲಿನ ಸಸಿಗಳನ್ನು ಬೆಳೆಸಿದ್ದಾರೆ ಈ ಕೆರೆಗೆ ಎರಡು ತೂಬುಗಳಿದ್ದು ಮೂರು ಕಾಲುವೆಗಳನ್ನು ಮಾಡಿದ್ದಾರೆ. ಆದರೆ ಎರಡು ಕಾಲುವೆಗಳನ್ನು ಪ್ರಸ್ತುತ ವ್ಯವಸಾಯಕ್ಕೆ ಬಳಸಿಕೊಳ್ಳುತ್ತಿರುವರು. ಇವುಗಳಲ್ಲದೆ ಈ ಪರಿಸರದಲ್ಲಿ ಇನ್ನೂ ಹಲವು ಕೆರೆಗಳು ಪ್ರಾಚೀನ ಕಾಲದಿಂದಲೂ ಮಾನವನ ವ್ಯವಸಾಯಕ್ಕೆ ಅನುಕೂಲವಾಗಿವೆಯೆಂದು ಹೇಳಬಹುದು.

೬.೨ ಬಾವಿಗಳು

ಪಾವಗಡ ಪರಿಸರದ ಭೂ ಪ್ರದೇಶವು ಅಲ್ಪಾವಧಿಯ ಮುಂಗಾರು ಮಾನ್‌ಸೂನ್ ಮಳೆಯ ಮೇಲೆ ಅವಲಂಬಿತವಾಗಿತ್ತು. ಆದ್ದರಿಂದ ಇಲ್ಲಿ ಯಾವಾಗಲೂ ಹರಿಯುವ ಜೀವಂತ ನದಿಗಳಿರಲಿಲ್ಲ, ಪೂರ್ವಭಾಗದಲ್ಲಿ ಮಳೆಗಾಲದಲ್ಲಿ ಮಾತ್ರ ಉತ್ತರ ಪಿನಾಕಿನ ನದಿಯು ಹರಿಯುತ್ತಿತ್ತು. ಮಿಕ್ಕೆಲ್ಲ ಪ್ರದೇಶದಲ್ಲಿ ಕೆರೆಗಳೇ ನೀರಿಗೆ ಆಧಾರವಾದ್ದರಿಂದ ಅವುಗಳು ಕೂಡ ಮಳೆ ಸರಿಯಾಗಿ ಆದಲ್ಲಿ ಮಾತ್ರ ತುಂಬುತ್ತಿದ್ದವು. ಆದ್ದರಿಂದ ಇಲ್ಲಿಯ ಕೃಷಿಕರು ಅನಿವಾರ್ಯವಾಗಿ ಅಂತರ್ಜಲ ಮೂಲಗಳನ್ನು ಅವಲಂಭಿಸಬೇಕಾಯಿತು. ಇದರಿಂದ ಬಾವಿಗಳನ್ನು ಅಗಿದು ಬೇಸಾಯಕ್ಕೆ ಬಳಸಿಕೊಂಡರು. ಹೀಗೆ ತೆಗೆಯಲಾದ ಬಾವಿಗಳಿಂದ ಅಂತರ್ಜಲ ನೀರು ಸದಾ ದೊರಕುತ್ತಿತ್ತು. ಈ ವಿಧವಾದ ಬಾವಿ ನೀರಾವರಿಯಿಂದ ಒಂದರಿಂದ ಇಪ್ಪತ್ತು ಎಕರೆ ಭೂಮಿಗೆ ನೀರೂಣಿಸಬಹುದಿತ್ತು. ಇಂತಹ ಬಾವಿ ನೀರಾವರಿಯ ಕಾರ್ಯ ಸ್ಥಳೀಯ ಮತ್ತು ನಿರ್ದಿಷ್ಟ ಪ್ರಮಾಣದಲ್ಲಿ ಮಾತ್ರ ಸಾಧ್ಯವಾಗುತ್ತಿತ್ತು. ಇಂತಹ ಬಾವಿಗಳು ಕೇವಲ ನೀರಾವರಿಗಲ್ಲದೆ ಜನರು ನೀರನ್ನು ಕುಡಿಯಲು ಇವುಗಳು ಸಹಾಯಕವಾಗಿದ್ದವು. ಜನರು ಕುಡಿಯಲು ದಿನಬಳಕೆಗೆ ಬಳಸುವಂತಹ ಬಾವಿಗಳನ್ನು ಸೇದೋ ಬಾವಿಗಳೆನ್ನುತ್ತಿದ್ದರು. ಈ ನೀರನ್ನು ಹಗ್ಗವನ್ನು ಬಿಂದಿಗೆಗೆ ಕಟ್ಟಿ ಅದರ ಮೂಲಕ ನೀರು ಪಡೆಯುತ್ತಿದ್ದರು.

ಬಾವಿಗಳು ಅಧಿಕ ಪ್ರದೇಶಕ್ಕೆ ನೀರು ನೀಡುವ ಸಾಮರ್ಥ್ಯ ಹೊಂದಿರುತ್ತಿರಲಿಲ್ಲ. ಬಾವಿಗಳು ನೀರಾವರಿ ಕಾರ್ಯಕ್ಕಲ್ಲದೆ ಸಾಮಾಜಿಕ ಮತ್ತು ಧಾರ್ಮಿಕವಾಗಿ ತನ್ನದೇ ಆದ

ಸ್ಥಾನವನ್ನು ಪಡೆದುಕೊಂಡಿವೆ. ಅನೇಕ ವೇಳೆ ಅವು ದೇವಾಲಯದ ಹಾಗೂ ದೇವರುಗಳ ವಿವಿಧ ಕಾರ್ಯಗಳಿಗೆಂದೇ ನಿರ್ಮಿಸಲಾಗಿದ್ದವು. ಅನೇಕ ಶುಭ ಕಾರ್ಯಗಳಿಗೆಂದೇ ಜನರು ಇಂದಿಗೂ ಬಾವಿಗಳನ್ನು ಅವಲಂಬಿಸಿದ್ದಾರೆ. ಬಾವಿಯಲ್ಲಿ ಗಂಗಮ್ಮ ಇರುತ್ತಾಳೆ ಎಂದೇ ಅನೇಕರ ಭಾವನೆಯಾಗಿದೆ. ವಿಜಯನಗರ ಅವಧಿಯ ಒಂದು ಶಾಸನವು ಬಾವಿಗಳನ್ನು ಕಟ್ಟಿಸುವುದು ಒಂದು ಪುಣ್ಯ ಕಾರ್ಯವೆಂದೇ ನಿರೂಪಿಸಿದೆ. ಈ ದಿಸೆಯಲ್ಲಿ ರಾಜ್ಯದ ಮಂತ್ರಿಯಾಗಿದ್ದ ಲಕ್ಷ್ಮಣ ಅಮಾತ್ಯನಿಗೆ ಅವನ ತಾಯಿಯ ಉಪದೇಶ 'ಕೆರೆಯಂ ನಿರ್ಮಿಸು ಬಾವಿಯಂ ಸವೆಯಿಸು' ಎಂಬುದನ್ನು ಸ್ಮರಿಸಬಹುದು. ಸಾಮಾನ್ಯವಾಗಿ, ನೀರಾವರಿಗೆಂದೇ ನಿರ್ಮಿಸಿದ ಬಾವಿಗಳು ಊರಿನಿಂದ ಹೊರಗಡೆಯ ಪ್ರದೇಶಗಳಾದ ಹೊಲ, ತೋಟ, ಗದ್ದೆಗಳಲ್ಲಿರುತ್ತಿದ್ದವು. ಆದರೆ ಜನರಿಗೆ ಕುಡಿಯಲು ಮತ್ತು ದೇವಸ್ಥಾನದಲ್ಲಿ ಧಾರ್ಮಿಕ ಕಾರ್ಯಗಳಿಗೆಂದೇ ತೆಗೆಸಿದ ಬಾವಿಗಳು ಜನವಸತಿಯ ಪ್ರದೇಶದಲ್ಲಿರುತ್ತಿದ್ದವು. ಈ ಪ್ರದೇಶದಲ್ಲಿ ಹಲವು ಪುಷ್ಕರಣಿಗಳು ಹಾಗೂ ಬಾವಿಗಳನ್ನು ನೋಡಬಹುದು. ಶಾಸನಗಳಲ್ಲಿ ವಿಜಯನಗದರಸರು ಬಾವಿಗಳನ್ನು ತೋಡಿಸಿರುವುದು ಹಾಗೂ ಪುಷ್ಕರಣಿಗಳನ್ನು ನಿರ್ಮಿಸಿರುವುದು ಕಂಡು ಬರುತ್ತದೆ.ಅದೇ ರೀತಿ ಪಾವಗಡ ಪಾಳೆಯಗಾರರ ಕಾಲದಲ್ಲೂ ಸಹ ಹಲವು ಬಾವಿಗಳನ್ನು ನಿರ್ಮಿಸಿರುವುದು ಕಾಣಬಹದು. ಪಾವಗಡ ನಗರದ ಈಶ್ವರ ದೇವಾಲಯದ ಹಿಂಭಾಗದಲ್ಲಿ ಒಂದು ನಾಗರಬಾವಿ ಇದ್ದು, ಇದು ತುಂಬಾ ಸುಂದರವಾಗಿ ನಿರ್ಮಿಸಿದ್ದಾರೆ. ಇದು ಮೇಲ್ಭಾಗದಲ್ಲಿ ಚೌಕಾಕಾರದಲ್ಲಿ ನಿರ್ಮಿಸಿದ್ದು, ಒಳಭಾಗದಲ್ಲಿ ಬಾವಿಯನ್ನು ತೋಡಿದ್ದು ಅದರಿಂದ ನೀರನ್ನು ಮೇಲೆ ಸೇದಲು (ತರಲು) ಅನುಕೂಲವಾಗುವ ರೀತಿ ಕಟ್ಟಲಾಗಿದೆ. ಇದು ಮೇಲ್ಭಾಗದಲ್ಲಿ ಸುಮಾರು ೨೫ ಮೀಟರ್ ಉದ್ದ ಮತ್ತು ೨೩ ಮೀಟರ್ ಅಗಲವನ್ನು ಹೊಂದಿದೆ. ಇದಕ್ಕೆ ಪಶ್ಚಿಮಭಾಗದಲ್ಲಿ ದಕ್ಷಿಣಾಭಿಮುಖವಾಗಿ ಕೆಳಗೆ ಇಳಿದು ಹೋಗಲು ದಾರಿಯನ್ನು ಮಾಡಿದ್ದು ಇದನ್ನು ಕಲ್ಲು ಮತ್ತು ಗಾರೆಯನ್ನು ಬಳಸಿ ಕಟ್ಟಿದ್ದಾರೆ. ಈ ಬಾವಿಗೂ ಸುತ್ತಲು ಸುಮಾರು ೩ ಅಡಿಯ ೭ ಮೆಟ್ಟಿಲುಗಳಿಂದ ಹಂತ ಹಂತವಾಗಿ ಕೆಳಭಾಗದವರೆಗೆ ಕಟ್ಟಿರುವರು. ನಾಲ್ಕು ಭಾಗದಲ್ಲಿ ಚಿಕ್ಕಗೂಡುಗಳನ್ನು ಮಾಡಿದ್ದು, ಅದರಲ್ಲಿ ದೀಪಗಳನ್ನಿಡುತ್ತಿದ್ದರೆಂದು ಸ್ಥಳೀಯರು ತಿಳಿಸುತ್ತಾರೆ. ಈ ಬಾವಿಯ ಒಳಭಾಗದ ಮಧ್ಯದಲ್ಲಿ ಬಾವಿಯನ್ನು ತೋಡಿದ್ದು ಅದನ್ನು ಕಲ್ಲಿನಿಂದ ಕಟ್ಟಿರುವರು ಇಂದಿಗೂ ಸಹ ಇಲ್ಲಿಯ ನೀರನ್ನು ಜನರು ತಮ್ಮ ದಿನನಿತ್ಯದ ಚಟುವಟಿಕೆಗಳಿಗೆ ಬಳಸಿಕೊಳ್ಳುತ್ತಾರೆ. ಪಾಳೇಗಾರರ ಕಾಲದಲ್ಲಿ ನೀರಾವರಿಗೂ ಸಹ ಹಲವು ಬಾವಿಗಳನ್ನು ನಿರ್ಮಿಸಿದ್ದು ಹೆಚ್ಚಿನವು ಮೇಲ್ಭಾಗದಲ್ಲಿ ಕಲ್ಲಿನಿಂದ ಕಟ್ಟಿರುವರು ಈ ಭಾಗದ ಬಾವಿಗಳನ್ನು ನಾಗರಬಾವಿ, ಕೋನೇರು ಬಾವಿ ಮುಂತಾದ ಹೆಸರುಗಳಿಂದ ಕರೆಯುತ್ತಾರೆ.

೬.೩ ಪ್ರಾಕೃತಿಕ ದೋಣೆಗಳು

ಕೋನೇರು ದೋಣೆ ಅಥವಾ ಪುಷ್ಕರಣಿ

ಇದು ಪಾವಗಡದ ಬೆಟ್ಟದ ಮೇಲಿರುವ ದೋಣೆಯಾಗಿದೆ. ಇದು ತುಂಬಾ ವಿಶಾಲವಾಗಿದ್ದು ಸುಂದರವಾಗಿದೆ. ಇದು ಪಾವಗಡ ಪಾಳೆಯಗಾರರ ಕಾಲದಲ್ಲಿ ನೈಸರ್ಗಿಕವಾದ ಬಂಡೆಗೆ, ಇಟ್ಟಿಗೆ ಮತ್ತು ಗಾರೆ ಕಲ್ಲನ್ನು ಬಳಸಿ ನಿರ್ಮಿಸಿರುವರು. ಇದು ಬೆಟ್ಟದ ಮೇಲಿರುವ ಜನರಿಗೆ ನೀರೊದಗಿಸುವ ಪ್ರಮುಖ ದೋಣೆಯಾಗಿದೆ. ಬೇಸಿಗೆಯ ಕಾಲದಲ್ಲೂ ಸಹ ತಣ್ಣನೆಯ ನೀರನ್ನು ಇದು ಹೊಂದಿರುತ್ತದೆ. ಈ ದೋಣೆಯು ಕೆಳಭಾಗದಲ್ಲಿ ಗಾರೆ ಮತ್ತು ಇಟ್ಟಿಗೆಯಿಂದ ಕಟ್ಟಿದ್ದ ೧೨ ಮೆಟ್ಟಿಲುಗಳಿವೆ. ಇದರ ಮೇಲ್ಭಾಗದಲ್ಲಿ ಸುತ್ತಾ ತ್ರಿಕೋನಾಕಾರದಲ್ಲಿ ಕಲ್ಲಿನಿಂದ ನಿರ್ಮಿಸಿದ ಸುಮಾರು ೧೯ ಮೆಟ್ಟಿಲುಗಳು ಇವೆ. ಈ ಕೋನೇರು ದೋಣೆಯ ಉದ್ದವು ಪೂರ್ವ–ಪಶ್ಚಿಮಾಭಿಮುಖವಾಗಿ ೩೦ ಮೀಟರ್‌ನ್ನು ಉತ್ತರ–ದಕ್ಷಿಣವಾಗಿ ೩೫ ಮೀಟರ್ ಉದ್ದವನ್ನು ಹೊಂದಿದೆ.

ಅಕ್ಕಮ್ಮಗಾರನ ದೋಣೆ

ಪಾವಗಡ ಬೆಟ್ಟದ ಕೋನೇರು ದೋಣೆಯಿಂದ ಮುಂದೆ ಹೋದರೆ ವಿಶಾಲವಾದ ಪ್ರದೇಶದ ಪಕ್ಕ ಈ ಅಕ್ಕಮ್ಮಗಾರನ ದೋಣೆಯು ಕಂಡುಬರುತ್ತದೆ. ಇದರ ಪಕ್ಕ ವೇಣುಗೋಪಾಲ ದೇವಸ್ಥಾನವಿದ್ದು, ಹೈದರ್ ಕಾಲದಲ್ಲಿ ಇದನ್ನು ನಾಶಮಾಡಲಾಯಿತೆಂದು ಇಲ್ಲಿ ಸ್ಥಳೀಯರು ಅಭಿಪ್ರಾಯ ಪಡುತ್ತಾರೆ. ಈ ಪರಿಸರದ ಪ್ರತಿಯೊಂದು ಬೆಟ್ಟಗಳಲ್ಲೂ ಸಾಮಾನ್ಯವಾಗಿ ಅಕ್ಕಮ್ಮಗಾರನ ಹೆಸರಿನಲ್ಲಿ ದೋಣೆಗಳು ಕಂಡುಬರುತ್ತವೆ. ಇದು ನೈಸರ್ಗಿಕವಾಗಿ ಬೃಹತ್ತಾದ ಇಳಿಜಾರಾದ ಬಂಡೆಯಲ್ಲಿ ಕಂಡುಬರುತ್ತದೆ. ಇದು ಪೂರ್ವ–ಪಶ್ಚಿಮಾಭಿಮುಖವಾಗಿ ಸುಮಾರು ೪೧ ಮೀಟರ್ ಉದ್ದವನ್ನು ಉತ್ತರ–ದಕ್ಷಿಣವಾಗಿ ಸುಮಾರು ೩೦ ಮೀಟರ್ ಅಗಲವನ್ನು ಹೊಂದಿದೆ. ಇಲ್ಲಿ ಎಲ್ಲಾ ಕಾಲದಲ್ಲೂ ನೀರು ಕಂಡುಬರುತ್ತವೆ. ಇದೂ ಸಹ ಬೆಟ್ಟದ ಮೇಲಿರುವ ಜನರಿಗೆ ಪ್ರಾಣಿ, ಪಕ್ಷಿಗಳಿಗೆ ನೀರೊದಗಿಸುವ ಪ್ರಮುಖವಾದ ದೋಣೆಯಾಗಿದೆ.

ಭೀಮನ ದೋಣೆ

ಪಾವಗಡ ಬೆಟ್ಟದ ವೇಲಿರುವ ಪ್ರಮುಖ ಹಾಗೂ ದೊಡ್ಡದಾದ ದೋಣೆಯಾಗಿದೆ. ಇದನ್ನು ಭೀಮನ ದೋಣೆ ಎಂದು ಕರೆಯುತ್ತಾರೆ. ಕಾರಣ ಇದು ಬೃಹತಗಾತ್ರದ ಕಲ್ಲುಗಳನ್ನು ಹೊಂದಿರುವುದರಿಂದ ಈ ರೀತಿ ಕರೆದಿರಬಹುದು ಎಂದು ಹೇಳಬಹುದು ಇದು ಸುಲ್ತಾನ್ ಬತೇರಿಯ ಪೂರ್ವದಿಕ್ಕಿಗೆ ಕಂಡುಬರುತ್ತದೆ. ಇಲ್ಲಿಗೆ ಹೋಗಲು ಒಂದು ಚಿಕ್ಕಬಾಗಿಲನ್ನು

ದಾಟಿ ಹೋದರೆ ಸುಮಾರು ೭೦ ಮೆಟ್ಟಿಲುಗಳನ್ನು ಇಳಿದು ಹೋದರೆ ಇದು ಕಂಡುಬರುತ್ತದೆ. ಈ ಮೆಟ್ಟಿಲುಗಳನ್ನು ಕಲ್ಲಿನ ಮತ್ತು ಇಟ್ಟಿಗೆಯಿಂದ ರಚನೆ ಮಾಡಿದ್ದಾರೆ. ಈ ದೊಣೆಯು ಎರಡು ಬೃಹತ್ತಾದಂತಹ ಸುಮಾರು ೮೦ ಅಡಿಗಳ ಎತ್ತರವನ್ನು ಈ ಬಂಡೆಗಳು ಹೊಂದಿವೆ ಇವುಗಳ ಮಧ್ಯದಲ್ಲಿ ಈ ದೊಣೆ ಕಂಡುಬರುತ್ತದೆ. ಈ ದೊಣೆಗೆ ದಕ್ಷಿಣಭಾಗದಲ್ಲಿ ಇಟ್ಟಿಗೆ ಮತ್ತು ಗಾರೆಯಿಂದ ಅಡ್ಡಲಾಗಿ ತಡೆಗೋಡೆ ನಿರ್ಮಿಸಿದ್ದು, ನೀರು ನಿಲ್ಲಲು ಸಹಾಯಕವಾಗಿದೆ. ಮೇಲ್ಭಾಗದಲ್ಲಿ ಈ ದೊಣೆಯು ಉತ್ತರ-ದಕ್ಷಿಣವಾಗಿ ಸುಮಾರು ೪೦ ಮೀಟರ್ ಮತ್ತು ಪೂರ್ವ-ಪಶ್ಚಿಮವಾಗಿ ಸುಮರು ೧೭ ಅಡಿ ಉದ್ದವಿದೆ. ಈ ದೊಣೆಯಲ್ಲಿ ಎಲ್ಲಾ ಕಾಲದಲ್ಲಿಯೂ ನೀರು ದೊರೆಯುತ್ತದೆ. ಇಲ್ಲಿಯ ನೀರು ತುಂಬಾ ತಿಳಿ ಹಾಗು ತಣ್ಣಗೆ ಇರುತ್ತವೆ. ಇದು ಪಾಳೆಯಗಾರರ ಕಾಲದಲ್ಲಿ ನಿರ್ಮಿಸಿದಂತಹ ದೊಣೆಯಾಗಿದೆ. ಈ ದೊಣೆಯು ಬೆಟ್ಟದಲ್ಲಿರುವ ಜನರಿಗೆ ನೀರೋಧಗಿಸುವ ಪ್ರಮುಖವಾದಂತಹ ತಾಣವಾಗಿದೆ. ಇದು ಇಂದಿಗೂ ಸಹ ಬೆಟ್ಟಕ್ಕೆ ಹೋಗುವವರು ಈ ದೊಣೆಯಿಂದಲೇ ನೀರನ್ನು ಪಡೆಯುತ್ತಾರೆ. ಈ ದೊಣೆಯ ಪಕ್ಕದಲ್ಲಿ ಪರ್ಶಿಯನ್ ಭಾಷೆಯ ಶಿಲಾಲೇಖ ದೊರೆತಿದ್ದು, ಅದನ್ನು ಪ್ರಸ್ತುತ ತುಮಕೂರು ಜಿಲ್ಲೆಯ ಪುರಾತತ್ವ ಇಲಾಖೆಯಲ್ಲಿಡಲಾಗಿದೆ. ಭೀಮನ ದೊಣೆಗೆ ಮತ್ತು ಬೆಟ್ಟದ ಕೆಳಗಿನ ದೊಡ್ಡ ದೊಣೆಗೂ ಪರಸ್ಪರ ಸಂಬಂಧವಿದೆ ಎಂದು ಇಲ್ಲಿಯ ಸ್ಥಳೀಯರು ಅಭಿಪ್ರಾಯ ಪಡುತ್ತಾರೆ. ಆದರೆ ವಾಸ್ತವವಾಗಿ ಯಾವುದೇ ರೀತಿಯ ಸಂಬಂಧ ಕಂಡುಬರುವುದಿಲ್ಲ.

ಬೆಟ್ಟದ ಕೆಳಗಿನ ದೊಡ್ಡ ದೊಣೆ

ಇದು ಪಾವಗಡ ಬೆಟ್ಟದ ಕೆಳಗೆ ಪೂರ್ವ ದಿಕ್ಕಿನಲ್ಲಿ ಹೊರಕೋಟೆಯ ಒಳಭಾಗದಲ್ಲಿರುವಂತಹ ದೊಣೆಯಾಗಿದೆ. ಇದು ಒಂದು ನೈಸರ್ಗಿಕ ದೊಣೆಯಾಗಿದ್ದು ಇದನ್ನು ದೊಡ್ಡ ದೊಣೆ ಎಂದು ಕರೆಯುತ್ತಾರೆ. ಇದು ನೈಸರ್ಗಿಕವಾದ ದೊಡ್ಡ ಬಂಡೆಯಲ್ಲಿ ಸುಮಾರು ೩೦ ಅಡಿಗೂ ಹೆಚ್ಚು ಹಾಳವಿದೆ. ಇದು ಪಾಳೇಗಾರರ ಕಾಲದಲ್ಲಿ ಹೊರಕೊಟೆಯ ಭಾಗದಲ್ಲಿರುವ ಜನರಿಗೆ ಹಾಗೂ ಸೈನಿಕರಿಗೆ ನೀರೋಧಗಿಸುವ ಒಂದು ಪ್ರಮುಖ ದೊಣೆಯಾಗಿದೆ. ಇಂದಿಗೂ ಸಹ ಪಟ್ಟಣದಲ್ಲಿರುವ ಹಲವು ಜನರು ತಮ್ಮ ದಿನನಿತ್ಯದ ಚಟುವಟಿಕೆಗಳಿಗೆ ಈ ದೊಣೆಯ ನೀರನ್ನು ಬಳಸಿಕೊಳ್ಳುವರು.

ಒಟ್ಟಾರೆಯಾಗಿ ಪಾವಗಡ ಪರಿಸರದಲ್ಲಿ ಪ್ರಾಚೀನ ಕಾಲದಿಂದಲು ನೀರಾವರಿಗೆ, ಕೆರೆ-ಕಟ್ಟೆಗಳನ್ನು ಕಟ್ಟಿಸಿರುವುದು ಹಾಗೂ ಅವುಗಳ ಬಳಕೆ ಅವನ ಬುದ್ಧಿವಂತಿಕೆಗೆ ಸಾಕ್ಷಿಯಾಗಿದೆ. ಇಂತಹ ಕೆರೆ-ಕಟ್ಟೆ ಬಾವಿಗಳನ್ನು ಪಾವಗಡ ಪರಿಸದಲ್ಲೂ ಕಾಣಬಹುದಾಗಿದೆ.

ಅಡಿ ಟಿಪ್ಪಣಿಗಳು

೧. ಎನ್‌ಸೈಕ್ಲೋಪಿಡಿಯಾ ಬಿಟಾನಿಕಾ ಸಂ XVII ಪು–೬೪೧, ೬೪೩.

೨. ವಾಸುದೇವನ್ ಸಿ.ಎಸ್, ಹಂಪಿ ಪರಿಸರದ ಕೆರೆಗಳು, ಪು–೬.

೩. ಥಾಪರ್ ಬಿ.ಕೆ: ರೀಸೆಂಟ್ ಆರ್ಕಿಯಲಾಜಿಕಲ್ ಡಿಸ್ಕವರಿ ಇನ್ ಇಂಡಿಯಾ, ಪು–೧೭೧.

೪. ವಾಸುದೇವನ್ ಸಿ.ಎಸ್., ಪೂರ್ವೋಕ್ತ, ಪು–೭.

೫. ನಾಗರಾಜ್‌ರಾವ್ ಎಂ.ಎಸ್, ಪ್ರೋಟೋ ಹಿಸ್ಟಾರಿಕ್ ಕಲ್ಚರ್ಸ್ ಆಫ್ ತುಂಗಭದ್ರಾ ವ್ಯಾಲಿ (ಎ, ರಿಪೋರ್ಟ್ ಆನ್ ಹಳ್ಳೂರು ಎಕ್ಸಕವೇಶನ್) ಪು–೨೩ ಮತ್ತು ೧೩೪, ೧೪೨.

೬. ವಾಸುದೆವನ್ ಸಿ.ಎಸ್, ಪೂವೋಕ್ತ, ಪು–೭,೧೧.

೭. ಎಫಿಗ್ರಾಫಿಯಾ ಇಂಡಿಕಾ, ಸಂಪುಟ–VIII ಪು–೪೦, ೪೯ ಮತ್ತು ಇಂಡಿಯನ್ ಆ್ಯಂಟಿಕ್ಯುರಿ ಸಂ–VII ಪು–೨೫೯,೬೧.

೮. ರಾವ್ ಸಿ.ಹಚ್, ಮೈಸೂರು ಗೆಜಿಟಿಯರ್, ಸಂ–೧, ಪು–೧೦.

೯. ಮೈಸೂರು ಆರ್ಕಿಯಾಲಾಜಿಲ್ ರಿಪೋರ್ಟ್ ೧೯೨೯, ಪು–೫೦, ಮತ್ತು ಶಾಸನ ಸಂ–೧, ಪುಟಸಂಖ್ಯೆ–೨೧೧.

೧೦. ದೀಕ್ಷಿತ್ ಜಿ.ಎಸ್, ಕುಪ್ಪುಸ್ವಾಮಿ ಜಿ.ಆರ್, ಮತ್ತು ಮೋಹನ್ ಎಸ್.ಕೆ, ಕರ್ನಾಟಕದಲ್ಲಿ ಕೆರೆ ನೀರಾವರಿ (ಕನ್ನಡ ಅನುವಾದ ನೀಲತ್ತಹಳ್ಳಿ ಕಸ್ತೂರಿ) ಪು–೨೬, ೪೯.

೧೧. ರಮೇಶನಾಯಕ್ (ಸಂ), ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ, ಲೇ. ವಾಸುದೇವನ್ ಸಿ.ಎಸ್. ಪು–೧೨೬.

೧೨ EC VOL-XII, 22, 1100, ಅಮರಾಪುರ, ಸಿರಾ(ತಾ) ಶಾಸನ–೨೨.

೧೩. ರಮೇಶ್ ನಾಯಕ್, ಪೂವೋಕ್ತ, ಪು–೧೨೬.

೧೪. ದೀಕ್ಷಿತ್ ಜಿ.ಎಸ್: ಕುಪ್ಪುಸ್ವಾಮಿ ಜಿ.ಆರ್: ಮೋಹನ್ ಎಸ್.ಕೆ: ಪೂರ್ವೋಕ್ತ, ಪು–೨೦೨.

೧೫ EC VOL-XII, 11, 754, ಗುಂಡ್ಲಹಳ್ಳಿ, ಪಾವಗಡ(ತಾ) ತುಮಕೂರು(ಜಿಲ್ಲೆ)

೧೬ EC VOL-XII, 54, 1487, ನಿಡುಗಲ್ಲು, ಪಾವಗಡ(ತಾ) ತುಮಕೂರು(ಜಿಲ್ಲೆ)

೧೭ EC VOL-XII, 34, 1550, ಕೋಣನಕುರಿಕೆ, ಪಾವಗಡ(ತಾ) ತುಮಕೂರು(ಜಿಲ್ಲೆ)

೧೮ EC VOL-XII, 102, 1541, ರಂಗಾಪುರ, ಪಾವಗಡ(ತಾ) ತುಮಕೂರು(ಜಿಲ್ಲೆ)

೧೯. EC VOL-XII, 103, 1503, ನನಿಗಾನಹಳ್ಳಿ, ಪಾವಗಡ(ತಾ) ತುಮಕೂರು(ಜಿಲ್ಲೆ)

೨೦. ವಾಸುದೇವನ್ ಸಿ.ಎಸ್: ಪೂರ್ವೋಕ್ತ, ಪು–೧೭

೨೧. ೧೫. EC VOL-XII, 11,12, 13, 754, ಗುಂಡ್ಲಹಳ್ಳಿ, ಪಾವಗಡ(ತಾ) ತುಮಕೂರು(ಜಿಲ್ಲೆ)

ಅಧ್ಯಾಯ–ಏಳು

ಸಮಾರೋಪ

ಅಧ್ಯಾಯ–ಏಳು

ಸಮಾರೋಪ

ಪ್ರಸ್ತುತ ಪಾವಗಡ ಪರಿಸರದ ಚರಿತ್ರೆ ಮತ್ತು ಪುರಾತತ್ವ ಅಧ್ಯಯನದ ವಿಷಯದ ಕುರಿತು ವಿವರವಾದ ಅಧ್ಯಯನಗಳು ನಡೆದಿರುವುದು ವಿರಳ. ಪಾವಗಡ ಪರಿಸರದ ಚರಿತ್ರೆಯನ್ನು ವಿಶ್ಲೇಷಣಾತ್ಮಕ ಹಾಗೂ ವಿವರಣಾತ್ಮಕವಾಗಿ ಕಟ್ಟಿಕೊಡುವ ಪ್ರಯತ್ನದ ಹಿನ್ನೆಲೆಯಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಳ್ಳಲಾಯಿತು. ಆ ಮೂಲಕ ಪರಿಸರದಲ್ಲಿನ ಪ್ರಾಗಿತಿಹಾಸ ಕಾಲದ ನೆಲೆಗಳು, ಚಾರಿತ್ರಿಕ ಕಾಲಘಟ್ಟದ ದೇವಾಲಯಗಳು, ಮೂರ್ತಿಶಿಲ್ಪಗಳು, ಶಾಸನಗಳು ಹಾಗೂ ಪ್ರಾಚೀನ ಕಾಲದ ಕೆರೆಕಟ್ಟೆಗಳನ್ನು ಅಧ್ಯಯನ ನಡೆಸಲಾಯಿತು. ಒಟ್ಟಾರೆಯಾಗಿ ಈ ಪರಿಸರದ ಚರಿತ್ರೆಯನ್ನು ಸಮಗ್ರವಾಗಿ ರಚಿಸುವ ಸಲುವಾಗಿ ಸೂಕ್ಷ್ಮ ಸಂಗತಿಗಳನ್ನು ಅರಿಯುವ ಪ್ರಯತ್ನ ಮಾಡಲಾಗಿದೆ. ಪ್ರಾಗಿತಿಹಾಸ ಕಾಲದಿಂದಲೂ ಇತ್ತೀಚಿನ ಕಾಲದವರಗೆ ಈ ಪ್ರದೇಶದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಮಾನವ ತನ್ನ ಪ್ರಭಾವ ಬೀರಿರುವುದನ್ನು ಈ ಪರಿಸರದ ಅಧ್ಯಯನದಿಂದ ತಿಳಿದುಬರುತ್ತದೆ.

ಪಾವಗಡ ಪರಿಸರದ ಚರಿತ್ರೆ ಮತ್ತು ಪುರಾತತ್ವ ಅಧ್ಯಯನ ವಿಷಯವನ್ನು ಆಯ್ದುಕೊಂಡು ವಿವರವಾದ ಕ್ಷೇತ್ರಕಾರ್ಯ ಕೈಗೊಳ್ಳಲಾಯಿತು. ಈ ಪ್ರದೇಶದಲ್ಲಿ ಆದಿ ಶಿಲಾಯುಗದಿಂದ ಇತಿಹಾಸ ಆರಂಭಕಾಲದವರೆಗಿನ ನೆಲೆಗಳಿದ್ದು ಅವುಗಳನ್ನು ಈಗಾಗಲೇ ಪತ್ತೇ ಹಚ್ಚುವ ಕಾರ್ಯ ನಡೆದಿದೆ. ನನ್ನ ಅಧ್ಯಯನದ ಸಂದರ್ಭದಲ್ಲಿ ಎರಡು ನೂತನ ಶಿಲಾಯುಗದ ನೆಲೆಗಳನ್ನು ಹುಡುಕುವ ಪ್ರಯತ್ನ ಮಾಡಲಾಗಿದೆ. ಈ ನೆಲೆಗಳಲ್ಲಿ ನೂತನ ಶಿಲಾಯುಗಕ್ಕೆ ಸಂಬಂಧಿಸಿದ ಆಯುಧಗಳು ಹಾಗೂ ಮಡಿಕೆ ಚೂರುಗಳನ್ನು ಸಂಗ್ರಹಿಸಲಾಗಿದೆ. ಈ ನೆಲೆಗಳು ಬಹುತೇಕ ಹಾಳಾಗಿದ್ದು, ಆಧುನಿಕ ಮಾನವನ ವಿಸ್ತೃತ ಕೃಷಿ ಚಟುವಟಿಕೆಗಳ ಕಾರಣದಿಂದ ತಮ್ಮ ಮೂಲ ಸ್ವರೂಪ ಕಳೆದುಕೊಂಡಿವೆ. ಅದೇ ರೀತಿಯಾಗಿ ಬೃಹತ್

ಶಿಲಾಯುಗಕ್ಕೆ ಸಂಬಂಧಿಸಿದಂತೆ ನಿಲುಸುಗಲ್ಲು ಸಮಾಧಿಯನ್ನು ಪತ್ತೇ ಹಚ್ಚಲಾಯಿತು. ಇದು ಸುಮಾರು ೧೩ ಅಡಿ ಎತ್ತರವಿದ್ದು ಈ ನೆಲೆಯಲ್ಲಿ ನೂತನ ಶಿಲಾಯುಧಗಳು ದೊರೆತಿದ್ದು ಇಲ್ಲಿ ನೂತನ ಶಿಲಾಯುಗದಿಂದ ಮಾನವನು ನೆಲೆಸಿರುವುದನ್ನು ಗಮನಿಸಬಹುದಾಗಿದೆ.

ಚಾರಿತ್ರಿಕ ಕಾಲಘಟ್ಟಕ್ಕೆ ಸಂಬಂಧಿಸಿದಂತೆ ಈ ಭಾಗದಲ್ಲಿ ನೊಳಂಬರು, ಕಲ್ಯಾಣಿಚಾಲುಕ್ಯರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಹಾಗೂ ಪಾವಗಡ ಪಾಳೆಯಗಾರರು ಈ ಪರಿಸರದಲ್ಲಿ ಆಳ್ವಿಕೆ ಮಾಡಿರುವುದು ಇವರ ಕಾಲದಲ್ಲಿ ನಿರ್ಮಿಸಲ್ಪಟ್ಟ ದೇವಾಲಯಗಳು, ಶಾಸನಗಳು, ಕೋಟೆಕೊತ್ತಲಗಳ ಸಹಾಯದಿಂದ ತಿಳಿಯಬಹುದಾಗಿದೆ. ಈ ಅಧ್ಯಯನದಲ್ಲಿ ಈ ಪರಿಸರದ ಚರಿತ್ರೆಯನ್ನು ವಿವರಣಾತ್ಮಕವಾಗಿ ತಿಳಿಸುವ ಪ್ರಯತ್ನ ಮಾಡಲಾಗಿದೆ.

ಇಲ್ಲಿನ ಪ್ರದೇಶದಲ್ಲಿ ಸಿಕ್ಕಿರುವ ಶಾಸನಗಳು ಮಾತ್ರ ವಿರಳವೆನ್ನಬಹುದು. ಆದರೂ ಶಾಸನಗಳಿಂದ ಈ ಭಾಗದ ಆಡಳಿತ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ಇನ್ನಿತರ ಚಟುವಟಿಕೆಗಳನ್ನು ತಿಳಿಯಬಹುದಾಗಿದೆ. ಕ್ರಿ.ಶ.೮ನೇ ಶತಮಾನದ ಗಂಗರ ಶ್ರೀಪುರಷನ ಕಾಲದ ಶಾಸನವು ಈ ಪರಿಸರದಲ್ಲಿ ಸಿಕ್ಕಿರುವ ಅತೀ ಪ್ರಾಚೀನ ಶಾಸನವಾಗಿದೆ. ಇಲ್ಲಿ ಲಭ್ಯವಾದ ಶಾಸನಗಳು ನೊಳಂಬರು, ಕಲ್ಯಾಣಿ ಚಾಲುಕ್ಯರ, ಚೋಳರ ಹಾಗೂ ವಿಜಯನಗರದ ಅರಸರಿಗೆ ಸಂಬಂಧಿಸಿದ್ದು, ಅವರ ಆಡಳಿತಾವಧಿಯ ಮಾಹಿತಿಯನ್ನು ತಿಳಿಸಿಕೊಡುತ್ತವೆ. ಆಡಳಿತ ವ್ಯವಸ್ಥೆಯಲ್ಲಿ ಅರಸರಿಗೆ ಸಹಾಯಮಾಡಿದ ಮಹಾಮಂಡಲೇಶ್ವರರು, ಮಂಡಳೇಶ್ವರ, ಸಾಮಂತ ಅಧಿಕಾರಿಗಳು, ದಂಡಾಧಿಪತಿ ಮುಂತಾದ ಅಧಿಕಾರಿ ವರ್ಗ ಇದ್ದುದು ಶಾಸನಗಳಿಂದ ತಿಳಿದುಬರುವ ಅಂಶವಾಗಿದೆ. ಇಲ್ಲಿನ ಶಾಸನಗಳು ಕನ್ನಡ, ತೆಲುಗು, ಸಂಸ್ಕೃತಯ ಭಾಷೆಯಲ್ಲಿ ದೊರೆತಿದ್ದು ಅಂದಿನಿಂದಲೇ ಈ ಪ್ರದೇಶದಲ್ಲಿ ತೆಲುಗು ಭಾಷೆಯ ಪ್ರಭಾವ ಕಂಡುಬರುತ್ತದೆ. ಹಾಗೂ ಈ ಪರಿಸರದ ಸುತ್ತಮುತ್ತಲಿನ ಪ್ರದೇಶದಲ್ಲಿ ಹಲವಾರು ವೀರಗಲ್ಲು, ಮಾಸ್ತಿಗಲ್ಲುಗಳು ಲಭ್ಯವಾಗಿದ್ದು, ಅವು ಅಂದಿನ ಸಾಮಾಜಿಕ ಜೀವನದ ಚಿತ್ರಣವನ್ನು ತಿಳಿಸುತ್ತವೆ.

ಇಲ್ಲಿ ಶೈವ, ವೈಷ್ಣವ ಹಾಗೂ ಜೈನಪಂಥಾಚರಣೆಗಳು ಅಸ್ಥಿತ್ವದಲ್ಲಿರುವುದು ಅಲ್ಲಿರುವ ಶಾಸನಗಳು, ದೇವಾಲಯಗಳು ಹಾಗೂ ಮೂರ್ತಿಶಿಲ್ಪಗಳಲ್ಲಿ ಅಭಿವ್ಯಕ್ತವಾಗಿವೆ. ಇವುಗಳ ಅಧ್ಯಯನದಿಂದ ಆರಂಭದಲ್ಲಿ ಶೈವ ಧರ್ಮ ಪ್ರಭಾವವಿದ್ದರೂ, ಆನಂತರ ವಿಜಯನಗರ ಅರಸರ ಕಾಲದಲ್ಲಿ ವೈಷ್ಣವ ಧರ್ಮ ಹೆಚ್ಚು ಪ್ರಭಾವಶಾಲಿಯಾಗಿದ್ದಿತೆಂದು ತಿಳಿಯಬಹುದಾಗಿದೆ.

ಈ ಪರಿಸರದಲ್ಲಿ ಆಳ್ವಿಕೆ ಮಾಡಿದಂತಹ ಅರಸರು ದೇವಾಲಯಗಳನ್ನು ನಿರ್ಮಿಸುವಲ್ಲಿ ಹಿಂದೇಟು ಹಾಕಿರುವುದು ಕಂಡುಬರುತ್ತದೆ. ಇಲ್ಲಿನ ದೇವಾಲಯಗಳು

ನೊಳಂಬರ, ಚೋಳರ, ಪಾಳೆಯಗಾರರ ಕಾಲದಲ್ಲಿ ದ್ರಾವಿಡ ವಾಸ್ತುಶೈಲಿಯಲ್ಲಿ ನಿರ್ಮಾಣಗೊಂಡಿವೆ. ಈ ಅಧ್ಯಯನದಲ್ಲಿ ಈ ದೇವಾಲಯಗಳ ರಚನೆ, ವಾಸ್ತುಶೈಲಿ, ಮುಂತಾದ ಸೂಕ್ಷ್ಮ ವಿಷಯಗಳ ಅರಿಯುವ ಪ್ರಯತ್ನ ಮಾಡಲಾಗಿದೆ. ಒಂದು ರಾಜ್ಯ ರಕ್ಷಣೆಗೆ ಕೋಟೆ ಪ್ರಮುಖ ಪಾತ್ರ ವಹಿಸುತ್ತದೆ. ಅಂತಹ ಸುಭದ್ರ ಕೋಟೆಯನ್ನು ಇಂದಿಗೂ ಪಾವಗಡದಲ್ಲಿ ಕಾಣಬಹುದಾಗಿದೆ. ಕೋಟೆಯ ರಚನೆ, ಬೃಹತ್ತಾದ ಬಾಗಿಲುಗಳು ತೆನೆಯ ಅಲಂಕಾರ, ಬುರುಜು–ಬತೇರಿಗಳು, ಹಾಗೂ ಕೋಟೆಯೊಳಗಿನ ಸ್ಮಾರಕಗಳಾದ ಕಣಜಗಳು, ಮದ್ದಿನಮನೆ, ತುಪ್ಪದಕೊಳ ಮುಂತಾದವುಗಳನ್ನು ಕುರಿತು ಸಮಗ್ರವಾಗಿ ವಿವರಿಸಲಾಗಿದೆ. ಪ್ರಸ್ತುತ ಸ್ಮಾರಕಗಳ ರಕ್ಷಣೆ ಕಾರ್ಯ ಮಾಡಿ ಪೂರ್ವಜರ ಸಂಸ್ಕೃತಿಯ ಕುರುಹುಗಳಾಗಿರುವ ಕೋಟೆ–ಕೊತ್ತಲಗಳನ್ನು ಉಳಿಸುವುದು ಅವಶ್ಯಕವಾಗಿದೆ.

ಈ ಪರಿಸರದಲ್ಲಿ ಮೂರ್ತಿಶಿಲ್ಪಗಳು ಲಭ್ಯವಾದ ಪ್ರಮಾಣ ಕಡಿಮೆ ಎನ್ನಬಹುದು. ಇವುಗಳು ಕಲ್ಯಾಣಿ ಚಾಲುಕ್ಯರ ಕಾಲದಿಂದ ಪಾಳೆಯಗಾರರ ಕಾಲದಲ್ಲಿ ನಿರ್ಮಿಸಲ್ಪಟ್ಟ ಶಿಲ್ಪಾವಶೇಷಗಳಾಗಿವೆ. ಇವುಗಳು ರಚನೆಯ ವಿಧಾನದಲ್ಲಿ ಕಾಲದಿಂದ ಕಾಲಕ್ಕೆ ಬದಲಾವಣೆಯನ್ನು ಗುರ್ತಿಸುವ ಪ್ರಯತ್ನ ಮಾಡಲಾಗಿದೆ. ಈ ಪ್ರದೇಶವು ಬಯಲು ಸೀಮೆಯಾದ್ದರಿಂದ ಹಾಗೂ ಯಾವುದೇ ಜೀವಂತ ನದಿಗಳಿಲ್ಲದ್ದರಿಂದ ಪ್ರಾಚೀನ ಕಾಲದಿಂದಲೂ ಈ ಭಾಗದಲ್ಲಿ ಕೃಷಿಗೆ ಕೆರೆ–ಕಟ್ಟೆ, ಬಾವಿಗಳನ್ನು ಅವಲಂಭಿಸಿರುವುದು ಕಾಣಬಹುದಾಗಿದೆ.

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಹಲವಾರು ಫಲಿತಗಳು ಅಧ್ಯಯನ ಸಂದರ್ಭದಲ್ಲಿ ಕಂಡುಬಂದವು. ವಿಶೇಷವಾಗಿ ಹೊಸ ಪ್ರಾಚೀನ ನೆಲೆಗಳನ್ನು ಗುರುತಿಸುವ ಹಾಗೂ ಇಲ್ಲಿರುವ ಶಾಸನಗಳು, ದೇವಾಲಯಗಳು, ಮೂರ್ತಿಶಿಲ್ಪ, ಕೋಟೆ ಹಾಗೂ ಕೆರೆ–ಕಟ್ಟೆಗಳನ್ನ ಸಮಗ್ರ ಅಧ್ಯಯನಕ್ಕೆ ಒಳಪಡಿಸಲಾಯಿತು. ಈ ಹಿಂದಿನ ಅಧ್ಯಯನಗಳು ಹೆಚ್ಚಿನ ಸಮಗ್ರತೆಯನ್ನು ಪಡೆದಿರುವುದಿಲ್ಲ ಎಂಬ ಹಿನ್ನೆಲೆಯಲ್ಲಿ ಇಂತಹ ಕೊರತೆಯನ್ನು ನೀಗಿಸುವ ಪ್ರಯತ್ನವನ್ನು ಕೈಗೊಳ್ಳಲಾಯಿತು. ಕ್ಷೇತ್ರ ಕಾರ್ಯದ ಮೂಲಕ ಪುರಾತತ್ವ ಅಕರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಚರಿತ್ರೆ ನಿರ್ಮಿಸುವ ಪ್ರಯತ್ನವನ್ನು ಮಾಡಲಾಗಿದೆ. ಇದುವರೆವಿಗೂ ಪ್ರಕಟಣೆಯಾಗಿರದ ಹೊಸ ನೆಲೆಗಳನ್ನು ಪತ್ತೇ ಹಚ್ಚುವ ಹಾಗೂ ಅರ್ಥೈಸುವ ಪ್ರಯತ್ನ ಇಲ್ಲಿದೆ. ಹಾಗೆಯೇ ಚಾರಿತ್ರಿಕ ಕಾಲಘಟ್ಟಕ್ಕೆ ಸಂಬಂಧಿಸಿದಂತೆ ಈ ಪ್ರದೇಶದಲ್ಲಿ ಹಲವಾರು ಶಾಸನಗಳು ಪ್ರಕಟವಾಗಿದ್ದರೂ, ಅವುಗಳನ್ನು ಕ್ರಮಬದ್ಧವಾದ ಹಾಗೂ ವ್ಯವಸ್ಥಿತ ಅಧ್ಯಯನಕ್ಕೆ ಒಳಪಡಿಸಲಾಯಿತು. ಹಾಗೂ ಇದುವರೆವಿಗೂ ಇಲ್ಲಿನ ದೇವಾಲಯಗಳ ಕುರಿತು ಯಾವುದೇ ಅಧ್ಯಯನ ನಡದೇ ಇಲ್ಲವೆನ್ನಬಹುದು. ಈ ಕೊರತೆಯನ್ನು ನೀಗಿಸುವ ಪ್ರಯತ್ನ ಮಾಡಲಾಗಿದೆ. ಕೋಟೆಯ ಬಗ್ಗೆ ಸಮಗ್ರ ಹಾಗೂ ವಿಶ್ಲೇಷಣಾತ್ಮಕವಾದ ಅಧ್ಯಯನ

ಮಾಡಲಾಗಿದೆ. ಪ್ರಾಚೀನ ಕಾಲದಿಂದಲೂ ಈ ಪರಿಸರದ ನೀರಾವರಿ ವ್ಯವಸ್ಥೆಯ ಕುರಿತು ಸಮಗ್ರವಾಗಿ ಈ ಸಂಪ್ರಬಂಧದಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ. ಅಧ್ಯಯನದ ಮುಖ್ಯ ಉದ್ದೇಶವೆಂದರೆ ಪಾವಗಡ ಪರಿಸರದ ಚರಿತ್ರೆ ಮತ್ತು ಪುರಾತತ್ವವನ್ನು ಮರೆತು ಹೋಗಿರುವ ಚಾರಿತ್ರಿಕ ವಿಷಯಗಳನ್ನು ಪುನರ್ ಪರಿಶೀಲಿಸಿ ಈ ಪ್ರದೇಶದ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಈ ಸಂಪ್ರಬಂಧದ ರಚನೆಯಲ್ಲಿ ಮಾಡಲಾಗಿದೆ.

ಅನುಬಂಧಗಳು

ಗ್ರಂಥಋಣ

ವಕ್ತೃಗಳ ವಿವರ

ನಕ್ಷೆಗಳು

ಛಾಯಾಚಿತ್ರಗಳು

ಗ್ರಂಥಋಣ

೧. ಕಲ್ಬುರ್ಗಿ ಎಂ.ಎಂ: **ಕರ್ನಾಟಕದ ಕೈಫಿಯತ್ತುಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೪

೨. ಕಲ್ಬುರ್ಗಿ ಎಂ.ಎಂ: **ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು ಭಾಗ-೪**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೯

೩. ಕೊಟ್ರಯ್ಯ ಸಿ.ಟಿ.ಎಂ: **ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೧

೪. ಕಲ್ಬುರ್ಗಿ ಎಂ.ಎಂ: **ಮಧುಗಿರಿ ಮಹಾನಾಡು ಪ್ರಭುಗಳು**, ನೊಳಂಬವೀರ ಶೈವ ಸಂಘ, ಬೆಂಗಳೂರು, ೧೯೯೫

೫. ಕಾಮತ್ ಎಸ್.ಯು (ಸಂ): **ಕರ್ನಾಟಕ ರಾಜ್ಯ ಗೆಜೆಟಿಯರ್ ಭಾಗ-೩**, ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು, ೧೯೮೬

೬. ಚಿದಾನಂದ ಮೂರ್ತಿ ಎಂ: **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಕ್ರಿ.ಶ. ೫೫೦ ರಿಂದ ೧೧೫೦ವರೆಗೆ)** ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೯

೭. ಚೆಲುವರಾಜನ್ ವಿ.ಆರ್: **ಪಾವಗಡ ತಾಲ್ಲೂಕು ದರ್ಶನ**, ಐಬಿಹೆಚ್ ಪ್ರಕಾಶನ, ಬೆಂಗಳೂರು, ೧೯೮೭

೮. ಚೆನ್ನಬಸಪ್ಪ ಎಸ್ ಪಾಟೀಲ್: **ಕರ್ನಾಟಕದ ಕೋಟೆಗಳು ಸಂ-೧**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೯

೯. ತಿಪ್ಪೇಸ್ವಾಮಿ ಹೆಚ್: **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ಡಿ.ವಿ.ಕೆ. ಮೂರ್ತಿ ಪ್ರಕಾಶಕರು, ಮೈಸೂರು, ೧೯೯೭

೧೦. ದೀಕ್ಷಿತ್ ಜಿ.ಎಸ್: ಕುಪ್ಪಸ್ವಾಮಿ ಜಿ.ಆರ್: ಮೋಹನ್ ಎಸ್.ಕೆ: **ಕರ್ನಾಟಕದಲ್ಲಿ ಕೆರೆ ನೀರಾವರಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೦

೧೧. ನಾಗಯ್ಯ ಜಿ.ಎಂ: **ಆರನೆಯ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ**, ವೀರಶೈವ ಅಕಾಡೆಮಿ ಶ್ರೀ ನಾಗೂರು ರುದ್ರಾಕ್ಷಿಮಠ, ಬೆಳಗಾವಿ, ೧೯೯೨

೧೨. ಪರಶಿವಮೂರ್ತಿ ಡಿ.ವಿ: **ಕನ್ನಡ ಶಾಸನಶಿಲ್ಪಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೯

೧೩. ಪ್ರಭಾಕರ್ ಎಂ.ಎನ್: **ದೇವಾಲಯಗಳ ವಾಸ್ತುಚಂದ್ರಿಕೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೨

೧೪. ಬಾಸ್ಕರಪ್ಪ ಸಿ.ಎನ್: **ತುಮಕೂರು ಜಿಲ್ಲಾ ದರ್ಶನ**, ಟೈಮ್ಸ್ ಪಬ್ಲಿಕೇಷನ್ಸ್, ತುಮಕೂರು, ೧೯೮೧

೧೫. ಬುಕನನ್ ಎ: **ಜರ್ನಿ ಪ್ರಮ್ ಮದ್ರಾಸ್ ಥ್ರೂದಿ ಕಂಟ್ರೀಸ್ ಆಫ್ ಮೈಸೂರು**, ಕೆನರ ಅಂಡ್ ಮಲಬಾರ್ ಸಂಪುಟ-೩, ಲಂಡನ್, ೧೮೦೭

೧೬. ಮಹದೇವ ಸಿ: **ಕರ್ನಾಟಕ ಪುರಾತತ್ವ ಶೋಧ**, ಶ್ರೀಲಕ್ಷ್ಮಿ ಪ್ರಕಾಶನ, ಶ್ರೀರಂಗಪಟ್ಟಣ, ೨೦೦೧

೧೭. ಮಹದೇವ ಸಿ: ವಿಜಯನಗರದ **ಗಾರೆ ಶಿಲ್ಪ, ಪುರಾತತ್ವ** ವಿಭಾಗದ **ಪ್ರಕಟಣೆ-೩**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೦

೧೮. ಮಹದೇವ ಸಿ: ಸುಬ್ಬಣ್ಣ ರೈ: ಮಾಧವ ಪೆರಾಜೆ: **ಹೊಸಪೇಟೆ ತಾಲ್ಲೂಕು ದರ್ಶನ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೨

೧೯. ಮೂರ್ತಿ ಕೆ.ಎಸ್.ಎನ್: **ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪ**, ತುಮಕೂರು ರಂಜಿತಾ ಪ್ರಕಾಶನ, ೧೯೯೮

೨೦. ಯೋಗಿಶ್ವರಪ್ಪ ಡಿ.ಎನ್: **ಹಾಗಲವಾಡಿ ನಾಯಕರು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೯

೨೧. ರಮೇಶ ನಾಯ್ಕ: **ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಮರುಚಿಂತನೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೭

೨೨. ರೈಸ್ ಬಿ.ಎಲ್: **ಮೈಸೂರು ಗೆಜೆಟಿಯರ್ ಸಂಪುಟ II**, ಮೈಸೂರು ಸರ್ಕಾರ, ಮೈಸೂರು, ೧೮೯೭

೨೩. ರೈಸ್ ಬಿ.ಎಲ್: **ಎಫಿಗ್ರಫಿ ಆಫ್ ಕರ್ನಾಟಕ ಸಂಪುಟ II**, ತುಮಕೂರು ಜಿಲ್ಲೆಯ ಶಾಸನಗಳು, ಮೈಸೂರು ಸರ್ಕಾರ ಕೇಂದ್ರ ಮುದ್ರಣಾಲಯ, ಬೆಂಗಳೂರು, ೧೯೦೪

೨೪. ಲಕ್ಷ್ಮಣ ತೆಲಗಾವಿ (ಸಂ): **ಸ್ಥಳೀಯ ಚರಿತ್ರೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೫

೨೫. ವಸು ಎಂ.ವಿ: **ದಕ್ಷಿಣ ಕರ್ನಾಟಕದ ಅರಸು ಮನೆತನಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೧

೨೬. ವಾಸುದೇವ ಬಡಿಗೇರ (ಸಂ): **ಹಾನಗಲ್ಲು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೮

೨೭. ವಾಸುದೇವನ್ ಸಿ.ಎಸ್: **ಹಂಪಿಪರಿಸರದ ಕೆರೆಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೧

೨೮. ಶ್ರೀನಿವಾಸ ಎ.ಡಿ: **ಮಧುಗಿರಿ ಇತಿಹಾಸ**, ಸುಧಾ ಪ್ರಕಾಶನ, ಮದುಗಿರಿ, ೧೯೭೮

೨೯. ಸುಂದರ ಆ (ಸಂ): **ಕರ್ನಾಟಕ ಚರಿತ್ರೆ ಸಂಪುಟ–೧**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೭

೩೦. ಸುರೇಶ್ ಕೆ.ಎಂ: ವಾಸುದೇವ ಬಡಿಗೇರ: ಮಡಲಗೇರಿ ಕೊಟ್ರೇಶ್: ಸೋಮಶೇಖರ್ಎಸ್.ವೈ: **ಕರ್ನಾಟಕ ದೇವಾಲಯಗಳ ಕೋಶ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೯

೩೧. ಷೇಕ್ ಆಲಿ ಬಿ. (ಪ್ರಸಂ): ಸುಂದರ್ ಅ (ಸಂಪುಟ ಸಂಪಾದಕರು): **ಕರ್ನಾಟಕ ಚರಿತ್ರೆ ಸಂಪುಟ–೧**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೭

೩೨. ಹಯವದನ್ ರಾವ್: **ಮೈಸೂರು ಗೆಜೆಟಿಯರ್ ಸಂಪುಟ–೫**, ಮೈಸೂರು

ಅಪ್ರಕಟಿತ ಸಂಶೋಧನಾ ಪ್ರಬಂಧಗಳು

೧. ತಿಪ್ಪೇಸ್ವಾಮಿ ಎಸ್: **ರಕ್ಷಣಾ ವಾಸ್ತು ಶಿಲ್ಪ: ಚಿತ್ರದುರ್ಗ ಜಿಲ್ಲೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೪

೨. ಮುದ್ದವೀರಪ್ಪ ಕೆ.ವಿ: **ತುಮಕೂರು ಜಿಲ್ಲೆಯ ಕೋಟೆಕೊತ್ತಲಗಳ ಜಾನಪದೀಯ ಅಧ್ಯಯನ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೫

೩. ಶಿವತಾರಕ್ ಕೆ.ಬಿ: **ತುಮಕೂರು ಜಿಲ್ಲೆಯ ಪುರಾತತ್ವ ಕುರುಹುಗಳ ಒಂದು ಸಾಂಸ್ಕೃತಿಕ ಅಧ್ಯಯನ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೯

ಪತ್ರಿಕೆ, ಗೆಜೆಟಿಯರ್ ಮತ್ತು ವರದಿಗಳು

ಕನ್ನಡ ಪ್ರಭ

ನಾಯಕ ವಾಣಿ

ಇತಿಹಾಸ ದರ್ಶನ–ಬೆಂಗಳೂರು

ಸಂಕ್ಷೇಪ್ತಗಳು

EC - ಎಫಿಗ್ರಾಫಿಯಾ ಕರ್ನಾಟಕ

ದ.ಕ.ಅ.ನು– ದಕ್ಷಿಣ ಕರ್ನಾಟಕದ ಅರಸು ಮನೆತಗಳು

ಆಂಗ್ಲ ಭಾಷೆಯ ಪುಸ್ತಕಗಳು


1. Suryanath U Kamath (Editor): Karnataka State Gazzetteer, Part-3, Banglore Government of Karnataka Publication, 1986
2. Hayavadana Rao. C: Mysore Gazzetteer, Delhi, B.R.Publishing corporation, 1984
3. Mysore Archaeologzcal Annual Reports: 1928-1946, Mysore State, Mysore
4. Rice B.L: Mysore Gazzetteer, Vol-II, Govt of Mysore, Mysore, 1897
5. Bukanan: A Jurny from Madras Tru the contries of Mysore, Kenara and Malabar Vol-III, Ladon, 1807
6. Mysore state Gazzetteer, Mysore archeologgcal Report-1928-1946

ವಕ್ತೃಗಳ ವಿವರ

ಹೆಸರು	ವಯಸ್ಸು	ವೃತ್ತಿ	ಊರು
೧. ಅಂತರಗಂಗೆ ಶಂಕರಪ್ಪ	೫೦	ಶಿಕ್ಷಕರು	ಪೊನ್ನಸಮುದ್ರ
೨. ಈರಪ್ಪ	೬೫	ವ್ಯವಸಾಯ	ನನಿಗಾನಹಳ್ಳಿ
೩. ಕಟ್ಟಾ ನರಸಿಂಹಮೂರ್ತಿ	೪೩	ಅಧ್ಯಕ್ಷರು, ಗ್ರಾಮಾಭಿವೃದ್ಧಿ ಸಮಿತಿ	ಪಳವಳ್ಳಿ
೪. ಗಂಗಾಧರಪ್ಪ ಎಂ	೫೦	ಶಿಕ್ಷಕರು	ಪೊನ್ನಸಮುದ್ರ
೫. ಚೆಲುವರಾಜನ್ ವಿ.ಆರ್	೫೫	ವ್ಯವಹಾರಸ್ಥರು	ಪಾವಗಡ
೬. ಚಿತ್ತಯ್ಯ ಪೂಜಾರ್	೪೪	ಉಪನ್ಯಾಸಕರು	ನಿಡುಗಲ್ಲು
೭. ತಿಮ್ಮಯ್ಯ ಜಿ	೭೦	ಕೃಷಿ ವಿಜ್ಞಾನಿ	ಆರ್ಲಹಳ್ಳಿ
೮. ತಿಪ್ಪಜ್ಜ	೮೪	ವ್ಯವಸಾಯ	ಗುಂಡಾರ್ಲಹಳ್ಳಿ
೯. ಬ್ಯಾಡನೂರು ನಾಗಭೂಷಣ್	೪೫	ಶಿಕ್ಷಕರು	ಬ್ಯಾಡನೂರು
೧೦. ಮಾರಣ್ಣ	೭೭	ವ್ಯವಸಾಯ	ಚಿತ್ತಗಾನಹಳ್ಳಿ
೧೧. ಮುದ್ದೇವು ಮಾದವ ರೆಡ್ಡಿ	೫೮	ಶಿಕ್ಷಕರು	ವೀರ್ಲಗೊಂದಿ
೧೨. ರಾಮಾಂಜಿನಪ್ಪ	೫೬	ವ್ಯವಸಾಯ	ಗುಂಡ್ಲಹಳ್ಳಿ
೧೩. ವೆಂಕಟೇಶ್	೪೪	ಪತ್ರಕರ್ತ	ಪಾವಗಡ
೧೪. ಸಣ್ಣನಾಗಪ್ಪ	೫೨	ಉಪನ್ಯಾಸಕರು	ಪಾವಗಡ

ನಕ್ಷೆಗಳು


ತುಮಕೂರು ಜಿಲ್ಲೆ






ಪಾವಗಡ ತಾಲ್ಲೋಕು







ಪಾವಗಡ ಕೋಟೆ



ಛಾಯಾಚಿತ್ರಗಳು

ಛಾಯಾಚಿತ್ರಗಳ ಪಟ್ಟಿ

24) ಕಣಜಗಳು

25) ತುಪ್ಪದ ಕೊಳ

26) ಕೋನೇರು ಮಂಟಪ

27) ಚೌಕಾರದ ದ್ವಾರ ಬಾಗಿಲಿನ ಬುರುಜು

28) ಪಿರಂಗಿ

29) ಗುಂಡಾರ್ಲ್ಲ ಹಳ್ಳಿಯ ಶಿವಲಿಂಗ

30) ಶಿವ : ಪಳವಳ್ಳಿ ಕೆರೆ

31) ನಂದಿ : ಗುಂಡಾರ್ಲ್ಲ ಹಳ್ಳಿ

32) ಭೈರವ : ಪಾವಗಡ

33) ಹರಿಹರೇಶ್ವರ : ಪಾವಗಡ

34) ಲಕ್ಷ್ಮೀನರಸಿಂಹ

35) ನರಸಿಂಹನ ಉದ್ಭವ ಮೂರ್ತಿ

36) ಲಕ್ಷ್ಮೀ

37) ಬೆಟ್ಟದ ಆಂಜನೇಯ

38) ಪಳವಳ್ಳಿ ಕೆರೆಯ ಏರಿ ಮೇಲಿರುವ ಆಂಜನೇಯ

39) ಪುಷ್ಕರಣಿ

40) ಬೆಟ್ಟದ ಕೆಳಗಿನ ದೊಡ್ಡ ದೋಣಿ

41) ಕೋನೇರು ಬಾವಿ

42) ಭೀಮನ ದೊಣೆ

43) ಅಕ್ಕಮ್ಮಗಾರನ ದೊಣೆ

44) ನಾಗರ ಬಾವಿ



(1)


(2)


(3)



(4)



(5)



(6)



(7)



(8)



(9)



(10)



(11)



(12)



(13)



(14)



(15)



(16)




(17)



(18)


(19)


(20)


(21)



(22)



(23)



(24)



(25)


(26)


(27)


(28)



(29)



(30)



(31)



(32)



(33)




(34)



(35)




(36)



(37)



(38)




(39)



(40)



(41)



(42)



(43)



(44)

AKSHARA GRANTHALAYA
ACC.NO. 130201